ಸೋಮವಾರ, ನವೆಂಬರ್ 8, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 309 | ಪುಟ 18
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಎಂಬಿಎ - ಪಿಜಿಸಿಇಟಿ ಪರೀಕ್ಷೆಗೆ ಸಂಬಂಧಪಟ್ಟ ಅಧಿಸೂಚನೆ ಪ್ರಕಟವಾಗಿದ್ದು, ಸರಿಯಾದ ತಯಾರಿ ನಡೆಸಿದರೆ ಉತ್ತಮ ರ‍್ಯಾಂಕಿಂಗ್ ಪಡೆಯುವುದರಲ್ಲಿ ಅನುಮಾನವಿಲ್ಲ.




‘ಪ್ರಧಾನಿ ಮೋದಿಗೆ ನೆರವಾದ ಪಟೇಲ್ ವರ್ಚಸ್ಸು’ 8
ವಾಂಖೆಡೆ ವಿರುದ್ಧ ಮತ್ತೆ ಹರಿಹಾಯ್ದ ಸಚಿವ
ಸಂಖ್ಯೆ-ಸುದ್ದಿ ಎಲ್‌ಪಿಜಿ ದರ ಗಗನಮುಖಿ
ದೇಶದ 33.23 ಲಕ್ಷ ಮಕ್ಕಳಲ್ಲಿ ಅಪೌಷ್ಟಿಕತೆ 8
ಆರ್ಯನ್ ಅಪಹರಣ: ಮಲಿಕ್ ಆರೋಪ 8

ಒಳ ಪುಟಗಳು



ಚಿನಕುರಳಿ

ಪ್ರಕಾಶ್ ಶೆಟ್ಟಿ



ಬಡ್ತಿ ಮೀಸಲಾತಿ: ಗೊಂದಲಕ್ಕೆ ಕೊನೆಗೂ ತೆರೆ ಎಳೆದ ರಾಜ್ಯ ಸರ್ಕಾರ

‘ಅರ್ಹತೆ’ಗೆ ‘ಮೀಸಲಾತಿ’ ಇಲ್ಲ

• ರಾಜೇಶ್ ರೈ ಚಟ್ಲ

ಬೆಂಗಳೂರು: ‘ಸ್ವಂತ ಅರ್ಹತೆ (ಮೆರಿಟ್) ಆಧಾರದಲ್ಲಿ ನೇಮಕಗೊಂಡ ಪರಿಶಿಷ್ಟ ಜಾತಿ (ಎಸ್‌ಸಿ) ಮತ್ತು ಪರಿಶಿಷ್ಟ ವರ್ಗದ (ಎಸ್‌ಟಿ) ನೌಕರರನ್ನು ಮುಂಬಡ್ತಿ ನೀಡುವ ಸಂದರ್ಭದಲ್ಲಿ ಶೇ 15 ಮತ್ತು ಶೇ 3 ಮೀಸಲಾತಿ ಕೋಟಾಕ್ಕೆ ಪರಿಗಣಿಸಬಾರದು. ಅಂಥ ನೌಕರರನ್ನು ಸಾಮಾನ್ಯ ವರ್ಗದ ನೌಕರರೆಂದೇ ಪರಿಗಣಿಸಬೇಕು’ ಎಂದು ರಾಜ್ಯ ಸರ್ಕಾರ ಸ್ಪಷ್ಟವಾಗಿ ತಿಳಿಸಿದೆ.

ಆ ಮೂಲಕ, ಸ್ವಂತ ಅರ್ಹತೆಯಲ್ಲಿ ನೇರ ನೇಮಕಾತಿ ಹೊಂದಿದ ನೌಕರರಿಗೆ ಬಡ್ತಿಯಲ್ಲಿ ಮೀಸಲಾತಿ ನೀಡುವ ಸಂದರ್ಭದ ಗೊಂದಲಕ್ಕೆ ತೆರೆ ಎಳೆದಿದೆ. ಮುಖ್ಯಮಂತ್ರಿಯ ಅನುಮೋದನೆಯಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಡಿಪಿಎಆರ್) ಈ ಸಂಬಂಧ ಶನಿವಾರ (ನ. 6) ಸುತ್ತೋಲೆ ಹೊರಡಿಸಿದೆ. ಈ ಸುತ್ತೋಲೆಯು ಹೊರಡಿಸಿದ ದಿನದಿಂದಲೇ ಜಾರಿಗೆ ಬರಲಿದ್ದು, ಪೂರ್ವಾನ್ವಯ ಇಲ್ಲ ಎಂದೂ ಸೂಚಿಸಲಾಗಿದೆ.

ಕೆಲವು ಇಲಾಖೆಗಳಲ್ಲಿ ಮುಂಬಡ್ತಿ ನೀಡುವಾಗ, ಸ್ವಂತ ಅರ್ಹತೆ ಆಧಾರದಲ್ಲಿ ನೇಮಕಗೊಂಡ ಎಸ್‌ಸಿ, ಎಸ್‌ಟಿ ನೌಕರರನ್ನು ಮೀಸಲಾತಿ ಕೋಟಾದಲ್ಲಿ ಪರಿಗಣಿಸಿದ್ದರಿಂದ ಹಲವರು ಬಡ್ತಿ ಅವಕಾಶದಿಂದ ವಂಚಿತರಾಗಿದ್ದರು. ಈ ಸುತ್ತೋಲೆ ಎಸ್‌ಸಿ, ಎಸ್‌ಟಿ ನೌಕರರ ವಲಯದಲ್ಲಿ ಸಂತಸ ಮೂಡಿಸಿದೆ.

ಪ್ರಜಾವಾಣಿ ವಿಶೇಷ

ಅರ್ಹತೆಯಲ್ಲಿ ಆಯ್ಕೆಯಾದರೂ ‘ಮೀಸಲಾತಿ’ಗೆ ಅರ್ಹರು

ಸ್ವಂತ ಅರ್ಹತೆ ಆಧಾರದಲ್ಲಿ ನೇರ ನೇಮಕಾತಿ ಅಥವಾ ಮುಂಬಡ್ತಿ ಹೊಂದಿದ್ದರೂ, ನಂತರದ ವೃಂದಕ್ಕೆ ಬಡ್ತಿಗೆ ಪರಿಗಣಿಸುವ ಸಂದರ್ಭದಲ್ಲಿ ಅವಕಾಶ ಇದ್ದರೆ ಮೀಸಲಾತಿ ಸೌಲಭ್ಯ ಪಡೆಯಲು ಅರ್ಹರಾಗುತ್ತಾರೆ. ಉದಾಹರಣೆಗೆ, ಸಹಾಯಕ ವೃಂದದಲ್ಲಿ ಸ್ವಂತ ಅರ್ಹತೆ ಆಧಾರದಲ್ಲಿ ನೇಮಕಗೊಂಡ ಎಸ್‌ಸಿ, ಎಸ್‌ಟಿ ನೌಕರ ಹಿರಿಯ ಸಹಾಯಕ ವೃಂದಕ್ಕೆ ಮುಂಬಡ್ತಿ ಹೊಂದುವ ಸಂದರ್ಭದಲ್ಲಿ ಮೀಸಲಾತಿ ಪಡೆಯಲು ಅರ್ಹನಾಗಿರುತ್ತಾನೆ. ಆದರೆ, ಹೀಗೆ ಮುಂಬಡ್ತಿ ಹೊಂದಿದವರನ್ನು ಸಾಮಾನ್ಯ ವರ್ಗದ ನೌಕರನೆಂದು ಪರಿಗಣಿಸದೆ, ಎಸ್‌ಸಿ, ಎಸ್‌ಟಿ ನೌಕರನೆಂದೇ ಪರಿಗಣಿಸಬೇಕು ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.



ಕೊನೆಗೂ ಜಯ ಸಿಕ್ಕಿದೆ. ಆದರೆ, ಈ ಸುತ್ತೋಲೆ, ಸರ್ಕಾರಿ ನೌಕರರಿಗೆ ತತ್ಪರಿಣಾಮ ಜ್ಯೇಷ್ಠತೆ ವಿಸ್ತರಿಸುವ ಕಾಯ್ದೆ ಜಾರಿಯಾದ ದಿನದಿಂದ ಅನ್ವಯ ಆಗಬೇಕು

ಡಿ. ಚಂದ್ರಶೇಖರಯ್ಯ, ಅಧ್ಯಕ್ಷ, ರಾಜ್ಯ ಸರ್ಕಾರಿ ಎಸ್‌ಸಿ, ಎಸ್‌ಟಿ ನೌಕರರ ಸಂಘ

7ನೇ ಪುಟ ನೋಡಿ

ಕೌಂಟರ್‌ನಲ್ಲೇ ಟಿಕೆಟ್ ಖರೀದಿಸಲು ಅವಕಾಶ

ನವದೆಹಲಿ: ದೇಶದಲ್ಲಿ ಕೋವಿಡ್ ಪ್ರಕರಣಗಳು ಕಡಿಮೆಯಾಗುತ್ತಿದ್ದಂತೆಯೇ ಭಾರತೀಯ ರೈಲ್ವೆಯು, ರೈಲುಗಳಲ್ಲಿ ಕಾಯ್ದಿರಿಸದ ಕೋಚ್‌ಗಳನ್ನು ಹಂತ ಹಂತವಾಗಿ ಮರುಸೇರ್ಪಡೆ ಮಾಡುತ್ತಿದ್ದು, ಇದರಿಂದ ಕೌಂಟರ್‌ನಲ್ಲೇ ಟಿಕೆಟ್ ಖರೀದಿಸಿ ಪ್ರಯಾಣಿಸಲು ಅವಕಾಶ ದೊರಕಲಿದೆ.

7ನೇ ಪುಟ ನೋಡಿ

ಎಲ್‌ಕೆಜಿ, ಯುಕೆಜಿ ತರಗತಿ ಇಂದಿನಿಂದ

ಬೆಂಗಳೂರು: ರಾಜ್ಯದ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಪ್ರಾಥಮಿಕ ಮತ್ತು ಪೂರ್ವ ಪ್ರಾಥಮಿಕ ಶಾಲೆಗಳಲ್ಲಿ ಎಲ್‌ಕೆಜಿ ಮತ್ತು ಯುಕೆಜಿ ತರಗತಿಗಳು ಸೋಮವಾರ (ನ. 8) ಆರಂಭವಾಗಲಿವೆ. 6

ಪುಣ್ಯಾರಾಧನೆ: ಇಂದು ವಿಶೇಷ ಪೂಜೆ

ಬೆಂಗಳೂರು: ನಟ ದಿವಂಗತ ಪುನೀತ್ ರಾಜ್‌ಕುಮಾರ್ ಅವರು ನಿಧನರಾಗಿ 10 ದಿನಗಳು ಕಳೆದಿದ್ದು, ನ. 8ರಂದು (ಸೋಮವಾರ) 11ನೇ ದಿನದ ಪುಣ್ಯಾರಾಧನೆಯ ವಿಧಿವಿಧಾನಗಳು ನಡೆಯಲಿವೆ. 7

ಪಕ್ಷ ಬಲವೃದ್ಧಿ: ದಕ್ಷಿಣದತ್ತ ಚಿತ್ತ

ಬಿಜೆಪಿ ಕಾರ್ಯಕಾರಿಣಿ: ಚುನಾವಣೆ ಕಾರ್ಯತಂತ್ರಕ್ಕೆ ಒತ್ತು

ಪ್ರಜಾವಾಣಿ ವಾರ್ತೆ



ಜೆ.ಪಿ.ನಡ್ಡಾ

ನವದೆಹಲಿ: ದಕ್ಷಿಣ ಭಾರತದ ರಾಜ್ಯಗಳಲ್ಲಿ ಪಕ್ಷದ ಬಲವರ್ಧನೆ ಮತ್ತು ಮುಂದಿನ ವರ್ಷದ ಆರಂಭದಲ್ಲಿ ಐದು ರಾಜ್ಯಗಳಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಯ ಕಾರ್ಯತಂತ್ರ ರೂಪಿಸುವಿಕೆಯು ಬಿಜೆಪಿ ಕಾರ್ಯಕಾರಿಣಿಯ ಒಂದು ದಿನದ ಸಭೆಯ ಕೇಂದ್ರ ಬಿಂದುಗಳಾಗಿದ್ದವು.

ಒಮ್ಮೆಯೂ ಅಧಿಕಾರಕ್ಕೆ ಏರಲು ಸಾಧ್ಯವಾಗಿಲ್ಲದ ದಕ್ಷಿಣದ ಕೇರಳ, ಆಂಧ್ರ ಪ್ರದೇಶ, ತಮಿಳುನಾಡು, ತೆಲಂಗಾಣ ರಾಜ್ಯಗಳಿಗೆ ವಿಶೇಷ ಗಮನ ನೀಡಲು ಕಾರ್ಯಕಾರಿಣಿ ನಿರ್ಧರಿಸಿದೆ. ಹಾಗೆಯೇ ದೇಶದ ಪೂರ್ವ ಭಾಗದ ರಾಜ್ಯ ಒಡಿಶಾದತ್ತಲೂ ಹೆಚ್ಚು ಗಮನ ಹರಿಸಲು ತೀರ್ಮಾನಿಸಲಾಗಿದೆ.

ವಿಧಾನಸಭೆಗೆ ಮುಂದಿನ ವರ್ಷದ ಆರಂಭದಲ್ಲಿ ಚುನಾವಣೆ ನಡೆಯಲಿರುವ ಉತ್ತರ ಪ್ರದೇಶ, ಪಂಜಾಬ್, ಉತ್ತರಾಖಂಡ, ಗೋವಾ ಮತ್ತು ಮಣಿಪುರದಲ್ಲಿ ಪಕ್ಷ ಸಂಘಟನೆಯ ಕೆಲಸವನ್ನು ದುಪ್ಪಟ್ಟುಗೊಳಿಸಬೇಕು. ಬಿಜೆಪಿ ರಾಜಕೀಯ ಪರ್ಯಾಯವಾಗಿ ಬೆಳೆದಿಲ್ಲದ ರಾಜ್ಯಗಳಲ್ಲಿಯೂ ಹೆಚ್ಚು ಕೆಲಸ ಮಾಡಬೇಕು ಎಂದು ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ಮುಖಂಡರಿಗೆ ಕರೆ ಕೊಟ್ಟರು.

ಮುಖ್ಯಾಂಶಗಳು

- 124 ಮುಖಂಡರು ಕಾರ್ಯಕಾರಿಣಿಯಲ್ಲಿ ಹಾಜರು
- ಸಮಾರೋಪ ಸಮಾರಂಭದಲ್ಲಿ ಮೋದಿ ಭಾಷಣ

8ನೇ ಪುಟ ನೋಡಿ

ಚೆನ್ನೈ: ಮಳೆಗೆ ಜನಜೀವನ ಅಸ್ತವ್ಯಸ್ತ

ಚೆನ್ನೈ (ಪಿಟಿಐ): ಚೆನ್ನೈ ಮತ್ತು ಹೊರವಲಯದಲ್ಲಿ ಶನಿವಾರ ರಾತ್ರಿ ಧಾರಾಕಾರ ಮಳೆ ಸುರಿದಿದೆ. ರಸ್ತೆಗಳಲ್ಲಿ ಎರಡರಿಂದ ಮೂರು ಅಡಿಗಳಷ್ಟು ನೀರು ನಿಂತಿದ್ದರಿಂದ ಭಾನುವಾರ ವಾಹನ ಸಂಚಾರಕ್ಕೆ ತೊಡಕುಂಟಾಗಿತ್ತು. ರೈಲು ಸಂಚಾರವೂ ವ್ಯತ್ಯಯಗೊಂಡಿತ್ತು.

ಇಲ್ಲಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ರನ್‌ವೇನಲ್ಲೂ ಮಳೆ ನೀರು ನಿಂತಿದ್ದರಿಂದ ಒಂದೆರಡು ವಿಮಾನಗಳ ಯಾನ ವಿಳಂಬವಾಯಿತು. ಆದರೆ ಭಾರಿ ಉಪಕರಣಗಳ ಮೂಲಕ ನೀರು ತೆರವುಗೊಳಿಸಿದ್ದರಿಂದ ವಿಮಾನ ಸಂಚಾರ ಸುಗಮಗೊಂಡಿತು. ಪೂಂಡಿ, ಚೆಂಬರಂಬಕ್ಕಂ ಮತ್ತು ಪುಜಲ್ ಜಲಾಶಯಗಳಿಂದ ನೀರು ಹೊರಬಿಡಲು ಸಿದ್ಧತೆ ನಡೆದಿದೆ. ಪ್ರವಾಹದ ಎಚ್ಚರಿಕೆ ನೀಡಲಾಗಿದೆ. 2015ರಲ್ಲೂ ಇಲ್ಲಿ ಇಂತಹದೇ ಸ್ಥಿತಿ ನಿರ್ಮಾಣವಾಗಿತ್ತು. 7

14 ಜಿಲ್ಲೆಗಳಲ್ಲಿ ‘ಯೆಲ್ಲೊ ಅಲರ್ಟ್’

ಬೆಂಗಳೂರು: ಅರಬ್ಬಿ ಸಮುದ್ರದ ಪೂರ್ವ ಮಧ್ಯಭಾಗದಲ್ಲಿ ಪ್ರಬಲ ವಾಯುಭಾರ ಕುಸಿತದಿಂದಾಗಿ ರಾಜ್ಯದ ದಕ್ಷಿಣ ಒಳನಾಡಿನ ಬಹುತೇಕ ಎಲ್ಲ ಜಿಲ್ಲೆಗಳಲ್ಲಿ ನ.8 ಮತ್ತು 9ರಂದು ಗುಡುಗು, ಸಿಡಿಲು ಸಹಿತ ಧಾರಾಕಾರ ಮಳೆಯಾಗುವ ಮುನ್ಸೂಚನೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಆಂಧ್ರಪ್ರದೇಶ ಹಾಗೂ ತಮಿಳುನಾಡು ಕರಾವಳಿಯಲ್ಲಿ ಮೇಲ್ಮೈ ಸುಳಿಗಾಳಿ ಉಂಟಾಗಿರುವ ಪರಿಣಾಮವೂ ರಾಜ್ಯದಲ್ಲಿ ಮಳೆಯಾಗುವ ಲಕ್ಷಣಗಳು ಇವೆ.

7ನೇ ಪುಟ ನೋಡಿ

ತುಮಕೂರು– ಯಶವಂತಪುರ ನಡುವೆ ಮೆಮು ರೈಲಿಗೆ ಬೇಡಿಕೆ



ಬೆಂಗಳೂರು: ತುಮಕೂರು– ಬೆಂಗಳೂರು ನಡುವಿನ ರೈಲು ಮಾರ್ಗದ ವಿದ್ಯುದ್ದೀಕರಣ ಯೋಜನೆ ಕಾಮಗಾರಿ ಪೂರ್ಣಗೊಂಡಿದ್ದು, ರೈಲ್ವೆ ಸುರಕ್ಷತಾ ಆಯುಕ್ತರಿಂದ ಪರಿಶೀಲನೆಯೂ ನಡೆದಿದೆ. ಎರಡೂ ನಗರಗಳ ನಡುವೆ ಮೆಮು ರೈಲು- (ಎಲೆಕ್ಟ್ರಿಕ್ ರೈಲು) ಸಂಚಾರಕ್ಕೆ ಈಗ ಬೇಡಿಕೆ ಹೆಚ್ಚಾಗಿದೆ.

ಬೆಂಗಳೂರಿನಿಂದ ತುಮಕೂರಿಗೆ ನಿತ್ಯ ಲಕ್ಷಾಂತರ ಜನ ಪ್ರಯಾಣಿಸುತ್ತಾರೆ. ಯಶವಂತಪುರದಿಂದ ತುಮಕೂರಿಗೆ ಪ್ರಯಾಣದ ಅವಧಿ ಗರಿಷ್ಠ ಒಂದೂವರೆ ಗಂಟೆ ಆಗಿರುವುದರಿಂದ ರೈಲಿನಲ್ಲಿ ಪ್ರಯಾಣಕ್ಕೆ ಜನ ಬಯಸುತ್ತಾರೆ.

ಕೋವಿಡ್ ಪೂರ್ವದಲ್ಲಿ ಡೀಸೆಲ್ ಎಂಜಿನ್ ರೈಲು ಗಾಡಿಯೇ ದಿನಕ್ಕೆ 4 ಟ್ರಿಪ್ ಸಂಚರಿಸುತ್ತಿತ್ತು. ಬೆಳಿಗ್ಗೆ 9.30ಕ್ಕೆ ಬೆಂಗಳೂರಿನಿಂದ ಹೊರಟು 11 ಗಂಟೆಗೆ ತುಮಕೂರಿಗೆ ತೆರಳುತ್ತಿತ್ತು. ಅಲ್ಲಿಂದ 11.30ಕ್ಕೆ ಹೊರಟು ಮಧ್ಯಾಹ್ನ 1ಕ್ಕೆ ಬೆಂಗಳೂರಿಗೆ ಬರುತ್ತಿತ್ತು. 1.30ಕ್ಕೆ ಬೆಂಗಳೂರಿನಿಂದ ಹೊರಟು 3ಕ್ಕೆ ತುಮಕೂರಿಗೆತಲುಪಿ, 4.30ಕ್ಕೆ ಅಲ್ಲಿಂದ ಹೊರಟುಸಂಜೆ 6ಕ್ಕೆ ಬೆಂಗಳೂರಿಗೆ ಬಂದು ತಲುಪುತ್ತಿತ್ತು.

ವಿದ್ಯುದ್ದೀಕರಣ ಕಾಮಗಾರಿ ಪೂರ್ಣಗೊಂಡಿದ್ದು, ರೈಲ್ವೆ ಸುರಕ್ಷತಾ ಆಯುಕ್ತರಿಂದ ಪರಿಶೀಲನೆ ನಡೆದಿದೆ. ಈಗ ಮೆಮು ರೈಲು ಸಂಚಾರ ಆರಂಭಿಸಿದರೆ ಅನುಕೂಲ ಆಗಲಿದೆ. ರೈಲ್ವೆ ಇಲಾಖೆಯ ಬೆಂಗಳೂರು ವಿಭಾಗದ ಸಂಸದರ ಸಭೆ ಸದ್ಯದಲ್ಲೇ ನಡೆಯಲಿದ್ದು, ತುಮಕೂರು–ಬೆಂಗಳೂರು ಪ್ರಯಾಣಿಕರ ಸಮಸ್ಯೆ ಬಗ್ಗೆ ಅಲ್ಲಿ ಸಂಸದರು ಧ್ವನಿ ಎತ್ತಬೇಕು ಎಂದು ರೈಲ್ವೆ ಹೋರಾಟಗಾರ ಕೃಷ್ಣ ಪ್ರಸಾದ್ ಒತ್ತಾಯಿಸಿದರು.



ಕುಂದುಕೊರತೆ ಜನದನಿ

ನಿಮ್ಮ ಪ್ರದೇಶದಲ್ಲಿ ಜಲಮಂಡಳಿ ಸಮರ್ಪಕವಾಗಿ ನೀರು ಪೂರೈಸುತ್ತಿಲ್ಲವೇ? ನೀವು ಓಡಾಡುವ ರಸ್ತೆಯಲ್ಲಿ ಗುಂಡಿ ಬಿದ್ದಿದೆಯೇ? ಕಸ ರಾಶಿ ಬಿದ್ದಿದೆಯೇ ಅಥವಾ ನಿತ್ಯ ವಿಹಾರಕ್ಕೆ ಹೋಗುವ ಉದ್ಯಾನ ಪಾಳುಬಿದ್ದಿದೆಯೇ? ಬಸ್‌ಗಳು ಬರುತ್ತಿಲ್ಲವೇ? ಸಮಸ್ಯೆಗಳು ತಾಂಡವವಾಡುತ್ತಿವೆಯೇ? . . .

ನಿಮ್ಮ ಅಹವಾಲುಗಳಿಗೆ 'ಪ್ರಜಾವಾಣಿ' ಧ್ವನಿಯಾಗಲಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ), ಜಲಮಂಡಳಿ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ (ಬಿಎಂಟಿಸಿ), ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಗೆ (ಬೆಸ್ಕಾಂ) ಸಂಬಂಧಿಸಿದ ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ: peoplesproblem@prajavani.co.in.

ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (**9606038256**) ಸಹ ಮಾಡಬಹುದು.



ಗಾಯತ್ರಿದೇವಿ ವನದಲ್ಲಿರುವ ಶೌಚಾಲಯದ ಬಾಗಿಲು ತೆರೆದು ಸಾರ್ವಜನಿಕ ಬಳಕೆಗೆ ಅವಕಾಶ ಕಲ್ಪಿಸಲಾಗಿದೆ

ಬಳಕೆಗೆ ಮುಕ್ತವಾಯ್ತು ಶೌಚಾಲಯ

ರಾಜಾಜಿನಗರ ವ್ಯಾಪ್ತಿಯ ಮರಿಯಪ್ಪನ ಪಾಳ್ಯದ ಗಾಯತ್ರಿದೇವಿ ವನದಲ್ಲಿ ಬಾಗಿಲು ಮುಚ್ಚಿದ್ದ ಶೌಚಾಲಯಗಳು ಈಗ ಸಾರ್ವಜನಿಕರ ಬಳಕೆಗೆ ಮುಕ್ತವಾಗಿದೆ.

ಉದ್ಯಾನದಲ್ಲಿರುವ ಶೌಚಾಲಯಗಳಿಗೆ ಬೀಗ ಹಾಕಿರುವುದರಿಂದ ಸಾರ್ವಜನಿಕರಿಗೆ ಅನಾನುಕೂಲ ಆಗಿದ್ದ ಕುರಿತು 'ಪ್ರಜಾವಾಣಿ'ಯು ಕಳೆದ ಸೋಮವಾರದ (ನ.1) ಸಂಚಿಕೆಯ ಕುಂದು–ಕೊರತೆ ಅಂಕಣದಲ್ಲಿ 'ಶೌಚಾಲಯಗಳ ಬಾಗಿಲು ತೆರೆಯಿರಿ' ಶೀರ್ಷಿಕೆಯಡಿ ವರದಿ ಪ್ರಕಟಿಸಿ ಗಮನ ಸೆಳೆದಿತ್ತು. ಶೌಚಾಲಯದ ಬಾಗಿಲು ತೆರೆಯದೆ, ವಾಯುವಿಹಾರಿಗಳು ಹಾಗೂ ಮಕ್ಕಳಿಗೆ ತೊಂದರೆಯಾಗುತ್ತಿತ್ತು. ಸಮಸ್ಯೆ ಬಗ್ಗೆ ಪ್ರಕಟಗೊಂಡ ನಂತರ ತೋಟಗಾರಿಕೆ ಇಲಾಖೆಯವರು ಉದ್ಯಾನದ ಶೌಚಾಲಯಗಳ ಬಾಗಿಲನ್ನು ತೆರೆಯುವ ಮೂಲಕ ಸಾರ್ವಜನಿಕರ ಸೇವೆಗೆ ಮುಕ್ತಗೊಳಿಸಿದ್ದಾರೆ. ನಮ್ಮ ಅಹವಾಲು ಪ್ರಕಟಿಸಿ, ಇಲಾಖೆಯ ಕಣ್ತೆರೆಸಿದ 'ಪ್ರಜಾವಾಣಿ'ಗೆ ವಂದನೆಗಳು. ಶೌಚಾಲಯದ ಬಾಗಿಲು ತೆರೆಸಿದ ಇಲಾಖೆ ಸಿಬ್ಬಂದಿಗೂ ಧನ್ಯವಾದ'.

ಬಸವರಾಜ ಹುಡೇದಗಡ್ಡಿ, ರಾಜಾಜಿನಗರ

'ಓಣಿ ರಸ್ತೆ'ಯನ್ನು ಸರಿಪಡಿಸಿ

ಜ್ಞಾನಭಾರತಿಯ ಮಲ್ಲತ್ತಹಳ್ಳಿ ಮತ್ತು ಕೆಂಗುಂಟೆ ಮಾರ್ಗದ ಓಣಿ ರಸ್ತೆ ಹಲವು ವರ್ಷಗಳಿಂದ ಹದಗೆಟ್ಟಿದೆ. ಮಳೆ ಬಂದರೆ ವಾಹನ ಸವಾರರು ಹೈರಾಣಾಗುತ್ತಾರೆ. ಪಾದಚಾರಿಗಳ ಸಂಚಾರಕ್ಕೂ ಈ ರಸ್ತೆ ಸೂಕ್ತವಾಗಿಲ್ಲ. ಕೋವಿಡ್‌ನಿಂದ ಮುಚ್ಚಲಾಗಿದ್ದ ಶಾಲೆಗಳೆಲ್ಲ ಪುನರಾರಂಭಗೊಂಡಿವೆ. ವಿದ್ಯಾರ್ಥಿಗಳು ಈ ಹಾಳಾದ ರಸ್ತೆಯಲ್ಲೇ ಸಂಚರಿಸುವುದು ಅನಿವಾರ್ಯವಾಗಿದೆ.

ರಸ್ತೆಯ ಪಕ್ಕದಲ್ಲೇ ಇರುವ ಆಳವಾದ ಚರಂಡಿ ತೆರೆದುಕೊಂಡಿರುವುದರಿಂದ ವಾಹನಗಳು ನಿಯಂತ್ರಣ ಕಳೆದುಕೊಂಡು ಚರಂಡಿಗೆ ಉರುಳುವ ಅಪಾಯವಿದೆ. ಈ ರಸ್ತೆಯಲ್ಲಿ ಹಿರಿಯರು ಹಾಗೂ ಮಕ್ಕಳು ಜೀವದ ಭಯದಲ್ಲೇ ಹೆಜ್ಜೆ ಹಾಕುತ್ತಾರೆ. ದಯವಿಟ್ಟು ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಈ ರಸ್ತೆ ಸರಿಪಡಿಸುವತ್ತ ಗಮನ ನೀಡಬೇಕು. ಅನಾಹುತಗಳಿಗೆ ಅವಕಾಶ ನೀಡದೆ, ಮೊದಲೇ ಎಚ್ಚೆತ್ತುಕೊಳ್ಳಬೇಕು.

ತುಕಾರಾಂ, ಮಲ್ಲತ್ತಹಳ್ಳಿ



ಮಲ್ಲತ್ತಹಳ್ಳಿ ಮತ್ತು ಕೆಂಗುಂಟೆ ಮಾರ್ಗದ ಓಣಿ ರಸ್ತೆ ಹದಗೆಟ್ಟಿರುವುದು.

ರಸ್ತೆಗೆ ಡಾಂಬರು ಹಾಕಿ

ಬಸವನಗುಡಿಯ ಬೆಣ್ಣೆ ಗೋವಿಂದಪ್ಪ ರಸ್ತೆಯ ವ್ಯಾಸರಾಯ ಮಠದ ಹಿಂಭಾಗದ ರಸ್ತೆ ಸಂಪೂರ್ಣವಾಗಿ ಹದಗೆಟ್ಟಿದೆ. ಜಲಮಂಡಳಿಯವರು ಒಳಚರಂಡಿ ಸಂಪರ್ಕಕ್ಕಾಗಿ ರಸ್ತೆಯನ್ನು ಅಗೆದು, ಈ ದುಸ್ಥಿತಿಗೆ ತಂದಿದ್ದಾರೆ. ಮಳೆ ಬಂದರೆ ರಸ್ತೆಯಲ್ಲಿ ನೀರು ನಿಲ್ಲುತ್ತದೆ. ಇದರಿಂದಾಗಿ ಸೊಳ್ಳೆಗಳ ಕಾಟವೂ ಹೆಚ್ಚಾಗಿದೆ. ಸ್ಥಳೀಯ ನಿವಾಸಿಗಳ ಆರೋಗ್ಯದ ಮೇಲೂ ದುಷ್ಪರಿಣಾಮ ಉಂಟಾಗುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಈ ರಸ್ತೆಗೆ ಡಾಂಬರು ಹಾಕಿ, ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಿ.

ಶ್ರೀನಿವಾಸ ಕುಮಾರ್, ಗೋವಿಂದಪ್ಪ ರಸ್ತೆ ನಿವಾಸಿ



ಬಸವನಗುಡಿಯ ವ್ಯಾಸರಾಯ ಮಠದ ಹಿಂಭಾಗದ ರಸ್ತೆ ಹಾಳಾಗಿರುವುದು

ಬಸ್ ಸೇವೆ ಕಲ್ಪಿಸಿ

ಉತ್ತರಹಳ್ಳಿ ಮಾರ್ಗದಲ್ಲಿರುವ ರಾಮಾಂಜನೇಯ ನಗರಕ್ಕೆ ಪ್ರತಿದಿನ 2 ಅಥವಾ 3 ಬಸ್‌ಗಳು ಮಾತ್ರ ಸಂಚರಿಸುತ್ತವೆ. ಅವುಗಳ ಸೇವೆ ನಿಗದಿತ ಸಮಯಕ್ಕೆ ಮಾತ್ರ ಸೀಮಿತವಾಗಿದೆ. ಕೆಂಪೇಗೌಡ ಬಸ್ ನಿಲ್ದಾಣ ಅಥವಾ ಕೆ.ಆರ್.ಮಾರುಕಟ್ಟೆಗೆ ಪ್ರಯಾಣಿಸಲು ಸಮರ್ಪಕವಾದ ಬಸ್ ವ್ಯವಸ್ಥೆ ಈ ಭಾಗದ ಜನರಿಗೆ ಲಭ್ಯವಿಲ್ಲ.

ಬಸ್‌ಗಾಗಿ ಸುಮಾರು 1 ಕಿ.ಮೀ ದೂರದವರೆಗೆ ನಡೆದು ಉತ್ತರಹಳ್ಳಿ ರಸ್ತೆಯನ್ನು ತಲುಪಬೇಕಿದೆ. ಅಲ್ಲೂ ಬಸ್‌ಗಾಗಿ ಕಾಯಬೇಕಾಗಿದೆ. ರಾಮಾಂಜನೇಯ ನಗರದಲ್ಲಿ ಬಸ್ ತಂಗುದಾಣವೂ ಇದೆ. ಆದರೆ, ಬಸ್‌ಗಳ ವ್ಯವಸ್ಥೆ ಇಲ್ಲ. ಈ ಭಾಗದಿಂದಲೂ ಹಲವರು ವಿವಿಧ ಸ್ಥಳಗಳಿಗೆ ಪ್ರತಿನಿತ್ಯ ಸಂಚರಿಸುವ ಪ್ರಯಾಣಿಕರಿದ್ದಾರೆ. ಇದನ್ನು ಮನಗಂಡು ಹೆಚ್ಚಿನ ಬಸ್ ಸೇವೆ ಕಲ್ಪಿಸಿದರೆ ಅನುಕೂಲ.

ಕೆ.ವಿ.ಸೀತಾರಾಮಯ್ಯ, ರಾಮಾಂಜನೇಯ ನಗರ

ಸುದ್ದಿ 2 ನಿಮಿಷ

ಅಸ್ಸಾಂನ ಮಾಜಿ ಸಿ.ಎಂ ಪುತ್ರ ಅಶೋಕ್ ಸೈಕಿಯಾ ಬಂಧನ

ನವದೆಹಲಿ (ಪಿಟಿಐ): ಅಸ್ಸಾಂನ ಮಾಜಿ ಮುಖ್ಯಮಂತ್ರಿ ಹಿತೇಶ್ವರ್ ಸೈಕಿಯಾ ಅವರ ಪುತ್ರ ಅಶೋಕ್ ಸೈಕಿಯಾ ಅವರನ್ನು 25 ವರ್ಷಗಳ ಹಳೆಯದಾದ, ಸುಮಾರು ₹9 ಲಕ್ಷ ಸಾಲದ ಸುಸ್ತಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ಭಾನುವಾರ ಬಂಧಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಮನ್ಸ್ ನೀಡಿದರೂ ನ್ಯಾಯಾಲಯಕ್ಕೆ ಹಾಜರಾಗದ ಕಾರಣ ಅವರ ವಿರುದ್ಧ ಜಾಮೀನು ರಹಿತ ವಾರಂಟ್ ಹೊರಡಿಸಲಾಗಿತ್ತು. ಅವರನ್ನು ಬಂಧಿಸಲಾಗಿದ್ದು, ಸೋಮವಾರ ನ್ಯಾಯಾಲಯಕ್ಕೆ ಹಾಜರುಪಡಿಸಲಾಗುವುದು ಎಂದು ಅವರು ಹೇಳಿದ್ದಾರೆ.

'ಎಚ್‌ಡಿಕೆ ಕಪ್' ವಾಲಿಬಾಲ್ ಟೂರ್ನಿಗೆ ಚಾಲನೆ



ಯಲಹಂಕ: ಬೆಂಗಳೂರು ಮಹಾನಗರ ಜೆಡಿಎಸ್ ಘಟಕ ಹಾಗೂ ಬ್ಯಾಟರಾಯನಪುರ ಕ್ಷೇತ್ರದ ಜೆಡಿಎಸ್ ಅಧ್ಯಕ್ಷ ಎನ್.ವೇಣುಗೋಪಾಲ್ ನೇತೃತ್ವದಲ್ಲಿ ದಾಸರಹಳ್ಳಿಯ ನಾಡಪ್ರಭು ಕೆಂಪೇಗೌಡ ಕ್ರೀಡಾಂಗಣದಲ್ಲಿ ಆಯೋಜಿಸಿರುವ 'ಎಚ್‌ಡಿಕೆ ಕಪ್' ವಾಲಿಬಾಲ್ ಟೂರ್ನಿಗೆ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಚಾಲನೆ ನೀಡಿದರು.

'ಕೋವಿಡ್‌ನಿಂದ ಯಾವುದೇ ಕ್ರೀಡಾಕೂಟಗಳು ನಡೆಯದೆ, ಕ್ರೀಡಾಪಟುಗಳು ಹಾಗೂ ಕ್ರೀಡಾಭಿಮಾನಿಗಳಲ್ಲಿ ನಿರಾಸೆ ಮೂಡಿತ್ತು. ಈಗ ಕ್ರೀಡಾ ಚಟುವಟಿಕೆಗಳು ಗರಿಗೆದರಿದ್ದು, ಎಲ್ಲರಲ್ಲೂ ಸಂತಸ ಮೂಡಿದೆ. ಕ್ರೀಡಾಕೂಟಗಳು ಹೆಚ್ಚಾಗಿ ನಡೆಯಬೇಕು. ಯುವಕರಲ್ಲಿ ಕ್ರೀಡಾ ಮನೋಭಾವ ಬೆಳೆಯುವುದು ಹಾಗೂ ದೈಹಿಕ, ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಲು ಸಹಕಾರಿ' ಎಂದು ಕುಮಾರಸ್ವಾಮಿ ಹೇಳಿದರು.

ಯುವ ಜನತಾ ದಳದ ದೇವರಾಜ್, 'ಬೆಂಗಳೂರು ನಗರ ಸೇರಿದಂತೆ ವಿವಿಧ ಜಿಲ್ಲೆಗಳ ಸುಮಾರು 36 ತಂಡಗಳು ಟೂರ್ನಿಯಲ್ಲಿ ಪಾಲ್ಗೊಂಡಿವೆ. ವಿಜೇತರಿಗೆ ಪ್ರಥಮ ₹50 ಸಾವಿರ ಹಾಗೂ ದ್ವಿತೀಯ ₹30 ಸಾವಿರ ನಗದು ಬಹುಮಾನ ಹಾಗೂ ಪ್ರಶಸ್ತಿ ನೀಡಲಾಗುವುದು' ಎಂದು ಹೇಳಿದರು.

ದಾಸರಹಳ್ಳಿ ಕ್ಷೇತ್ರದ ಜೆಡಿಎಸ್ ಕಚೇರಿಯನ್ನು ಎಚ್.ಡಿ.ಕುಮಾರಸ್ವಾಮಿ ಉದ್ಘಾಟಿಸಿದರು.

ಹೋಟೆಲ್ ಸಿಬ್ಬಂದಿ ಮೇಲೆ ಹಲ್ಲೆ ಪ್ರಕರಣ: ವಿವಿಧೆಡೆ ಪೊಲೀಸರ ದಾಳಿ

ಉದ್ಯಮಿ ಮಗನ ಮನೆಯಲ್ಲಿ ಡ್ರಗ್ಸ್?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೋಟೆಲ್ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದ್ದ ಆರೋಪದಡಿ ಬಂಧಿಸಲಾಗಿರುವ ಚಿನ್ನಾಭರಣ ಉದ್ಯಮಿ ಮಗ ವಿಷ್ಣು ಭಟ್ ಮನೆ ಮೇಲೆ ಜೀವನ್‌ಭಿಮಾನಗರ ಠಾಣೆ ಪೊಲೀಸರು ಭಾನುವಾರ ದಾಳಿ ಮಾಡಿದ್ದು, ವಿವಿಧ ಬಗೆಯ ಡ್ರಗ್ಸ್ ಪತ್ತೆಯಾಗಿರುವ ಮಾಹಿತಿ ಲಭ್ಯವಾಗಿದೆ.



ಶ್ರೀಕೃಷ್ಣ

'ವಾಸವಿದ್ದ ಹೋಟೆಲ್ ಸಿಬ್ಬಂದಿ ಜೊತೆ ಜಗಳ ತೆಗೆದು ಹಲ್ಲೆ ಮಾಡಿದ್ದ ಆರೋಪದಡಿ ಅಂತರರಾಷ್ಟ್ರೀಯ ಹ್ಯಾಕರ್ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ (26) ಹಾಗೂ ನಗರದ ಜ್ಯುವೆಲರ್ಸ್ ಮಳಿಗೆಯೊಂದರ ಮಾಲೀಕನ ಮಗ ವಿಷ್ಣುಭಟ್‌ನನ್ನು ಶನಿವಾರ ಬಂಧಿಸಲಾಗಿತ್ತು. ಅವರಿಬ್ಬರು ಮಾದಕ ವಸ್ತು ಸೇವಿಸಿರುವುದು ವೈದ್ಯಕೀಯ ಪರೀಕ್ಷೆಯಿಂದ ಗೊತ್ತಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಡಾರ್ಕ್‌ನೆಟ್ ಮೂಲಕ ಡ್ರಗ್ಸ್ ತರಿಸಿಕೊಳ್ಳುತ್ತಿದ್ದ ಆರೋಪಿಗಳು, ತಮ್ಮ ಮನೆ ಹಾಗೂ ಹೋಟೆಲ್ ಕೊಠಡಿಗಳಲ್ಲಿ ಸೇವಿಸುತ್ತಿದ್ದರು. ಡ್ರಗ್ಸ್ ನಶೆಯಲ್ಲಿದ್ದ ವೇಳೆಯಲ್ಲೇ ಹೋಟೆಲ್ ಸಿಬ್ಬಂದಿ ಹಾಗೂ ವ್ಯವಸ್ಥಾಪಕರ ಮೇಲೆ ಹಲ್ಲೆ ಮಾಡಿದ್ದರು' ಎಂದೂ ಹೇಳಿದರು.

'ಡ್ರಗ್ಸ್ ಸಂಗ್ರಹವಿಟ್ಟಿದ್ದ ಮಾಹಿತಿ ಮೇರೆಗೆ ವಿಷ್ಣು ಭಟ್‌ಗೆ ಸೇರಿದ್ದ ಇಂದಿರಾ ನಗರದಲ್ಲಿರುವ ಮನೆ ಮೇಲೆ ಭಾನುವಾರ ದಾಳಿ ಮಾಡಲಾಯಿತು. ಆಲ್ಪ್ರಝೋಲಮ್, ಗಾಂಜಾ ಪುಡಿ ತುಂಬಿದ್ದ ಐದು ಸಿಗರೇಟ್‌ಗಳು ಹಾಗೂ ಗಾಂಜಾ ಪುಡಿ ಇದ್ದ ಪೊಟ್ಟಣಗಳು ಮನೆಯಲ್ಲಿ ಪತ್ತೆ ಆಗಿವೆ. ಅವುಗಳನ್ನು ಜಪ್ತಿ ಮಾಡಲಾಗಿದ್ದು, ತನಿಖೆ ಮುಂದುವರಿಸಲಾಗಿದೆ' ಎಂದರು.

'ಶ್ರೀಕೃಷ್ಣ ವಾಸವಿದ್ದ ಕೊಠಡಿ ಮೇಲೂ ದಾಳಿ ಮಾಡಲಾಯಿತು. ಆದರೆ, ಯಾವುದೇ ಡ್ರಗ್ಸ್ ಪತ್ತೆ ಆಗಿಲ್ಲ' ಎಂದೂ ಹೇಳಿದರು.

ಕಸ್ಟಡಿಗೆ ಕೋರಿಕೆ: 'ಬಂಧಿತ ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ, ಹೆಚ್ಚಿನ ವಿಚಾರಣೆಗಾಗಿ ಕಸ್ಟಡಿಗೆ ನೀಡುವಂತೆ ನ್ಯಾಯಾಧೀಶರನ್ನು ಕೋರಲಾಗುವುದು' ಎಂದು ಪೊಲೀಸ್ ಅಧಿಕಾರಿ ತಿಳಿಸಿದರು.

'ಆರೋಪಿಗಳ ವಿರುದ್ಧ ಎನ್‌ಡಿಪಿಎಸ್ ಕಾಯ್ದೆಯಡಿಯೂ ಪ್ರಕರಣ ದಾಖಲಿಸಿಕೊಳ್ಳಲಾಗುವುದು. ಇದೇ ಆರೋಪಿಗಳು, ಮತ್ತಷ್ಟು ಪ್ರಕರಣದಲ್ಲಿ ಭಾಗಿಯಾಗಿರುವ ಮಾಹಿತಿ ಇದೆ' ಎಂದರು.

'ಇಬ್ಬರೂ ಮಾದಕ ವ್ಯಸನಿಗಳು. ವಿಚಾರಣೆಯಲ್ಲಿ ಕೇಳಿದ ಪ್ರಶ್ನೆಗಳಿಗೆ ಸಮರ್ಪಕವಾಗಿ ಉತ್ತರಿಸುತ್ತಿಲ್ಲ. ನಗುವುದು ಹಾಗೂ ಅಳುವುದು ಮಾಡುತ್ತಿದ್ದಾರೆ. ತನಿಖೆಗೆ ಸಹಕರಿಸುತ್ತಿಲ್ಲ. ಈ ಸಂಗತಿಯನ್ನು ನ್ಯಾಯಾಲಯದ ಗಮನಕ್ಕೆ ತರಲಾಗುವುದು' ಎಂದೂ ತಿಳಿಸಿದರು.

'ಶ್ರೀಕೃಷ್ಣನಿಗಾಗಿ ಹಣ ಖರ್ಚು'



ವಿಷ್ಣು ಭಟ್

'ಪಾರ್ಟಿಯೊಂದರಲ್ಲಿ ಶ್ರೀಕೃಷ್ಣ ಹಾಗೂ ವಿಷ್ಣು ಭಟ್ ಪರಿಚಯವಾಗಿತ್ತು. ಸ್ನೇಹಿತರಾಗಿದ್ದ ಅವರಿಬ್ಬರು, ಒಟ್ಟಿಗೆ ಮಾದಕ ವಸ್ತು ಸೇವಿಸಲಾರಂಭಿಸಿದ್ದರು. ಶ್ರೀಕೃಷ್ಣನ ವಾಸಕ್ಕಾಗಿ ಹೋಟೆಲ್ ಕೊಠಡಿ ಕಾಯ್ದಿರಿಸುವುದು ಹಾಗೂ ಐಷಾರಾಮಿ ಜೀವನಕ್ಕಾಗಿ ವಿಷ್ಣುವೇ ಹಣ ಖರ್ಚು ಮಾಡುತ್ತಿದ್ದ ಮಾಹಿತಿ ಗೊತ್ತಾಗಿದೆ' ಎಂದು ಪೊಲೀಸ್ ಅಧಿಕಾರಿ ಹೇಳಿದರು.

ಅಪರಾಧ ಸುದ್ದಿ

ಅಪಘಾತ: ಎಂಜಿನಿಯರಿಂಗ್ ವಿದ್ಯಾರ್ಥಿನಿ ಸಾವು

ಪ್ರಜಾವಾಣಿ ವಾರ್ತೆ

ಮಾಗಡಿ: ತಾಲ್ಲೂಕಿನ ಜೋಡುಗಟ್ಟೆ ಗೇಟ್ ತಿರುವಿನಲ್ಲಿ ಭಾನುವಾರ ನಸುಕಿನಲ್ಲಿ ಸಂಭವಿಸಿದ ಅಪಘಾತದಲ್ಲಿ ಎಂಜಿನಿಯರಿಂಗ್ ವಿದ್ಯಾರ್ಥಿನಿ ಆಕಾಂಕ್ಷಾ ಗುಪ್ತ (20) ಮೃತಪಟ್ಟಿದ್ದು, ಏಳು ಮಂದಿ ಗಾಯಗೊಂಡಿದ್ದಾರೆ.

ಬೆಂಗಳೂರಿನ ಬಸವನಗುಡಿಯ ಬಿಎಂಎಸ್ ಎಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಗಳು ಎರಡು ಕಾರುಗಳಲ್ಲಿ ಸಾವನದುರ್ಗ ಪ್ರವಾಸಕ್ಕೆ ಬಂದಿದ್ದರು. ಮುಂಜಾನೆ 3.30ರ ಸುಮಾರಿಗೆ ಮಾಗಡಿ ಮಾರ್ಗವಾಗಿ ಬೆಂಗಳೂರಿಗೆ ವಾಪಸ್ ಆಗುತ್ತಿದ್ದರು. ಈ ವೇಳೆ ಕಾರು ಚಾಲಕನ ನಿಯಂತ್ರಣ ತಪ್ಪಿ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದಿದೆ.

ಕಾರು ಕಂಬಕ್ಕೆ ಡಿಕ್ಕಿ ಹೊಡೆದ ಕೂಡಲೇ ವಿದ್ಯುತ್ ಕಂಬ ಮೂರು ತುಂಡಾಗಿದೆ. ಕಂಬದ ಒಂದು ತುಂಡು ಆಕಾಂಕ್ಷಾ ಗುಪ್ತಾ ಅವರ ತಲೆಯ ಮೇಲೆ ಬಿದ್ದಿದೆ. ವಾಹನ ನಜ್ಜುಗುಜ್ಜಾಗಿದೆ.

'ಕ್ರಿಪ್ಟೊ' ಹೂಡಿಕೆ ವಂಚನೆ ಜಾಲ: ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ರಿಪ್ಟೊ ಕರೆನ್ಸಿ ರೂಪದಲ್ಲಿ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭ ನೀಡುವುದಾಗಿ ಹೇಳಿ ಜನರಿಂದ ಹಣ ಪಡೆದು ವಂಚಿಸುತ್ತಿದ್ದ ಜಾಲವನ್ನು ಸಿಸಿಬಿ ಪೊಲೀಸರು ಭೇದಿಸಿದ್ದಾರೆ. ಜಾಲದಲ್ಲಿ ಸಕ್ರಿಯರಾಗಿದ್ದ ಮೂವರನ್ನು ಸೆರೆ ಹಿಡಿದಿದ್ದಾರೆ.

'ಎಚ್‌ಎಸ್‌ಆರ್ ಬಡಾವಣೆ ನಿವಾಸಿಗಳಾದ ರಾಘವೇಂದ್ರ, ನಾಗರಾಜು ಹಾಗೂ ಶಿವಮೂರ್ತಿ ಬಂಧಿತರು. ಕೃತ್ಯದಲ್ಲಿ ಭಾಗಿಯಾಗಿದ್ದ ನಾಲ್ವರು ತಲೆಮರೆಸಿಕೊಂಡಿದ್ದಾರೆ' ಎಂದು ಸಿಸಿಬಿ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಪ್ರೋಮ್ ಎಕ್ಸ್' ಎಂಬ ಕಂಪನಿ ತೆರೆದಿದ್ದ ಆರೋಪಿಗಳು, ಅದರ ಹೆಸರಿನಲ್ಲಿ ಜನರನ್ನು ವಂಚಿಸುತ್ತಿದ್ದರು' ಎಂದೂ ತಿಳಿಸಿದರು.

'ಈ ಹಿಂದೆಯೂ 'ಇಎಸ್‌ಪಿಎನ್ ಗ್ಲೋಬಲ್ (ಈ-ಒರಾಕಲ್)' ಎಂಬ ಕಂಪನಿ ಸ್ಥಾಪಿಸಿದ್ದರು. ಚೈನ್ ಲಿಂಕ್ ಮಾದರಿಯಲ್ಲಿ ನೂರಾರು ಮಂದಿಯಿಂದ ಹಣ ಹೂಡಿಕೆ ಮಾಡಿಸಿಕೊಂಡು ವಂಚಿಸಿದ್ದರು. ಆ ಕಂಪನಿ ಬಂದ್ ಮಾಡಿದ್ದ ಆರೋಪಿಗಳು, ಹೊಸದಾಗಿ 'ಪ್ರೋಮ್ ಎಕ್ಸ್' ಕಂಪನಿ ತೆರೆದಿದ್ದರು. ಆನ್‌ಲೈನ್‌ನಲ್ಲಿ ಕ್ರಿಪ್ಟೊ ಕರೆನ್ಸಿ ಖರೀದಿಸಿ, ಅದನ್ನು ಚೈನ್ ಲಿಂಕ್ ಮೂಲಕ ಒಬ್ಬರಿಂದ ಒಬ್ಬರಿಗೆ ಮಾರಿದರೆ ಹೆಚ್ಚಿನ ಲಾಭಾಂಶ ನೀಡುವುದಾಗಿ ಆರೋಪಿಗಳು ಜಾಹೀರಾತು ನೀಡಿದ್ದರು' ಎಂದರು.

ಹೋಟೆಲ್‌ನಲ್ಲಿ ಕಾರ್ಯಕ್ರಮ: 'ಯಲಹಂಕದಲ್ಲಿರುವ ಹೋಟೆಲೊಂದರಲ್ಲಿ ಅ. 26ರಂದು ಆರೋಪಿಗಳು ಕಾರ್ಯಕ್ರಮ ಏರ್ಪಡಿಸಿದ್ದರು. ಪ್ರೋಮ್ ಎಕ್ಸ್ ಕಂಪನಿ ಹಾಗೂ ಹೂಡಿಕೆ ಬಗ್ಗೆ ಪ್ರಚಾರ ಮಾಡಿದ್ದರು' ಎಂದು ಪೊಲೀಸ್ ಅಧಿಕಾರಿ ತಿಳಿಸಿದರು.

ಪೊಲೀಸರ ಕಾರ್ಯಾಚರಣೆ; 121 ಮಂದಿ ವಶಕ್ಕೆ

180 ರೌಡಿಗಳ ಮನೆ ಮೇಲೆ ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೌಡಿ ಚಟುವಟಿಕೆ ಹತ್ತಿಕ್ಕಲು ಮುಂದಾಗಿರುವ ಪಶ್ಚಿಮ ವಿಭಾಗದ ಪೊಲೀಸರು, ತಮ್ಮ ವ್ಯಾಪ್ತಿಯಲ್ಲಿ ವಾಸವಿದ್ದ 180 ರೌಡಿಗಳ ಮನೆ ಮೇಲೆ ಭಾನುವಾರ ನಸುಕಿನಲ್ಲಿ ದಾಳಿ ಮಾಡಿದರು.

ಕೊಲೆ, ಕೊಲೆಗೆ ಯತ್ನ, ಸುಲಿಗೆ, ಹಲ್ಲೆ ಹಾಗೂ ಇತರೆ ಪ್ರಕರಣಗಳಲ್ಲಿ ಭಾಗಿಯಾಗಿದ್ದ ರೌಡಿಗಳು ಪದೇ ಪದೇ ಅಪರಾಧ ಕೃತ್ಯದಲ್ಲಿ ತೊಡಗುತ್ತಿದ್ದರು. ಜೈಲುವಾಸ ಅನುಭವಿಸಿದ್ದ ಕೆಲ ರೌಡಿಗಳು, ಜೈಲಿನಿಂದ ಹೊರಬಂದು ತಮ್ಮದೇ ತಂಡ ಕಟ್ಟಿಕೊಂಡು ಜನರನ್ನು ಬೆದರಿಸುತ್ತಿದ್ದರು. ಈ ಬಗ್ಗೆ ವಿವಿಧ ಠಾಣೆಗಳಲ್ಲಿ ಪ್ರಕರಣಗಳೂ ದಾಖಲಾಗಿದ್ದವು.

ಡಿಸಿಪಿ ಸಂಜೀವ್ ಪಾಟೀಲ ಮಾರ್ಗದರ್ಶನದಲ್ಲಿ ಪೊಲೀಸರು, ರೌಡಿಗಳ ವಿರುದ್ಧ ಭಾನುವಾರ ವಿಶೇಷ ಕಾರ್ಯಾಚರಣೆ ನಡೆಸಿದರು.

ಕಾಟನ್‌ಪೇಟೆ, ಚಾಮರಾಜನಗರ, ಜಗಜೀವನ್‌ರಾಮ್ ನಗರ, ಬ್ಯಾಟರಾಯನಪುರ, ಕೆ.ಪಿ.ಅಗ್ರಹಾರ, ಮಾಗಡಿ ರಸ್ತೆ, ಪಾದರಾಯನಪುರ, ಅಂಜನಪ್ಪ ಗಾರ್ಡನ್, ಜಾಲಿ ಮೊಹಲ್ಲಾ, ಗೋಪಾಲಪುರ, ಶ್ಯಾಮಣ್ಣ ಗಾರ್ಡನ್, ಬಾಪೂಜಿ ನಗರ ಹಾಗೂ ಸುತ್ತಮುತ್ತ ವಾಸವಿರುವ ರೌಡಿಗಳ ಮನೆಯಲ್ಲಿ ಪೊಲೀಸರು ಪರಿಶೀಲನೆ ನಡೆಸಿದರು.

ಬಹುತೇಕ ರೌಡಿಗಳು ಹಾಗೂ ಅವರ ಕುಟುಂಬದವರು ಹಾಸಿಗೆ ಮೇಲೆಯೇ ಇದ್ದರು. ಪೊಲೀಸರು ಬಾಗಿಲು ಬಡಿಯುತ್ತಿದ್ದಂತೆ ಎಚ್ಚರಗೊಂಡರು. ಮನೆ ಬಾಗಿಲಿಗೆ ಬಂದ ಪೊಲೀಸರನ್ನು ಕಂಡು ರೌಡಿಗಳು ನಡುಗಿದರು.

'ರೌಡಿಗಳು ಹಾಗೂ ಅವರ ಸಹಚರರ ಮೇಲೆ ಕಣ್ಣಿಡಲಾಗಿದೆ. ಅದರಂತೆ, 180 ರೌಡಿಗಳ ಪಟ್ಟಿ ಮಾಡಿ ಅವರೆಲ್ಲರ ಮನೆಗಳ ಮೇಲೆ ದಾಳಿ ಮಾಡಲಾಯಿತು' ಎಂದು ಡಿಸಿಪಿ ಸಂಜೀವ್ ಪಾಟೀಲ ಹೇಳಿದರು.

'ರೌಡಿಗಳಾದ ಲಿಯೊ, ಕಾರ್ತಿಕ್, ಹಿದಾಯತ್, ವಸೀಂ ಪಾಷಾ, ಡಿಗ್ರಿ ಸಲೀಂ, ಅಯೂಬ್ ಖಾನ್, ವಿನೋದ್, ವೆಂಕಟೇಶ್, ವಿಜಯ್, ಸತೀಶ್ ಸೇರಿ ಹಲವು ರೌಡಿಗಳ ಮನೆಯಲ್ಲಿ ಶೋಧ ನಡೆಸಲಾಯಿತು' ಎಂದೂ ಅವರು ತಿಳಿಸಿದರು.

ಮುಚ್ಚಳಿಕೆ ಬರೆಸಿಕೊಂಡ ಪೊಲೀಸರು: '121 ರೌಡಿಗಳನ್ನು ವಶಕ್ಕೆ ಪಡೆದು ಠಾಣೆಗೆ ಕರೆತರಲಾಯಿತು. ಯಾವುದೇ ಅಪರಾಧ ಎಸಗದಂತೆ ಅವರಿಂದ ಮುಚ್ಚಳಿಕೆ ಬರೆಸಿಕೊಂಡು ಬಿಟ್ಟು ಕಳುಹಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಮುಚ್ಚಳಿಕೆ ಬರೆದುಕೊಟ್ಟಿರುವ ರೌಡಿಗಳ ಮೇಲೆ ಕಣ್ಣಿಡಲಾಗುವುದು. ಅವರು ಪುನಃ ಅಪರಾಧ ಕೃತ್ಯದಲ್ಲಿ ಭಾಗಿಯಾದರೆ, ಬಂಧಿಸಿ ಕಾನೂನು ಕ್ರಮ ಜರುಗಿಸಲಾಗುವುದು' ಎಂದೂ ತಿಳಿಸಿವೆ.



ರೌಡಿಯೊಬ್ಬರ ಮನೆಗೆ ಭಾನುವಾರ ನಸುಕಿನಲ್ಲಿ ದಾಳಿ ನಡೆಸಿದ್ದ ಪೊಲೀಸರು ಪರಿಶೀಲನೆ ನಡೆಸಿದರು

3 ಮದ್ಯದಂಗಡಿ ವಿರುದ್ಧ ಪ್ರಕರಣ

ನಿಗದಿತ ಸಮಯದ ನಂತರವೂ ವಹಿವಾಟು ನಡೆಸುತ್ತಿದ್ದ ಮೂರು ಮದ್ಯದಂಗಡಿ ಮೇಲೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

'ಮದ್ಯದಂಗಡಿ ಮಾಲೀಕರಿಗೂ ನೋಟಿಸ್ ನೀಡಲಾಗಿದೆ. ಮದ್ಯ ಮಾರಾಟ ಪರವಾನಗಿ ರದ್ದುಪಡಿಸಲು ಅಬಕಾರಿ ಇಲಾಖೆಗೂ ಶಿಫಾರಸ್ಸು ಮಾಡಲಾಗುವುದು' ಎಂದು ಪೊಲೀಸ್ ಮೂಲಗಳು ಹೇಳಿವೆ.

ಯೋಜನೆಗೆ ಇದುವರೆಗೆ ಕೇವಲ 3 ಎಕರೆ 21 ಗುಂಟೆ ಭೂಸ್ವಾಧೀನ • 589 ಎಕರೆ 13 ಗುಂಟೆ ಸ್ವಾಧೀನ ಬಾಕಿ

ಪಿಆರ್‌ಆರ್ ಯೋಜನೆ: ತ್ವರಿತ ಕ್ರಮಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಪೆರಿಫೆರಲ್ ವರ್ತುಲ ರಸ್ತೆ ಯೋಜನೆಗಾಗಿ (ಪಿಆರ್‌ಆರ್) ಇದುವರೆಗೆ ಕೇವಲ 3 ಎಕರೆ 21 ಗುಂಟೆ ಜಮೀನು ಸ್ವಾಧೀನ ಪಡಿಸಿಕೊಂಡಿರುವ ಬಗ್ಗೆ ಬೇಸರ ವ್ಯಕ್ತಪಡಿಸಿರುವ ಸುಪ್ರೀಂ ಕೋರ್ಟ್, ಇನ್ನುಳಿದ 589 ಎಕರೆ 13.76 ಗುಂಟೆ ಭೂಮಿಯ ಸ್ವಾಧೀನಕ್ಕೆ ಕೂಡಲೇ ಕ್ರಮ ಕೈಗೊಳ್ಳುವ ಮೂಲಕ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಪ್ರಾಮಾಣಿಕವಾಗಿ ನಡೆದುಕೊಳ್ಳಬೇಕು ಎಂದು ನಿರ್ದೇಶನ ನೀಡಿದೆ.

ನ್ಯಾಯಮೂರ್ತಿಗಳಾದ ಎಸ್. ಅಬ್ದುಲ್ ನಜೀರ್ ಮತ್ತು ಸಂಜೀವ್ ಖನ್ನಾ ಅವರ ಪೀಠವು ಈ ಸಂಬಂಧ ಪ್ರಸ್ತಾವನೆಯನ್ನು ಕರ್ನಾಟಕ ಸರ್ಕಾರಕ್ಕೆ ಆದಷ್ಟು ಬೇಗ ಕಳುಹಿಸಬೇಕು ಎಂದು ಹೇಳಿದೆ.

ಪಿಆರ್‌ಆರ್ ಯೋಜನೆಗೆ ಗೊತ್ತು-ಪಡಿಸಲಾದ ಭೂಮಿಯ ಸ್ವಾಧೀನ ಪ್ರಕ್ರಿಯೆಯ ಆದೇಶ ಪ್ರಕಟಿಸಿ ಜಾಗವನ್ನು ತನ್ನ ಸುಪರ್ದಿಗೆ ಪಡೆಯಲು ಬಿಡಿಎ ಪ್ರಕ್ರಿಯೆ ಆರಂಭಿಸಬಹುದು ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ. ಪಿಆರ್‌ಆರ್ ಉದ್ದೇಶಕ್ಕಾಗಿ ಅಧಿಸೂಚನೆ ಹೊರಡಿಸಲಾದ ಸರ್ಕಾರಿ ಜಮೀನುಗಳನ್ನು ಬಿಡಿಎಗೆ ಒಪ್ಪಿಸುವಂತೆಯೂ ರಾಜ್ಯ ಸರ್ಕಾರಕ್ಕೆ ನ್ಯಾಯಾಲಯ ನಿರ್ದೇಶಿಸಿದೆ.

ಈ ಯೋಜನೆಯಿಂದ ಪರಿಸರದ ಮೇಲೆ ಪರಿಣಾಮ ಬೀರುವ ವಿಷಯಗಳಿಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಮೂಲಕ ಹೊಸದಾಗಿ ಸಾರ್ವಜನಿಕರಿಂದ ಅಹವಾಲು ಆಲಿಸಲು ಕ್ರಮ ಕೈಗೊಳ್ಳುವಂತೆ ಬಿಡಿಎಗೆ ಪೀಠವು ಸೂಚಿಸಿದೆ. ಪರಿಸರಕ್ಕೆ ಸಂಬಂಧಿಸಿದ ಅನುಮತಿ ಪಡೆಯುವ ಪ್ರಕ್ರಿಯೆ ಕುರಿತ ವಸ್ತುಸ್ಥಿತಿಯ ವರದಿಯನ್ನು ನ್ಯಾಯಾಲಯಕ್ಕೆ ಎರಡು ವಾರಗಳಲ್ಲಿ ಸಲ್ಲಿಸುವಂತೆ ನಿರ್ದೇಶಿಸಿದೆ.

ಅಲ್ಲದೆ ಈ ಯೋಜನೆಗೆ ಸಂಬಂಧಿಸಿದಂತೆ ಪ್ರಮಾಣಪತ್ರ ಸಲ್ಲಿಸುವ ಮೂಲಕ ರಾಜ್ಯ ಸರ್ಕಾರವು ಎರಡು ವಾರಗಳಲ್ಲಿ ತನ್ನ ನಿಲುವನ್ನು ಸ್ಪಷ್ಟಪಡಿಸಬೇಕು ಎಂದು ಸೂಚಿಸಿದೆ.

ನಗರದ ಹೊರವಲಯದಲ್ಲಿ 116 ಕಿ.ಮೀ ಉದ್ದದ ಪಿಆರ್‌ಆರ್ ನಿರ್ಮಿಸುವ ಪ್ರಸ್ತಾವನೆಯನ್ನು ಬಿಡಿಎ 2006ರ ನ.27ರಂದು ಸಲ್ಲಿಸಿತ್ತು. ಈ ಯೋಜನೆಗೆ ಸಂಬಂಧಿಸಿ ಅನೇಕ ವ್ಯಾಜ್ಯಗಳಿದ್ದವು. 2018ರ ನ.24ರಂದು ನೀಡಿದ ಆದೇಶದ ಪ್ರಕಾರ ರಾಜ್ಯ ಸರ್ಕಾರವು ₹ 5,616.41 ಕೋಟಿ ವೆಚ್ಚದ ಈ ಯೋಜನೆಯನ್ನು ಜಾರಿಗೊಳಿಸಲು ಮಂಜೂರಾತಿ ನೀಡಿತು. ಅದರಲ್ಲಿ ಶೇ 16ರಷ್ಟು ವೆಚ್ಚವನ್ನು (₹ 901.72 ಕೋಟಿ) ರಾಜ್ಯ ಸರ್ಕಾರವು ಭರಿಸಲಿದೆ. ಇನ್ನುಳಿದ ಶೇ 84ರಷ್ಟು ವೆಚ್ಚವನ್ನು ಭರಿಸಲು (₹ 4714.69 ಕೋಟಿ) ಜಪಾನ್ ಅಂತರರಾಷ್ಟ್ರೀಯ ಸಹಕಾರ ಏಜೆನ್ಸಿಯಿಂದ (ಜೈಕಾ) ಮೂರು ಹಂತಗಳಲ್ಲಿ ಸಾಲ ಪಡೆಯಲಾಗುತ್ತದೆ.

ಪಿಆರ್‌ಆರ್ ಯೋಜನೆ ಅನುಷ್ಠಾನ ಕುರಿತು ಸಲ್ಲಿಸಿರುವ ವಸ್ತುಸ್ಥಿತಿಯ ವರದಿಯ ಅಧ್ಯಯನ ಬಳಿಕ ನೀಡಿದ ಆದೇಶದಲ್ಲಿ ಸುಪ್ರೀಂ ಕೋರ್ಟ್ ಪೀಠವು, 'ಪಿಆರ್‌ಆರ್ ಯೋಜನೆ ಕುರಿತು 2006ರಲ್ಲೇ ಬಿಡಿಎ ಪ್ರಸ್ತಾವನೆ ಸಲ್ಲಿಸಿದ್ದರೂ, ಭೂಸ್ವಾಧೀನಕ್ಕೆ ಅಧಿಸೂಚನೆ ಹೊರಡಿಸಿರುವುದನ್ನು ಹೊರತಾಗಿ ಬೇರೆ ಯಾವುದೇ ಪ್ರಗತಿ ಆಗಿಲ್ಲ ಎಂಬುದು ಸ್ಪಷ್ಟ. ಮೂರು ಎಕರೆ 21 ಗುಂಟೆ ಜಮೀನನ್ನು ಮಾತ್ರ ಸ್ವಾಧೀನಪಡಿಸಲಾಗಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿದೆ.

ಡಾ.ಕೆ. ಶಿವರಾಮ ಕಾರಂತ ಬಡಾವಣೆ ಕುರಿತು 2018ರ ಆದೇಶ ಪಾಲನೆಗೆ ಸಂಬಂಧಿಸಿದ ಪ್ರಕರಣದ ವಿಚಾರಣೆ ವೇಳೆ ನ್ಯಾಯಾಲಯವು ಅಕ್ಟೋಬರ್ 26 ರಂದು ಈ ನಿರ್ದೇಶನಗಳನ್ನು ನೀಡಿದೆ.

ಶಿವರಾಮ ಕಾರಂತ ಬಡಾವಣೆ ವಿಳಂಬಕ್ಕೂ ಅಸಮಾಧಾನ

ಶಿವರಾಮ ಕಾರಂತ ಬಡಾವಣೆ ಸಲುವಾಗಿ ಭೂಮಿಯನ್ನು ಸುಪರ್ದಿಗೆ ಪಡೆಯುವ ಪ್ರಕ್ರಿಯೆಯೂ ಭಾರಿ ನಿಧಾನಗತಿಯಲ್ಲಿ ಸಾಗಿದೆ ಎಂದು ನ್ಯಾಯಾಲಯ ಅಸಮಾಧಾನ ವ್ಯಕ್ತಪಡಿಸಿದೆ.

ಭೂಸ್ವಾಧೀನ ಪ್ರಕ್ರಿಯೆಯನ್ನು ಇನ್ನಷ್ಟು ಚುರುಕುಗೊಳಿಸುವಂತೆ ಸೂಚನೆ ನೀಡಿದೆ. ಈ ಬಡಾವಣೆ ನಿರ್ಮಾಣಕ್ಕೆ ಭೂಸ್ವಾಧೀನ ಪ್ರಕ್ರಿಯೆ ಕೈಬಿಟ್ಟು ಹೋಗಿರುವ ಜಮೀನುಗಳನ್ನು ಸ್ವಾಧೀನಪಡಿಸುವ ಬಗ್ಗೆ ರಾಜ್ಯ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಮತ್ತೆ ನಾಲ್ಕು ವಾರಗಳ ಕಾಲಾವಕಾಶ ನೀಡಿದೆ.

ಬಡಾವಣೆ ಅಭಿವೃದ್ಧಿಪಡಿಸಲು ಭಾರಿ ವೆಚ್ಚವಾಗುವುದರಿಂದ ಈಗಾಗಲೇ ಸುಪರ್ದಿಗೆ ಪಡೆದಿರುವ ಜಮೀನಿನಲ್ಲಿ ನಿವೇಶನಗಳನ್ನು ನಿರ್ಮಿಸುವುದಕ್ಕೆ ಯಾವುದೇ ಅಡ್ಡಿ ಇಲ್ಲ. ಆದರೆ, ಅಲ್ಲಿನ ಭೂಬಳಕೆಯು ಮಂಜೂರಾತಿ ಪಡೆದ ಬಡಾವಣೆ ನಕ್ಷೆಗೆ ಅನುಗುಣವಾಗಿಯೇ ಇರಬೇಕು. ನಿವೇಶನಗಳನ್ನು ಸಾರ್ವಜನಿಕ ಹರಾಜು ಪ್ರಕ್ರಿಯೆ ಮೂಲಕವೇ ಹಂಚಿಕೆ ಮಾಡಬೇಕು ಎಂದು ಸ್ಪಷ್ಟಪಡಿಸಿದೆ.

ಮೇಕೆದಾಟು ಯೋಜನೆ ಕಾಮಗಾರಿ ಆರಂಭಕ್ಕೆ ಆಗ್ರಹ

ಡಿಸೆಂಬರ್‌ನಲ್ಲಿ ಕಾಂಗ್ರೆಸ್ ಪಾದಯಾತ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೇಕೆದಾಟು ಸಮಾನಾಂತರ ಅಣೆಕಟ್ಟೆ ನಿರ್ಮಾಣ ಯೋಜನೆ ಕಾಮಗಾರಿಯನ್ನು ತಕ್ಷಣ ಆರಂಭಿಸುವಂತೆ ಆಗ್ರಹಿಸಿ ಡಿಸೆಂಬರ್ ಮೊದಲ ವಾರ ಮೇಕೆದಾಟುವಿನಿಂದ ಬೆಂಗಳೂರಿನವರೆಗೆ ಪಾದಯಾತ್ರೆ ನಡೆಸುವುದಾಗಿ ಕಾಂಗ್ರೆಸ್ ಘೋಷಿಸಿದೆ.


ಶಿವಕುಮಾರ್


ಸಿದ್ದರಾಮಯ್ಯ

ಕೆಪಿಸಿಸಿ ಕಚೇರಿಯಲ್ಲಿ ಭಾನುವಾರ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ, '100 ಕಿ.ಮೀ. ಉದ್ದದ ಪಾದಯಾತ್ರೆಯಲ್ಲಿ ಬೆಂಗಳೂರು, ರಾಮನಗರ, ಮಂಡ್ಯ, ಮೈಸೂರು, ಹಾಸನ, ಚಿಕ್ಕಬಳ್ಳಾಪುರ, ತುಮಕೂರು, ಕೋಲಾರ ಜಿಲ್ಲೆಗಳ ಪಕ್ಷದ ಕಾರ್ಯಕರ್ತರು ಭಾಗವಹಿಸಲಿದ್ದಾರೆ' ಎಂದರು.

'ಕಾವೇರಿ ನ್ಯಾಯಾಧೀಕರಣದ ಐತೀರ್ಪಿನ ಪ್ರಕಾರ ರಾಜ್ಯಕ್ಕೆ ಹಂಚಿಕೆಯಾಗಿರುವ ನೀರು ಹರಿದು ಸಮುದ್ರ ಸೇರುತ್ತಿದೆ. ಅದನ್ನು ಸಮರ್ಪಕವಾಗಿ ಬಳಸಿಕೊಳ್ಳಲು ಮೇಕೆದಾಟು ಯೋಜನೆಯನ್ನು ತಕ್ಷಣ ಆರಂಭಿಸಬೇಕು ಎಂಬುದು ನಮ್ಮ ಬೇಡಿಕೆ. ಡಿಸೆಂಬರ್ ಮೊದಲ ವಾರ ಪಾದಯಾತ್ರೆ ಆರಂಭವಾಗಲಿದೆ. ಶೀಘ್ರದಲ್ಲಿ ದಿನಾಂಕ ಪ್ರಕಟಿಸಲಾಗುವುದು' ಎಂದು ಶಿವಕುಮಾರ್ ಹೇಳಿದರು.

ಕರ್ನಾಟಕಕ್ಕೆ ಹಂಚಿಕೆಯಾಗಿರುವ ನೀರನ್ನು ಬಳಕೆ ಮಾಡಲು, ರಾಜ್ಯದ ಹಣದಲ್ಲಿ ಅಣೆಕಟ್ಟೆ ನಿರ್ಮಿಸುವ ಯೋಜನೆ ಇದೆ. ಇದಕ್ಕೆ ಯಾರ ಅನುಮತಿಯೂ ಅಗತ್ಯವಿಲ್ಲ ಎಂದು ಸುಪ್ರೀಂಕೋರ್ಟ್ ಹೇಳಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕೂಡ ಇದೇ ಮಾತು ಹೇಳಿದ್ದಾರೆ. ರಾಜ್ಯದ ಏಳು ಜಿಲ್ಲೆಗಳಿಗೆ ಅನುಕೂಲವಾಗಲಿರುವ ಯೋಜನೆಯ ತ್ವರಿತ ಅನುಷ್ಠಾನಕ್ಕೆ ಆಗ್ರಹಿಸಿ ಕಾಂಗ್ರೆಸ್ ಹೋರಾಟ ನಡೆಸಲಿದೆ ಎಂದರು.

ಚುನಾವಣೆ ಅಥವಾ ಮತ ಗಳಿಕೆ ಉದ್ದೇಶದಿಂದ ಕಾಂಗ್ರೆಸ್ ಪಾದಯಾತ್ರೆ ನಡೆಸುವುದಿಲ್ಲ. ತಾವು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲೇ ಯೋಜನೆಯ ವರದಿಯನ್ನು ಸಿದ್ಧಪಡಿಸಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಆದರೆ, ಕೇಂದ್ರ ಒಪ್ಪಿಗೆ ನೀಡದ ಕಾರಣದಿಂದ ಅನುಷ್ಠಾನ ಸಾಧ್ಯವಾಗಿರಲಿಲ್ಲ ಎಂದು ಹೇಳಿದರು.

'ನಾನು ಭಾರತದ ಪರ' ಎಂಬ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಹೇಳಿಕೆ ಕುರಿತು ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, 'ನಾವು ಕನ್ನಡಿಗರು ಮತ್ತು ಕರ್ನಾಟಕದ ಪರ ಇದ್ದೇವೆ. ಮೇಕೆದಾಟು ಯೋಜನೆ ಶೀಘ್ರದಲ್ಲಿ ಜಾರಿಯಾಗಬೇಕು ಎಂಬುದು ನಮ್ಮ ಬೇಡಿಕೆ' ಎಂದರು.

ನ.14ರಿಂದ ಸದಸ್ಯತ್ವ ನೋಂದಣಿ

ದೇಶದ ಪ್ರಥಮ ಪ್ರಧಾನಿ ಜವಾಹರಲಾಲ್ ನೆಹರೂ ಅವರ ಜನ್ಮದಿನವಾದ ನವೆಂಬರ್ 14ರಿಂದ ರಾಜ್ಯದಲ್ಲಿ ಕಾಂಗ್ರೆಸ್ ಸದಸ್ಯತ್ವ ನೋಂದಣಿ ಆರಂಭಿಸಲಾಗುವುದು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದರು.

'ಸದಸ್ಯತ್ವ ಪಡೆಯುವವರು ₹ 5 ಪಾವತಿಸಿ ಅರ್ಜಿ ನಮೂನೆ ಪಡೆಯಬೇಕು. ಸಕ್ರಿಯ ಸದಸ್ಯರಾಗಲು ₹ 100 ಶುಲ್ಕದೊಂದಿಗೆ ಅರ್ಜಿ ಸಲ್ಲಿಸಬೇಕು. ಹಿಂದೆ ಸದಸ್ಯರಾಗಿದ್ದವರು ಕೂಡ ಸದಸ್ಯತ್ವ ನವೀಕರಣ ಮಾಡಿಸಬೇಕು' ಎಂದರು. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವೈಫಲ್ಯ, ಜನವಿರೋಧಿ ಧೋರಣೆ ಕುರಿತು ರಾಜ್ಯದಾದ್ಯಂತ ಜನಜಾಗೃತಿ ಅಭಿಯಾನ ನಡೆಸಲಾಗುವುದು. ಎಐಸಿಸಿ ನಿರ್ದೇಶನದಂತೆ ಕಾರ್ಯಕ್ರಮ ರೂಪಿಸಲಾಗುತ್ತಿದೆ ಎಂದು ತಿಳಿಸಿದರು.

'ರಾಜಕೀಯ ಕಾರಣಕ್ಕೆ ವಿರೋಧ'

'ತಮಿಳುನಾಡು ಸರ್ಕಾರ ರಾಜಕೀಯ ಕಾರಣಕ್ಕಾಗಿ ಮೇಕೆದಾಟು ಯೋಜನೆಯನ್ನು ವಿರೋಧಿಸುತ್ತಿದೆ. ಈ ಯೋಜನೆಯಿಂದ ತಮಿಳುನಾಡಿಗೆ ತೊಂದರೆ ಆಗುವುದಿಲ್ಲ. ಅಲ್ಲಿ ನೀರಿನ ಅಭಾವ ಎದುರಾದಾಗ ಅನುಕೂಲವೇ ಆಗಲಿದೆ. ಕಾನೂನಿನ ತೊಡಕುಗಳಿಲ್ಲದ ಈ ಯೋಜನೆಯನ್ನು ರಾಜ್ಯ ಸರ್ಕಾರ ತಕ್ಷಣ ಆರಂಭಿಸಬೇಕು' ಎಂದು ಸಿದ್ದರಾಮಯ್ಯ ಒತ್ತಾಯಿಸಿದರು.

ಈ ಯೋಜನೆಗೆ ಯಾವುದೇ ನ್ಯಾಯಾಲಯದ ತಕರಾರುಗಳಿಲ್ಲ. ಕಾನೂನಿನ ಬೆಂಬಲವೂ ಇದೆ. ಕೇಂದ್ರ ಪರಿಸರ ಇಲಾಖೆಯು ತಕ್ಷಣವೇ ಯೋಜನೆಗೆ ಅನುಮತಿ ಪತ್ರ ನೀಡಬೇಕು. ರಾಜ್ಯ ಸರ್ಕಾರ ವಿಳಂಬ ಮಾಡದೆ ಯೋಜನೆ ಅನುಷ್ಠಾನಕ್ಕೆ ಮುಂದಾಗಬೇಕು ಎಂದರು.

ನಗರದಲ್ಲಿ ಇಂದು

ದಕ್ಷಿಣ ಭಾರತದ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗಗಳ ಸಮ್ಮೇಳನ: ಭಾಗವಹಿಸುವವರು–ಕರ್ನಾಟಕ, ಗೋವಾ, ತೆಲಂಗಾಣ, ಮಹಾರಾಷ್ಟ್ರ ಮತ್ತು ಕೇರಳ ರಾಜ್ಯಗಳ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗಗಳ ಅಧ್ಯಕ್ಷರು ಮತ್ತು ಸದಸ್ಯರು, ಆಯೋಜನೆ–ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಸ್ಥಳ–ಹೋಟೆಲ್ ಕ್ಯಾಪಿಟಲ್, ರಾಜಭವನ ರಸ್ತೆ, ಬೆಳಿಗ್ಗೆ 10

ಜನತಾ ಸಂಗಮ ಕಾರ್ಯಾಗಾರಕ್ಕೆ ಚಾಲನೆ ಮತ್ತು ಜನತಾ ಪತ್ರಿಕೆ ಬಿಡುಗಡೆ: ಅತಿಥಿಗಳು– ಎಚ್.ಡಿ.ದೇವೇಗೌಡ, ಎಚ್.ಡಿ.ಕುಮಾರಸ್ವಾಮಿ ಹಾಗೂ ಎಚ್.ಕೆ.ಕುಮಾರಸ್ವಾಮಿ, ಪತ್ರಕರ್ತ ಪಿ.ರಾಮಯ್ಯ, ಸ್ಥಳ–ಜೆ.ಪಿ.ಭವನ, ಜೆಡಿಎಸ್ ರಾಜ್ಯ ಕಚೇರಿ, ಜಕ್ಕರಾಯನ ಕೆರೆ, ಶೇಷಾದ್ರಿಪುರ, ಬೆಳಿಗ್ಗೆ 10.30

ಕನ್ನಡ ಹಬ್ಬ: ಅತಿಥಿಗಳು–ಶಾಸಕ ಸತೀಶ್ ರೆಡ್ಡಿ, 'ಬಿಗ್‌ಬಾಸ್' ವಿಜೇತ ಶೈನ್ ಶೆಟ್ಟಿ, ನಟಿ ಮಾನ್ವಿತಾ ಕಾಮತ್, ಗುರುಮೂರ್ತಿ ರೆಡ್ಡಿ, ಜಿ.ಕೆ.ಮಹಾಂತೇಶ್, ಸುಧಾ ಬರಗೂರು, ವಾಸಂತಿ ಸವಣೂರು, ಬೂಸೇಗೌಡ, ಆಯೋಜನೆ, ಸ್ಥಳ–ಸಮರ್ಥನಂ ಅಂಗವಿಕಲರ ಸಂಸ್ಥೆ, ಎಚ್‌ಎಸ್‌ಆರ್ ಬಡಾವಣೆ, ಬೆಳಿಗ್ಗೆ 9


ಶೈನ್ ಶೆಟ್ಟಿ

ನಟ ಪುನೀತ್ ರಾಜ್‌ಕುಮಾರ್ ನೆನಪಿಗಾಗಿ ವಿವಿಧ ಸ್ಥಳಗಳಲ್ಲಿ ಏಕಕಾಲಕ್ಕೆ ಪುಣ್ಯಾರಾಧನೆ ಮತ್ತು ಅನ್ನಸಂತರ್ಪಣೆ: ನೇತೃತ್ವ–ಯು.ಬಿ.ವೆಂಕಟೇಶ್, ಆಯೋಜನೆ–ಬಸವನಗುಡಿ ಕ್ಷೇತ್ರದ ಕಾಂಗ್ರೆಸ್ ಸಮಿತಿ, ಸ್ಥಳಗಳು–ತ್ಯಾಗರಾಜ ನಗರದ ಕಸ್ತೂರಿ ಕನ್ನಡ ಸಂಘದ ಕಟ್ಟೆ, ಶ್ರೀನಗರದ ಟಿ.ಆರ್.ಶಾಮಣ್ಣ ನಗರ, ಎ.ಕೆ.ಕಾಲೊನಿಯ ಅರಳಿ ಕಟ್ಟೆ, ವಿದ್ಯಾಪೀಠದ ಮಂಜುನಾಥ ಕಾಲೊನಿ, ಹನುಮಂತನಗರದ ಗಣೇಶ ಪಾರ್ಕ್, ಶ್ರೀನಿವಾಸ ನಗರ ಹಾಗೂ ಗಿರಿನಗರದ ಸೀತಾ ಸರ್ಕಲ್, ಬೆಳಿಗ್ಗೆ 11ರಿಂದ

ಪಟಾಕಿ ಅವಘಡ: 65 ಮಂದಿಗೆ ಗಾಯ

ಬೆಂಗಳೂರು: ನಗರದ ವಿವಿಧೆಡೆ ಭಾನುವಾರವೂ ಪಟಾಕಿ ಅವಘಡಗಳು ವರದಿಯಾಗಿದ್ದು, ಈವರೆಗೆ 65ಕ್ಕೂ ಅಧಿಕ ಮಂದಿ ಗಾಯಗೊಂಡು ಚಿಕಿತ್ಸೆ ಪಡೆದುಕೊಂಡಿದ್ದಾರೆ.

ಪಟಾಕಿ ಸಿಡಿತದಿಂದ ಗಾಯಗೊಂಡ 27 ಮಂದಿ ಮಿಂಟೊ ಕಣ್ಣಿನ ಆಸ್ಪತ್ರೆಯಲ್ಲಿ ಹಾಗೂ 29 ಮಂದಿ ನಾರಾಯಣ ನೇತ್ರಾಲಯದಲ್ಲಿ ಚಿಕಿತ್ಸೆ ಪಡೆದಿದ್ದಾರೆ. ಅಗರ್‌ವಾಲ್ ಸೇರಿದಂತೆ ವಿವಿಧ ಕಣ್ಣಿನ ಆಸ್ಪತ್ರೆಗಳಲ್ಲಿಯೂ ಗಾಯಗೊಂಡವರು ಚಿಕಿತ್ಸೆ ಪಡೆದುಕೊಂಡಿದ್ದಾರೆ. ವಿಕ್ಟೋರಿಯಾ ಆಸ್ಪತ್ರೆಲ್ಲಿ ಐವರು ಚಿಕಿತ್ಸೆ ಪಡೆದಿದ್ದು, ಒಬ್ಬ ಬಾಲಕನಿಗೆ ಪ್ಲಾಸ್ಟಿಕ್ ಸರ್ಜರಿ ಮಾಡಲು ವೈದ್ಯರು ನಿರ್ಧರಿಸಿದ್ದಾರೆ.

ಸುದ್ದಿ 2 ನಿಮಿಷ

ಪುನೀತ್‌ಗೆ ಮೈಸೂರಿನಲ್ಲಿ ನುಡಿನಮನ: ಸಚಿವ ಸೋಮಶೇಖರ್

ಬೆಂಗಳೂರು: ಪುನೀತ್ ರಾಜ್‌ಕುಮಾರ್ ಅವರಿಗೆ ಮೈಸೂರಿನಲ್ಲಿ ಬೃಹತ್ ಮಟ್ಟದಲ್ಲಿ ನುಡಿನಮನ ಹಮ್ಮಿಕೊಳ್ಳಲು ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವರೂ ಆಗಿರುವ ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ನಿರ್ಧರಿಸಿದ್ದಾರೆ.

ಈ ಬಗ್ಗೆ ವರನಟ ಡಾ. ರಾಜ್‌ಕುಮಾರ್ ಅಭಿಮಾನಿಗಳ ಸಂಘ, ಹ್ಯಾಟ್ರಿಕ್ ಹೀರೊ ಶಿವರಾಜ್‌ಕುಮಾರ್ ಅಭಿಮಾನಿಗಳ ಸಂಘ ಹಾಗೂ ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಅಭಿಮಾನಿಗಳ ಸಂಘದ ಅಧ್ಯಕ್ಷರಿಗೆ ಪತ್ರ ಬರೆದಿರುವ ಅವರು, ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಕಾರ್ಯಕ್ರಮ ಆಯೋಜಿಸಬೇಕಿದೆ ಎಂದು ತಿಳಿಸಿದ್ದಾರೆ.

'ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಈ ಕಾರ್ಯಕ್ರಮ ಆಯೋಜಿಸೋಣ. ಕನ್ನಡ ಸಂಘಟನೆಯವರು, ಮಹಿಳೆಯರ ಸಬಲೀಕರಣಕ್ಕೆ ರಾಜ್‌ಕುಮಾರ್ ಕುಟುಂಬದವರು ತೆರೆದಿರುವ 'ಶಕ್ತಿಧಾಮ'ದ ಸದಸ್ಯರು, ಸಿಬ್ಬಂದಿ, ಆಡಳಿತ ವರ್ಗದವರು ಸೇರಿದಂತೆ ಕಲಾವಿದರು, ಅಭಿಮಾನಿಗಳನ್ನು ಕಾರ್ಯಕ್ರಮ ಆಹ್ವಾನಿಸಬೇಕು. ಈ ನಿಟ್ಟಿನಲ್ಲಿ ಎಲ್ಲ ಸಿದ್ಧತೆಗಳನ್ನು ಕೈಗೊಳ್ಳುವ ಜೊತೆಗೆ ಪುನೀತ್ ಅವರ ಸಾಮಾಜಿಕ ಕಳಕಳಿಯನ್ನು ಜನತೆಗೆ ತಿಳಿಸಬೇಕು' ಎಂದೂ ಅವರು ತಿಳಿಸಿದ್ದಾರೆ.

'ಯಲಹಂಕದಲ್ಲಿ ವಾಲ್ಮೀಕಿ ಭವನ–ಪುತ್ಥಳಿ ನಿರ್ಮಾಣ'



ಯಲಹಂಕ: 'ಯಲಹಂಕದಲ್ಲಿ ವಾಲ್ಮೀಕಿ ಭವನ ಮತ್ತು ವಾಲ್ಮೀಕಿ ಪುತ್ಥಳಿ ನಿರ್ಮಾಣಕ್ಕೆ ಶೀಘ್ರದಲ್ಲೇ ಚಾಲನೆ ನೀಡಲಾಗುವುದು' ಎಂದು ಶಾಸಕ ಎಸ್.ಆರ್.ವಿಶ್ವನಾಥ್ ತಿಳಿಸಿದರು.

ಅಖಿಲ ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾ ವತಿಯಿಂದ ಅಟ್ಟೂರು ಗ್ರಾಮದಲ್ಲಿ ಆಯೋಜಿಸಿದ್ದ ಮಹರ್ಷಿ ವಾಲ್ಮೀಕಿ ಜಯಂತ್ಯುತ್ಸವದಲ್ಲಿ ಅವರು ಮಾತನಾಡಿದರು.

'ವಾಲ್ಮೀಕಿ ಅವರು 5 ಸಾವಿರ ವರ್ಷಗಳ ಹಿಂದೆಯೇ 'ರಾಮಾಯಣ' ಕೃತಿಯ ಮೂಲಕ ವಿಶ್ವಕ್ಕೆ ಪರಿಚಯಿಸಿದ ಮಹಾನ್ ವ್ಯಕ್ತಿ. ಅವರು ನಮ್ಮ ದೇಶದ ಸಂಸ್ಕೃತಿ ಮತ್ತು ಭವ್ಯತೆಯನ್ನು ಸಾರುವ ಮೂಲಕ ಭರತ ಖಂಡಕ್ಕೆ ನೀಡಿರುವ ಕೊಡುಗೆ ಸಾವಿರಾರು ವರ್ಷಗಳವರೆಗೆ ಜೀವಂತವಾಗಿ ಉಳಿಯಲಿದೆ. ಇಂತಹ ವ್ಯಕ್ತಿಯ ಆದರ್ಶಗಳನ್ನು ನಾವೆಲ್ಲ ಪಾಲಿಸಬೇಕು' ಎಂದರು.

ವಿವಿಧ ಕಲಾ ತಂಡಗಳ ಸಮೇತ ಅಟ್ಟೂರು ಗ್ರಾಮದಿಂದ ಯಲಹಂಕ-ಯಶವಂತಪುರ ಮುಖ್ಯ ರಸ್ತೆಯವರೆಗೆ ವಾಲ್ಮೀಕಿ ಮಹರ್ಷಿ ಭಾವಚಿತ್ರದೊಂದಿಗೆ ಮೆರವಣಿಗೆ ನಡೆಸಲಾಯಿತು. ಕರ್ನಾಟಕ ಮದಕರಿ ನಾಯಕ ಸೇನೆಯ ಅಟ್ಟೂರು ಶಾಖೆಯನ್ನು ಕಾರ್ಯಕ್ರಮದಲ್ಲಿ ಉದ್ಘಾಟಿಸಲಾಯಿತು.

ಮಹಾಸಭಾದ ರಾಜ್ಯ ಪ್ರಧಾನ ಕಾರ್ಯದರ್ಶಿ ಡಾ.ಕೆಂಪರಾಮಯ್ಯ, ಕಾರ್ಯದರ್ಶಿ ಸಣ್ಣನಾಯಕ, ಮುಖಂಡರಾದ ಎಂ.ಸತೀಶ್, ಸಿಂಗಾಪುರ ವೆಂಕಟೇಶ್, ಎ.ಸಿ.ಮುನಿಕೃಷ್ಣಪ್ಪ, ಚಂದ್ರು, ನಾರಾಯಣ್ ಹಾಗೂ ಇತರರು ಭಾಗವಹಿಸಿದ್ದರು.

'ಬೇಡಿಕೆಗಳಿಗೆ ಸ್ಪಂದಿಸದಿದ್ದರೆ ಹೋರಾಟ'

ಸರ್ಕಾರಿ ನೌಕರರ ಸಂಘ, ಶಿಕ್ಷಕರ ಸಂಘಟನೆಗಳ ಪದಾಧಿಕಾರಿಗಳ ತೀರ್ಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಾಥಮಿಕ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ (1–5ನೇ ತರಗತಿ) ಸುಮಾರು 75 ಸಾವಿರ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ ಹಿಂದಿನ ಸೇವಾ ಜ್ಯೇಷ್ಠತೆ ಪರಿಗಣಿಸಿ 6 ರಿಂದ 8ನೇ ತರಗತಿಯ ಶಾಲೆಗಳಿಗೆ ಮೇಲ್ದರ್ಜೆಗೇರಿಸಲು ಕಾರ್ಯಕಾರಿ ಆದೇಶ ಹೊರಡಿಸುವುದೂ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ರಾಜ್ಯ ಸರ್ಕಾರದ ಮೇಲೆ ಒತ್ತಡ ಹೇರಲು ರಾಜ್ಯ ಸರ್ಕಾರಿ ನೌಕರರ ಸಂಘ ಹಾಗೂ ಶಿಕ್ಷಕರನ್ನು ಪ್ರತಿನಿಧಿಸುವ ಸಂಘಗಳ ಪದಾಧಿಕಾರಿಗಳ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಪ್ರಾಥಮಿಕ, ಪ್ರೌಢ ಶಾಲಾ ಶಿಕ್ಷಕರು ಮತ್ತು ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಸಮಸ್ಯೆಗಳ ಕುರಿತು ಚರ್ಚಿಸಲು ಭಾನುವಾರ ಸಭೆ ನಡೆಯಿತು. ಈ ಸಭೆಯಲ್ಲಿ ಕೆಲವು ಮಹತ್ವದ ನಿರ್ಣಯಗಳನ್ನು ತೆಗೆದುಕೊಳ್ಳಲಾಗಿದೆ.

ಸಭೆಯ ಬಳಿಕ ಮಾತನಾಡಿದ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ, 'ರಾಜ್ಯ ಸರ್ಕಾರ 21 ದಿನಗಳ ಒಳಗಾಗಿ ಬೇಡಿಕೆಗಳಿಗೆ ಸ್ಪಂದಿಸದಿದ್ದರೆ ರಾಜ್ಯದಾದ್ಯಂತ ಶಾಲಾ ಕಾಲೇಜುಗಳನ್ನು ಬಹಿಷ್ಕರಿಸಿ ಹೋರಾಟ ಹಮ್ಮಿಕೊಳ್ಳಲಾಗುವುದು. ಶಿಕ್ಷಕರನ್ನು ಪ್ರತಿನಿಧಿಸುವ ಸಂಘಟನೆಗಳ ಸುಮಾರು 5 ಸಾವಿರ ಪ್ರತಿನಿಧಿಗಳು ಸಭೆಯಲ್ಲಿ ಸರ್ವಾನುಮತದಿಂದ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ' ಎಂದರು.


ಸಭೆಯಲ್ಲಿ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ಮಾತನಾಡಿದರು

1998–99ರಲ್ಲಿ ಸೇವೆಗೆ ಸೇರಿ ಸುಪ್ರೀಂ ಕೋರ್ಟ್ ತೀರ್ಪಿನ ಅನ್ವಯ ಸೇವೆಯಿಂದ ವಜಾಗೊಂಡ ಸುಮಾರು 4 ಸಾವಿರ ಪ್ರಾಥಮಿಕ, ಪ್ರೌಢಶಾಲಾ ಶಿಕ್ಷಕರು 2013ರಲ್ಲಿ ಮರು ನೇಮಕಗೊಂಡಿದ್ದಾರೆ. ಮರು ನೇಮಕಕ್ಕೂ ಮೊದಲು ಸೇವೆ ಸಲ್ಲಿಸಿದ್ದ 4–5 ವರ್ಷಗಳ ಸೇವೆಯನ್ನು ಪರಿಗಣಿಸಿ ಕಾಲ್ಪನಿಕ ವೇತನ ನಿಗದಿಗೊಳಿಸಬೇಕು, ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರು, ಬಡ್ತಿ ಪ್ರೌಢಶಾಲಾ ಸಹ ಶಿಕ್ಷಕರು ಹಾಗೂ ಬಡ್ತಿ ಉಪನ್ಯಾಸಕರಿಗೆ ಕಾಲಮಿತಿಯಲ್ಲಿ ಬಡ್ತಿ ಸೌಲಭ್ಯ ನೀಡಬೇಕು, ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರ ಪರಸ್ಪರ ವರ್ಗಾವಣೆ ನೀತಿಯನ್ನು ಜಾರಿಗೆ ತರಬೇಕು, ಒಂದು ಬಾರಿ ಅಂತರ ಜಿಲ್ಲಾ ವರ್ಗಾವಣೆಗೆ ಒಂದು ಅವಕಾಶ ಕಲ್ಪಿಸಬೇಕು ಎಂದೂ ಸಭೆಯಲ್ಲಿ ಆಗ್ರಹಿಸಲಾಯಿತು.

ಬಿಡುವಿನ ಅವಧಿಯಲ್ಲಿ ಕರ್ತವ್ಯ ನಿರ್ವಹಿಸುವ ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರಿಗೆ ಗಳಿಕೆ ರಜೆ ಮಂಜೂರು ಮಾಡಬೇಕು. ಈ ಮುಖ್ಯ ಶಿಕ್ಷಕರನ್ನು ಶಿಕ್ಷಣ ಸಂಯೋಜಕರ ಹುದ್ದೆಗೆ ನೇಮಿಸುವಾಗ ಸೇವಾ ಹಿರಿತನ ಪರಿಗಣಿಸಿ ಜ್ಯೇಷ್ಠತೆಯ ಆಧಾರದಲ್ಲಿ ಈ ಹಿಂದಿನಂತೆ ಪರೀಕ್ಷೆ ಇಲ್ಲದೆ ನೇಮಿಸಬೇಕು, ಸಮಗ್ರ ವೃಂದ ಮತ್ತು ನೇಮಕಾತಿ ನಿಯಮವನ್ನು ಕಾಲಮಿತಿಯೊಳಗೆ ರೂಪಿಸಬೇಕು, 2008 ರ ನಂತರ ನೇಮಕಗೊಂಡ ಪ್ರೌಢ ಶಾಲಾ ಶಿಕ್ಷಕರಿಗೆ ಒಂದು ವಾರ್ಷಿಕ ವೇತನ ಬಡ್ತಿ ನೀಡಬೇಕು, ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ವರ್ಗಾವಣೆ ಕಾಯ್ದೆಯನ್ನು ಜಾರಿಗೆ ತರಬೇಕು, ಅರ್ಹ ಪ್ರೌಢಶಾಲಾ ಸಹ ಶಿಕ್ಷಕರ ಜ್ಯೇಷ್ಠತಾ ಪಟ್ಟಿಗೆ ಅನುಗುಣವಾಗಿ ಮುಂಬಡ್ತಿ ನೀಡಬೇಕು ಎಂದೂ ಸಭೆಯಲ್ಲಿ ಒತ್ತಾಯಿಸಲಾಯಿತು.

'ಉಪನಗರ ರೈಲು ಯೋಜನೆ ಕಾಮಗಾರಿ ಚುರುಕುಗೊಳಿಸಿ'

ಬೆಂಗಳೂರು: 'ಉಪ ನಗರ ರೈಲು ಯೋಜನೆಯನ್ನು ಚುರುಕುಗೊಳಿಸಬೇಕು. ಕೇಂದ್ರ ಮತ್ತು ರಾಜ್ಯ ಸರ್ಕಾರದ ಈ ಮಹತ್ವಾಕಾಂಕ್ಷಿ ಯೋಜನೆಯಡಿ ರೈಲು ಮಾರ್ಗ ನಿರ್ಮಾಣಕ್ಕೆ ಅಗತ್ಯವಿರುವ ಜಮೀನು ಸ್ವಾಧೀನಕ್ಕೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಆರಂಭಿಸಿರುವ ಪ್ರಕ್ರಿಯೆಗೆ ವೇಗ ನೀಡಬೇಕು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

'ಬೆಂಗಳೂರು ಮಿಷನ್–2022' ಯೋಜನೆಯ ಪ್ರಗತಿಯನ್ನು ಭಾನುವಾರ ಪರಿಶೀಲನೆ ನಡೆಸಿದ ಅವರು ರಾಜಧಾನಿಯಲ್ಲಿ ಅನುಷ್ಠಾನಗೊಳ್ಳುತ್ತಿರುವ ಭಾರಿ ಯೋಜನೆಗಳ ಮಾಹಿತಿ ಪಡೆದರು.

'ನಮ್ಮ ಮೆಟ್ರೊ' ರೈಲು ಯೋಜನೆಯ ಕಾಮಗಾರಿಗಳ ವೇಗ ಹೆಚ್ಚಿಸಬೇಕು. ಈ ಯೋಜನೆಯ ಎಲ್ಲ ಕಾಮಗಾರಿಗಳನ್ನು ಗಡುವಿಗಿಂತ ಒಂದು ವರ್ಷ ಮುನ್ನವೇ ಪೂರ್ಣಗೊಳಿಸಬೇಕು. ಅದಕ್ಕೆ ಅಗತ್ಯವಿರುವ ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು' ಎಂದು ಮುಖ್ಯಮಂತ್ರಿ ತಾಕೀತು ಮಾಡಿದರು.

ನಗರದ ಕೇಂದ್ರ ಭಾಗದಲ್ಲಿ ಸಂಚಾರ ದಟ್ಟಣೆ ತಗ್ಗಿಸಲು ಸುಸಜ್ಜಿತವಾದ ರಸ್ತೆಗಳನ್ನು ನಿರ್ಮಿಸಬೇಕಿದೆ. ಅತ್ಯುತ್ತಮ ರಸ್ತೆಗಳ ನಿರ್ಮಾಣ ಮತ್ತು ನಿರ್ವಹಣೆಗೆ ಕ್ರಮ ಕೈಗೊಳ್ಳಬೇಕು. ಸ್ಮಾರ್ಟ್ ಸಿಟಿ ಯೋಜನೆ ಬಗ್ಗೆ ಪ್ರತ್ಯೇಕವಾದ ಪ್ರಗತಿ ಪರಿಶೀಲನಾ ಸಭೆ ನಡೆಸಿ, ಈ ಕುರಿತು ನಿರ್ದೇಶನಗಳನ್ನು ನೀಡಲಾಗುವುದು ಎಂದರು.

'ಕೆ–100 ವಾಟರ್ ವೇ' ಯೋಜನೆಯಡಿ 11 ಕಿ.ಮೀ. ಉದ್ದದ ರಾಜಕಾಲುವೆಯನ್ನು ಪ್ರೇಕ್ಷಣೀಯ ಸ್ಥಳವಾಗಿ ಅಭಿವೃದ್ಧಿಪಡಿಸುವ ಯೋಜನೆಯ ಕಾಮಗಾರಿಯಲ್ಲಿ ಎಚ್ಚರಿಕೆ ವಹಿಸಬೇಕು. ಒಳಚರಂಡಿ ನೀರು ರಾಜಕಾಲುವೆ ಪ್ರವೇಶಿಸದಂತೆ ತಡೆಯಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಮುಖ್ಯಮಂತ್ರಿ ತಿಳಿಸಿದರು.

ಕೆರೆ ಅಭಿವೃದ್ಧಿ ಮತ್ತು ಪುನಶ್ಚೇತನ ಯೋಜನೆಯಡಿ ನಗರದ 25 ಕೆರೆಗಳ ಅಭಿವೃದ್ಧಿ ಕಾಮಗಾರಿ ಪ್ರಗತಿಯಲ್ಲಿದೆ. ಇದಕ್ಕಾಗಿ ₹ 128 ಕೋಟಿ ವೆಚ್ಚ ಮಾಡಲಾಗುತ್ತಿದೆ. ಜನವರಿ ಅಂತ್ಯದ ವೇಳೆಗೆ ಈ ಕಾಮಗಾರಿಗಳು ಪೂರ್ಣಗೊಳ್ಳಲಿವೆ. ಎಲ್ಲ ಕೆರೆಗಳಲ್ಲೂ ಒತ್ತುವರಿ ತೆರವು ಮಾಡಿ, ಹಸಿರು ಬೇಲಿ ನಿರ್ಮಿಸಬೇಕು. ಒಳಚರಂಡಿ ನೀರು ಕೆರೆ ಸೇರದಂತೆ ಕ್ರಮ ವಹಿಸಬೇಕು ಎಂದು ಸೂಚಿಸಿದರು.

ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ, ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ್ ಸೇರಿದಂತೆ ಹಲವು ಅಧಿಕಾರಿಗಳು ಸಭೆಯಲ್ಲಿದ್ದರು.

ಚಿತ್ರಾವಳಿ



ಸಪ್ತಕ ಬೆಂಗಳೂರು ವತಿಯಿಂದ ನಗರದಲ್ಲಿ ಭಾನುವಾರ ಆಯೋಜಿಸಿದ್ದ 'ಸುಶ್ರಾವ್ಯ ಸಂಜೆ' ಕಾರ್ಯಕ್ರಮದಲ್ಲಿ ಧನಂಜಯ ಹೆಗಡೆ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು. ತಬಲಾದಲ್ಲಿ ಗುರುಮೂರ್ತಿ ವೈದ್ಯ ಹಾಗೂ ಹಾರ್ಮೋನಿಯಂನಲ್ಲಿ ಮಧುಸೂಧನ ಭಟ್ಟ ಸಾಥ್ ನೀಡಿದರು


ಸಪ್ತಕ ಬೆಂಗಳೂರು ವತಿಯಿಂದ ನಗರದಲ್ಲಿ ಭಾನುವಾರ ಆಯೋಜಿಸಿದ್ದ 'ಸುಶ್ರಾವ್ಯ ಸಂಜೆ' ಕಾರ್ಯಕ್ರಮದಲ್ಲಿ ಪತ್ರಕರ್ತ ಲಕ್ಷ್ಮೀನಾರಾಯಣ ಶಂಭು ಶಾಸ್ತ್ರಿ ಅವರನ್ನು ಸನ್ಮಾನಿಸಲಾಯಿತು. ವಿಶ್ವವಾಣಿ ಪತ್ರಿಕೆಯ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್, ಪತ್ರಕರ್ತ ಎಂ.ಕೆ.ಭಾಸ್ಕರ ರಾವ್ ಹಾಗೂ ಜಿ.ಎಸ್.ಹೆಗಡೆ ಇದ್ದಾರೆ –ಪ್ರಜಾವಾಣಿ ಚಿತ್ರ

ಪಶ್ಚಿಮ ಕಾರ್ಡ್ ರಸ್ತೆ– ಬಸವೇಶ್ವರನಗರ ಜಂಕ್ಷನ್‌ನಲ್ಲಿ ಹೆಚ್ಚುವರಿ ಮೇಲ್ಸೇತುವೆ ನಿರ್ಮಾಣ

ಟೆಂಡರ್ ಕರೆಯದೆಯೇ ಗುತ್ತಿಗೆ

■ ಪ್ರವೀಣ್ ಕುಮಾರ್ ಪಿ.ವಿ.



ಪಶ್ಚಿಮ ಕಾರ್ಡ್ ರಸ್ತೆಯಲ್ಲಿ ಮಂಜುನಾಥನಗರದ ಮುಖ್ಯ ರಸ್ತೆ ಸಂಪರ್ಕಿಸುವಲ್ಲಿನ ಮೇಲ್ಸೇತುವೆಯ ರ್‍ಯಾಂಪ್‌ನ ಕಾಂಕ್ರೀಟ್ ಹಲಗೆ ನಾಲ್ಕು ತಿಂಗಳ ಹಿಂದೆ ಹೊರಗೆ ಜಾರಿತ್ತು. ಅದನ್ನು ದುರಸ್ತಿಪಡಿಸಲಾಗಿತ್ತು.

ಬೆಂಗಳೂರು: ಹೆಚ್ಚುವರಿ ಕಾಮಗಾರಿಗಳ ನೆಪದಲ್ಲಿ ಮೂಲ ಗುತ್ತಿಗೆ ಮೊತ್ತಕ್ಕಿಂತ ಅನೇಕ ಪಟ್ಟು ಹೆಚ್ಚು ಮೊತ್ತದ ಕಾಮಗಾರಿಯನ್ನು ಒಬ್ಬರೇ ಗುತ್ತಿಗೆದಾರರಿಗೆ ವಹಿಸುವ ಮೂಲಕ ಬಿಬಿಎಂಪಿಯು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ಕೆಟಿಪಿಪಿ) ಕಾಯ್ದೆಯ ಆಶಯವನ್ನೇ ಗಾಳಿಗೆ ತೂರುತ್ತಿದೆ!

ಶಾಸಕರ ರೂಪಿಸುವ ಯೋಜನೆ ಹೊತ್ತ ಶಾಸಕರೇ ಕಾಮಗಾರಿಯ ಗುತ್ತಿಗೆಯನ್ನು ನಿರ್ದಿಷ್ಟ ಸಂಸ್ಥೆಗೇ ನೀಡುವಂತೆ ಅಧಿಕಾರಿಗಳ ಮೇಲೆ ಒತ್ತಡ ಹೇರಿದ್ದಾರೆ.

ಪಶ್ಚಿಮ ಕಾರ್ಡ್ ರಸ್ತೆಗೆ ರಾಜಾಜಿನಗರದಲ್ಲಿ - ಮಂಜುನಾಥನಗರದ ಮುಖ್ಯರಸ್ತೆ ಕೂಡುವಲ್ಲಿ ದ್ವಿಪಥ ಸಂಚಾರದ ಮೇಲ್ಸೇತುವೆ, ಶಿವನಗರದ 8ನೇ ಮತ್ತು 1ನೇ ಮುಖ್ಯ ರಸ್ತೆಗಳು ಕೂಡುವಲ್ಲಿ ದ್ವಿಮುಖ ಸಂಚಾರದ 'ಇಂಟಿಗ್ರೇಟೆಡ್ ಅಂಡರ್ ಪಾಸ್' ಮತ್ತು ಬಸವೇಶ್ವರನಗರದ ಮುಖ್ಯರಸ್ತೆ ಕೂಡುವಲ್ಲಿ ಏಕಮುಖ ಸಂಚಾರದ ಮೇಲ್ಸೇತುವೆ ನಿರ್ಮಾಣ ಕಾಮಗಾರಿಗಳ ಪ್ಯಾಕೇಜ್‌ನ ಗುತ್ತಿಗೆಯನ್ನು ಎಂ.ವೆಂಕಟರಾವ್ ಇನ್‌ಫ್ರಾ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ನೀಡಲಾಗಿದೆ. ಒಟ್ಟು ₹ 89.86 ಕೋಟಿ ವೆಚ್ಚದ ಈ ಪ್ಯಾಕೇಜ್‌ಗೆ 2015ರ ಫೆ. 11ರಂದು ಅನುಮೋದನೆ ನೀಡಲಾಗಿತ್ತು.

ಮಂಜುನಾಥನಗರದ ಮುಖ್ಯರಸ್ತೆ ಕೂಡುವಲ್ಲಿನ ಮೇಲ್ಸೇತುವೆ 2018ರ ಆ. 27ರಂದು ಲೋಕಾರ್ಪಣೆಗೊಂಡಿದೆ. ಶಿವನಗರ 8ನೇ ಮತ್ತು 1ನೇ ಮುಖ್ಯ ರಸ್ತೆ ಕೂಡುವಲ್ಲಿ ಇಂಟಿಗ್ರೇಟೆಡ್ ಅಂಡರ್‌ಪಾಸ್ ಬದಲಿಗೆ ಮೇಲ್ಸೇತುವೆಯನ್ನೇ ನಿರ್ಮಿಸಲಾಗಿದ್ದು, 2021ರ ಅ. 4ರಂದು ವಾಹನ ಸಂಚಾರಕ್ಕೆ ಮುಕ್ತಗೊಂಡಿದೆ. ಬಸವೇಶ್ವರನಗರ ಮುಖ್ಯರಸ್ತೆ ಕೂಡುವಲ್ಲಿನ ಮೇಲ್ಸೇತುವೆ ಗಡುವು ಮುಗಿದು ನಾಲ್ಕು ವರ್ಷಗಳಾದರೂ ಪೂರ್ಣಗೊಂಡಿಲ್ಲ.

ಶಿವನಗರ ಮುಖ್ಯರಸ್ತೆಗಳು ಕೂಡುವಲ್ಲಿನ ಮೇಲ್ಸೇತುವೆಯ ಉದ್ಘಾಟನೆ ಸಂದರ್ಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೊಂದಿಗೆ ಚರ್ಚಿಸಿದ ವಸತಿ ಸಚಿವ ವಿ.ಸೋಮಣ್ಣ (ಗೋವಿಂದರಾಜನಗರ ಕ್ಷೇತ್ರದ ಶಾಸಕ) ಹಾಗೂ ರಾಜಾಜಿನಗರ ಕ್ಷೇತ್ರದ ಶಾಸಕ ಸುರೇಶ್ ಕುಮಾರ್, ಬಸವೇಶ್ವರನಗರದ ಮುಖ್ಯರಸ್ತೆ ಕೂಡುವಲ್ಲಿಯೂ ದ್ವಿಮುಖ ಸಂಚಾರದ ಮೇಲ್ಸೇತುವೆ ನಿರ್ಮಿಸುವಂತೆ ಕೋರಿಕೆ ಸಲ್ಲಿಸಿದ್ದರು.

ಪಶ್ಚಿಮ ಕಾರ್ಡ್ ರಸ್ತೆಯ ಮೇಲದರಲ್ಲಿ ಮೇಲ್ಸೇತುವೆಗಳು ಲೋಕಾರ್ಪಣೆಗೊಂಡ ಬಳಿಕ ಏಕಮುಖ ಸಂಚಾರದ ಕಾರಣ ಪ್ರದರ್ಶನ ಕಡೆಯಿಂದ ಬರುವ ವಾಹನಗಳು ಸಿಗ್ನಲ್ ಮುಕ್ತವಾಗಿ ಸಂಚರಿಸುತ್ತಿವೆ. ಹಾಗಾಗಿ, ಬಸವೇಶ್ವರನಗರ ಮುಖ್ಯರಸ್ತೆ ಕೂಡುವಲ್ಲಿ ವಾಹನ ದಟ್ಟಣೆ ಉಂಟಾಗುತ್ತಿದೆ. ಇಲ್ಲಿಯೂ ದ್ವಿಮುಖ ಸಂಚಾರದ ಮೇಲ್ಸೇತುವೆ ನಿರ್ಮಿಸಿದರೆ ದಟ್ಟಣೆ ಸಮಸ್ಯೆ ಬಗೆಹರಿಯಲಿದೆ ಎಂಬುದು ಶಾಸಕರ ಅಭಿಪ್ರಾಯ. ಈ ಪ್ರಸ್ತಾವನೆಗೆ ಒಪ್ಪಿಗೆ ಸೂಚಿಸಿದ ಮುಖ್ಯಮಂತ್ರಿಯವರು, ಬಿಬಿಎಂಪಿ ಅಧಿಕಾರಿಗಳಿಗೆ ಮೌಖಿಕ ಆದೇಶವನ್ನೂ ನೀಡಿದ್ದರು.

'ಇದಾದ ಬಳಿಕ ಸಚಿವ ವಿ.ಸೋಮಣ್ಣ ಅವರು ಆ.12ರಂದು ಸ್ಥಳ ಪರಿಶೀಲನೆ ನಡೆಸಿ, ವಿಧಾನಸೌಧದ ಕಚೇರಿಯಲ್ಲಿ ಈ ಕಾಮಗಾರಿ ಪರಿಷ್ಕರಣೆ ಕುರಿತು ಸಭೆಯನ್ನೂ ನಡೆಸಿದ್ದರು. ದ್ವಿಮುಖ ಸಂಚಾರದ ಮೇಲ್ಸೇತುವೆ ಕಾಮಗಾರಿಯನ್ನು ಎಂ.ವೆಂಕಟರಾವ್ ಇನ್ಫ್ರಾ ಪ್ರಾಜೆಕ್ಟ್ ಸಂಸ್ಥೆಗೆ ವಹಿಸುವಂತೆ ಬಿಬಿಎಂಪಿ ಅಧಿಕಾರಿಗಳಿಗೆ ಸೂಚನೆ ನೀಡಿದ್ದರು. ಬಳಿಕ ಬಿಬಿಎಂಪಿ ಮುಖ್ಯ ಆಯುಕ್ತರು ಬಸವೇಶ್ವರನಗರ ರಸ್ತೆ ಜಂಕ್ಷನ್‌ನಲ್ಲಿ ಹೆಚ್ಚುವರಿ ಮೇಲ್ಸೇತುವೆಯನ್ನು ₹ 23.62 ಕೋಟಿ ವೆಚ್ಚದಲ್ಲಿ ನಿರ್ಮಿಸಲು ಅನುಮೋದನೆ ಕೋರಿ ಆ.27ರಂದು ನಗರಾಭಿವೃದ್ಧಿ ಇಲಾಖೆಗೆ ಪತ್ರ ಬರೆದಿದ್ದಾರೆ.

ಟೆಂಡರ್ ಕರೆಯದೆಯೇ ಹಿಂದಿನ ಗುತ್ತಿಗೆದಾರರಿಗೆ ಕಾಮಗಾರಿ ವಹಿಸುತ್ತಿರುವ ಕುರಿತು ಪ್ರತಿಕ್ರಿಯೆ ನೀಡಿದ ಬಿಬಿಎಂಪಿ ಮುಖ್ಯ ಎಂಜಿನಿಯರ್ (ಯೋಜನೆಗಳು) ಲೋಕೇಶ್, 'ಈಗ ಕಾಮಗಾರಿ ನಡೆಸುತ್ತಿರುವ ಮೇಲ್ಸೇತುವೆ ಹಾಗೂ ಹೊಸ ಮೇಲ್ಸೇತುವೆಗಳೆರಡೂ ಜೋಡಣೆಯಾಗಬೇಕಿದೆ. ಹಾಗಾಗಿ ಅದೇ ಗುತ್ತಿಗೆದಾರರಿಗೆ ಕಾಮಗಾರಿ ವಹಿಸಲಾಗುತ್ತಿದೆ' ಎಂದರು.

ಲೋಕೋಪಯೋಗಿ ಇಲಾಖೆಯ ಈಗಿನ ದರಪಟ್ಟಿ ಪ್ರಕಾರ ಈ ಹೆಚ್ಚುವರಿ ಕಾಮಗಾರಿಗೆ ₹ 18.52 ಕೋಟಿ ವೆಚ್ಚವಾಗಲಿದೆ. ಅಷ್ಟು ಮೊತ್ತದಲ್ಲಿ ಈಗಿನ ಗುತ್ತಿಗೆದಾರರಿಂದ ಕೆಲಸ ಮಾಡಿಸುವುದಿಲ್ಲ. ಅದರ ಬದಲು ₹ 23.62 ಕೋಟಿ ವೆಚ್ಚ ಮಾಡುವುದು ಎಷ್ಟು ಸರಿ ಎಂಬುದು ಪ್ರಶ್ನೆ.

ಮೂಲ ಪ್ಯಾಕೇಜ್‌ಗೆ ಹೆಚ್ಚುವರಿ ಕಾಮಗಾರಿಗಳನ್ನು ಸೇರಿಸಿ ಟೆಂಡರ್ ಕರೆಯದೆಯೇ ಅದೇ ಗುತ್ತಿಗೆದಾರರಿಗೆ ಗುತ್ತಿಗೆ ನೀಡುವುದು ಒಳ್ಳೆಯ ಸಂಪ್ರದಾಯವಲ್ಲ. ಮುಂದೆ ಬೇರೆ ಶಾಸಕರೂ ತಮಗೆ ಬೇಕಾದ ಗುತ್ತಿಗೆದಾರರಿಗೆ ಗುತ್ತಿಗೆ ಕೊಡಿಸಲು ಇಂತಹದ್ದೇ ಬೇಡಿಕೆ ಸಲ್ಲಿಸಬಹುದು ಎಂದು ಹೆಸರು ಬಹಿರಂಗಪಡಿಸಲು ಬಯಸದ ಬಿಬಿಎಂಪಿ ಅಧಿಕಾರಿಯೊಬ್ಬರು ಕಳವಳ ವ್ಯಕ್ತಪಡಿಸಿದರು.

ಕಾಮಗಾರಿ ಪ್ಯಾಕೇಜ್ 3 ಬಾರಿ ಪರಿಷ್ಕರಣೆ

ಪಶ್ಚಿಮ ಕಾರ್ಡ್ ರಸ್ತೆ ಕಾಮಗಾರಿಯ ಪ್ಯಾಕೇಜನ್ನು ಮೂರು ಬಾರಿ ಪರಿಷ್ಕರಿಸಲಾಗಿದೆ. ಶಿವನಗರ ಮುಖ್ಯ ರಸ್ತೆ ಕೂಡುವಲ್ಲಿ ಕೆಳಸೇತುವೆ ಬದಲು 'ಇಂಟಿಗ್ರೇಟೆಡ್ ಮೇಲ್ಸೇತುವೆ ನಿರ್ಮಿಸಲು ನಿರ್ಧರಿಸಲಾಯಿತು. ಈ ಪರಿಷ್ಕರಣೆಯಿಂದ ಪ್ಯಾಕೇಜ್‌ನ ಮೊತ್ತ ₹ 89.86 ಕೋಟಿಯಿಂದ ₹ 112.07 ಕೋಟಿಗೆ ಹೆಚ್ಚಿತು. ಬಳಿಕ 72ನೇ ಅಡ್ಡರಸ್ತೆಯ ಬಳಿ ₹ 33.71 ಕೋಟಿ ವೆಚ್ಚದ ಮೇಲ್ಸೇತುವೆಯನ್ನೂ ಇದೇ ಪ್ಯಾಕೇಜ್‌ಗೆ ಸೇರಿಸಲಾಯಿತು. ಆಗ ಮೊತ್ತ ₹ 145.78 ಕೋಟಿಗೆ ಹೆಚ್ಚಿತು. ಈಗ ಬಸವೇಶ್ವರನಗರ ಜಂಕ್ಷನ್‌ನಲ್ಲಿ ₹ 23.62 ಕೋಟಿ ವೆಚ್ಚದಲ್ಲಿ ಹೆಚ್ಚುವರಿ ಮೇಲ್ಸೇತುವೆ ನಿರ್ಮಿಸಲು ನಿರ್ಧರಿಸಲಾಗಿದೆ. ಈಗ ಪ್ಯಾಕೇಜ್ ಮೊತ್ತ ₹ 169.4 ಕೋಟಿಗೆ ಹೆಚ್ಚಳವಾಗಲಿದೆ.

ಕಾಮಗಾರಿ ವೆಚ್ಚ ಇಷ್ಟೊಂದು ಹೆಚ್ಚಳವಾದಾಗ ಬೇರೆ ಗುತ್ತಿಗೆದಾರರು ಸ್ಪರ್ಧಾತ್ಮಕ ದರದಲ್ಲಿ ಬಿಡ್ ಮಾಡಲು ಅವಕಾಶ ಕಲ್ಪಿಸದಿರುವುದು ಅನುಮಾನ ಮೂಡಿಸಿದೆ.

2017ರ ಸೆ. 13ರ ಒಳಗೆ ಪೂರ್ಣಗೊಳ್ಳಬೇಕಿದ್ದ ಕಾಮಗಾರಿಗಳು ಸಾಕಷ್ಟು ವಿಳಂಬವಾಗಿವೆ. ಮಂಜುನಾಥನಗರ ರಸ್ತೆ ಕೂಡುವಲ್ಲಿ ನಿರ್ಮಿಸಿದ ಮೇಲ್ಸೇತುವೆಯ ರ್‍ಯಾಂಪ್‌ನ ಕಾಂಕ್ರೀಟ್ ಹಲಗೆಗಳು ಲೋಕಾರ್ಪಣೆಗೊಂಡ ಎರಡೇ ವರ್ಷಗಳಲ್ಲಿ ಹೊರಕ್ಕೆ ಚಾಚಿದ್ದು, ಅವುಗಳನ್ನು ನೈಲಿಂಗ್ ಮೂಲಕ ದುರಸ್ತಿಪಡಿಸಲಾಗಿದೆ. ಈಗ ಮತ್ತೆ ಅದೇ ಗುತ್ತಿಗೆ ಸಂಸ್ಥೆಗೆ ಹೆಚ್ಚುವರಿ ಮೇಲ್ಸೇತುವೆ ಕಾಮಗಾರಿ ವಹಿಸುತ್ತಿರುವುದೇಕೆ ಎಂಬುದು ಪ್ರಶ್ನೆ.

ದರಪಟ್ಟಿಗಿಂತ ₹ 50 ಕೋಟಿ ಅಧಿಕ ವೆಚ್ಚ

2015ರಲ್ಲಿ ಈ ಮೂರು ಕಾಮಗಾರಿಗಳ ಪ್ಯಾಕೇಜ್‌ನ ಅಂದಾಜು ಮೊತ್ತ ₹ 64 ಕೋಟಿ ಇತ್ತು. ಶೇ 40.41ರಷ್ಟು ಅಧಿಕ ಟೆಂಡರ್ ಪ್ರೀಮಿಯಂನಲ್ಲಿ ₹ 89.86 ಕೋಟಿ ಮೊತ್ತಕ್ಕೆ ಕಾಮಗಾರಿಗಳ ಟೆಂಡರ್ ನೀಡಲಾಗಿತ್ತು. ಈಗ ಮೊತ್ತವು ₹ 169.64 ಕೋಟಿಗೆ ಹೆಚ್ಚಳವಾಗಿದೆ. ಇದು ಮೂಲ ಅಂದಾಜು ಮೊತ್ತಕ್ಕಿಂತ ಎರಡೂವರೆ ಪಟ್ಟು ಅಧಿಕ. ಈಗಿನ ದರಪಟ್ಟಿ ಪ್ರಕಾರವೂ ಈ ಮೂರು ಕಾಮಗಾರಿಗಳ ಮೊತ್ತ ₹ 120 ಕೋಟಿ ಮೀರದು. ₹ 50 ಕೋಟಿ ಟೆಂಡರ್ ಪ್ರೀಮಿಯಂ ಅನ್ನು ಗುತ್ತಿಗೆ ಸಂಸ್ಥೆಗೆ ನೀಡಲಾಗುತ್ತಿದೆ ಎಂಬ ಆರೋಪ ಕೇಳಿಬಂದಿದೆ.

ಪ್ರಜಾವಾಣಿ ವಿಶೇಷ



ಕಾರ್ಯಕ್ರಮದಲ್ಲಿ ಮೀನಾ ದೇಶಪಾಂಡೆ ಹಾಗೂ ಎಸ್.ಜಿ. ಜೈನಾಪುರ ಅವರಿಗೆ 'ವಿ.ಕೃ.ಗೋಕಾಕ್ ಪ್ರಶಸ್ತಿ'ಯನ್ನು ಹಂ.ಪ. ನಾಗರಾಜಯ್ಯ ಮತ್ತು ಕಮಲಾ ಹಂಪನಾ ಪ್ರದಾನ ಮಾಡಿದರು. (ಎಡದಿಂದ ಬಲಕ್ಕೆ), ವಿ.ಕೃ.ಗೋಕಾಕ್ ಅವರ ಪುತ್ರ ಅನಿಲ್ ಗೋಕಾಕ್, ವಿನಾಯಕ ಗೋಕಾಕ್ ವಾಙ್ಮಯ ಟ್ರಸ್ಟ್ ಅಧ್ಯಕ್ಷ ಬಿ.ಎನ್.ವಿಶ್ವನಾಥ್, ಭಾರತೀಯ ವಿದ್ಯಾಭವನದ ನಿರ್ದೇಶಕ ಎಚ್.ಎನ್.ಸುರೇಶ ಹಾಗೂ ಎನ್.ಎಸ್.ಶ್ರೀಧರಮೂರ್ತಿ ಇದ್ದಾರೆ –ಪ್ರಜಾವಾಣಿ ಚಿತ್ರ

'ಕಾವ್ಯಕ್ಕೆ ಹೊಸ ಸತ್ವ ನೀಡಿದ ಗೋಕಾಕ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡ ಭಾಷೆಯಲ್ಲಿ ಪ್ರಬುದ್ಧತೆ ಹೊಂದಿದ್ದ ವಿ.ಕೃ.ಗೋಕಾಕ್ ಅವರು, ಕಾವ್ಯಕ್ಕೆ ಹೊಸ ಸತ್ವ ನೀಡಿದರು' ಎಂದು ಲೇಖಕಿ ಕಮಲಾ ಹಂಪನಾ ಅಭಿಮತ ವ್ಯಕ್ತಪಡಿಸಿದರು.

ವಿನಾಯಕ ಗೋಕಾಕ್ ವಾಙ್ಮಯ ಟ್ರಸ್ಟ್ ನಗರದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅವರು ಸಾಹಿತಿ ಎಸ್.ಜಿ. ಜೈನಾಪುರ ಮತ್ತು ರಾಜ್ಯಶಾಸ್ತ್ರಜ್ಞೆ ಮೀನಾ ದೇಶಪಾಂಡೆ ಅವರಿಗೆ 'ವಿ.ಕೃ. ಗೋಕಾಕ್ ಪ್ರಶಸ್ತಿ' ಪ್ರದಾನ ಮಾಡಿದರು. ಈ ಪ್ರಶಸ್ತಿಯು ತಲಾ ₹ 10 ಸಾವಿರ ನಗದು ಮತ್ತು ಫಲಕವನ್ನು ಒಳಗೊಂಡಿದೆ.

'ವಿ.ಕೃ. ಗೋಕಾಕ್ ಅವರು ಪರೋಕ್ಷವಾಗಿ ಗುರುವಾಗಿದ್ದರು. ಅವರಿಂದ ಅನೇಕ ಸಂಗತಿಗಳನ್ನು ತಿಳಿದು ಜ್ಞಾನಕೋಶಕ್ಕೆ ತುಂಬಿಕೊಂಡಿದ್ದೇವೆ. ವಿದ್ಯಾರ್ಥಿಯಾಗಿದ್ದಾಗ ಗೋಕಾಕ್ ಅವರ ಭಾಷಣಗಳನ್ನು ಹಾಡುತ್ತಿದ್ದೆ. 1965ರಲ್ಲಿ 'ಸಮರಸವೇ ಜೀವನ' ಎಂಬ ಬೃಹತ್ ಕಾದಂಬರಿ, ಅವರಿಗೆ ಕಳುಹಿಸಿಕೊಟ್ಟಿದ್ದೆ. ಅವರಿಂದ ಸಿಕ್ಕ ಪ್ರತಿಕ್ರಿಯೆಯು ಬರವಣಿಗೆಗೆ ಮತ್ತಷ್ಟು ಪ್ರೋತ್ಸಾಹ ನೀಡಿತು. ಇತ್ತೀಚಿನ ದಿನಗಳಲ್ಲಿ ಯಾರಿಗಾದರೂ ಪುಸ್ತಕವನ್ನು ಕಳುಹಿಸಿದರೆ, ಅದು ತಲುಪಿದೆ ಎಂದು ತಿಳಿಸುವ ಸೌಜನ್ಯವೂ ಇಲ್ಲವಾಗಿದೆ' ಎಂದು ಬೇಸರ ವ್ಯಕ್ತಪಡಿಸಿದರು.

'ವಿ.ಕೃ. ಗೋಕಾಕ್ ಪ್ರಶಸ್ತಿಯನ್ನು ಪ್ರತಿವರ್ಷ ಒಬ್ಬ ಮಹಿಳೆಗೆ ನೀಡಬೇಕು. ಈ ನಿಟ್ಟಿನಲ್ಲಿ ಟ್ರಸ್ಟ್ ಕ್ರಮವಹಿಸಬೇಕು' ಎಂದು ಒತ್ತಾಯಿಸಿದರು.

ಸಾಹಿತಿ ಹಂ.ಪ. ನಾಗರಾಜಯ್ಯ, 'ಗೋಕಾಕ್ ಅವರು ನನ್ನ ಮೇಲೆ ಗಾಢವಾದ ಪ್ರಭಾವ ಬೀರಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದಾಗ ನನ್ನೊಂದಿಗಿದ್ದು ಆಶೀರ್ವಾದ ಮಾಡಿದ್ದರು. ಪರಿಷತ್ತಿನ ಅಧ್ಯಕ್ಷನಾದ ಬಳಿಕ ರಚಿಸಿದ ಗ್ರಂಥ ಪ್ರಕಟಣೆ ಸಮಿತಿಯಲ್ಲಿಯೂ ಅವರು ಇದ್ದರು' ಎಂದು ಹಳೆಯ ದಿನಗಳನ್ನು ನೆನಪಿಸಿಕೊಂಡರು.

ಪ್ರಶಸ್ತಿ ಪುರಸ್ಕೃತ ಎಸ್.ಜಿ. ಜೈನಾಪುರ, 'ಯಾವುದೇ ಪ್ರಶಸ್ತಿಯನ್ನು ಬಯಸಿ ನಾನು ಕೆಲಸ ಮಾಡುತ್ತಿಲ್ಲ. ಸ್ವ ಸಂತೋಷಕ್ಕಾಗಿ ಸಾಹಿತ್ಯ ಸೇವೆ ಮಾಡುತ್ತಿದ್ದೇನೆ. ಗೋಕಾಕ್ ಅವರು ಇಂಗ್ಲಿಷ್‌ನಲ್ಲಿ ಅದ್ವಿತೀಯ ವಿದ್ವತ್ತು ಹೊಂದಿದ್ದರು. ಆದರೆ, ಅವರ ಹೃದಯದಲ್ಲಿದ್ದ ಕನ್ನಡ ಸದಾ ಎಲ್ಲೆಯಾಗಿ ಹೊರಹೊಮ್ಮುತ್ತಿತ್ತು. ಅವರಿಗೆ ಕನ್ನಡ ಭಾಷೆಯ ಮೇಲೆ ವಿಶೇಷ ಅಭಿಮಾನವಿತ್ತು' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮೀನಾ ದೇಶಪಾಂಡೆ, 'ರಾಜಕೀಯಶಾಸ್ತ್ರ, ಅರ್ಥಶಾಸ್ತ್ರದಂತಹ ಪಠ್ಯ ವಿಷಯಗಳಲ್ಲಿ ಕನ್ನಡದ ಪುಸ್ತಕಗಳು ವಿರಳ. ಹಾಗಾಗಿ, ಕನ್ನಡ ಭಾಷೆಗೆ ಸಾಧ್ಯವಾದಷ್ಟು ಸೇವೆ ಮಾಡಬೇಕೆಂಬ ಅನುವಾದಗಳನ್ನು ಕೈಗೆತ್ತಿಕೊಳ್ಳುತ್ತಿದ್ದೇನೆ. ಗಾಂಧಿ ಸಾಹಿತ್ಯದ ಎಲ್ಲ ಸಂಪುಟಗಳನ್ನು ಕನ್ನಡಕ್ಕೆ ಅನುವಾದ ಮಾಡುವ ವಿಶ್ವಾಸವಿದೆ' ಎಂದರು.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	25.05 ಕೋಟಿ ▲	3.43ಕೋಟಿ ▲
ಸಕ್ರಿಯ ಪ್ರಕರಣ	1.86 ಕೋಟಿ	1.44 ಲಕ್ಷ ▼
ಗುಣಮುಖ	22.67 ಕೋಟಿ ▲	3.37 ಕೋಟಿ ▲
ಸಾವು	50.63 ಲಕ್ಷ ▲	4.60 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	4.17 ಲಕ್ಷ ▼	10,853 ▼
ಗುಣಮುಖ	3.43 ಲಕ್ಷ ▼	12,432 ▼
ಸಾವು	6,370 ▼	526 ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಅಮೆರಿಕ	ಬ್ರಿಟನ್	ರಷ್ಯಾ
32,479 ▼	30,693 ▼	41,335 ▲

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	ಬ್ರಿಟನ್	ರಷ್ಯಾ
92.26 ▼	15.69 ▼	9.75 ▲

(*ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಪ್ರಜಾವಾಣಿ ಗ್ರಾಫಿಕ್ಸ್

ಎಲ್ಲಿ ಹೆಚ್ಚು ಸಾವು

ಮಹಾರಾಷ್ಟ್ರ	1.40 ಲಕ್ಷ
ತಮಿಳುನಾಡು	36,214 ▲
ಕೇರಳ	33,515 ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	66.16
ಕೇರಳ	50.08 ▲
ತಮಿಳುನಾಡು	27.08 ▲

ನಗರದ ಕೋವಿಡ್ ಅಂಕಿ–ಅಂಶ

12,52,831 ▲ ಒಟ್ಟು ಪ್ರಕರಣಗಳು (12,52,680 ನಿನ್ನೆಯ ವಿವರ)

6,365 ▲ ಸಕ್ರಿಯ ಪ್ರಕರಣಗಳು

12,30,170 ▲ ಗುಣಮುಖರಾದವರು

16,295 ▲ ಒಟ್ಟು ಸಾವು

ಪ್ರಜಾವಾಣಿ ಗ್ರಾಫಿಕ್ಸ್

ದಿನದ ಏರಿಕೆ

ಹೊಸ ಪ್ರಕರಣ	151 ▲
ಗುಣಮುಖ	150 ▼
ಸಾವು	02 ▲

ಆಧಾರ: ರಾಜ್ಯ ಆರೋಗ್ಯ ಇಲಾಖೆ

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

ಮೋದಿ, ಯೋಗಿ ಹತ್ಯೆ ಬೆದರಿಕೆ: ತನಿಖೆ ಶುರು

ಲಖನೌ (ಪಿಟಿಐ): ಬಾಂಬ್ ಸ್ಫೋಟಿಸುವ ಮೂಲಕ ಪ್ರಧಾನಿ ನರೇಂದ್ರ ಮೋದಿ ಹಾಗೂ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರನ್ನು ಹತ್ಯೆ ಮಾಡುವುದಾಗಿ ವ್ಯಕ್ತಿಯೊಬ್ಬ ಟ್ವಿಟರ್ ಮೂಲಕ ಭಾನುವಾರ ಬೆದರಿಕೆ ಹಾಕಿದ್ದು, ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಸಿರಿಗೆರೆ ಶ್ರೀಗಳ ವಿರುದ್ಧ ಆರೋಪ: ಭಕ್ತರ ಆಕ್ರೋಶ

ದಾವಣಗೆರೆ: ಸಿರಿಗೆರೆ ಮಠದ ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿಯವರ ವಿರುದ್ಧ ಆರೋಪ ಮಾಡಿದ ಐದು ಮಂದಿಯ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ಭಕ್ತರು, ನವೆಂಬರ್ 13ರಂದು ಆರೋಪಗಳಿಗೆ ಉತ್ತರಿಸಲು ನಿರ್ಧರಿಸಿದ್ದಾರೆ.

ಸಮಾಜದ ಮುಖಂಡ ಅಣಬೇರು ರಾಜಣ್ಣ ನೇತೃತ್ವದಲ್ಲಿ ಇಲ್ಲಿನ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಸಮುದಾಯ ಭವನದ ತರಳಬಾಳು ಸಭಾಭವನದಲ್ಲಿ ನಡೆದ ತುರ್ತು ಸಭೆಯಲ್ಲಿ ಈ ನಿರ್ಧಾರಕ್ಕೆ ಬರಲಾಯಿತು.

'ನವೆಂಬರ್ 13ರಂದು ಬೆಳಿಗ್ಗೆ 11ಕ್ಕೆ ಇದೇ ಕಲ್ಯಾಣ ಮಂಟಪದಲ್ಲಿ ಆರೋಪ ಮಾಡಿದವರನ್ನು ಕರೆಸಿ ಮಠದ ಭಕ್ತರೇ ಉತ್ತರ ನೀಡೋಣ. ಶ್ರೀಗಳನ್ನು ಆಹ್ವಾನಿಸುವುದು ಬೇಡ' ಎಂದು ಅಣಬೇರು ರಾಜಣ್ಣ ಹೇಳಿದರು.

ತರಳಬಾಳು ಪೀಠ ಉಳಿಸಿ ಜಾಗೃತಿ ಸಮಿತಿಯ ವಕೀಲ ಎಂ. ಸಿದ್ದಯ್ಯ, ಆನಗೋಡು ಗ್ರಾಮದ ಮುಖಂಡ ಎಚ್. ನಂಜುಂಡಪ್ಪ, ವಿಧಾನ ಪರಿಷತ್ತಿನ ಮಾಜಿ ಸದಸ್ಯ ಎಂ. ವೀರಭದ್ರಪ್ಪ, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಎಸ್.ಟಿ. ಶಾಂತಗಂಗಾಧರ್, ಬೆಂಗಳೂರಿನ ಮಾದನಬಾವಿ ರುದ್ರಪ್ಪಗೌಡ ಅವರು ಬೆಳಿಗ್ಗೆ ಪತ್ರಿಕಾಗೋಷ್ಠಿಯಲ್ಲಿ ಶ್ರೀಗಳ ವಿರುದ್ಧ ಆರೋಪ ಮಾಡಿದ್ದರು.

ಸುದ್ದಿ ತಿಳಿಯುತ್ತಿದ್ದಂತೆಯೇ ಜಿಲ್ಲಾ ವರದಿಗಾರರ ಒಕ್ಕೂಟದ ಎದುರು ಕೆಲವರು ಸಮಿತಿ ಪದಾಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದರು. ಸಂಜೆ ನಡೆದ ತುರ್ತುಸಭೆಯಲ್ಲಿ ಈ ಐದು ಮಂದಿಯ ವಿರುದ್ಧ ಮಠದ ಭಕ್ತರು ಹರಿಹಾಯ್ದರು. ಅವರ ವಿರುದ್ಧ ಏಕವಚನದಲ್ಲೇ ನಿಂದಿಸಿದರು.

'ಮಠದಲ್ಲಿ ಇದ್ದವರೇ ದ್ರೋಹ ಬಗೆದಿದ್ದಾರೆ. ಸಿದ್ದಯ್ಯ 8 ಜನ ಸಂಬಂಧಿಕರಿಗೆ ಹೇಗೆ ನೌಕರಿ ಕೊಡಿಸಿದರು. ವೀರಭದ್ರಪ್ಪ ಹೇಗೆ ಎಂಎಲ್‌ಸಿ ಆದರು, ಶಿವನಕೆರೆ ಬಸಲಿಂಗಪ್ಪ ಹೇಗೆ ಹಣ ಮಾಡಿದ್ದಾರೆ ಎಂಬುದು ಎಲ್ಲರಿಗೂ ಗೊತ್ತಿದೆ' ಎಂದು ಭಕ್ತರು ಆರೋಪಿಸಿದರು.

'ಶ್ರೀಗಳ ಹಾಗೂ ಮಠದ ವಿರುದ್ಧ ಆರೋಪ ಮಾಡಿದವರಿಗೆ ತಕ್ಕ ಶಾಸ್ತಿ ಮಾಡೋಣ' ಎಂದು ಕೆಲವು ಭಕ್ತರು ಗುಡುಗಿದರೆ, ಮತ್ತೆ ಕೆಲವರು 'ಹಾಗೆ ಮಾಡಿದರೆ ಮಠಕ್ಕೆ ಹಾಗೂ ಶ್ರೀಗಳಿಗೆ ಕೆಟ್ಟ ಹೆಸರು ಬರುತ್ತದೆ. ಶಿಸ್ತು ಕಾಪಾಡಿಕೊಂಡು, ಆಯ್ದ 10 ಮಂದಿ ಅವರ ಆರೋಪಗಳಿಗೆ ಉತ್ತರಿಸೋಣ' ಎಂದು ಸಲಹೆ ನೀಡಿದರು.

ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿಗೆ ಪೀಠ ತ್ಯಾಗ ಮಾಡಲು ಒತ್ತಾಯ

'ಸಿರಿಗೆರೆ ಬೃಹನ್ಮಠದ ಪೀಠಾಧ್ಯಕ್ಷರಾದ ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಪೀಠ ತ್ಯಜಿಸಬೇಕು. ಉತ್ತರಾಧಿಕಾರಿ ಆಯ್ಕೆ ಹೊಣೆಯನ್ನು ಸಮಾಜಕ್ಕೆ ನೀಡಬೇಕು' ಎಂದು ತರಳಬಾಳು ಪೀಠ ಉಳಿಸಿ ಜಾಗೃತಿ ಸಮಿತಿ ಆಗ್ರಹಿಸಿತು.

ಜಾಗೃತಿ ಸಮಿತಿಯ ಮುದೇಗೌಡ್ರು ವೀರಭದ್ರಪ್ಪ, ಆನಗೋಡು ನಂಜುಂಡಪ್ಪ, ಎಂ. ಸಿದ್ದಯ್ಯ ಇತರರು ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

'ಉತ್ತರಾಧಿಕಾರಿ ನೇಮಕ ಸಂಬಂಧ ಶ್ರೀಗಳಿಗೆ ನಾಲ್ಕು ಬಾರಿ ಪತ್ರ ಬರೆದರೂ ಉತ್ತರ ಬರಲಿಲ್ಲ. ಹಿಂದಿನ ಜಗದ್ಗುರು ಶಿವಕುಮಾರ ಶಿವಚಾರ್ಯರು ಪ್ರಜಾಪ್ರಭುತ್ವದ ರೀತಿಯಲ್ಲಿ 50ನೇ ವಯಸ್ಸಿನಲ್ಲಿಯೇ ಶಿವಮೂರ್ತಿ ಶಿವಾಚಾರ್ಯರಿಗೆ ಉತ್ತರಾಧಿಕಾರಿಯಾಗಿ ಪರಿಚಯಿಸಿ, 60ನೇ ವಯಸ್ಸಿನಲ್ಲಿ ಪಟ್ಟ ಕಟ್ಟಿದರು. 2012ರಲ್ಲಿ ಪೀಠ ತ್ಯಜಿಸುವುದಾಗಿ ಹೇಳಿದ್ದ ಇಂದಿನ ಶ್ರೀಗಳು ಉತ್ತರಾಧಿಕಾರಿ ನೇಮಿಸಿಲ್ಲ' ಎಂದು ಆರೋಪಿಸಿದರು.

'ಈಗಿನ ಸ್ವಾಮೀಜಿಯವರು ಮುಗ್ಧ ಜನರನ್ನು ಇಟ್ಟುಕೊಂಡು ಸಮಾಜದ ವಿದ್ವತ್ತು ಉಳ್ಳವರ ಪಡೆ ಮೇಲೆಯೇ ಶಿಕ್ಷಿಸುವ ಕೆಲಸಕ್ಕೆ ಮುಂದಾಗುತ್ತಿದ್ದಾರೆ. ಸ್ವಾಮೀಜಿ ಸುಲಭವಾಗಿ ಸಂಪರ್ಕಕ್ಕೆ ಸಿಗುತ್ತಿಲ್ಲ. ಅವರನ್ನು ಕಾಣಲು ಭಕ್ತರು ದಿನವಿಡೀ ಕಾಯುವ ಸ್ಥಿತಿ ಇದೆ. ಸಾಣೇಹಳ್ಳಿ ಶ್ರೀಗಳನ್ನೂ ಕಾಯಿಸಿದ್ದ ಉದಾಹರಣೆಗಳು ಇವೆ' ಎಂದು ಆರೋಪಿಸಿದರು.

'ಮಠದ ಕಾರ್ಯಕ್ಷೇತ್ರ, ಪಟ್ಟಾಧ್ಯಕ್ಷರ ಆಯ್ಕೆ, ಆಸ್ತಿ ನಿರ್ವಹಣೆ ಕುರಿತಂತೆ ನಿಯಮಗಳನ್ನು ಕ್ರೋಡೀಕರಿಸಿದ್ದ ಹಿಂದಿನ ಜಗದ್ಗುರುಗಳು ಭಕ್ತರ ಒಪ್ಪಿಗೆ ಮೇರೆಗೆ ಸಾದು ಸದ್ಧರ್ಮ ವೀರಶೈವ ಸಂಘದ ಬೈಲಾಗಳನ್ನು 1977ರಲ್ಲಿ ನೋಂದಣಿ ಮಾಡಿಸಿದ್ದರು. ಅದರನ್ವಯ ಮಠದ ಕಾರ್ಯ ನಿರ್ವಹಿಸಲಾಗುತ್ತಿತ್ತು. ಆದರೆ ಈಗಿನ ಶ್ರೀಗಳು ತಮ್ಮ ಹೆಸರಿನಲ್ಲೇ ಟ್ರಸ್ಟ್ ಅನ್ನು ಬರೆದುಕೊಂಡು 1990ರ ಜುಲೈನಲ್ಲಿ ನೋಂದಣಿ ಮಾಡಿಸಿಕೊಂಡರು. ಇದನ್ನು ಬರೆದುಕೊಳ್ಳುವ ಪೂರ್ವದಲ್ಲಿ ಸರ್ವಸದಸ್ಯರ ಸಭೆಯಲ್ಲಿ ನಿರ್ಣಯಿಸಲಿಲ್ಲ. ಇದನ್ನು ರದ್ದುಪಡಿಸಬೇಕು' ಎಂದು ಆಗ್ರಹಿಸಿದರು.

'ಪಾಟೀಲರನ್ನು ಮಠದೊಳಕ್ಕೆ ಬಿಡಬಾರದಿತ್ತು'

'ಹಿರೇಕೆರೂರ ವ್ಯವಸಾಯ ಉತ್ಪನ್ನ ಮಾರಾಟ ಸಹಕಾರ ಸಂಘದ ಅಧ್ಯಕ್ಷ ಎಸ್.ಎಸ್. ಪಾಟೀಲ ಅವರನ್ನು ಸಾಣೇಹಳ್ಳಿ ಶ್ರೀಗಳು ಮಠದಲ್ಲಿ ಸನ್ಮಾನಿಸಿದ್ದಾರೆ. ಆದರೆ ಅವರನ್ನು ಮಠದೊಳಗೆ ಬಿಟ್ಟುಕೊಡಬಾರದಿತ್ತು' ಎಂದು ಮುಖಂಡ ಅಣಬೇರು ರಾಜಣ್ಣ ಆಕ್ಷೇಪ ವ್ಯಕ್ತಪಡಿಸಿದರು.

'ಸಾಣೇಹಳ್ಳಿಗೆ ಬಂದು ಆತ ಅವಮಾನ ಮಾಡಿದ್ದಾನೆ. ಆತನನ್ನು ಊರಿನ ಹೊರಗಡೆ ನಿಲ್ಲಿಸಬೇಕಿತ್ತು. ದೊಡ್ಡ ಸ್ವಾಮೀಜಿಗಳ (ಸಿರಿಗೆರೆ ಶ್ರೀಗಳು) ಅನುಮತಿ ಕೇಳಬೇಕಿತ್ತು' ಎಂದು ಹೇಳಿದರು.

ಶಿಕ್ಷಕರು,ಇತರೆ ಸಿಬ್ಬಂದಿಗೆ ಮಾಸ್ಕ್ ಧರಿಸುವಂತೆ ಕಟ್ಟುನಿಟ್ಟಿನ ಸೂಚನೆ • ಪೋಷಕರ ಅನುಮತಿ ಪತ್ರ ಕಡ್ಡಾಯ

ಎಲ್‌ಕೆಜಿ, ಯುಕೆಜಿ ತರಗತಿ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಪ್ರಾಥಮಿಕ ಮತ್ತು ಪೂರ್ವ ಪ್ರಾಥಮಿಕ ಶಾಲೆಗಳಲ್ಲಿ ಎಲ್‌ಕೆಜಿ ಮತ್ತು ಯುಕೆಜಿ ತರಗತಿಗಳು ಸೋಮವಾರ (ನ. 8) ಆರಂಭವಾಗಲಿವೆ.

ಕೋವಿಡ್ ದೃಢ ಪ್ರಮಾಣ ಶೇ 2ಕ್ಕಿಂತ ಕಡಿಮೆ ಇರುವ ತಾಲ್ಲೂಕುಗಳಲ್ಲಿ ಸುರಕ್ಷತಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಎಲ್‌ಕೆಜಿ, ಯುಕೆಜಿ ತರಗತಿಗಳನ್ನು ಅರ್ಧ ದಿನ ನಡೆಸಲು ರಾಜ್ಯ ಸರ್ಕಾರ ಅನುಮತಿ ನೀಡಿದೆ.

ತರಗತಿಗಳನ್ನು ಆರಂಭಿಸುವ ಮೊದಲು ಶಾಲೆಗಳಲ್ಲಿ ಸ್ವಚ್ಛತಾ ಕಾರ್ಯ ನಡೆಸಬೇಕು. ತರಗತಿಗಳಿಗೆ ಹಾಜರಾಗುವ ಮಕ್ಕಳು ಪೋಷಕರಿಂದ ಒಪ್ಪಿಗೆ ಪತ್ರ ಕಡ್ಡಾಯವಾಗಿ ತರಬೇಕು. ಪ್ರತಿ ಮಗುವಿನ ಆರೋಗ್ಯದ ಮೇಲೆ ನಿಗಾ ವಹಿಸಬೇಕು. ಮಕ್ಕಳು, ಬೋಧಕರು ಮತ್ತು ಬೋಧಕೇತರ ಸಿಬ್ಬಂದಿ ಹೊರತುಪಡಿಸಿ ಬೇರೆಯವರಿಗೆ ಶಾಲೆಯ ಆವರಣದೊಳಗೆ ಪ್ರವೇಶ ನೀಡಬಾರದು ಎಂದು ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ.

ಶಿಕ್ಷಕರಲ್ಲಿ ಮತ್ತು ಮಕ್ಕಳಲ್ಲಿ ಕೋವಿಡ್ ಸೋಂಕಿನ ಲಕ್ಷಣ ಇಲ್ಲದಿರುವುದನ್ನು ಖಚಿತಪಡಿಸಿಕೊಳ್ಳಬೇಕು. ಯಾವುದೇ ವಿದ್ಯಾರ್ಥಿಯಲ್ಲಿ ಕೋವಿಡ್ ಸೋಂಕು ಲಕ್ಷಣ ಕಂಡುಬಂದರೆ ಶಾಲೆಯನ್ನು ಮುಚ್ಚಿ, ಸ್ಯಾನಿಟೈಸ್ ಮಾಡಬೇಕು. ಸ್ಥಳೀಯ ಆರೋಗ್ಯಾಧಿಕಾರಿಯ ಮಾರ್ಗದರ್ಶನದಂತೆ ಮತ್ತೆ ಶಾಲೆಯನ್ನು ತೆರೆಯಬೇಕು ಎಂದೂ ಸೂಚಿಸಲಾಗಿದೆ.

ಶಿಕ್ಷಕರು ಮತ್ತು ಇತರೆ ಸಿಬ್ಬಂದಿ ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು. ಎರಡು ಡೋಸ್ ಲಸಿಕೆ ಹಾಕಿಸಿಕೊಂಡಿರಬೇಕು. 50 ವರ್ಷ ದಾಟಿದ ಶಿಕ್ಷಕರು ಹೆಚ್ಚುವರಿಯಾಗಿ ಫೇಸ್ ಶೀಲ್ಡ್ (ಮುಖ ಕವಚ) ಧರಿಸಬೇಕು. ಸುರಕ್ಷಿತವಾದ ಆಹಾರ ಪದಾರ್ಥ ಮತ್ತು ಶುದ್ಧ ಕುಡಿಯುವ ನೀರು ಹೊರತುಪಡಿಸಿ ಬೇರೆ ಯಾವುದೇ ಪದಾರ್ಥ, ವಸ್ತುಗಳು ಮಕ್ಕಳ ಬಾಯಿ, ಮೂಗು ಹಾಗು ಮುಖದ ಸಂಪರ್ಕಕ್ಕೆ ಬಾರದಂತೆ ಕ್ರಮ ವಹಿಸಬೇಕು ಎಂದೂ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಅನುದಾನರಹಿತ ಖಾಸಗಿ ಶಾಲೆಗಳ ಸಂಘಟನೆ (ರುಪ್ಸಾ) ಅಧ್ಯಕ್ಷ ಲೋಕೇಶ್ ತಾಳಿಕಟ್ಟೆ, 'ಎಲ್‌ಕೆಜಿ, ಯುಕೆಜಿ ತರಗತಿ ಆರಂಭಕ್ಕೆ ಸರ್ಕಾರ ಅನುಮತಿ ನೀಡಿರುವುದನ್ನು ಸ್ವಾಗತಿಸುತ್ತೇವೆ. ಚಿಣ್ಣರ ಬರುವಿಕೆಗೆ ನಾವು ಕಾಯುತ್ತಿದ್ದೇವೆ. 21 ತಿಂಗಳ ಬಳಿಕ ಮಕ್ಕಳು ಶಾಲೆಯ ಮುಖ ನೋಡುತ್ತಿದ್ದಾರೆ. ಮಕ್ಕಳಿಗೆ ಭಾಷಾ ಕಲಿಕೆಗೆ ಪ್ರಾಥಮಿಕ ತರಗತಿ ಬಹಳ ಮುಖ್ಯ' ಎಂದರು.

ತರಗತಿ ಪ್ರಾರಂಭ: ಕೋವಿಡ್ ಪರೀಕ್ಷೆ ಹೆಚ್ಚಳ

ಬೆಂಗಳೂರು: ಪ್ರಾಥಮಿಕ ಮತ್ತು ಪೂರ್ವ ಪ್ರಾಥಮಿಕ ಶಾಲೆಗಳಲ್ಲಿ ಎಲ್‌ಕೆಜಿ ಮತ್ತು ಯುಕೆಜಿ ತರಗತಿಗಳು ಸೋಮವಾರದಿಂದ ಪ್ರಾರಂಭವಾಗುತ್ತಿರುವುದರಿಂದ ಕೋವಿಡ್ ಪರೀಕ್ಷೆಗಳ ಸಂಖ್ಯೆಯನ್ನು ಹೆಚ್ಚಳ ಮಾಡಲಾಗಿದ್ದು, ಭಾನುವಾರ 1.10 ಲಕ್ಷ ಮಾದರಿಗಳನ್ನು ಪರೀಕ್ಷಿಸಲಾಗಿದೆ.

ಒಂದು ದಿನದ ಅವಧಿಯಲ್ಲಿ ನಡೆಸುವ ಕೋವಿಡ್ ಪರೀಕ್ಷೆಗಳ ಸಂಖ್ಯೆ ಈ ವಾರ 53 ಸಾವಿರಕ್ಕೆ ಇಳಿಕೆಯಾಗಿತ್ತು. ಎಲ್‌ಕೆಜಿ ಮತ್ತು ಯುಕೆಜಿ ತರಗತಿಗಳು ಪ್ರಾರಂಭ ಆಗುತ್ತಿರುವುದರಿಂದಾಗಿ ಮಕ್ಕಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಕೋವಿಡ್ ಪರೀಕ್ಷೆ ನಡೆಸಲಾಗಿದೆ.

ಹೊಸದಾಗಿ 239 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಸೋಂಕು ದೃಢ ಪ್ರಮಾಣವು ಶೇ 0.21 ರಷ್ಟು ವರದಿಯಾಗಿದೆ. ನಾಲ್ಕು ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 11 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬಾಗಲಕೋಟೆ, ಬಳ್ಳಾರಿ ಸೇರಿದಂತೆ 14 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ವರದಿಯಾಗಿಲ್ಲ.

ಬೆಂಗಳೂರಿನಲ್ಲಿ 151 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 50 ರ ಗಡಿಯೊಳಗೆ ಇವೆ. ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 29.89 ಲಕ್ಷ ದಾಟಿದೆ. ಸೋಂಕಿತರಲ್ಲಿ 322 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 29.43 ಲಕ್ಷ ದಾಟಿದೆ.

ರಾಜ್ಯ ಕೋವಿಡ್ ಅಂಕಿ–ಅಂಶ

- 29,89,952 ▲ ಒಟ್ಟು ಸೋಂಕಿತರು (29,89,713 ನಿನ್ನೆಯ ವಿವರ)
- 8,002 ▼ ಸಕ್ರಿಯ ಪ್ರಕರಣಗಳು
- 29,43,809 ▲ ಗುಣಮುಖರಾದವರು
- 38,112 ಒಟ್ಟು ಸಾವು ▲

ದಿನದ ಏರಿಕೆ

ಹೊಸ ಪ್ರಕರಣ	239	▲
ಗುಣಮುಖ	322	▲
ಸಾವು	05	—

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಸುದ್ದಿ 2 ನಿಮಿಷ

ಬೆಳಗಾವಿ: ಕೆರೆಯಲ್ಲಿ ಮುಳುಗಿ ಸಹೋದರಿಯರಿಬ್ಬರು ಸಾವು

ಬೆಳಗಾವಿ: ದೀಪಾವಳಿ ಹಬ್ಬದ ಅಂಗವಾಗಿ ಲಕ್ಷ್ಮಿಪೂಜೆಗೆ ಬಳಸಿದ್ದ ಸಾಮಗ್ರಿಗಳನ್ನು ಭಾನುವಾರ ಕೆರೆಯಲ್ಲಿ ವಿಸರ್ಜಿಸಲು ಹೋದಾಗ ಆಕಸ್ಮಿಕವಾಗಿ ಕಾಲುಜಾರಿ ನೀರಿಗೆ ಬಿದ್ದ ಮೂವರು ಸಹೋದರಿಯರ ಪೈಕಿ, ಇಬ್ಬರು ನೀರಲ್ಲಿ ಮುಳುಗಿ ಮೃತಪಟ್ಟಿದ್ದಾರೆ.

ಸಾಂಬ್ರಾ ಗ್ರಾಮದ ನೇತ್ರಾ ಕೊಳವಿ (8) ಹಾಗೂ ಪ್ರಿಯಾ ಕೊಳವಿ (6) ಮೃತರು. ಅಕ್ಕ ಸಂಧ್ಯಾ ಕೊಳವಿ ಪ್ರಾಣಾಪಾಯದಿಂದ ಪಾರಾಗಿದ್ದಾಳೆ. ಮಾರಿಹಾಳ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಈ ಬಾಲಕಿಯರ ತಂದೆ ಈರಣ್ಣ ಕೊಳವಿ ಮೂಲತಃ ಗೋಕಾಕದ ಯದ್ದಲಗುಡ್ಡದವರು. ಕಾರವಾರದಲ್ಲಿ ಭಾರತೀಯ ಸೇನೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

₹ 1.91 ಲಕ್ಷಕ್ಕೆ ಟಗರು ಮಾರಾಟ



ಮಳವಳ್ಳಿ (ಮಂಡ್ಯ): ಸಾಮಾನ್ಯವಾಗಿ ಬಂಡೂರು ತಳಿಯ ಟಗರು ₹ 25 ರಿಂದ 30 ಸಾವಿರಕ್ಕೆ ಮಾರಾಟವಾಗುತ್ತದೆ. ಆದರೆ, ಮಳವಳ್ಳಿ ತಾಲ್ಲೂಕಿನ ದೇವಿಪುರ ಗ್ರಾಮದಲ್ಲಿ ರೈತರೊಬ್ಬರು ಸಾಕಿದ ಟಗರು ₹ 1.91 ಲಕ್ಷಕ್ಕೆ ಮಾರಾಟವಾಗಿದೆ.

ಗ್ರಾಮದ ರೈತ ಸಣ್ಣಪ್ಪ ಅವರು ಬಂಡೂರು ತಳಿಯ ಟಗರನ್ನು ಮಂಡ್ಯ ತಾಲ್ಲೂಕಿನ ಬಿದರಕೋಟೆಯ ರೈತ ಕೃಷ್ಣೇಗೌಡ ಅವರಿಗೆ ಮಾರಾಟ ಮಾಡಿದ್ದಾರೆ. ಎರಡು ವರ್ಷಗಳ ಹಿಂದೆ ಮದ್ದೂರು ತಾಲ್ಲೂಕಿನ ವಳಗೆರೆಹಳ್ಳಿ ಗ್ರಾಮದ ಸೋಮಣ್ಣ ಅವರ ಬಳಿ ₹1.05 ಲಕ್ಷ ನೀಡಿ ಈ ಟಗರನ್ನು ಸಣ್ಣಪ್ಪ ಖರೀದಿಸಿದ್ದರು. ವಿಶೇಷ ಕಾಳಜಿಯಿಂದ ಸಾಕಿದ್ದ ಅವರು, ಈ ಟಗರನ್ನು ತಳಿ ಅಭಿವೃದ್ಧಿಗೆ ಬಳಸಿದ್ದರು.

ಅತಿ ಹೆಚ್ಚು ಬೆಲೆಗೆ ಮಾರಾಟವಾದ ಕಾರಣ ಟಗರಿಗೆ ವಿಶೇಷ ಪೂಜೆ ಮಾಡಿ ಸಣ್ಣಪ್ಪ ಹಾಗೂ ಕೃಷ್ಣೇಗೌಡ ಅವರನ್ನು ಕಳಶದೊಂದಿಗೆ ದೇವಿಪುರ ಗ್ರಾಮ ಸೇರಿದಂತೆ ಸುತ್ತಲಿನ ಐದಾರು ಗ್ರಾಮಗಳಲ್ಲಿ ತಮಟೆ, ನಗಾರಿಗಳೊಂದಿಗೆ ಮೆರವಣಿಗೆ ಮಾಡಲಾಯಿತು. ನೂರಾರು ಮಂದಿ ಈ ಟಗರನ್ನು ನೋಡಲು ಮುಗಿಬಿದ್ದರು.

ಇಳಂತಿಲದಲ್ಲಿ 5 ಗ್ರೆನೇಡ್ ಪತ್ತೆ

ಉಪ್ಪಿನಂಗಡಿ: ಇಲ್ಲಿಗೆ ಸಮೀಪದ ಇಳಂತಿಲ ಎಂಬಲ್ಲಿ, ನಿವೃತ್ತ ಸೈನಿಕ ಜಯಕುಮಾರ್ ಪೂಜಾರಿ ಎಂಬುವರ ಮನೆಗೆ ಹೋಗುವ ದಾರಿಯಲ್ಲಿ ಐದು ಗ್ರೆನೇಡ್‌ಗಳು ಪತ್ತೆಯಾಗಿದ್ದು, ಇವುಗಳನ್ನು ವಶಕ್ಕೆ ಪಡೆದಿರುವ ಪೊಲೀಸರು, ಗ್ರೆನೇಡ್ ಮೂಲದ ಬಗ್ಗೆ ತನಿಖೆ ಆರಂಭಿಸಿದ್ದಾರೆ.



ಉಪ್ಪಿನಂಗಡಿ ಸಮೀಪ ಇಳಂತಿಲ ಎಂಬಲ್ಲಿ ಪತ್ತೆಯಾದ ಗ್ರೆನೇಡ್

ತಮ್ಮ ಮನೆಯ ಸಮೀಪ ಪ್ಲಾಸ್ಟಿಕ್ ಚೀಲವೊಂದರಲ್ಲಿ ಒಂದು ಮತ್ತು ರಸ್ತೆಯಲ್ಲಿ ನಾಲ್ಕು ಗ್ರೆನೇಡ್‌ಗಳು ಬಿದ್ದಿರುವುದನ್ನು ಗಮನಿಸಿದ ಜಯಕುಮಾರ್ ಪೂಜಾರಿ, ಶನಿವಾರ ಸಂಜೆ ಪೊಲೀಸರಿಗೆ ಮಾಹಿತಿ ನೀಡಿದ್ದರು. ಘಟನಾ ಸ್ಥಳಕ್ಕೆ ಭೇಟಿ ನೀಡಿದ ಉಪ್ಪಿನಂಗಡಿ ಠಾಣೆ ಪೊಲೀಸರು, ಬಾಂಬ್ ನಿಷ್ಕ್ರಿಯ ದಳದ ಸಹಾಯದೊಂದಿಗೆ ಗ್ರೆನೇಡ್‌ಗಳನ್ನು ವಶಕ್ಕೆ ಪಡೆದರು.

'ಪತ್ತೆಯಾಗಿರುವ ಗ್ರೆನೇಡ್‌ಗಳು ಸೇನೆಯಲ್ಲಿ ಬಳಸುವಂಥವು. ನೆರೆಮನೆಯ ವ್ಯಕ್ತಿಯೇ ಇದನ್ನು ದಾರಿಯಲ್ಲಿ ತಂದಿಟ್ಟಿರಬಹುದು ಎಂಬ ಸಂದೇಹ ಇದೆ' ಎಂದು ಜಯಕುಮಾರ್ ಪೂಜಾರಿ ಸ್ಥಳಕ್ಕೆ ಭೇಟಿ ನೀಡಿದ ಮಾಧ್ಯಮದವರಿಗೆ ಪ್ರತಿಕ್ರಿಯಿಸಿದರು.

ಜಯಕುಮಾರ್ ಅವರು ಸೇನೆಯ ಮದ್ರಾಸ್ ರೆಜಿಮೆಂಟ್‌ನಲ್ಲಿ 24 ವರ್ಷ ಸೇವೆ ಸಲ್ಲಿಸಿ, 2001ರಲ್ಲಿ ನಿವೃತ್ತಿ ಹೊಂದಿದ್ದರು. ಸದ್ಯ ಕೃಷಿಕರಾಗಿದ್ದು, ತಮ್ಮ ಕೃಷಿ ಭೂಮಿಗೆ ಹೊಂದಿಕೊಂಡ ಜಾಗದ ಮಾಲೀಕರ ಜತೆಗೆ ಜಗಳ ಮಾಡಿಕೊಂಡಿದ್ದರು.

'ಪತ್ತೆಯಾದ ಗ್ರೆನೇಡ್ ಪರಿಶೀಲಿಸಿ, ಅದು ಸೇನೆಯ ಯಾವ ರೆಜಿಮೆಂಟಿಗೆ ಸರಬರಾಜು ಆಗಿತ್ತು ಎನ್ನುವುದನ್ನು ತಿಳಿಯುವ ಸಲುವಾಗಿ ಪೊಲೀಸ್ ಇಲಾಖೆಯಿಂದ ಸೇನಾ ವಿಭಾಗವನ್ನು ಸಂಪರ್ಕಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

'ಈ ಗ್ರೆನೇಡ್‌ಗಳು ಇಲ್ಲಿಗೆ ಹೇಗೆ ಬಂದವು ಎಂಬುದರ ಬಗ್ಗರ ತನಿಖೆ ಆರಂಭಿಸಲಾಗಿದೆ' ಎಂದು ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಋಷಿಕೇಶ್ ಸೊನಾವಣೆ ಮಾಧ್ಯಮ ಪ್ರತಿನಿಧಿಗಳಿಗೆ ತಿಳಿಸಿದ್ದಾರೆ.



ಅಂಗನವಾಡಿ ಪುನರಾರಂಭ

ಅಂಗನವಾಡಿ ಕೇಂದ್ರಗಳು ಸೋಮವಾರದಿಂದ ಪುನರಾರಂಭವಾಗುತ್ತಿರುವುದರಿಂದ ಕಲಬುರಗಿಯ ಆಳಂದ ಕಾಲೊನಿಯಲ್ಲಿ ಭಾನುವಾರ ಸಿಬ್ಬಂದಿ ಸಿದ್ಧತೆಯಲ್ಲಿ ತೊಡಗಿದ್ದರು

ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಹೋರಿ ತಿವಿದು ಯುವಕ ಸಾವು

ಪ್ರಜಾವಾಣಿ ವಾರ್ತೆ

ಶಿಕಾರಿಪುರ: ದೀಪಾವಳಿ ಹಬ್ಬದ ಪ್ರಯುಕ್ತ ಪಟ್ಟಣದಲ್ಲಿ ಭಾನುವಾರ ನಡೆದ ಹೋರಿ ಹಬ್ಬದಲ್ಲಿ ಯುವಕನ ದೇಹಕ್ಕೆ ಹೋರಿ ಕೊಂಬಿನಿಂದ ತಿವಿದ ಪರಿಣಾಮ ಯುವಕ ಮೃತಪಟ್ಟಿದ್ದಾನೆ.

ಹೊನ್ನಾಳಿ ತಾಲ್ಲೂಕಿನ ಎಚ್. ಕಡದಕಟ್ಟೆ ಗ್ರಾಮದ ನಿವಾಸಿ ರಾಕೇಶ್ (25) ಮೃತ ಯುವಕ ಎಂದು ತಿಳಿದು ಬಂದಿದೆ. ಯುವಕನ ಸಾವಿಗೆ ಸಂಬಂಧಿಸಿದಂತೆ ಪಟ್ಟಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

'ಉಪ ಚುನಾವಣೆ ಫಲಿತಾಂಶದ ಚರ್ಚೆ ಆಗಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪಕ್ಷದ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ರಾಜ್ಯದ ಎರಡು ಕ್ಷೇತ್ರಗಳ ಉಪ ಚುನಾವಣೆ ಫಲಿತಾಂಶದ ಬಗ್ಗೆ ಯಾವುದೇ ಚರ್ಚೆ ಆಗಿಲ್ಲ' ಎಂದು ಕಂದಾಯ ಸಚಿವ ಆರ್. ಅಶೋಕ ಹೇಳಿದರು.

ಭಾನುವಾರ ನಡೆದ ಕಾರ್ಯಕಾರಿಣಿಯಲ್ಲಿ ವರ್ಚುವಲ್ ಮೂಲಕ ಭಾಗವಹಿಸಿದ ಬಳಿಕ ಮಾತನಾಡಿದ ಅವರು, 'ಕಾರ್ಯಕಾರಿಣಿಯಲ್ಲಿ ಒಟ್ಟು 338 ಮಂದಿ ಭಾಗವಹಿಸಿದ್ದರು. ರಾಜ್ಯದಿಂದ ಹದಿನೇಳು ಜನರು ಭಾಗವಹಿಸಿದ್ದೇವೆ' ಎಂದರು.

'ಕೋವಿಡ್ ಎರಡನೇ ಡೋಸ್ ದೇಶದ ಎಲ್ಲ ಜನರಿಗೂ ತಲುಪಿಸುವಂತೆ ಪ್ರಧಾನಿ ಸೂಚಿಸಿದರು. ಕಾರ್ಯಕರ್ತರ ಸೇವಾ ಕಾರ್ಯಕ್ಕೆ ಅವರು ಮೆಚ್ಚುಗೆ ವ್ಯಕ್ತಪಡಿಸಿದರು' ಎಂದರು.

'ಕೇಂದ್ರ ಸರ್ಕಾರದ ಸಾಧನೆಗಳನ್ನು ಜನರಿಗೆ ತಲುಪಿಸುವಂತೆ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಸೂಚಿಸಿದರು. ಕಾರ್ಯಕಾರಿಣಿಯಲ್ಲಿ ಪುನೀತ್ ರಾಜ್‌ಕುಮಾರ್, ಸಿ.ಎಂ. ಉದಾಸಿ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು' ಎಂದೂ ಅಶೋಕ ತಿಳಿಸಿದರು.

ಅವನತಿಯ ಸ್ಥಿತಿಯಲ್ಲಿ ಕಾಂಗ್ರೆಸ್: 'ಹಾನಗಲ್ ಗೆಲುವನ್ನೇ ದೊಡ್ಡ ಗೆಲುವು ಎಂದು ಕಾಂಗ್ರೆಸ್ ಬೀಗುತ್ತಿದೆ. ಇಡೀ ದೇಶದಲ್ಲಿ ಕಾಂಗ್ರೆಸ್ ಅವನತಿಯ ಸ್ಥಿತಿಯಲ್ಲಿದೆ. ಕಲಬುರಗಿ ಮಹಾನಗರ ಪಾಲಿಕೆಯಲ್ಲಿ ಅವರು ಸೋತಿದ್ದಾರೆ. ದೊಡ್ಡಬಳ್ಳಾಪುರದಲ್ಲಿ ಅವರದೇ ಪಕ್ಷದ ಶಾಸಕರಿದ್ದರೂ ಯಾಕೆ ಠೇವಣಿ ಕಳೆದುಕೊಂಡರು. ಬೆಳಗಾವಿಯಲ್ಲಿ ಯಾಕೆ ಸೋತರು. ಈ ಬಗ್ಗೆ ಕಾಂಗ್ರೆಸ್‌ನವರು ಮೊದಲು ಸಮಾಲೋಚನೆ ಮಾಡಿಕೊಳ್ಳಲಿ' ಎಂದು ಅಶೋಕ ಸಲಹೆ ನೀಡಿದರು.

'ಹಾನಗಲ್‌ನಲ್ಲಿ ನಾವು ಸುಲಭವಾಗಿ ಗೆಲ್ಲುತ್ತಿರಲಿಲ್ಲ. ಬಹಳ ಕಡಿಮೆ ಅಂತರದಲ್ಲಿಯೇ ನಾವು ಗೆಲ್ಲುತ್ತಿದ್ದೆವು. ಮುಂದೆ ಹಾನಗಲ್ ಗೆದ್ದೇ ಗೆಲ್ಲುತ್ತೇವೆ' ಎಂದೂ ಅವರು ವಿಶ್ವಾಸ ವ್ಯಕ್ತಪಡಿಸಿದರು.

'ಪಕ್ಷ ಬಲವರ್ಧನೆಗಾಗಿ ಜನಸ್ವರಾಜ್ ಸಮಾವೇಶ'

ಬೆಂಗಳೂರು: 'ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್‌ನ 25 ಸ್ಥಾನಗಳಿಗೆ ಜನವರಿಯಲ್ಲಿ ಚುನಾವಣೆ ನಡೆಯಲಿದ್ದು, ಪಕ್ಷದ ಬಲವರ್ಧನೆಗಾಗಿ ಇದೇ 19 ರಿಂದ 23ರವರೆಗೆ ಜನಸ್ವರಾಜ್ ಸಮಾವೇಶ ಹಮ್ಮಿಕೊಳ್ಳಲಾಗಿದೆ' ಎಂದು ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಎನ್. ರವಿಕುಮಾರ್ ತಿಳಿಸಿದರು.



ರವಿಕುಮಾರ್

ಸುದ್ದಿಗೋಷ್ಠಿಯಲ್ಲಿ ಭಾನುವಾರ ಮಾತನಾಡಿದ ಅವರು, 'ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್‌ಗೆ ನಡೆಯಲಿರುವ ಚುನಾವಣೆಯಲ್ಲಿ ಹೆಚ್ಚು ಸ್ಥಾನಗಳನ್ನು ಬಿಜೆಪಿ ಗೆಲ್ಲಬೇಕಿದೆ. ಕಳೆದ ಬಾರಿ 7 ಸ್ಥಾನಗಳನ್ನು ಪಕ್ಷ ಗೆದ್ದಿತ್ತು' ಎಂದರು.

'ಬಿ.ಎಸ್. ಯಡಿಯೂರಪ್ಪ, ನಳಿನ್‌ಕುಮಾರ್ ಕಟೀಲ್, ಜಗದೀಶ ಶೆಟ್ಟರ್ ಮತ್ತು ಕೆ.ಎಸ್. ಈಶ್ವರಪ್ಪ ನೇತೃತ್ವದಲ್ಲಿ ನಾಲ್ಕು ಪ್ರತ್ಯೇಕ ತಂಡಗಳು ಜಿಲ್ಲೆಗಳಲ್ಲಿ ಪ್ರವಾಸ ಮಾಡಲಿದೆ. ಒಂದು ತಂಡ ದಿನಕ್ಕೆ ಎರಡು ಸಮಾವೇಶಗಳನ್ನು ಮಾಡಲಿದೆ. ಮೊದಲ ಸಮಾವೇಶದಲ್ಲಿ ನಾಲ್ಕೂ ತಂಡಗಳು ಗ್ರಾಮ ಪಂಚಾಯಿತಿ ಸದಸ್ಯರ ಮನೆಗೆ ಭೇಟಿ ನೀಡಿ, ಉಪಾಹಾರ ಸೇವಿಸಿ ಸಮಾವೇಶಕ್ಕೆ ಚಾಲನೆ ನೀಡಲಿವೆ' ಎಂದರು.

'ಪರಿಷತ್ ಚುನಾವಣೆಗೆ ಯಾರೆಲ್ಲ ಅಭ್ಯರ್ಥಿಗಳು ಎಂಬುವುದನ್ನು ಪಕ್ಷದ ರಾಜ್ಯ ಕಚೇರಿಯಲ್ಲಿ ಸಭೆ ನಡೆಸಿ ತೀರ್ಮಾನಿಸಲಾಗುವುದು. ಅಭ್ಯರ್ಥಿ ಪಟ್ಟಿಯನ್ನು ವರಿಷ್ಠರು ಅಂತಿಮಗೊಳಿಸಲಿದ್ದಾರೆ' ಎಂದೂ ಅವರು ವಿವರಿಸಿದರು.

'ಯಾರೂ ಬೇಕಾದರು ಪಕ್ಷಕ್ಕೆ ಬರಬಹುದು. ಬರುವವರು ಅರ್ಜಿ ಹಾಕಲಿ, ಬಳಿಕ ಪ್ರಮುಖರ ಸಭೆಯಲ್ಲಿ ಚರ್ಚೆ ಮಾಡುತ್ತೇವೆ. ಟಿಕೆಟ್ ನೀಡುವ ನಿರ್ಧಾರವನ್ನು ಹೈಕಮಾಂಡ್ ಮಾಡಲಿದೆ. ಮೈಸೂರಿನಲ್ಲಿ ಸಂದೇಶ ನಾಗರಾಜ್ ಅವರು ಬಿಜೆಪಿ ಟಿಕೆಟ್‌ಗೆ ಅರ್ಜಿ ಹಾಕಿದ್ದಾರೆ. ಪಕ್ಷಕ್ಕೆ ಬರುವುದಾಗಿ ಹೇಳಿದ್ದಾರೆ. ಸಿ.ಆರ್. ಮನೋಹರ್ ಕೂಡ ಪಕ್ಷಕ್ಕೆ ಬರುವ ಬಗ್ಗೆ ಚರ್ಚೆ ನಡೆಯುತ್ತಿದೆ' ಎಂದರು.

ಡಿವಿಎಸ್ ಬದಲು ಈಶ್ವರಪ್ಪಗೆ ನೇತೃತ್ವ

ರಾಜ್ಯ ಬಿಜೆಪಿ ನಾಯಕರ ಪ್ರವಾಸದ ಪಟ್ಟಿಯಿಂದ ಡಿ.ವಿ. ಸದಾನಂದ ಗೌಡರ ಬದಲು ಕೆ.ಎಸ್. ಈಶ್ವರಪ್ಪ ಅವರಿಗೆ ಸ್ಥಾನ ನೀಡಲಾಗಿದೆ. ಮಾಜಿ ಮುಖ್ಯಮಂತ್ರಿಗಳಾದ ಯಡಿಯೂರಪ್ಪ, ಜಗದೀಶ ಶೆಟ್ಟರ್, ಸದಾನಂದಗೌಡ ಮತ್ತು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ನೇತೃತ್ವದಲ್ಲಿ ಪ್ರವಾಸಕ್ಕೆ ತಯಾರಿ ನಡೆದಿತ್ತು. ಆದರೆ, ಇದೀಗ ಸದಾನಂದಗೌಡ ಅವರನ್ನು ಕೈಬಿಡಲಾಗಿದೆ. ಈ ವಿಷಯ ಪಕ್ಷದ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ.

ರಾಜ್ಯದಿಂದ ಸಂಸದ ಡಿ.ವಿ. ಸದಾನಂದ ಗೌಡ ಅವರನ್ನು ಹೊರತುಪಡಿಸಿ ಉಳಿದ ಎಲ್ಲರೂ ಕಾರ್ಯಕಾರಿಣಿಯಲ್ಲಿ ಭಾಗವಹಿಸಿದ್ದರು.

ಕುತೂಹಲ ಮೂಡಿಸಿದ ಬೊಮ್ಮಾಯಿ– ಮುಕುಂದ ಭೇಟಿ

ಬೆಂಗಳೂರು: ಭಾನುವಾರ ಬೆಳಿಗ್ಗೆ ಬಿಜೆಪಿ ಕಾರ್ಯಕಾರಿಣಿ ಆರಂಭಕ್ಕೂ ಮೊದಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಆರೆಸ್ಸೆಸ್ ಸಹ ಸರಕಾರ್ಯವಾಹ ಮುಕುಂದ ಸಿ.ಆರ್ ಅವರು ಭೇಟಿ ಮಾಡಿ ಚರ್ಚೆ ನಡೆಸಿದರು.

ರೇಸ್‌ಕೋರ್ಸ್ ರಸ್ತೆಯಲ್ಲಿರುವ ಮುಖ್ಯಮಂತ್ರಿಯ ಸರ್ಕಾರಿ ನಿವಾಸದಲ್ಲಿ ನಡೆದ ಈ ಇಬ್ಬರ ಭೇಟಿ ಬಿಜೆಪಿ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ. ಧಾರವಾಡದಲ್ಲಿ ಇತ್ತೀಚೆಗೆ ಆರೆಸ್ಸೆಸ್ ರಾಷ್ಟ್ರೀಯ ಕಾರ್ಯಕಾರಿ ಬೈಠಕ್‌ನಲ್ಲಿ ನಡೆದಿತ್ತು. ಬಳಿಕ, ಮುಕುಂದ ಅವರು ಬೊಮ್ಮಾಯಿ ಅವರನ್ನು ಭೇಟಿ ಮಾಡಿದ್ದಾರೆ.

ಬಿಟ್ ಕಾಯಿನ್ ಹಗರಣ, ಈ ಹಗರಣದಲ್ಲಿ ಪ್ರಭಾವಿಗಳು, ಪ್ರಭಾವಿಗಳ ಮಕ್ಕಳು ಭಾಗಿಯಾಗಿದ್ದಾರೆಂಬ ಕಾಂಗ್ರೆಸ್ ಆರೋಪ, ಪ್ರಕರಣದ ಕುರಿತು ಜಾರಿ ನಿರ್ದೇಶನಾಲಯಕ್ಕೆ ರಾಜ್ಯ ಸರ್ಕಾರ ಪತ್ರ ಬರೆದಿದೆ ಎಂಬ ಮುಖ್ಯಮಂತ್ರಿ ಹೇಳಿಕೆ ನಡುವೆಯೇ ನಡೆದ ಭೇಟಿ ರಾಜಕೀಯವಾಗಿಯೂ ಕುತೂಹಲ ಮೂಡಿಸಿದೆ.

ಉಪಾಹಾರ ಸೇವನೆಯ ಜೊತೆಗೆ ಇಬ್ಬರೂ 20 ನಿಮಿಷಕ್ಕೂ ಹೆಚ್ಚು ಕಾಲ ಮಾತುಕತೆ ನಡೆಸಿದರು. ಉಪ ಚುನಾವಣೆಯ ಫಲಿತಾಂಶವೂ ಸೇರಿದಂತೆ ಪ್ರಸಕ್ತ ರಾಜಕೀಯ ವಿದ್ಯಮಾನಗಳ ಬಗ್ಗೆ ಇಬ್ಬರೂ ಚರ್ಚೆ ನಡೆಸಿದರು ಎಂದು ಮುಖ್ಯಮಂತ್ರಿಯ ಆಪ್ತ ಮೂಲಗಳು ಹೇಳಿವೆ.

ಕನ್ನಡ ಮಾಧ್ಯಮದಲ್ಲಿ ಅಧ್ಯಯನಕ್ಕೆ ಪ್ರಮಾಣಪತ್ರ

ಬೆಂಗಳೂರು: 'ಕೇರಳದ ಕಾಸರಗೋಡು ಮತ್ತು ಮಂಜೇಶ್ವರ ತಾಲ್ಲೂಕುಗಳಲ್ಲಿ ಒಂದರಿಂದ ಹತ್ತನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ಅಧ್ಯಯನ ಮಾಡಿದವರಿಗೆ 'ಗಡಿ ನಾಡು ಕನ್ನಡಿಗ' ಎಂಬ ಪ್ರಮಾಣಪತ್ರ ನೀಡಲಾಗುವುದು' ಎಂದು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ತಿಳಿಸಿದೆ.

ಈ ಸಂಬಂಧ ಪ್ರಾಧಿಕಾರದ ಅಧ್ಯಕ್ಷರಾದ ಸಿ. ಸೋಮಶೇಖರ್ ಅವರು ಅಲ್ಲಿನ ಜಿಲ್ಲಾಧಿಕಾರಿ ಭಂಡಾರಿ ಸ್ವಾಗತ್ ರಣವೀರ್ ಚಂದ್ ಅವರನ್ನು ಸಂಪರ್ಕಿಸಿ, ಚರ್ಚಿಸಿದ್ದಾರೆ. ಇದರಿಂದಾಗಿ 'ಗಡಿ ನಾಡು ಕನ್ನಡಿಗ' ಪ್ರಮಾಣಪತ್ರ ನೀಡುವಂತೆ ತಹಶೀಲ್ದಾರರಿಗೆ ಜಿಲ್ಲಾಧಿಕಾರಿ ಸೂಚಿಸಿದ್ದಾರೆ.

ಕಾಸರಗೋಡು ಮತ್ತು ಮಂಜೇಶ್ವರ ತಾಲ್ಲೂಕುಗಳಲ್ಲಿ ಒಂದರಿಂದ ಹತ್ತನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ಓದಿದ ಎಲ್ಲ ವಿದ್ಯಾರ್ಥಿಗಳಿಗೆ ಈ ಹಿಂದೆ 'ಗಡಿ ನಾಡು ಕನ್ನಡಿಗ' ಎಂಬ ಪ್ರಮಾಣಪತ್ರವನ್ನು ತಹಶೀಲ್ದಾರರು ನೀಡುತ್ತಿದ್ದರು. ಕೆಲವು ದಿನಗಳಿಂದ ಕನ್ನಡ ಮಾಧ್ಯಮದಲ್ಲಿ ಕಲಿತ ಮಲಯಾಳಿ ಮಾತೃಭಾಷೆಯ ವಿದ್ಯಾರ್ಥಿಗಳಿಗೆ ಈ ಪ್ರಮಾಣಪತ್ರ ನೀಡಲು ಅಲ್ಲಿನ ತಹಶೀಲ್ದಾರ್ ನಿರಾಕರಿಸುತ್ತಿದ್ದರು.

ಕೇವಲ ಕನ್ನಡ, ತುಳು ಮತ್ತು ಕೊಡವ ಭಾಷೆಯನ್ನು ಮಾತೃ ಭಾಷೆಯನ್ನಾಗಿ ಹೊಂದಿದವರಿಗೆ ಮಾತ್ರ 'ಗಡಿ ನಾಡ ಕನ್ನಡಿಗರು' ಎಂದು ವ್ಯಾಖ್ಯಾನಿಸುವುದು ಸರಿಯಲ್ಲ. ಕನ್ನಡ ಮಾಧ್ಯಮದಲ್ಲಿ ಕಲಿತ ಎಲ್ಲ ವಿದ್ಯಾರ್ಥಿಗಳಿಗೆ 'ಗಡಿ ನಾಡು ಕನ್ನಡಿಗ' ಎಂಬ ಪ್ರಮಾಣಪತ್ರವನ್ನು ನೀಡಬೇಕು ಎಂದು ಸಿ. ಸೋಮಶೇಖರ್ ಆಗ್ರಹಿಸಿದ್ದರು. ಇದಕ್ಕೆ ಅಲ್ಲಿನ ಜಿಲ್ಲಾಧಿಕಾರಿ ಸ್ಪಂದಿಸಿದ್ದಾರೆ.

ಪ್ರಕಾಶ್ ಮಂಚಾಲೆಗೆ ರಾಷ್ಟ್ರ ಪ್ರಶಸ್ತಿ

ತ್ಯಾಗರ್ತಿ: ಸಾಗರ ತಾಲ್ಲೂಕಿನ ಉಳ್ಳೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮಂಚಾಲೆ ಗ್ರಾಮದ ಪ್ರಕಾಶ್ ಅವರಿಗೆ 'ಸಸ್ಯ ಸಂರಕ್ಷಣೆ ಹಾಗೂ ಸಂವರ್ಧನೆ'ಗೆ ರಾಷ್ಟ್ರ ಪ್ರಶಸ್ತಿ ಲಭಿಸಿದೆ.



ಮಂಚಾಲೆ

ರಾಷ್ಟ್ರವ್ಯಾಪಿಯಲ್ಲಿ 5 ಜನರಿಗೆ ಈ ಪ್ರಶಸ್ತಿ ದೊರೆತಿದ್ದು, ಶಿವಮೊಗ್ಗ ಜಿಲ್ಲೆಯ ಪ್ರಕಾಶ್ ಅವರು ಆಯುರ್ವೇದ ಸಸ್ಯಗಳ ಅಭಿವೃದ್ಧಿ ಹಾಗೂ ಸಂರಕ್ಷಣೆ, ದೀರ್ಘಾವಧಿ ಬೆಳೆಯಲ್ಲಿ ಮಿಶ್ರ ಬೆಳೆಯಾಗಿ ಗಿಡಮೂಲಿಕೆ ಸಸ್ಯಗಳನ್ನು ಬೆಳೆದು ಮಾದರಿಯಾಗಿದ್ದಾರೆ. ಕೇಂದ್ರ ಸರ್ಕಾರದ ಸಸ್ಯ ಸಂರಕ್ಷಣೆ ರೈತ ಹಕ್ಕು ಪ್ರಾಧಿಕಾರವು ಪ್ರಕಾಶ್ ಅವರ ಶ್ರಮವನ್ನು ಗುರುತಿಸಿ ರಾಷ್ಟ್ರ ಪ್ರಶಸ್ತಿಗೆ ಆಯ್ಕೆ ಮಾಡಿದೆ.

ಪ್ರಕಾಶ್ ಮಂಚಾಲೆಯವರಿಗೆ 2018 ರಲ್ಲಿ ಹವ್ಯಕ ಸಮಾಜದಿಂದ ಕೃಷಿರತ್ನ ಪ್ರಶಸ್ತಿ ದೊರೆತಿದೆ. ರಾಜ್ಯೋತ್ಸವ ಪ್ರಶಸ್ತಿ, ಉತ್ತಮ ಕೃಷಿಕ ಪ್ರಶಸ್ತಿ, ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಹಲವು ಪ್ರಶಸ್ತಿಗಳು ಲಭಿಸಿವೆ. ಕಾಡುಕೃಷಿಯಲ್ಲಿಯೂ ಇವರ ಸಾಧನೆ ಗಮನಾರ್ಹ. ಕರ್ನಾಟಕ ರಾಜ್ಯ ಗಿಡಮೂಲಿಕಾ ಪ್ರಾಧಿಕಾರದ ಕಾರ್ಯನಿರ್ವಾಹಕ ಅಧಿಕಾರಿಗಳು ಈ ಹಿಂದೆ ಇವರ ಔಷಧವನಕ್ಕೆ ಭೇಟಿ ನೀಡಿದ್ದರು.

'ರಾಷ್ಟ್ರಮಟ್ಟದಲ್ಲಿ ಗುರುತಿಸಿರುವುದು ಸಂತೋಷ ತಂದಿದೆ. ಹಲವು ರೈತರು ಎಲೆಮರೆಯ ಕಾಯಿಯಂತೆ ಇಂತಹ ಕಾರ್ಯಗಳಲ್ಲಿ ತೊಡಗಿಕೊಂಡಿದ್ದರೂ ಬೆಳಕಿಗೆ ಬಾರದೆ ಶ್ರಮ ವ್ಯರ್ಥವಾಗುತ್ತಿದೆ' ಎಂದು ಮಂಚಾಲೆ ತಿಳಿಸಿದರು.



ಹೊಸದುರ್ಗ ತಾಲ್ಲೂಕಿನ ಸಾಣೇಹಳ್ಳಿ ತರಳಬಾಳು ಶಾಖಾ ಮಠದ ಶಿವಕುಮಾರ ಬಯಲು ರಂಗಮಂದಿರದಲ್ಲಿ ಭಾನುವಾರ ಸಂಜೆ ನಡೆದ ಶಿವಸಂಚಾರ ನಾಟಕೋತ್ಸವ ಬೆಳ್ಳಿಹಬ್ಬದ ಸಮಾರೋಪ ಸಮಾರಂಭದಲ್ಲಿ ನಟ, ರಂಗ ಸಂಘಟಕ, ನಿರ್ದೇಶಕ ಕೆ.ವಿ. ನಾಗರಾಜಮೂರ್ತಿ ಅವರಿಗೆ 'ಶ್ರೀ ಶಿವಕುಮಾರ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಪ್ರಶಸ್ತಿಯು ₹ 50,000 ನಗದು ಹಾಗೂ ಪ್ರಶಸ್ತಿ ಪತ್ರ ಒಳಗೊಂಡಿದೆ. ಮಾಜಿ ಸಚಿವೆ ಲೀಲಾದೇವಿ ಆರ್.ಪ್ರಸಾದ್, ಸಾಹಿತಿ ಗೊ.ರು. ಚನ್ನಬಸಪ್ಪ, ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಶಾಸಕರಾದ ಗೂಳಿಹಟ್ಟಿ ಡಿ.ಶೇಖರ್, ಎಂ.ಚಂದ್ರಪ್ಪ, ಎಸ್.ವಿ. ರಾಮಚಂದ್ರಪ್ಪ, ರಂಗಕರ್ಮಿ ಶ್ರೀನಿವಾಸ ಜಿ.ಕಪ್ಪಣ್ಣ, ಜಯರಾಂ ರಾಯಪುರ ಇದ್ದರು.

ಒಳನೋಟ

'ಗಾಯದ ಮೇಲೆ ಬರೆ'

ಬೆಂಗಳೂರು: 'ಗಾಯದ ಮೇಲೆ ಬರೆ' ಶೀರ್ಷಿಕೆಯಡಿ 'ಪ್ರಜಾವಾಣಿ'ಯಲ್ಲಿ ಭಾನುವಾರ (ನ.7) ಪ್ರಕಟವಾದ 'ಒಳನೋಟ' ವರದಿಗೆ ರಾಜ್ಯದಾದ್ಯಂತ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

ರೈತರಿಗೆ ಕಾಯ್ದೆಗಳ ಅರಿವಿಲ್ಲ



ಆಡಳಿತ ನಡೆಸುವವರು ಕಾಯ್ದೆಗಳ ಬಗ್ಗೆ ಸಮರ್ಥನೆ ಮಾಡಿಕೊಳ್ಳುತ್ತಾರೆ. ಆದರೆ, ರೈತರಿಗೆ ಈ ಕಾಯ್ದೆಗಳ ಬಗ್ಗೆ ಅರಿವೇ ಇರುವುದಿಲ್ಲ. ಹೊಸ ಕಾಯ್ದೆಯ ಸಾಧಕ- ಬಾಧಕಗಳ ಬಗ್ಗೆ ಪ್ರತಿ ಗ್ರಾಮದಲ್ಲಿ ಚರ್ಚಿಸಿ, ರೈತರಿಂದ ಅಭಿಪ್ರಾಯ ಸಂಗ್ರಹಿಸಿ ಕಾಯ್ದೆ ರೂಪಿಸಿದ್ದರೆ ಸೂಕ್ತವಾಗುತ್ತಿತ್ತು. ರೈತಾಪಿ ದೇಶದಲ್ಲಿ ಈಗಲೂ ಶೇ 70ರಷ್ಟು ಮಂದಿ ಕೃಷಿಯನ್ನು ಅವಲಂಬಿಸಿದ್ದಾರೆ. ಆದರೆ, ರೈತರಿಗೆ ಕಾಯ್ದೆಗಳ ಅರಿವಿಲ್ಲದಿರುವುದು ಅದಕ್ಷ ಆಡಳಿತಕ್ಕೆ ಸೂಕ್ತ ನಿದರ್ಶನ ಎನ್ನಬಹುದು.

ಆರ್.ಬಿ.ಜಿ.ಘಂಟಿ, ಬಾಗಲಕೋಟೆ

ಪತನದತ್ತ 'ಎಪಿಎಂಸಿ'ಗಳು



ಸಾಂವಿಧಾನಿಕ ಚೌಕಟ್ಟಿನಲ್ಲಿ ಸರ್ಕಾರ ಒಂದು ಕಾಯ್ದೆ ತರಬೇಕಾದರೆ ನಿರ್ದಿಷ್ಟವಾದ ಚರ್ಚೆ, ಸಾರ್ವಜನಿಕರ ಅಭಿಪ್ರಾಯಗಳನ್ನು ಪರಿಗಣಿಸಬೇಕು. ತರಾತುರಿಯಲ್ಲಿ ತನಗೆ ಅನುಕೂಲವಾಗುವಂತೆ ಎಪಿಎಂಸಿ ತಿದ್ದುಪಡಿ ಕಾಯ್ದೆ ಜಾರಿಗೆ ತಂದ ಪರಿಣಾಮ ಎಪಿಎಂಸಿಗಳು ಪತನದತ್ತ ಸಾಗುತ್ತಿವೆ. ಈ ಕಾಯ್ದೆಗೆ ಹಲವರು ವಿರೋಧ ವ್ಯಕ್ತಪಡಿಸಿದರೂ ಸರ್ಕಾರ ತನ್ನ ಮೊಂಡುತನ ಪ್ರದರ್ಶಿಸಿತು. ಸರ್ಕಾರ ಇನ್ನಾದರೂ ತನ್ನ ಉದ್ಧಟತನ ಬಿಟ್ಟು, ಆಗಿರುವ ಅನಾಹುತವನ್ನು ಸರಿಪಡಿಸಲಿ.

ಪುನೀತ್, ಮೈಸೂರು


ಎಪಿಎಂಸಿ ಭವಿಷ್ಯ ಅತಂತ್ರ



ಎಪಿಎಂಸಿ ತಿದ್ದುಪಡಿ ಕಾಯ್ದೆಯು ಹಲವು ದೋಷಗಳಿಂದ ಕೂಡಿದೆ. ಉದ್ಯಮಿಗಳು ಮಾತ್ರ ಈ ಕಾಯ್ದೆಯ ಅನುಕೂಲ ಪಡೆಯುತ್ತಿದ್ದಾರೆ. ಒಂದೇ ವರ್ಷದಲ್ಲಿ ಎಪಿಎಂಸಿಗಳು ನೆಲಕ್ಕುರುಳುವ ಹಂತ ತಲುಪಿವೆ. ಮುಂದಿನ ವರ್ಷಗಳಲ್ಲಿ ಇವುಗಳ ಭವಿಷ್ಯ ಊಹಿಸಲೂ ಸಾಧ್ಯವಿಲ್ಲ. ಎಪಿಎಂಸಿ ಸಿಬ್ಬಂದಿಯೂ ಸಂಕಷ್ಟಕ್ಕೆ ಸಿಲುಕಿದ್ದು, ಸರ್ಕಾರ ಯಾರ ಹಿತಕ್ಕಾಗಿ ಈ ಕಾರ್ಯ ಕೈಗೊಂಡಿದೆ ಎಂಬುದೇ ಯಕ್ಷಪ್ರಶ್ನೆ.

ನಾಗರಾಜ ಗುಜ್ಜಲ್ ಪೋತ್ನಾಳ, ರಾಯಚೂರು

ರೈತರೆಲ್ಲ ಒಗ್ಗೂಡಿ



ರೈತ ಎಲ್ಲಿಯವರೆಗೆ ವ್ಯಾಪಾರಿಯಾಗುವುದಿಲ್ಲವೋ ಅಲ್ಲಿಯವರೆಗೆ ಅವನ ಜೀವನ ಹಸನಾಗುವುದಿಲ್ಲ. ರೈತರಲ್ಲಿ ಒಗ್ಗಟ್ಟು ಮೂಡಿದರೆ, ಅವರನ್ನು ಎದುರಿಸಲು ಯಾರಿಂದಲೂ ಸಾಧ್ಯವಿಲ್ಲ. ಸರ್ಕಾರ ರೈತರ ಹಿತವನ್ನು ಅವಲೋಕಿಸದೆ, ಅವರ ಬದುಕನ್ನು ಬೀದಿಪಾಲು ಮಾಡಲು ಹೊರಟಿದೆ. ದೇಶದಲ್ಲಿ ರೈತರ ಸಮಸ್ಯೆಗಳನ್ನು ಕೇಳುವವರೇ ಇಲ್ಲ. ರೈತರು ಎಲ್ಲರ ಮುಂದೆ ಕೈಕಟ್ಟಿ ನಿಲ್ಲುವುದನ್ನು ಬಿಟ್ಟು, ಒಗ್ಗಟ್ಟಾಗಿ ಬದುಕುವುದನ್ನು ಕಲಿಯಬೇಕು.

ಮಹೇಶ ಶಿವಪ್ಪ ಬೆಳವಣಿಕಿ, ಕೊಪ್ಪಳ

ಅನ್ನದಾತನಿಗೆ ಅಭಯ ನೀಡಿ



ರೈತರ ಅಭ್ಯುದಯಕ್ಕಾಗಿ ಸ್ಥಾಪನೆಗೊಂಡ ಎಪಿಎಂಸಿಗಳು ನೂತನ ಕಾಯ್ದೆಯಿಂದ ಅತಂತ್ರ ಸ್ಥಿತಿಯಲ್ಲಿವೆ. ಕೃಷಿ ಉತ್ಪನ್ನಗಳನ್ನು ಸರಿಯಾದ ದರಕ್ಕೆ ಮಾರಾಟ ಮಾಡಿ ನೆಮ್ಮದಿ ಕಾಣಬೇಕಾದ ರೈತರು, ವರ್ತಕರಿಂದ ಮೋಸಕ್ಕೆ ಒಳಗಾಗುತ್ತಿದ್ದಾರೆ. ಈ ಸಂಬಂಧ ಸರ್ಕಾರ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಕೆಲವೆಡೆ ಎಪಿಎಂಸಿಗಳು ಬಂದ್ ಆಗಿದ್ದು, ಮುಂದಿನ ದುರಂತವನ್ನು ತಪ್ಪಿಸಬೇಕಿದೆ. ಅನ್ನದಾತನಿಗೆ ಅಭಯ ನೀಡಿ, ವಂಚಕರ ವಿರುದ್ಧ ಕ್ರಮ ಕೈಗೊಳ್ಳಬೇಕಾಗಿದೆ.

ಮಹಾಂತೇಶ ರಾಜಗೋಳಿ, ಬೆಳಗಾವಿ

ತೆರೆಮರೆಯಲ್ಲಿ ಚುರುಕಿನ ತನಿಖೆ • 'ಬಿಟಿಸಿ' ನುಂಗಿದವರಿಗೆ ನೋಟಿಸ್ ಸಾಧ್ಯತೆ

ಬಿಟ್ ಕಾಯಿನ್: ಹಣ ವರ್ಗಾವಣೆಗೆ 'ಹವಾಲಾ'!

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ರಾಜ್ಯದಲ್ಲಿ ನಡೆದಿದೆ ಎನ್ನಲಾದ ಬಿಟ್ ಕಾಯಿನ್ (ಬಿಟಿಸಿ) ಹಗರಣದಲ್ಲಿ ಅಕ್ರಮ ಹಣ ವರ್ಗಾವಣೆಗೆ 'ಹವಾಲಾ' ದಂಧೆ ಮಾರ್ಗವನ್ನು ಅನುಸರಿಸಿದ್ದ ಸಂಗತಿ ಹೊರಬಿದ್ದಿದ್ದು, ಇದರಲ್ಲಿ ಅಧಿಕಾರಸ್ಥ ಪ್ರಭಾವಿಗಳ ಹೆಸರುಗಳು ಕೇಳಿಬರುತ್ತಿವೆ.

ಅಂತರರಾಷ್ಟ್ರೀಯ ಹ್ಯಾಕರ್ ಎನ್ನಲಾದ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ (26) ಬಂಧನವಾದ ದಿನದಿಂದಲೇ ರಾಜ್ಯದಲ್ಲಿ 'ಬಿಟ್ ಕಾಯಿನ್' ಸದ್ದು ಕೇಳಿಬಂದಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚು ಮೌಲ್ಯ ಹೊಂದಿರುವ 'ಬಿಟ್ ಕಾಯಿನ್ (ಬಿಟಿಸಿ)' ರೂಪವನ್ನು ಡಾಲರ್ ಹಾಗೂ ರೂಪಾಯಿ ಆಗಿ ಪರಿವರ್ತಿಸಲು ಬಹುತೇಕರು, ಹವಾಲಾ ದಂಧೆಕೋರರ ನೆರವು ಪಡೆದಿದ್ದ ಅಂಶಗಳು ಪತ್ತೆಯಾಗಿವೆ.

'ಶ್ರೀಕೃಷ್ಣನ ಮೂಲಕ ಬಿಟ್ ಕಾಯಿನ್‌ಗಳ ಬಗ್ಗೆ ತಿಳಿದ ಅಧಿಕಾರಸ್ಥ ಪ್ರಭಾವಿಗಳು, ಆತನ ಮೂಲಕವೇ ಕೋಟ್ಯಂತರ ರೂಪಾಯಿ ಅಕ್ರಮ ವ್ಯವಹಾರ ನಡೆಸಿರುವ ಅನುಮಾನ ವ್ಯಕ್ತವಾಗಿದೆ. ಇದರಲ್ಲಿ ರಾಜಕಾರಣಿಗಳ ಹಾಗೂ ಪ್ರಭಾವಿಗಳ ಹೆಸರು ಕೇಳಿಬರುತ್ತಿವೆ. ಇದೇ ಕಾರಣಕ್ಕೆ, ವಿದೇಶದ ಹಾಗೂ ಕೇಂದ್ರದ ತನಿಖಾ ಸಂಸ್ಥೆಗಳು, ಬಿಟ್ ಕಾಯಿನ್ ಹಗರಣದ ಹಿಂದೆ ಬಿದ್ದಿವೆ' ಎಂದು ಹೆಸರು ಹೇಳಲಿಚ್ಛಿಸದ ಪೊಲೀಸ್ ಇಲಾಖೆಯ ಗುಪ್ತದಳದ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಕೋಟ್ಯಂತರ ರೂಪಾಯಿ ಮೌಲ್ಯದ ಬಿಟ್ ಕಾಯಿನ್‌ಗಳನ್ನು ಅಕ್ರಮವಾಗಿ ಪಡೆದಿದ್ದ ಪ್ರಭಾವಿಗಳು, ಅವುಗಳನ್ನು ಮಾರಾಟ ಮಾಡಿಸಿ ಹವಾಲಾ ಏಜೆಂಟರ ಮೂಲಕ ಹಣ ವರ್ಗಾಯಿಸಿಕೊಂಡಿರುವ ಮಾಹಿತಿ ಹೆಚ್ಚು ಹರಿದಾಡುತ್ತಿದೆ. ಇದಕ್ಕೆ ಸಂಬಂಧಪಟ್ಟ ಪುರಾವೆಗಳನ್ನು ಸಂಗ್ರಹಿಸುವ ಕೆಲಸವೂ ತೆರೆಮರೆಯಲ್ಲಿ ನಡೆದಿದೆ' ಎಂದೂ ಹೇಳಿದರು.

'ಇದೊಂದು ಸೂಕ್ಷ್ಮ ಪ್ರಕರಣವಾಗಿದ್ದು, ದೊಡ್ಡವರ ಹೆಸರುಗಳು ಮುಂಚೂಣಿಯಲ್ಲಿವೆ. ಹೀಗಾಗಿಯೇ, ತನಿಖಾ ಸಂಸ್ಥೆಗಳು ಗುಪ್ತವಾಗಿ ತನಿಖೆ ಮುಂದುವರಿಸಿವೆ. ಯಾವಾಗ? ಯಾರನ್ನು? ಹೇಗೆ? ವಿಚಾರಣೆ ನಡೆಸಲಾಗುತ್ತದೆ ಎಂಬ ಮಾಹಿತಿಯನ್ನೆಲ್ಲ ಗೌಪ್ಯವಾಗಿರಿಸಲಾಗಿದೆ' ಎಂದೂ ತಿಳಿಸಿದರು.

ಎಚ್ಚೆತ್ತಿದ್ದ ಇ.ಡಿ ಅಧಿಕಾರಿಗಳು: 'ರಾಜ್ಯದಲ್ಲಿ ಬಿಟ್ ಕಾಯಿನ್ ದಂಧೆ ಸದ್ದು ಮಾಡುತ್ತಿದ್ದಂತೆ, ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಸಹ ಎಚ್ಚೆತ್ತುಕೊಂಡಿದ್ದರು. ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ ಹಾಗೂ ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆಯಡಿ ಹಲವು ಮಾಹಿತಿಯನ್ನೂ ಸಂಗ್ರಹಿಸಿದ್ದರು' ಎಂದೂ ಅಧಿಕಾರಿ ಹೇಳಿದರು.

'ಹವಾಲಾ ದಂಧೆಕೋರರರ ಮೇಲೆ ಇ.ಡಿ ಹೆಚ್ಚಿನ ನಿಗಾ ವಹಿಸಿರುತ್ತದೆ. ಬಿಟ್ ಕಾಯಿನ್ ಹಗರಣದಲ್ಲೂ ಅಕ್ರಮ ಹಣ ವರ್ಗಾವಣೆ ಬಗ್ಗೆ ಈಗಾಗಲೇ ಸಾಕಷ್ಟು ಪುರಾವೆಗಳನ್ನು ಸಂಗ್ರಹಿಸಿರುವ ಮಾಹಿತಿಯೂ ಇದೆ' ಎಂದೂ ತಿಳಿಸಿದರು.

'2020 ರ ಡಿಸೆಂಬರ್ 1ರಂದು ಸಿಸಿಬಿ ಅಧಿಕಾರಿಗಳಿಗೆ ಪತ್ರ ಬರೆದಿದ್ದ ಇ.ಡಿ ಉಪ ನಿರ್ದೇಶಕ ಎ. ಸಾದಿಕ್ ಮೊಹಮ್ಮದ್ ನೈನಾರ್, ಶ್ರೀಕೃಷ್ಣ ಹಾಗೂ ಆತನ ಕೃತ್ಯದ ಬಗ್ಗೆ ಮಾಹಿತಿ ಕೇಳಿದ್ದರು. ಆಗಲೇ ಸಿಸಿಬಿ ಪೊಲೀಸರು, ಇ.ಡಿ ಜೊತೆ ಮಾಹಿತಿ ಹಂಚಿಕೊಂಡಿದ್ದಾರೆ. ಆದರೆ, ಹಂಚಿಕೊಂಡ ಮಾಹಿತಿ ಬಗ್ಗೆಯೇ ಇದೀಗ ಅನುಮಾನ ಶುರುವಾಗಿದೆ' ಎಂದೂ ತಿಳಿಸಿದರು.

ನೋಟಿಸ್ ಸಾಧ್ಯತೆ: 'ಬಿಟ್ ಕಾಯಿನ್ ಪರಿಣಿತ ಶ್ರೀಕೃಷ್ಣ ಹಾಗೂ ಹಲವರನ್ನು ತನಿಖಾ ಸಂಸ್ಥೆಗಳು ವಿಚಾರಣೆ ನಡೆಸಿರುವ ಮಾಹಿತಿ ಸಿಕ್ಕಿದೆ. ಹೇಳಿಕೆ ಹಾಗೂ ಪುರಾವೆಗಳನ್ನು ತನಿಖಾ ಸಂಸ್ಥೆಗಳು, ಪರಿಶೀಲಿಸುತ್ತಿವೆ' ಎಂದೂ ಅಧಿಕಾರಿ ಹೇಳಿದರು.

'ಹಗರಣದಲ್ಲಿ ಭಾಗಿಯಾಗಿರುವ ಆರೋಪದಡಿ ಯಾರೊಬ್ಬರಿಗೂ ಇದುವರೆಗೂ ನೋಟಿಸ್ ನೀಡಿಲ್ಲ. ಹೀಗಾಗಿ, ಆರೋಪಿಗಳು ಯಾರು ಎಂಬುದನ್ನು ನಿಖರವಾಗಿ ಹೇಳಲು ಆಗುವುದಿಲ್ಲ. ವಿದೇಶದ ಹಾಗೂ ಕೇಂದ್ರ ತನಿಖಾ ಸಂಸ್ಥೆಗಳು ಸಹ ಗುಟ್ಟು ಬಿಟ್ಟು ಕೊಡುತ್ತಿಲ್ಲ' ಎಂದೂ ಅಧಿಕಾರಿ ತಿಳಿಸಿದರು.



ಏನಿದು ಹವಾಲಾ ?

ಇತ್ತೀಚಿನ ದಿನಗಳಲ್ಲಿ 'ಹವಾಲಾ' ಹೆಚ್ಚು ಚರ್ಚೆಯಾಗುತ್ತಿದೆ. 'ನಂಬಿಕೆ' ಮೇಲೆ ಹಣವನ್ನು ಹಲವು ಕೈಗಳ ಮೂಲಕ ವರ್ಗಾವಣೆ ಹಾಗೂ ಸಂದಾಯ ಮಾಡುವುದೇ ಹವಾಲಾ. ತೆರಿಗೆ ವಂಚಕರು ಹೆಚ್ಚಾಗಿ ಈ ದಂಧೆಯಲ್ಲಿ ಸಕ್ರಿಯವಾಗಿರುತ್ತಾರೆ.

'ಹವಾಲಾ'ದಲ್ಲಿ ಹಣವನ್ನು ಭೌತಿಕವಾಗಿ ವರ್ಗಾವಣೆ ಮಾಡುವುದಿಲ್ಲ. ವ್ಯಕ್ತಿಯೊಬ್ಬನ ಹಣ ನೇರವಾಗಿ ಮತ್ತೊಬ್ಬನಿಗೆ ತಲುಪುವುದಿಲ್ಲ. ಸಂಪರ್ಕ ಜಾಲಗಳ ಮೂಲಕ ಹಣ ವರ್ಗಾವಣೆ ಹಾಗೂ ಸಂದಾಯವಾಗುತ್ತವೆ. ಒಬ್ಬ ವ್ಯಕ್ತಿಯು ತೆರಿಗೆ ಪಾವತಿಸದೇ ಹಾಗೂ ಯಾವುದೇ ದಾಖಲೆಗಳಿಲ್ಲದೇ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಏಜೆಂಟರ ಮೂಲಕ ಹಣ ವಿನಿಮಯ ಮಾಡಬಹುದು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಏಜೆಂಟರೇ ಹವಾಲಾ ದಂಧೆ ಬೆನ್ನೆಲುಬು. ಅವರಿಗೂ ಕಮಿಷನ್ ಸಹ ಕೊಡಬೇಕಾಗುತ್ತದೆ. ಸಂಕೇತಾಕ್ಷರಗಳು, ಸಂಜ್ಞೆಗಳು ಹಾಗೂ ಹರಿದ ನೋಟುಗಳನ್ನು ದಂಧೆಯ ಸಂವಹನಕ್ಕಾಗಿ ಬಳಸಲಾಗುತ್ತದೆ. ಈ ಕೃತ್ಯ ಆರ್ಥಿಕ ಅಪರಾಧವಾಗಿದ್ದು, ತನಿಖಾ ಸಂಸ್ಥೆಗಳ ನಿಗಾ ಇದ್ದೇ ಇರುತ್ತದೆ' ಎಂದೂ ತಿಳಿಸಿದರು.

'ಬಿಟ್ ಕಾಯಿನ್‌ಗಳನ್ನು ಹಣ ವಿನಿಮಯ ಏಜೆನ್ಸಿಗಳ ಮೂಲಕ ಮಾರಾಟ ಹಾಗೂ ಖರೀದಿ ಮಾಡಲಾಗುತ್ತದೆ. ಇದರಿಂದ ಬಂದ ಹಣವೇ ಹವಾಲಾ ಮೂಲಕ ವರ್ಗಾವಣೆ ಆಗುತ್ತಿದೆ' ಎಂದೂ ಹೇಳಿದರು.

ತ್ವರಿತ ಪರಿಹಾರಕ್ಕೆ 'ಆ್ಯಪ್': 'ಸುಪ್ರೀಂ'

ನವದೆಹಲಿ: ರಸ್ತೆ ಅಪಘಾತ ಪ್ರಕರಣಗಳಲ್ಲಿ ಸಂತ್ರಸ್ತರಿಗೆ ದೊರೆಯಬೇಕಾದ ಪರಿಹಾರದ ತ್ವರಿತ ಇತ್ಯರ್ಥಕ್ಕಾಗಿ ಮೊಬೈಲ್ ಅಪ್ಲಿಕೇಷನ್ ಅಭಿವೃದ್ಧಿಪಡಿಸಲು 'ಸುಪ್ರೀಂ' ಅನುಮೋದನೆ ನೀಡಿದೆ.

ನ್ಯಾಯಾಲಯವು ನಿರ್ದೇಶನ ನೀಡಿದರೆ ಕೇಂದ್ರೀಕೃತ ಮೊಬೈಲ್ ಅಪ್ಲಿಕೇಷನ್ ಅಭಿವೃದ್ಧಿಪಡಿಸಲು ಸಿದ್ಧ ಇರುವುದಾಗಿ ವಿಮಾ ಕಂಪನಿಗಳು ಇತ್ತೀಚೆಗೆ ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್ ಮತ್ತು ಎಂ.ಎಂ. ಸುಂದ್ರೇಶ್ ಅವರ ಪೀಠಕ್ಕೆ ತಿಳಿಸಿದ್ದವು.

'ಮೊಬೈಲ್ ಅಪ್ಲಿಕೇಷನ್‌ನ ಅಭಿವೃದ್ಧಿಯು ನ್ಯಾಯಾಲಯದ ನಿರ್ದೇಶನಗಳಿಗಾಗಿ ಕಾಯಬೇಕಾಗಿಲ್ಲ. ಅಗತ್ಯ ಇರುವುದನ್ನು ತ್ವರಿತವಾಗಿ ಮಾಡಬೇಕು ಮತ್ತು ಅದಕ್ಕೆ ಸ್ವಾಭಾವಿಕವಾಗಿ ಎಲ್ಲರ ಸಹಕಾರ ಇರುತ್ತದೆ'ಎಂದು ಪೀಠ ಹೇಳಿದೆ.



ಮಂಗಳೂರಿನ ಮೂಲತ್ವ ಫೌಂಡೇಷನ್ ಚಾರಿಟಬಲ್ ಟ್ರಸ್ಟ್ ವತಿಯಿಂದ ಭಾನುವಾರ ಜಾನಪದ ಗಾಯಕಿ ಸುಕ್ರಿ ಬೊಮ್ಮುಗೌಡ ಅವರಿಗೆ ಉತ್ತರ ಕನ್ನಡ ಜಿಲ್ಲೆ ಅಂಕೋಲಾದ ಬಡಗೇರಿಯ ಅವರ ಮನೆಯಂಗಳದಲ್ಲಿ 7ನೇ 'ವಿಶ್ವ ಮೂಲತ್ವ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಟ್ರಸ್ಟ್ ಸ್ಥಾಪಕ ಪ್ರಕಾಶ ಮೂಲತ್ವ ಹಾಗೂ ಸದಸ್ಯರು ಇದ್ದಾರೆ

ಮಂಥನ ಸಮಾವೇಶದಲ್ಲಿ ರೈತ ನಾಯಕ ಹರನೇಕ್ ಸಿಂಗ್

'ಮೂರ್ಖರು ಮಾತ್ರ ಸುಮ್ಮನಿದ್ದಾರೆ'

ಪ್ರಜಾವಾಣಿ ವಾರ್ತೆ



ಮಂಥನ ಸಮಾವೇಶವನ್ನು ಸಂಯುಕ್ತ ಕಿಸಾನ್ ಮೋರ್ಚಾ ಸಂಚಾಲಕ ಹರನೇಕ್ ಸಿಂಗ್ ತಮಟೆ ಬಾರಿಸುವ ಮೂಲಕ ಉದ್ಘಾಟಿಸಿದರು. ಸಾಹಿಲ್ ಕಂಭೋಜ್, ಹರೀಶ್ ಚಂದ್ರ ಲಡ್ಡಾ, ಮಲ್ಲಿಗೆ ಸಿರಿಮನೆ, ವಿ. ಗಾಯತ್ರಿ ಮತ್ತು ಟಿ. ಯಶವಂತ್ ಇದ್ದರು – ಪ್ರಜಾವಾಣಿ ಚಿತ್ರ

ಬೆಂಗಳೂರು: 'ಕೇಂದ್ರ ಸರ್ಕಾರ ರೂಪಿಸಿರುವ ಕೃಷಿ ಸಂಬಂಧಿ ಕರಾಳ ಕಾಯ್ದೆಗಳನ್ನು ಬುದ್ಧಿ ಇರುವ ಎಲ್ಲರೂ ವಿರೋಧಿಸುತ್ತಿದ್ದಾರೆ. ಮೂರ್ಖರು ಮಾತ್ರ ಈ ವಿಚಾರದಲ್ಲಿ ಸುಮ್ಮನಿದ್ದಾರೆ' ಎಂದು ಸಂಯುಕ್ತ ಕಿಸಾನ್ ಮೋರ್ಚಾ ಸಂಚಾಲಕ ಹರನೇಕ್ ಸಿಂಗ್ ಹೇಳಿದರು.

ಕರ್ನಾಟಕ ಜನಶಕ್ತಿ ಸಂಘಟನೆ ನಗರದ ಗಾಂಧಿ ಭವನದಲ್ಲಿ ಭಾನುವಾರ ಆಯೋಜಿಸಿದ್ದ 'ಐತಿಹಾಸಿಕ ರೈತಾಂದೋಲನ ಕಲಿಸುವ ಪಾಠ– ತೋರುವ ಹಾದಿ: ಮಂಥನ ಸಮಾವೇಶ' ಉದ್ಘಾಟಿಸಿ ಮಾತನಾಡಿದ ಅವರು, 'ಈಗಿನ ಸಂದರ್ಭದಲ್ಲಿ ಮೂರ್ಖರು ಮಾತ್ರ ನೆಮ್ಮದಿಯಿಂದ ನಿದ್ದೆ ಮಾಡಲು ಸಾಧ್ಯ. ಬುದ್ಧಿ ಇರುವವರು ಸುಮ್ಮನಿರುವುದಿಲ್ಲ. ಕೃಷಿ ಕಾಯ್ದೆಗಳನ್ನು ವಿರೋಧಿಸದೇ ಇರುವವರು ಮೂರ್ಖರ ಪಟ್ಟಿಗೆ ಸೇರುತ್ತಾರೆ' ಎಂದರು.

ದೇಶದ ಸಾರ್ವಭೌಮತೆಗೆ ವಿರುದ್ಧವಾದ ಕಾಯ್ದೆಗಳನ್ನು ಜನರ ಮೇಲೆ ಹೇರಲು ಕೇಂದ್ರ ಸರ್ಕಾರ ಹೊರಟಿದೆ. ಬೆಳೆಗಳನ್ನು ಬೆಳೆದು ದೇಶವನ್ನೇ ಪೊರೆಯುವ ರೈತರನ್ನು ನಾಶಮಾಡಲು ಕೇಂದ್ರ ಸರ್ಕಾರ ಈ ಕಾಯ್ದೆಗಳನ್ನು ತಂದಿದೆ. ಕೃಷಿ ಕ್ಷೇತ್ರಕ್ಕೆ ಮಾರಕವಾಗಿರುವ ಕಾಯ್ದೆಗಳ ವಿರುದ್ಧದ ಹೋರಾಟ ವರ್ಷ ಪೂರೈಸಿದೆ. ಈಗಲೂ ರೈತರು ತಮ್ಮ ಬೇಡಿಕೆ ಈಡೇರದೇ ಹೆಜ್ಜೆ ಹಿಂದಕ್ಕೆ ಇಡುವುದಿಲ್ಲ ಎಂದರು.

ರೈತರ ಹಕ್ಕುಗಳು ಮತ್ತು ಹೋರಾಟವನ್ನು ಬೇರೆಯವರು ನಿರ್ಧರಿಸುವ ಕಾಲ ಮುಗಿದಿದೆ. ಕೆಲವರು ಚುನಾವಣೆ ಸಮೀಪಿಸಿದಾಗ ರೈತರ ಹಕ್ಕುಗಳ ಬಗ್ಗೆ ಮಾತನಾಡುತ್ತಿದ್ದರು. ಇನ್ನು ಹಾಗಾಗಲು ಸಾಧ್ಯವಿಲ್ಲ. ರೈತರೇ ತಮ್ಮ ಹಕ್ಕುಗಳ ಕುರಿತು ಮಾತನಾಡುತ್ತಾರೆ ಮತ್ತು ಹೋರಾಟದ ದಿಕ್ಕನ್ನು ನಿರ್ಧರಿಸುತ್ತಾರೆ ಎಂದು ಹರನೇಕ್ ತಿಳಿಸಿದರು.

ಪಂಜಾಬ್‌ನಲ್ಲಿ ಆರಂಭವಾದ ಹೋರಾಟ ದೆಹಲಿ ಗಡಿ ತಲುಪಿ ವರ್ಷವಾಯಿತು. ಆರಂಭದಿಂದಲೂ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಚಳವಳಿ ಮುರಿಯಲು ನಿರಂತರ ಪ್ರಯತ್ನ ನಡೆಸುತ್ತಿದೆ. ಆದರೆ, ಎಲ್ಲ ವಿಚಾರಧಾರೆಗಳ ರೈತ ಸಂಘಟನೆಗಳೂ ಒಗ್ಗೂಡಿ ನಡೆಸುತ್ತಿರುವ ಹೋರಾಟದಲ್ಲಿ ಒಡಕು ಸೃಷ್ಟಿಸಲು ಸಾಧ್ಯವಿಲ್ಲ ಎಂದರು.

ಅಖಿಲ ಭಾರತ ರೈತ ಸಂಘರ್ಷ ಸಮನ್ವಯ ಸಮಿತಿ ನಾಯಕಿ ಕವಿತಾ ಕುರಗಂಟಿ ಮಾತನಾಡಿ, 'ಕೇಂದ್ರ ಸರ್ಕಾರ ರೂಪಿಸಿರುವ ಕೃಷಿ ಉತ್ಪನ್ನ ಮಾರುಕಟ್ಟೆ ಕಾಯ್ದೆ ಎಷ್ಟು ಅಪಾಯಕಾರಿ ಎಂಬುದು ಈಗಾಗಲೇ ಸಾಬೀತಾಗಿದೆ. ಕಾಯ್ದೆಯ ದುಷ್ಪರಿಣಾಮ ಕುರಿತು ನೂರಾರು ಸಾಕ್ಷ್ಯಗಳಿವೆ. ಆದರೆ, ಅದು ಉತ್ತಮವಾದ ಕಾಯ್ದೆ ಎಂಬುದನ್ನು ನಿರೂಪಿಸುವ ಒಂದು ಸಾಕ್ಷ್ಯವೂ ಕೇಂದ್ರ ಸರ್ಕಾರದ ಬಳಿ ಇಲ್ಲ' ಎಂದರು.

'ನಮ್ಮ ಊರು– ನಮ್ಮ ಭೂಮಿ' ಆಂದೋಲನದ ವಿ. ಗಾಯತ್ರಿ, 'ಕೃಷಿ ಕಾಯ್ದೆಗಳಿರುವ ಹಿಂದಿರುವ ಅಂತರರಾಷ್ಟ್ರೀಯ ಹುನ್ನಾರ'ದ ಕುರಿತು ಮತ್ತು ಪ್ರಾಧ್ಯಾಪಕ ಡಾ.ಬಿ.ಸಿ. ಬಸವರಾಜ್, 'ಕೃಷಿ ಕಾಯ್ದೆಗಳು ಮತ್ತು ಕಾರ್ಪೊರೇಟ್ ಹಿತಾಸಕ್ತಿ' ಕುರಿತು ಮಾತನಾಡಿದರು.

ರಾಜ್ಯ ರೈತ ಸಂಘದ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್, ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡ ಟಿ. ಯಶವಂತ್ ಮಾತನಾಡಿದರು. ಕರ್ನಾಟಕ ಜನಶಕ್ತಿಯ ರಾಜ್ಯ ಘಟಕದ ಕಾರ್ಯದರ್ಶಿ ಕುಮಾರ್ ಸಮತಳ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಧಾನ ಕಾರ್ಯದರ್ಶಿ ಮಲ್ಲಿಗೆ ಸಿರಿಮನೆ ಅಧ್ಯಕ್ಷತೆ ವಹಿಸಿದ್ದರು. ಅಧ್ಯಕ್ಷ ನೂರ್ ಶ್ರೀಧರ್ ಇದ್ದರು.

'ಫ್ಯಾಸಿಸ್ಟ್‌ವಾದಕ್ಕೆ ಬೆಂಬಲವಿಲ್ಲ'

'ದೆಹಲಿಯ ಸಿಂಘು ಗಡಿಯಲ್ಲಿ ರೈತ ಹೋರಾಟದ ಸ್ಥಳದಲ್ಲಿ ನಡೆದ ದಲಿತ ಯುವಕನ ಹತ್ಯೆ ಫ್ಯಾಸಿಸ್ಟ್‌ವಾದಿಗಳಿಂದ ಆಗಿದೆ. ಹಿಂದೂ ಫ್ಯಾಸಿಸ್ಟ್ ಶಕ್ತಿಗಳು ಸಿಖ್ ಫ್ಯಾಸಿಸ್ಟ್ ಶಕ್ತಿಗಳ ಮೂಲಕ ಈ ಕೃತ್ಯ ಎಸಗಿವೆ. ಯಾವುದೇ ಬಗೆಯ ಫ್ಯಾಸಿಸ್ಟ್‌ವಾದವನ್ನೂ ಸಂಯುಕ್ತ ಕಿಸಾನ್ ಮೋರ್ಚಾ ಬೆಂಬಲಿಸುವುದಿಲ್ಲ' ಎಂದು ಹರನೇಕ್ ಸಿಂಗ್ ಹೇಳಿದರು.

ನ.10ರಂದು ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟದಿಂದ ಪ್ರತಿಭಟನೆ

ಗದಗ: ಸಾಮಾಜಿಕ ಮತ್ತು ಶೈಕ್ಷಣಿಕ ಜಾತಿವಾರು ಸಮೀಕ್ಷೆ ವರದಿಯನ್ನು ಶೀಘ್ರವೇ ಜಾರಿಗೊಳಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟ ಹಾಗೂ ಗದಗ ಜಿಲ್ಲಾ ಹಿಂದುಳಿದ ಜಾತಿಗಳ ಒಕ್ಕೂಟದ ವತಿಯಿಂದ ನ.10ರಂದು ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಒಕ್ಕೂಟದ ಅಧ್ಯಕ್ಷ ಕೆ.ಎಂ.ರಾಮಚಂದ್ರಪ್ಪ ತಿಳಿಸಿದ್ದಾರೆ.

ಅಂದು ಬೆಳಿಗ್ಗೆ 11.30ಕ್ಕೆ ನಗರದ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಯಲಿದ್ದು, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಎಲ್ಲ ಸಮುದಾಯಗಳ ಹಾಲಿ ಮತ್ತು ಮಾಜಿ ಸಚಿವರು, ಶಾಸಕರು ಭಾಗವಹಿಸಲಿದ್ದಾರೆ.

ಎಚ್.ಕಾಂತರಾಜು ಆಯೋಗದ ನೇತೃತ್ವದಲ್ಲಿ ನಡೆದಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಜಾತಿವಾರು ಸಮೀಕ್ಷೆ ವರದಿ ಬಿಡುಗಡೆ, ಪ್ರಬಲ ಜಾತಿಗಳನ್ನು ಪ್ರವರ್ಗ 2ಎ ಮೀಸಲಾತಿ ಹಾಗೂ ಪ್ರವರ್ಗ 1ರ ಪಟ್ಟಿಗೆ ಸೇರಿಸದಂತೆ ಆಗ್ರಹ, ಹಿಂದುಳಿದ ವರ್ಗಗಳಿಗೂ ಜನಸಂಖ್ಯೆಗೆ ಅನುಗುಣವಾಗಿ ರಾಜಕೀಯ ಮೀಸಲಾತಿ ಸೇರಿದಂತೆ ಪ್ರಮುಖ ಎಂಟು ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಧರಣಿ ಹಮ್ಮಿಕೊಳ್ಳಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಕೌಂಟರ್‌ನಲ್ಲೇ ಟಿಕೆಟ್ ಖರೀದಿಸಲು ಅವಕಾಶ

ಒಂದನೇ ಪುಟದಿಂದ

ರೈಲ್ವೆ ಮಂಡಳಿಯು ಕೆಲವು ವಿಶೇಷ ರೈಲುಗಳಲ್ಲಿ ಕಾಯ್ದಿರಿಸದ ಕೋಚ್‌ಗಳ ಮರು ಸೇರ್ಪಡೆಗೆ ರೈಲ್ವೆ ವಲಯಗಳಿಗೆ ಅನುಮತಿ ನೀಡಿದೆ. ಈಗಾಗಲೇ ದಕ್ಷಿಣ ರೈಲ್ವೆ ಮತ್ತು ನೈರುತ್ಯ ರೈಲ್ವೆ ವಲಯಗಳು ಆಯ್ದ ರೈಲುಗಳಲ್ಲಿನ ಕೆಲವು ಸೆಕೆಂಡ್ ಕ್ಲಾಸ್ ಸೀಟಿನ ಕೋಚ್‌ಗಳನ್ನು 'ಡಿ-ರಿಸರ್ವ್' ಮಾಡಿವೆ. ಜತೆಗೆ ಸೀಟು ಕಾಯ್ದಿರಿಸದ ಪ್ರಯಾಣಿಕರ ಪ್ರಯಾಣಕ್ಕೆ ಅನುವು ಮಾಡಲು ಅವುಗಳನ್ನು ಕಾಯ್ದಿರಿಸದ ಕೋಚ್‌ಗಳಾಗಿ ಪರಿವರ್ತಿಸಿವೆ.

ಕಾಯ್ದಿರಿಸದ ಕೋಚ್‌ಗಳನ್ನು ಮತ್ತೆ ಆರಂಭಿಸಬೇಕು ಎಂಬುದು ಹಲವು ರಾಜ್ಯಗಳ ರೈಲ್ವೆ ಪ್ರಯಾಣಿಕರ ಬೇಡಿಕೆಯಾಗಿತ್ತು. ಪ್ರಯಾಣಿಕರ ಅನುಕೂಲವನ್ನು ಗಮನದಲ್ಲಿಟ್ಟುಕೊಂಡು ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ರೈಲ್ವೆ ಅಧಿಕಾರಿಗಳು ಹೇಳಿದ್ದಾರೆ.

ಕೋವಿಡ್ ಪ್ರಸರಣದ ವೇಗವನ್ನು ತಡೆಯುವ ಉದ್ದೇಶದಿಂದ ಭಾರತೀಯ ರೈಲ್ವೆಯು ಸಾಮಾನ್ಯ ಬೋಗಿಗಳಲ್ಲಿ ಪ್ರಯಾಣಿಸುವ ಪ್ರಯಾಣಿಕರಿಗೆ ಸೀಟುಗಳನ್ನು ಕಾಯ್ದಿರಿಸುವುದನ್ನು ಕಳೆದ ವರ್ಷ ಕಡ್ಡಾಯಗೊಳಿಸಿತ್ತು. ಇದೀಗ ಕೋವಿಡ್ ಇಳಿಮುಖ ಆಗುತ್ತಿರುವುದರಿಂದ ಮತ್ತು ಲಸಿಕೆ ಪಡೆಯುತ್ತಿರುವವರ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ, ರೈಲ್ವೆಯು ಕೆಲ ಪ್ರಯಾಣಿಕ ರೈಲುಗಳಲ್ಲಿ ಕಾಯ್ದಿರಿಸದ ಕೋಚ್‌ಗಳನ್ನು ಪುನರಾರಂಭಿಸಲು ಕ್ರಮ ತೆಗೆದುಕೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	124.80	10,650	10,449
ಹಾರಂಗಿ	2,859	2,857.28	2,010	800
ಕಬಿನಿ	2284.00	2,283.97	2,130	1,500
ಹೇಮಾವತಿ	2,922	2,909.31	3,347	3,556
ಲಿಂಗನಮಕ್ಕಿ	1,819	1,814.25	3805	5,985
ಸೂಪಾ (ಮೀ)	564	555.87	1,310.81	3,504
ಮಾಣಿ	594	586.92	1051	-
ತುಂಗಭದ್ರಾ	1,633	1,632.39	6,706	9,532
ಮಲಪ್ರಭಾ	2079.5	2,077.55	-	2,044
ಘಟಪ್ರಭಾ	2175	2,170.61	-	2,776
ಭದ್ರಾ	186	185.5	2,576	3,791
ಆಲಮಟ್ಟಿ (ಮೀ)	519.6	518.79	-	1,817
ನಾರಾಯಣಪುರ (ಮೀ)	492.25	491.25	257	2,522

*ನೆಲಮಟ್ಟದಿಂದ

ವೈದ್ಯರ ಸಮಸ್ಯೆ ಇತ್ಯರ್ಥಕ್ಕೆ ಎನ್‌ಎಂಸಿ ಸೂಚನೆ

ಬೆಂಗಳೂರು: ಇದೇ ಆಗಸ್ಟ್‌ನಲ್ಲಿ ವೈದ್ಯಕೀಯ ಸ್ನಾತಕೋತ್ತರ ಪದವಿ, ಸ್ನಾತಕೋತ್ತರ ಡಿಪ್ಲೊಮಾ ಮತ್ತು ಸೂಪರ್ ಸ್ಪೆಷಾಲಿಟಿ ಕೋರ್ಸ್ ಪೂರೈಸಿರುವ ತಜ್ಞ ವೈದ್ಯರಿಗೆ ಪದವಿ ಪ್ರಮಾಣಪತ್ರ ವಿತರಣೆ ಹಾಗೂ ಕರ್ನಾಟಕ ವೈದ್ಯಕೀಯ ಮಂಡಳಿ (ಕೆಎಂಸಿ) ಯಲ್ಲಿ ನೋಂದಣಿಗೆ ಇರುವ ತೊಡಕುಗಳನ್ನು ಪರಿಹರಿಸುವಂತೆ ರಾಷ್ಟ್ರೀಯ ವೈದ್ಯಕೀಯ ಆಯೋಗ (ಎನ್‌ಎಂಸಿ) ರಾಜ್ಯದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಸೂಚಿಸಿದೆ.

ಕಡ್ಡಾಯ ಸರ್ಕಾರಿ ಸೇವೆಗೆ ನಿಯೋಜಿಸುವ ಪ್ರಕ್ರಿಯೆಯಲ್ಲಿನ ಲೋಪಗಳಿಂದಾಗಿ ತಾವು ಸೇವೆ ಆರಂಭಿಸುವುದಕ್ಕೆ ಸಾಧ್ಯವಾಗುತ್ತಿಲ್ಲ ಎಂದು ಈ ವರ್ಷ ರಾಜ್ಯದಲ್ಲಿ ಕೋರ್ಸ್ ಪೂರ್ಣಗೊಳಿಸಿರುವ ಹಲವು ವೈದ್ಯರು ಪ್ರಧಾನಿ ಸಚಿವಾಲಯಕ್ಕೆ ದೂರು ಸಲ್ಲಿಸಿದ್ದರು. ಕಡ್ಡಾಯ ಸರ್ಕಾರಿ ಸೇವೆ ಕಾರಣ ನೀಡಿ ತಮ್ಮ ಪದವಿ ಪ್ರಮಾಣಪತ್ರಗಳ ವಿತರಣೆ ತಡೆಹಿಡಿದಿದ್ದು, ಕೆಎಂಸಿ ನೋಂದಣಿಗೂ ನಿರ್ಬಂಧ ಹೇರಲಾಗಿದೆ ಎಂದು ದೂರಿದ್ದರು.

ದೂರುಗಳನ್ನು ರಾಷ್ಟ್ರೀಯ ವೈದ್ಯಕೀಯ ಆಯೋಗಕ್ಕೆ ರವಾನಿಸಿದ್ದ ಪ್ರಧಾನಿ ಸಚಿವಾಲಯ, ಸೂಕ್ತ ಕ್ರಮ ಕೈಗೊಳ್ಳುವಂತೆ ಶಿಫಾರಸು ಮಾಡಿತ್ತು. ಈ ಸಂಬಂಧ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಟಿ.ಕೆ. ಅನಿಲ್ ಕುಮಾರ್ ಅವರಿಗೆ ಶನಿವಾರ ನೋಟಿಸ್ ಜಾರಿಗೊಳಿಸಿರುವ ಆಯೋಗ, ವೈದ್ಯರ ಸಮಸ್ಯೆ ಪರಿಹರಿಸಲು ಸೂಕ್ತ ಕ್ರಮ ಕೈಗೊಂಡು, ವರದಿ ಸಲ್ಲಿಸುವಂತೆ ಸೂಚಿಸಿದೆ.

'ಕರ್ನಾಟಕದ ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ 2018ರಲ್ಲಿ ಸ್ನಾತಕೋತ್ತರ ವೈದ್ಯಕೀಯ ಕೋರ್ಸ್‌ಗಳಿಗೆ ಪ್ರವೇಶ ಪಡೆದು, 2021ರ ಆಗಸ್ಟ್‌ನಲ್ಲಿ ಕೋರ್ಸ್ ಪೂರ್ಣಗೊಳಿಸಿರುವ ಹಲವು ಅಭ್ಯರ್ಥಿಗಳಿಂದ ದೂರುಗಳು ಬಂದಿವೆ. ಕಡ್ಡಾಯ ಸೇವೆಗೆ ಸಿದ್ಧರಿದ್ದರೂ ಸೂಕ್ತ ಹುದ್ದೆ ನೀಡುತ್ತಿಲ್ಲ. ಅಲ್ಲದೇ, ತಮ್ಮ ಪದವಿ ಪ್ರಮಾಣಪತ್ರ ವಿತರಿಸಿ, ಕೆಎಂಸಿ ನೋಂದಣಿಗೂ ಅವಕಾಶ ಕಲ್ಪಿಸಿಲ್ಲ ಎಂದು ದೂರಿದ್ದಾರೆ. ಮೂಲ ದಾಖಲೆಗಳನ್ನೂ ವಶದಲ್ಲಿರಿಸಿಕೊಂಡಿರುವ ಕುರಿತು ದೂರುಗಳು ಬಂದಿವೆ' ಎಂದು ನೋಟಿಸ್‌ನಲ್ಲಿ ಉಲ್ಲೇಖಿಸಲಾಗಿದೆ.


ಡೀಮ್ಡ್ ವಿಶ್ವವಿದ್ಯಾಲಯಗಳಲ್ಲಿ ಕೋರ್ಸ್ ಪೂರ್ಣಗೊಳಿಸಿರುವ ತಜ್ಞ ವೈದ್ಯರಿಗೆ ಪ್ರಮಾಣಪತ್ರ ವಿತರಿಸಿದ್ದು, ಅವರೆಲ್ಲರೂ ವೃತ್ತಿ ಆರಂಭಿಸಲು ಅವಕಾಶ ನೀಡಲಾಗಿದೆ. ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಅಧ್ಯಯನ ಮಾಡಿವದರಿಗೆ ಮಾತ್ರ ನಿರ್ಬಂಧ ವಿಧಿಸಲಾಗಿದೆ ಎಂಬ ದೂರುಗಳಿವೆ. ಈ ಎಲ್ಲ ದೂರುಗಳನ್ನು ಪರಿಶೀಲಿಸಿ, ಅಗತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸಬೇಕು ಎಂದು ಸೂಚಿಸಲಾಗಿದೆ.

ಅಪ್ಪು ಅಗಲಿಕೆಗೆ 11 ದಿನಗಳು

ಪುಣ್ಯಾರಾಧನೆ; ಇಂದು ವಿಶೇಷ ಪೂಜೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟ ದಿವಂಗತ ಪುನೀತ್ ರಾಜ್‌ಕುಮಾರ್ ಅವರು ನಿಧನರಾಗಿ 10 ದಿನಗಳು ಕಳೆದಿದ್ದು, ನ. 8ರಂದು (ಸೋಮವಾರ) 11ನೇ ದಿನದ ಪುಣ್ಯಾರಾಧನೆಯ ವಿಧಿವಿಧಾನಗಳು ನಡೆಯಲಿವೆ.



ಇದಕ್ಕಾಗಿ ಸದಾಶಿವನಗರದಲ್ಲಿರುವ ಪುನೀತ್ ನಿವಾಸ ಹಾಗೂ ಸಮಾಧಿ ಮಾಡಿದ ಕಂಠೀರವ ಸ್ಟುಡಿಯೊ ಆವರಣದಲ್ಲಿ ವಿಶೇಷ ಪೂಜೆಗೆ ಸಿದ್ಧತೆ ನಡೆದಿದೆ. ಮನೆಯಲ್ಲಿ ಪೂಜಾ ಕಾರ್ಯಕ್ರಮಗಳು ನಡೆದ ಬಳಿಕ ಸಮಾಧಿ ಸ್ಥಳದಲ್ಲಿ ಬೆಳಿಗ್ಗೆ 11 ಗಂಟೆ ಸುಮಾರಿಗೆ ಪೂಜೆ ನಡೆಯಲಿದೆ. ಪೂಜೆ ಮುಗಿಯುವವರೆಗೆ ಸಮಾಧಿ ಸ್ಥಳಕ್ಕೆ ಸಾರ್ವಜನಿಕರ ಪ್ರವೇಶಕ್ಕೆ ನಿರ್ಬಂಧ ಇರಲಿದೆ.

12ನೇ ದಿನದ ಕಾರ್ಯಕ್ರಮ ಮಂಗಳವಾರ (ನ.9) ನಗರದ ಅರಮನೆ ಮೈದಾನದಲ್ಲಿ ನಡೆಯಲಿದೆ. ಚಿತ್ರರಂಗದ ಪ್ರಮುಖರು, ಆಪ್ತರಿಗೆ ಅನ್ನಸಂತರ್ಪಣೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಈ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಭದ್ರತೆ, ಸಂಚಾರ ವ್ಯವಸ್ಥೆ ರೂಪಿಸುವ ಬಗೆಗೂ ಸಿದ್ಧತೆ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಭಾನುವಾರ ಸಮಾಧಿ ಸ್ಥಳದ ಪ್ರವೇಶ ಅವಧಿಯನ್ನು ಸಂಜೆ 6ರ ಬದಲು 7ರವರೆಗೆ ವಿಸ್ತರಿಸಲಾಗಿತ್ತು. ಕುಟುಂಬ ಸಮೇತ ಬಂದ ಅಭಿಮಾನಿಗಳು ಪುನೀತ್ ಸಮಾಧಿಗೆ ಗೌರವ ಸಲ್ಲಿಸಿದರು. ಕೆಲವು 'ಮಕ್ಕಳು ಆಡಿಸಿ ನೋಡು ಬೀಳಿಸಿ ನೋಡು ಉರುಳಿ ಹೋಗದು' ಎಂಬ ಗೀತೆ ಹಾಡಿದರು.

ಚಿತ್ರಮಂದಿರಗಳಲ್ಲಿ ವಿಶೇಷ ನಮನ: ಕರ್ನಾಟಕ ಚಿತ್ರ ಪ್ರದರ್ಶಕರ ಸಂಘದ ವತಿಯಿಂದ ರಾಜ್ಯದ ಎಲ್ಲ ಚಿತ್ರಮಂದಿರಗಳಲ್ಲೂ ಪುನೀತ್ ಅವರಿಗೆ ವಿಶೇಷ ನಮನ ಸಲ್ಲಿಸಲಾಯಿತು. ಸಂಜೆ 6ರಿಂದ ಏಕಕಾಲಕ್ಕೆ ಎಲ್ಲ ಚಿತ್ರಮಂದಿರಗಳ ಆವರಣದಲ್ಲಿ ಪುನೀತ್ ಭಾವಚಿತ್ರದ ಮುಂದೆ ಗೀತಾಂಜಲಿ (ಪುನೀತ್ ಚಿತ್ರಗಳ ಗೀತಗಾಯನ), ಪುಷ್ಪಾಂಜಲಿ (ಭಾವಚಿತ್ರಕ್ಕೆ ಪುಷ್ಪಾರ್ಪಣೆ) ಹಾಗೂ ದೀಪಾಂಜಲಿ (ಮೋಂಬತ್ತಿ ಬೆಳಗುವಿಕೆ) ಮೂಲಕ ನಮನ ಸಲ್ಲಿಸಲಾಯಿತು. ಮೋಂಬತ್ತಿ ಬೆಳಗಿದ ಬಳಿಕ ಚಿತ್ರ ಪ್ರೇಕ್ಷಕರು ಮತ್ತು ಚಿತ್ರಮಂದಿರದ ಸಿಬ್ಬಂದಿ ಒಂದು ನಿಮಿಷದ ಮೌನ ಆಚರಣೆ ಮಾಡಿದರು.

ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ವತಿಯಿಂದ ನ.16 ರಂದು ಮಧ್ಯಾಹ್ನ 3ಕ್ಕೆ ಅರಮನೆ ಮೈದಾನದಲ್ಲಿ 'ಪುನೀತ ನಮನ' ಮಧ್ಯಾಹ್ನ 3ಕ್ಕೆ ಪುನೀತ್‌ಗೆ ಕೂಡಾ ಗೀತಾಂಜಲಿ ಕಾರ್ಯಕ್ರಮ ನಡೆಯಲಿದೆ. ಚಿತ್ರ ಸಾಹಿತಿ ನಾಗೇಂದ್ರ ಪ್ರಸಾದ್ ಅವರು ಬರೆದ ಹಾಡಿನ ಮೂಲಕ ನಮನ ಸಲ್ಲಿಸಲಾಗುತ್ತದೆ ಎಂದು ಸಂಘದ ಪ್ರಕಟಣೆ ತಿಳಿಸಿದೆ.

ಅಪ್ಪು ನೀನೆಲ್ಲಿ?

'ಚಿತ್ರ ಮಂದಿರದ ಸೀಟುಗಳು ಕೇಳುತ್ತಿವೆ ಅಪ್ಪು ನೀನೆಲ್ಲಿ...' ಎಂಬ ಸಾಲಿನ ಗೀತೆಯನ್ನು ಚಿತ್ರಸಾಹಿತಿ ನಾಗೇಂದ್ರ ಪ್ರಸಾದ್ ಬರೆದಿದ್ದಾರೆ.

'ಪುನೀತ್ ಚಿತ್ರಗಳಲ್ಲಿ ಅವರನ್ನು ಪರಿಚಯಿಸುವ ಅಥವಾ ಪ್ರಮುಖ ಗೀತೆಗಳನ್ನು ಬರೆದ ಕೈಗಳಲ್ಲಿ ಅವರಿಗೆ ಶ್ರದ್ಧಾಂಜಲಿ ಸಲ್ಲಿಸುವ ಗೀತೆ ಬರೆಯಬೇಕಾದ ಪರಿಸ್ಥಿತಿ ಬರುತ್ತದೆ' ಎಂದು ನಾನು ಊಹಿಸಿರಲಿಲ್ಲ ಎಂದು ನಾಗೇಂದ್ರ ಪ್ರಸಾದ್ ಹೇಳಿದರು.

ಪುನೀತ ನಮನ ಕಾರ್ಯಕ್ರಮವು ಮಾತು– ಹಾಡಿನ ಮೂಲಕ ನಡೆಯಲಿದೆ. ಗುರುಕಿರಣ್ ಸಂಗೀತ ನೀಡಲಿದ್ದಾರೆ. ನಾಲ್ಕೈದು ತಾಸು ಈ ಕಾರ್ಯಕ್ರಮ ನಡೆಯಲಿದೆ ಎಂದು ನಾಗೇಂದ್ರ ಪ್ರಸಾದ್ ಮಾಹಿತಿ ನೀಡಿದರು.

ಗೃಹ ಸಚಿವರಿಗೆ ಅಶ್ವಿನಿ ಕೃತಜ್ಞತೆ

ಬೆಂಗಳೂರು: ಚಿತ್ರನಟ ಪುನೀತ್ ರಾಜ್‌ಕುಮಾರ್ ನಿಧನರಾದ ಸಂದರ್ಭದಲ್ಲಿ ಸಂಪೂರ್ಣವಾಗಿ ಅವರ ಕುಟುಂಬಕ್ಕೆ ಬೆಂಬಲವಾಗಿ ನಿಂತು, ಸುಸೂತ್ರವಾಗಿ ಅಂತ್ಯಸಂಸ್ಕಾರ ನೆರವೇರಿಸಲು ವ್ಯವಸ್ಥೆ ಮಾಡಿರುವುದಕ್ಕಾಗಿ ಗೃಹ ಸಚಿವ ಆರಗ ಜ್ಞಾನೇಂದ್ರ ಅವರಿಗೆ ಪುನೀತ್ ಪತ್ನಿ ಅಶ್ವಿನಿ ಕೃತಜ್ಞತೆ ಸಲ್ಲಿಸಿದ್ದಾರೆ.

ಗೃಹ ಸಚಿವರಿಗೆ ಭಾನುವಾರ ಪತ್ರ ಬರೆದಿರುವ ಅವರು, 'ಪುನೀತ್ ಅವರ ಅಕಾಲಿಕ ಅಗಲಿಕೆ ನಮಗಷ್ಟೇ ಅಲ್ಲ, ಇಡೀ ರಾಜ್ಯಕ್ಕೆ ಆಘಾತ ಉಂಟು ಮಾಡಿತ್ತು.ಪುನೀತ್‌ಅವರನ್ನುಸಕಲಗೌರವಗಳೊಂದಿಗೆ ಕಳುಹಿಸಿಕೊಟ್ಟಿದ್ದೀರಿ.'

ಲಕ್ಷಾಂತರ ಅಭಿಮಾನಿಗಳು ಅಂತಿಮ ದರ್ಶನ ಪಡೆಯುವುದಕ್ಕೆ ವ್ಯವಸ್ಥೆ ಮಾಡಿ, 3 ದಿನಗಳು ಅಹಿತಕರ ಘಟನೆ ನಡೆಯದಂತೆ ನೀವು ಕೈಗೊಂಡ ಕ್ರಮಗಳಿಂದಾಗಿ ನಾವು ಅವರಿಗೆ ಸೂಕ್ತವಾದ ರೀತಿಯಲ್ಲಿ ವಿದಾಯ ಹೇಳಲು ಸಾಧ್ಯವಾಗಿದೆ. ನಿಮ್ಮ ಈ ಸಹಕಾರಕ್ಕೆ ನಮ್ಮ ಇಡೀ ಕುಟುಂಬ ಮತ್ತು ಎಲ್ಲ ಅಭಿಮಾನಿಗಳ ಪರವಾಗಿ ಕೃತಜ್ಞತೆಗಳು' ಎಂದು ಅಶ್ವಿನಿ ಪತ್ರದಲ್ಲಿ ತಿಳಿಸಿದ್ದಾರೆ.

14 ಜಿಲ್ಲೆಗಳಲ್ಲಿ 'ಯೆಲ್ಲೊ ಅಲರ್ಟ್'

ಒಂದನೇ ಪುಟದಿಂದ

ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಚಿತ್ರದುರ್ಗ, ಹಾಸನ, ಕೊಡಗು, ಕೋಲಾರ, ಮಂಡ್ಯ, ಮೈಸೂರು, ರಾಮನಗರ, ಶಿವಮೊಗ್ಗ ಹಾಗೂ ತುಮಕೂರು ಜಿಲ್ಲೆಗಳಲ್ಲಿ ಇದೇ 9 ರವರೆಗೆ ಭಾರಿ ಮಳೆಯಾಗುವ ಸಾಧ್ಯತೆ ಇರುವುದರಿಂದ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ.

ಕರಾವಳಿ ಜಿಲ್ಲೆಗಳಲ್ಲಿ ಗುಡುಗು, ಸಿಡಿಲು ಹೆಚ್ಚಾಗಿ ಇರಲಿದ್ದು, ಕೆಲವೆಡೆ ಸಾಧಾರಣ ಮಳೆಯಾಗಲಿದೆ. ಉತ್ತರ ಒಳನಾಡಿನಲ್ಲಿ ಮಳೆ ತಗ್ಗಿದ್ದು, ಒಣಹವೆ ಮುಂದುವರಿದಿದೆ.

ಮಳೆ–ಎಲ್ಲಿ, ಎಷ್ಟು?: ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿಯಲ್ಲಿ ಭಾನುವಾರ 10 ಸೆಂ.ಮೀ ಗರಿಷ್ಠ ಮಳೆಯಾಗಿದೆ. ಸುಳ್ಯ 7, ಪುತ್ತೂರು, ಚಾಮರಾಜನಗರ, ಮಡಿಕೇರಿ 5, ಕಾರ್ಕಳ 3, ಮಂಗಳೂರು, ಸಕಲೇಶಪುರ 2, ಮಂಗಳೂರು, ಕುಂದಾಪುರ, ಕಳಸದಲ್ಲಿ ತಲಾ 1 ಸೆಂ.ಮೀ ಮಳೆಯಾಗಿದೆ. ಬೀದರ್‌ನಲ್ಲಿ 14 ಡಿಗ್ರಿ ಸೆಲ್ಸಿಯಸ್ ಕನಿಷ್ಠ ತಾಪಮಾನ ದಾಖಲಾಗಿದೆ.

ಕೇರಳ: 120 ವರ್ಷಗಳಲ್ಲಿಯೇ ಅಕ್ಟೋಬರ್‌ನಲ್ಲಿ ಅತ್ಯಧಿಕ ಮಳೆ

ತಿರುವನಂತಪುರಂ (ಪಿಟಿಐ): ಕೇರಳದಲ್ಲಿ 2021ರ ಅಕ್ಟೋಬರ್‌ನಲ್ಲಿ ಅತ್ಯಧಿಕ ಮಳೆ ದಾಖಲಾಗಿದೆ. ಇದು 120 ವರ್ಷಗಳಲ್ಲಿಯೇ ಅತ್ಯಧಿಕ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ತಿಳಿಸಿದೆ.

ಐಎಂಡಿ ಪ್ರಕಾರ ಈ ವರ್ಷದ ಅಕ್ಟೋಬರ್‌ನಲ್ಲಿ 589.9 ಮಿ.ಮೀ ಮಳೆಯಾಗಿದೆ. ಇದು 1901ರ ನಂತರ ಸುರಿದಿರುವ ಅತ್ಯಧಿಕ ಮಳೆಯಾಗಿದೆ. ಅಲ್ಲದೆ ರಾಜ್ಯದಲ್ಲಿ ಕಳೆದ ವರ್ಷ ಅಕ್ಟೋಬರ್‌ನಲ್ಲಿ ಸುರಿದ ಮಳೆಗಿಂತ ಎರಡು ಪಟ್ಟು ಹೆಚ್ಚು ಮಳೆ ಈ ವರ್ಷದ ಅಕ್ಟೋಬರ್‌ನಲ್ಲಿ ಸುರಿದಿದೆ.

ರಾಜ್ಯದಲ್ಲಿ ಅಕ್ಟೋಬರ್ ತಿಂಗಳಲ್ಲಿ ಸುರಿದ ಮಳೆಯ ಈ ಹಿಂದಿನ ದಾಖಲೆಗಳ ಪ್ರಕಾರ, 1932ರಲ್ಲಿ 543.2 ಮಿ.ಮೀ, 1999ರಲ್ಲಿ 567.9 ಮಿ.ಮೀ ಮತ್ತು 2002ರಲ್ಲಿ 511.7 ಮಿ.ಮೀ ಮಳೆ ಸುರಿದಿದೆ.

'ಅರ್ಹತೆ'ಗೆ 'ಮೀಸಲಾತಿ' ಇಲ್ಲ

ಒಂದನೇ ಪುಟದಿಂದ

ರಾಜ್ಯ ನಾಗರಿಕ ಸೇವಾ ಹುದ್ದೆಗಳಲ್ಲಿ ಎಸ್‌ಸಿ, ಎಸ್‌ಟಿ ನೌಕರರಿಗೆ ನೀಡಲಾಗುವ ಮುಂಬಡ್ತಿಯಲ್ಲಿ ಶೇ 15 ಮತ್ತು ಶೇ 3 ಮೀಸಲಾತಿ ಕಲ್ಪಿಸುವ ಕುರಿತು 1978 ರ ಏ. 27 ರಂದು ಹೊರಡಿಸಿದ ಆದೇಶದಲ್ಲಿ ವಿವರಿಸಲಾಗಿದೆ. 1999ರ ಆದೇಶದಲ್ಲಿ ಆಯಾ ವೃಂದದ ಕಾರ್ಯನಿರತ ವೃಂದಬಲದಲ್ಲಿ ಎಸ್‌ಸಿ, ಎಸ್‌ಟಿ ನೌಕರರ ಪ್ರಾತಿನಿಧ್ಯ ಶೇ 15 ಮತ್ತು ಶೇ 3 ತಲುಪುವವರೆಗೆ ಮೀಸಲಾತಿ ರೋಸ್ಟರ್ ಅಳವಡಿಸುವಂತೆ ಸೂಚಿಸಲಾಗಿದೆ.

'ಯಾವುದೇ ವೃಂದದಲ್ಲಿ ಮೀಸಲಾತಿ ಲೆಕ್ಕ ಹಾಕುವಾಗ ಸ್ವಂತ ಅರ್ಹತೆಯಲ್ಲಿ ನೇರ ನೇಮಕಾತಿಯಲ್ಲಿ ನೇಮಕಗೊಂಡ ಎಸ್‌ಸಿ, ಎಸ್‌ಟಿ ಮತ್ತು ಇತರ ಹಿಂದುಳಿದ ವರ್ಗಗಳ ಅಭ್ಯರ್ಥಿಗಳನ್ನು ಮೀಸಲಾತಿ ಕೋಟಾ ಎದುರು ಪರಿಗಣಿಸುವಂತಿಲ್ಲ. ಅಲ್ಲದೆ, ಈ ರೀತಿ ನೇಮಕ ಹೊಂದಿದ ನಂತರದ ವೃಂದಕ್ಕೂ ಸ್ವಂತ ಅರ್ಹತೆಯಲ್ಲಿಯೇ ಮುಂಬಡ್ತಿ ಹೊಂದಿದ್ದರೆ ಮೀಸಲಾತಿ ಕೋಟಾದಲ್ಲಿ ಪರಿಗಣಿಸಬಾರದು. ಅಂದರೆ, ಯಾವ ವೃಂದದಲ್ಲಿ ಇರುತ್ತಾರೊ ಆ ವೃಂದದಲ್ಲಿ ಎಸ್‌ಸಿ, ಎಸ್‌ಟಿ ಮೀಸಲಾತಿ ಕೋಟಾ ಪ್ರಾತಿನಿಧ್ಯ ಲೆಕ್ಕ ಹಾಕುವಾಗ ಈ ನೌಕರರನ್ನು ಲೆಕ್ಕಕ್ಕೆ ತೆಗೆದುಕೊಳ್ಳಬಾರದು. ಉಳಿದ ಎಸ್‌ಸಿ, ಎಸ್‌ಟಿ ನೌಕರರನ್ನು ಮಾತ್ರ ಮೀಸಲಾತಿ ಕೋಟಾದಲ್ಲಿ ಪರಿಗಣಿಸಬೇಕು' ಎಂದು ಸುತ್ತೋಲೆಯಲ್ಲಿ ವಿವರಿಸಲಾಗಿದೆ.

ಯಾವುದೇ ವೃಂದದಲ್ಲಿ ಮುಂಬಡ್ತಿಗೆ ಲಭ್ಯವಿರುವ ರಿಕ್ತ ಸ್ಥಾನಗಳು ಸಾಮಾನ್ಯ ವರ್ಗದವರಾಗಿದ್ದು, ಅದರ ಪೂರಕ ವೃಂದದಲ್ಲಿ ಜ್ಯೇಷ್ಠತಾ ಪಟ್ಟಿಯ ಅನುಸಾರ ಎಸ್‌ಸಿ, ಎಸ್‌ಟಿ ವರ್ಗದ ನೌಕರ ಮುಂಬಡ್ತಿಗೆ ಅರ್ಹರಾಗಿದ್ದರೆ ಅವರನ್ನು ಸಾಮಾನ್ಯ ವರ್ಗದ ರಿಕ್ತ ಸ್ಥಾನದ ಎದುರು ಪರಿಗಣಿಸಿ ಮುಂಬಡ್ತಿ ನೀಡಬೇಕು. ಮುಂಬಡ್ತಿ ನೀಡುತ್ತಿರುವ ವೃಂದದಲ್ಲಿ ಮೀಸಲಾತಿ ಪ್ರಾತಿನಿಧ್ಯ ಭರ್ತಿಯಾಗಿದೆ ಎಂಬ ಕಾರಣಕ್ಕೆ ಅರ್ಹ ಎಸ್‌ಸಿ, ಎಸ್‌ಟಿ ನೌಕರರನ್ನು ಸಾಮಾನ್ಯ ವರ್ಗದ ಮುಂಬಡ್ತಿ ರಿಕ್ತ ಸ್ಥಾನದ ಎದುರು ಪರಿಗಣಿಸದೇ ಇರುವಂತಿಲ್ಲ.

ಸಾಮಾನ್ಯ ವರ್ಗದ ಅಭ್ಯರ್ಥಿಗಳಾಗಿ ನೇರ ನೇಮಕಾತಿ ಹೊಂದಿದ ಎಸ್‌ಸಿ, ಎಸ್‌ಟಿ, ಹಿಂದುಳಿದ ವರ್ಗದ ಅಭ್ಯರ್ಥಿಗಳನ್ನು ಸ್ವಂತ ಅರ್ಹತೆಯ ಅಭ್ಯರ್ಥಿಗಳು ಎಂದೇ ಪರಿಗಣಿಸಬೇಕು. ಈ ರೀತಿ ಪರಿಗಣಿಸಲಾಗುವ ಅಭ್ಯರ್ಥಿಗಳು ಶುಲ್ಕ ವಿನಾಯಿತಿ ಹೊರತುಪಡಿಸಿ ಆಯ್ಕೆ ಪ್ರಕ್ರಿಯೆಯ ಯಾವುದೇ ಹಂತದಲ್ಲಿ ಬೇರೆ ಯಾವುದೇ ವಿನಾಯಿತಿ ಪಡೆದಿರಬಾರದು. ವಿನಾಯಿತಿ ಪಡೆದಿದ್ದರೆ ಅಂಥವರನ್ನು ಆಯಾ ಮೀಸಲಾತಿ ವರ್ಗದಲ್ಲಿ ಮಾತ್ರ ಪರಿಗಣಿಸಬೇಕು ಎಂದು ತಿಳಿಸಲಾಗಿದೆ.

ಮುಂಬಡ್ತಿ ನೀಡುವ ಸಂದರ್ಭದಲ್ಲಿ ಪ್ರಾತಿನಿಧ್ಯದ ಕೊರತೆ ಇದ್ದು ಮೀಸಲಾತಿ ರೋಸ್ಟರ್ ನಿರ್ವಹಿಸುವ ಸಂದರ್ಭದಲ್ಲಿ ಎಷ್ಟು ಹುದ್ದೆಗಳಿಗೆ ಮುಂಬಡ್ತಿ ನೀಡಲಾಗುತ್ತಿದೆಯೊ ಅಷ್ಟೂ ಹುದ್ದೆಗಳಿಗೆ ರೋಸ್ಟರ್ ಅನ್ವಯಿಸಬೇಕು. ಪ್ರಾತಿನಿಧ್ಯ ಪೂರ್ಣಗೊಂಡಿದೆ ಎಂಬ ಕಾರಣಕ್ಕೆ ಮಧ್ಯದಲ್ಲಿಯೇ ರೋಸ್ಟರ್ ನಿರ್ವಹಣೆಯನ್ನು ನಿಲ್ಲಿಸಬಾರದು ಎಂದೂ ಸುತ್ತೋಲೆಯಲ್ಲಿ ಸ್ಪಷ್ಟಪಡಿಸಲಾಗಿದೆ.

ರಸ್ತೆಯಲ್ಲಿ ಮದ್ಯ ಸುರಿದು ಬೆಂಕಿ ಹಚ್ಚಿ ಆಕ್ರೋಶ

ಪ್ರಜಾವಾಣಿ ವಾರ್ತೆ

ಹಾಸನ: ಅಕ್ರಮ ಮದ್ಯ ಮಾರಾಟ ತಡೆಯಲು ದೂರು ನೀಡಿದರೂ, ಪ್ರಯೋಜನವಾಗದ್ದರಿಂದ ಸಿಟ್ಟಿಗೆದ್ದ ಮಹಿಳೆಯರು, ಗ್ರಾಮಕ್ಕೆ ಪೂರೈಕೆ ಮಾಡಲು ತರುತ್ತಿದ್ದ ಸುಮಾರು ₹ 80 ಸಾವಿರ ಮೌಲ್ಯದ ಮದ್ಯವನ್ನು ಭಾನುವಾರ ರಸ್ತೆಗೆ ಸುರಿದು, ಬೆಂಕಿ ಹಚ್ಚಿದ್ದಾರೆ.

ಹೊಳೆನರಸೀಪುರ ತಾಲ್ಲೂಕು ಹಳೇಕೋಟೆ ಹೋಬಳಿಯ ಮಳಲಿ ಗ್ರಾಮದಲ್ಲಿ ಘಟನೆ ನಡೆದಿದೆ. ಸುಮಾರು 500 ಮನೆಗಳಿದ್ದು, 2 ಸಾವಿರ ಜನಸಂಖ್ಯೆ ಇದೆ.

ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿದ್ದ ಗೌಡೇಗೌಡ ಅವರು ಪಂಚಾಯಿತಿ ಮಾಡಿ, ಅಕ್ರಮವಾಗಿ ಮದ್ಯ ಮಾರಿದರೆ ₹ 10 ಸಾವಿರ ದಂಡ ವಿಧಿಸಲಾಗುವುದು ಎಂದು ನಿರ್ಣಯ ಮಾಡಿದ್ದರು. ಹೀಗಾಗಿ, ಗ್ರಾಮದಲ್ಲಿ ಮದ್ಯ ಮಾರಾಟ ಮಾಡುತ್ತಿರಲಿಲ್ಲ. ಆದರೆ, ಅವರ ನಿಧನ ನಂತರ ಗ್ರಾಮದ 30ರಿಂದ 40 ಮನೆಗಳಲ್ಲಿ ನಾಲ್ಕು ತಿಂಗಳಿನಿಂದ ಮದ್ಯ ಮಾರಾಟ ಮಾಡುತ್ತಿದ್ದರು.

ಭಾನುವಾರ ಮತ್ತು ಮಂಗಳವಾರ ಇಲ್ಲಿನ ಶಕ್ತಿದೇವತೆ ಲಕ್ಷ್ಮೀದೇವಿ ದೇವಾಲಯಕ್ಕೆ ವಿವಿಧೆಡೆಯಿಂದ ಹೆಚ್ಚು ಜನರು ಬರುತ್ತಿದ್ದುದರಿಂದ ಇದನ್ನೇ ಲಾಭ ಮಾಡಿಕೊಂಡ ಕೆಲವರು ರಸ್ತೆ ಬದಿಯಲ್ಲೇ ಮದ್ಯ ಮಾರಾಟಕ್ಕೆ ಮುಂದಾಗಿದ್ದರು. ಕೆಲವರು ಮನೆಯಲ್ಲಿದ್ದ ಧಾನ್ಯ, ಇತರೆ ವಸ್ತುಗಳನ್ನು ಮಾರಾಟ ಮಾಡಿ ಮದ್ಯ ಸೇವಿಸುತ್ತಿದ್ದರು.

ಅಕ್ರಮ ಮದ್ಯ ಮಾರಾಟಕ್ಕೆ ಕಡಿವಾಣ ಹಾಕಲೇಬೇಕೆಂದು ಭಾನುವಾರ ಪಂಚಾಯಿತಿ ಕರೆಯಲಾಗಿತ್ತು. ಇದೇ ವೇಳೆ ವ್ಯಕ್ತಿಯೊಬ್ಬ ಗ್ರಾಮಕ್ಕೆ ಕದ್ದು ಮದ್ಯ ಪೂರೈಕೆ ಮಾಡುತ್ತಿದ್ದ. ಮಹಿಳೆಯರು ತಡೆಯಲು ಹೋದಾಗ ಮದ್ಯ ಬಿಟ್ಟು ಆತ ಅಲ್ಲಿಂದ ಪರಾರಿಯಾದ. ಕೂಡಲೇ ಅಷ್ಟೂ ಮದ್ಯದ ಪೊಟ್ಟಣಗಳನ್ನು ರಸ್ತೆಗೆ ಸುರಿದು ನಾಶಪಡಿಸಿದರು.



ಅಕ್ರಮ ಮದ್ಯವನ್ನು ಗ್ರಾಮಸ್ಥರು ನಾಶ ಮಾಡಿದರು

₹ 50 ಸಾವಿರ ದಂಡ

ಪಂಚಾಯಿತಿಯಲ್ಲಿ ಮಹತ್ವದ ನಿರ್ಧಾರ ಕೈಗೊಂಡಿದ್ದು, ಗ್ರಾಮದಲ್ಲಿ ಯಾರಾದರೂ ಅಕ್ರಮವಾಗಿ ಮದ್ಯ ಮಾರಾಟ ಮಾಡಿದರೆ ₹ 50 ಸಾವಿರ ದಂಡ ವಿಧಿಸಲಾಗುತ್ತದೆ. ಜತೆಗೆ ಅಂಥವರ ಮನೆಯಲ್ಲಿ ಯಾವುದೇ ಶುಭ ಕಾರ್ಯ ನಡೆದರೆ ಯಾರೂ ಹೋಗಕೂಡದು ಎಂಬ ನಿರ್ಣಯಕೈಗೊಳ್ಳಲಾಗಿದೆ. ಈ ಸಂಬಂಧ ಆಣೆ, ಪ್ರಮಾಣವನ್ನೂ ಮಾಡಿಸಿಕೊಳ್ಳಲಾಗಿದೆ.

ರಾಷ್ಟ್ರೀಯ ಕಾರ್ಯಕಾರಿಣಿ ಉದ್ದೇಶಿಸಿ ಪ್ರಧಾನಿ ಮೋದಿ ಭಾಷಣ: ಕಾಂಗ್ರೆಸ್‌ಗೆ ಪರೋಕ್ಷ ಟೀಕೆ

ಸೇವೆ, ಸಂಕಲ್ಪ, ಸಮರ್ಪಣೆಯೇ ಬಿಜೆಪಿ ಮೌಲ್ಯ

ನವದೆಹಲಿ (ಪಿಟಿಐ): 'ಬಿಜೆಪಿಯು ಸೇವೆ, ಸಂಕಲ್ಪ ಮತ್ತು ಸಮರ್ಪಣೆಯ ಮೌಲ್ಯಗಳನ್ನು ಅನುಸರಿಸುತ್ತದೆಯೇ ವಿನಾ, ಕುಟುಂಬದ ಸುತ್ತ ಸುತ್ತುವುದಿಲ್ಲ' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಬಿಜೆಪಿ ಕಾರ್ಯಕಾರಿಣಿಯ ಒಂದು ದಿನದ ಸಭೆಯನ್ನು ಉದ್ದೇಶಿಸಿದ ಅವರು ಮಾತನಾಡಿದರು.

'ಬಿಜೆಪಿ ಕುಟುಂಬ ಆಧಾರಿತ ಪಕ್ಷವಲ್ಲ. ಪಕ್ಷವನ್ನು ಒಂದು ಕುಟುಂಬವು ಮುನ್ನಡೆಸುವುದಿಲ್ಲ. ಆದರೆ ಸಾರ್ವಜನಿಕ ಸೇವೆ ಮತ್ತು ಸಮರ್ಪಣೆಯ ಸಂಸ್ಕೃತಿಯಿಂದ ಪಕ್ಷವು ಮುಂದೆ ಸಾಗುತ್ತದೆ ಎಂಬುದಾಗಿ ಪ್ರಧಾನಿ ಹೇಳಿದರು' ಎಂದು ಬಿಜೆಪಿ ಮುಖಂಡ ಭೂಪೇಂದ್ರ ಯಾದವ್ ಮಾಹಿತಿ ನೀಡಿದರು. ಕೋವಿಡ್ ಸಾಂಕ್ರಾಮಿಕ ಸಮಯದಲ್ಲಿ ಬಿಜೆಪಿ ಕಾರ್ಯಕರ್ತರು ಮಾಡಿದ ಸೇವಾ ಕಾರ್ಯಗಳನ್ನು ಪ್ರಧಾನಿ ಉಲ್ಲೇಖಿಸಿದ್ದಾರೆ ಎಂದೂ ಯಾದವ್ ತಿಳಿಸಿದ್ದಾರೆ.

ಪಕ್ಷಕ್ಕಾಗಿ ಜೀವನವನ್ನು ಮುಡಿಪಾಗಿಟ್ಟ ಕಾರ್ಯಕರ್ತರಿಗೆ ಗೌರವ ಸಲ್ಲಿಸಲು ನಮೋ ಆ್ಯಪ್‌ನಲ್ಲಿ ಪ್ರಾರಂಭಿಸಲಾದ 'ಕಮಲ್ ಪುಷ್ಪ' ಎಂಬ ಹೊಸ ಯತ್ನದ ಕುರಿತು ಮೋದಿ ಮಾತನಾಡಿದರು.

ಅಫ್ಗಾನಿಸ್ತಾನವನ್ನು ತಾಲಿಬಾನ್ ಸ್ವಾಧೀನ ಪಡಿಸಿಕೊಂಡಿರುವುದನ್ನು ಸಚಿವ ಧರ್ಮೇಂದ್ರ ಪ್ರಧಾನ್ ಉಲ್ಲೇಖಿಸಿದರು. ಪಾಕಿಸ್ತಾನ ಮತ್ತು ಅಫ್ಗಾನಿಸ್ತಾನ ಸೇರಿದಂತೆ ನೆರೆಯ ರಾಷ್ಟ್ರಗಳ ಅಲ್ಪಸಂಖ್ಯಾತರಿಗೆ ಪೌರತ್ವ ನೀಡಲು ಪೌರತ್ವ ತಿದ್ದುಪಡಿ ಕಾಯ್ದೆಯನ್ನು ಜಾರಿಗೆ ತರುವ ದೂರದೃಷ್ಟಿ ತೋರಿದ ಮೋದಿ ಅವರನ್ನು ಶ್ಲಾಘಿಸಿದರು.

ಬಿಜೆಪಿಯ ಕಾರ್ಯಕಾರಿಣಿಯು ಪ್ರತಿ ಮೂರು ತಿಂಗಳಿಗೊಮ್ಮೆ ನಡೆಯಬೇಕು. ಆದರೆ ಕಳೆದ ವರ್ಷ ಕೋವಿಡ್-19 ಸಾಂಕ್ರಾಮಿಕ ಹರಡಿದ ನಂತರ ಇದೇ ಮೊದಲ ಬಾರಿಗೆ ನಡೆಯಿತು.



ಪ್ರಧಾನಿ ನರೇಂದ್ರ ಮೋದಿ ಅವರನ್ನು ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ಸನ್ಮಾನಿಸಲಾಯಿತು. ಕೇಂದ್ರ ಸಚಿವ ರಾಜನಾಥ್ ಸಿಂಗ್ ಮತ್ತು ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಇದ್ದರು —ಪಿಟಿಐ ಚಿತ್ರ

ಗೆಲುವಿಗೆ ನಿರ್ಣಯ

ಸಭೆಯಲ್ಲಿ ಕೈಗೊಂಡ ನಿರ್ಣಯದ ವಿವರಗಳನ್ನು ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಹಂಚಿಕೊಂಡರು. ಮುಂಬರುವ ವಿಧಾನಸಭಾ ಚುನಾವಣೆಗಳಲ್ಲಿ ಪಕ್ಷದ ಗೆಲುವನ್ನು ಖಚಿತಪಡಿಸಿಕೊಳ್ಳಬೇಕು ಎಂಬುದು ಪ್ರಮುಖ ನಿರ್ಣಯ. ಪಕ್ಷ ಗೆಲುವು ಸಾಧಿಸಲು ರಾಷ್ಟ್ರೀಯ ಕಾರ್ಯಕಾರಿಣಿಯಿಂದ ಸಕಾರಾತ್ಮಕ, ಶಕ್ತಿಯುತ ಮತ್ತು ಬೇಷರತ್ ಬೆಂಬಲವಿದೆ ಎಂದು ಅವರು ಹೇಳಿದರು.

ವಿರೋಧ ಪಕ್ಷಗಳು ಅವಕಾಶವಾದಿ ರಾಜಕಾರಣ ಮಾಡುತ್ತಿವೆ. ಸಾಂಕ್ರಾಮಿಕದ ವೇಳೆ ಜನರಲ್ಲಿ ಭೀತಿ ಸೃಷ್ಟಿಸುವ ಪ್ರಯತ್ನಗಳನ್ನು ವಿರೋಧ ಪಕ್ಷಗಳು ಮಾಡಿವೆ ಎಂದು ಕಾರ್ಯಕಾರಿಣಿ ಆರೋಪಿಸಿದೆ.

ಗಡಿ ಕುರಿತು ಮೌನ ಏಕೆ: ಕಾಂಗ್ರೆಸ್ ಪ್ರಶ್ನೆ

ಭಾರತ ಮತ್ತು ಚೀನಾ ನಡುವಿನ ಗಡಿ ಸಮಸ್ಯೆ ಕುರಿತು ಬಿಜೆಪಿ ಏಕೆ ಮೌನ ತಾಳಿದೆ ಎಂದು ಕಾಂಗ್ರೆಸ್ ಭಾನುವಾರ ಪ್ರಶ್ನಿಸಿದೆ. ನಮ್ಮ ದೇಶದ ಗಡಿಗೆ ಚೀನಾದಿಂದ ಇರುವ ಬೆದರಿಕೆ ಮತ್ತು ನೆರೆ ರಾಷ್ಟ್ರಗಳ ಮೇಲೆ ಹೆಚ್ಚುತ್ತಿರುವ ಚೀನಾದ ಪ್ರಭಾವದ ಕುರಿತು ಬಿಜೆಪಿ ಸತ್ಯ ಹೇಳಬೇಕು ಎಂದು ಆಗ್ರಹಿಸಿದೆ.

ಗಡಿಯಲ್ಲಿ ಚೀನಾ ತನ್ನ ಚಟುವಟಿಕೆಗಳನ್ನು ಹೆಚ್ಚಿಸಿದೆ ಮತ್ತು ಚುಂಬಿ ಕಣಿವೆಯಲ್ಲಿ ಮೂಲಸೌಕರ್ಯ ನಿರ್ಮಿಸುತ್ತಿದೆ ಎಂಬ ವರದಿಗಳನ್ನು ಉಲ್ಲೇಖಿಸಿ ಕಾಂಗ್ರೆಸ್ ವಕ್ತಾರ ಪವನ್ ಖೇರಾ ಈ ಪ್ರಶ್ನೆಗಳನ್ನು ಕೇಳಿದ್ದಾರೆ. ಚೀನಾ ಕುರಿತು ಮಾಹಿತಿ ನೀಡಲು ಹುಸಿ ರಾಷ್ಟ್ರವಾದಿ ಪಕ್ಷದ ರಾಷ್ಟ್ರೀಯ ಕಾರ್ಯಕಾರಿಣಿಯನ್ನು ಆಗ್ರಹಿಸುತ್ತಿದ್ದೇವೆ.

ನಮ್ಮ ಗಡಿಗಳಿಂದ ಚೀನಾವನ್ನು ಯಾವಾಗ ಹಿಮ್ಮೆಟ್ಟಿಸುವಿರಿ. ನಮ್ಮ ನೆರೆ ರಾಷ್ಟ್ರಗಳ ಮೇಲೆ ಹೆಚ್ಚುತ್ತಿರುವ ಚೀನಾದ ಪ್ರಭಾವವನ್ನು ತಗ್ಗಿಸಲು ಯಾವ ಕ್ರಮಗಳನ್ನು ತೆಗೆದುಕೊಂಡಿದ್ದೀರಿ ಎಂದು ಕೇಳಿದ್ದಾರೆ.

ಅಫ್ಗಾನಿಸ್ತಾನದಲ್ಲಿ ನಡೆಯುತ್ತಿರುವ ಬೆಳವಣಿಗೆಗಳು ಪಾಕಿಸ್ತಾನ ಮತ್ತು ಚೀನಾಕ್ಕೆ ಸಹಕಾರಿಯಾಗಿವೆ. ಈ ಬೆಳವಣಿಗೆಗಳು ಭಾರತಕ್ಕೆ ದುಬಾರಿಯಾಗಲಿವೆ ಎಂದಿದ್ದಾರೆ.

ಕಾಂಗ್ರೆಸ್ ಎತ್ತಿರುವ ಪ್ರಶ್ನೆಗಳಿಗೆ ಪ್ರತಿಕ್ರಿಯೆ ನೀಡಿದ ಕೇಂದ್ರ ಸಚಿವ ಕಿರಣ್ ರಿಜಿಜು, ಇವರು ಭಾರತೀಯ ಸೇನೆಯನ್ನು ನಂಬುವುದಿಲ್ಲ ಆದರೆ ವಿದೇಶಿ ಮಾಧ್ಯಮಗಳನ್ನು ನಂಬುತ್ತಾರೆ ಎಂದು ಹೇಳಿದ್ದಾರೆ.

ಪಕ್ಷ ಬಲವೃದ್ಧಿ: ದಕ್ಷಿಣದತ್ತ ಚಿತ್ತ

ಒಂದನೇ ಪುಟದಿಂದ...

ದೇಶದಲ್ಲಿರುವ 10.40 ಲಕ್ಷ ಮತಗಟ್ಟೆಗಳಿಗೂ ಮತಗಟ್ಟೆ ಸಮಿತಿ ರಚಿಸುವಂತೆ ನಡ್ಡಾ ಅವರು ಮುಖಂಡರಿಗೆ ನಿರ್ದೇಶನ ನೀಡಿದ್ದಾರೆ ಎಂದು ಕಾರ್ಯಕಾರಿಣಿಯ ಬಗ್ಗೆ ಮಾಧ್ಯಮಗಳಿಗೆ ವಿವರ ನೀಡಿದ ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ತಿಳಿಸಿದರು. ಶೇ 85ರಷ್ಟು ಮತಗಟ್ಟೆಗಳಿಗೆ ಮತಗಟ್ಟೆ ಸಮಿತಿ ಈಗಾಗಲೇ ಇದೆ. ಉಳಿದ ಶೇ 15ರಷ್ಟು ಮತಗಟ್ಟೆಗಳ ಸಮಿತಿಯನ್ನು ಈ ಡಿಸೆಂಬರ್ 25ರೊಳಗೆ ರಚಿಸುವ ಗುರಿ ಹಾಕಿಕೊಳ್ಳಲಾಗಿದೆ ಎಂದರು.

ಪಕ್ಷವು ದೇಶದ ಮೂಲೆಮೂಲೆಗೂ ತಲುಪಬೇಕು. ಅದಕ್ಕಾಗಿ ಪ್ರತಿ ಮತಗಟ್ಟೆಯಲ್ಲಿಯೂ ಮತದಾರರ ಪಟ್ಟಿಯ ಪುಟ ಸಮಿತಿಗಳನ್ನು ಮುಂದಿನ ಏಪ್ರಿಲ್ 6ರ ಒಳಗೆ ರಚಿಸಬೇಕು. ಪ್ರಧಾನಿಯವರ 'ಮನದ ಮಾತು' ಬಾನುಲಿ ಭಾಷಣವನ್ನು ಸಾರ್ವಜನಿಕವಾಗಿ ಆಲಿಸುವುದಕ್ಕೆ ವ್ಯವಸ್ಥೆ ಮಾಡಬೇಕು ಎಂದೂ ನಡ್ಡಾ ಕರೆ ಕೊಟ್ಟಿದ್ದಾರೆ.

ಪಶ್ಚಿಮ ಬಂಗಾಳ ಚುನಾವಣೆಯಲ್ಲಿ ಬಿಜೆಪಿ ಸೋಲಿನ ಬಳಿಕ ನಾಯಕರು ಪಕ್ಷ ತೊರೆಯುತ್ತಿರುವ ವಿಚಾರವೂ ಕಾರ್ಯಕಾರಿಣಿಯಲ್ಲಿ ಉಲ್ಲೇಖವಾಗಿದೆ. 'ಪಕ್ಷವು ರಾಜ್ಯ ಘಟಕದ ಜತೆಗೆ ಬಂಡೆಯಂತೆ ನಿಲ್ಲಲಿದೆ. ಪಶ್ಚಿಮ ಬಂಗಾಳದಲ್ಲಿ ಅರಾಜಕತೆ ಸೃಷ್ಟಿಸುತ್ತಿರುವ ಶಕ್ತಿಗಳಿಗೆ ತಕ್ಕ ಉತ್ತರ ನೀಡಲಾಗುವುದು. ಪ್ರಜಾಸತ್ತಾತ್ಮಕ ರೀತಿಯಲ್ಲಿಯೇ ಹೋರಾಡಲಾಗುವುದು' ಎಂದು ನಡ್ಡಾ ಹೇಳಿದ್ದಾರೆ.

ಪಂಜಾಬ್‌ನಲ್ಲಿ ಬಿಜೆಪಿ ಕಷ್ಟಕರ ಸ್ಥಿತಿಯಲ್ಲಿದೆ. ಹಾಗಾಗಿಯೇ, ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಸಿಖ್ ಸಮುದಾಯದ ಅಭಿವೃದ್ಧಿಗೆ ಕೈಗೊಂಡ ಕ್ರಮಗಳ ಬಗ್ಗೆ ನಡ್ಡಾ ಅವರು ವಿವರ ನೀಡಿದ್ದಾರೆ.

ಉತ್ತರ ಪ್ರದೇಶ, ಮಣಿಪುರ, ಗೋವಾ, ಉತ್ತರಾಖಂಡ ಮುಖ್ಯಮಂತ್ರಿಗಳು, ಬಿಜೆಪಿಯ ಪಂಜಾಬ್ ಘಟಕದ ಅಧ್ಯಕ್ಷರು ಚುನಾವಣಾ ಸನ್ನದ್ಧತೆ ಬಗ್ಗೆ ವಿವರ ನೀಡಿದರು. ಪಕ್ಷ ಮತ್ತು ಜನರ ನಡುವೆ ನಂಬುಗೆಯ ಸೇತುವೆಯಂತೆ ಪಕ್ಷದ ಕಾರ್ಯಕರ್ತರು ಕೆಲಸ ಮಾಡಬೇಕು ಎಂದು ಪ್ರಧಾನಿ ಮೋದಿ ಅವರು ಭಾನುವಾರ ನಡೆದ ಕಾರ್ಯಕಾರಿಣಿಯಲ್ಲಿ ಕರೆ ಕೊಟ್ಟರು.

ಬಿಜೆಪಿ ಆಳ್ವಿಕೆ ಇರುವ ರಾಜ್ಯಗಳಲ್ಲಿ ಆಡಳಿತ ವಿರೋಧಿ ಅಲೆಯನ್ನು ಮೆಟ್ಟಿ ನಿಲ್ಲುವುದಕ್ಕಾಗಿ ಮೋದಿ ಅವರ ಜನಪ್ರಿಯತೆಯನ್ನೇ ನೆಚ್ಚಿಕೊಳ್ಳಲಾಗುವುದು ಎಂಬ ಸುಳಿವನ್ನು ಕಾರ್ಯಕಾರಿಣಿಯು ನೀಡಿದೆ.

ಮೋದಿ ಅವರ ನೇತೃತ್ವದಲ್ಲಿ ಭಾರತವು ಶಕ್ತ ರಾಷ್ಟ್ರ ಎಂಬ ಹೆಸರು ಪಡೆದಿದೆ. 278 ದಿನಗಳಲ್ಲಿ ನೂರು ಕೋಟಿ ಡೋಸ್ ಕೋವಿಡ್ ತಡೆ ಲಸಿಕೆ ಹಾಕಿಸುವ ಮೂಲಕ ಚರಿತ್ರೆ ನಿರ್ಮಿಸಲಾಗಿದೆ. ಮೋದಿ ಅವರದ್ದು ದೃಢ ನಿಲುವು ಮತ್ತು ಬಲವಾದ ನಾಯಕತ್ವ ಎಂದು ಕಾರ್ಯಕಾರಿಣಿಯಲ್ಲಿ ಹೊಗಳಲಾಗಿದೆ. ಕಾರ್ಯಕಾರಿಣಿಯ ನಿರ್ಣಯದಲ್ಲಿಯೂ ಮೋದಿ ಅವರು ಮುಖ್ಯಮಂತ್ರಿಯಾಗಿ ಮತ್ತು ಪ್ರಧಾನಿಯಾಗಿ ಆಳ್ವಿಕೆ ನಡೆಸಿದ 20 ವರ್ಷಗಳ ಉಲ್ಲೇಖ ಇದೆ.

ಸುದ್ದಿ 2 ನಿಮಿಷ

ದೇಶದ 33.23 ಲಕ್ಷ ಮಕ್ಕಳಲ್ಲಿ ಅಪೌಷ್ಟಿಕತೆ

ನವದೆಹಲಿ (ಪಿಟಿಐ): ದೇಶದಲ್ಲಿ 33.23 ಲಕ್ಷಕ್ಕೂ ಹೆಚ್ಚು ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ. ಅವರಲ್ಲಿ ಅರ್ಧಕ್ಕಿಂತ ಹೆಚ್ಚು ಮಕ್ಕಳು ತೀವ್ರ ಅಪೌಷ್ಟಿಕತೆಯಿಂದ ನರಳುತ್ತಿದ್ದಾರೆ ಎಂದು ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯವು ಆರ್‌ಟಿಐ ಅರ್ಜಿಗೆ ಪ್ರತಿಕ್ರಿಯಿಸಿದೆ.

ಅಪೌಷ್ಟಿಕತೆಗೆ ತುತ್ತಾಗಿರುವ ಮಕ್ಕಳನ್ನು ಹೆಚ್ಚಾಗಿ ಹೊಂದಿರುವ ರಾಜ್ಯಗಳ ಪಟ್ಟಿಯಲ್ಲಿ ಮಹಾರಾಷ್ಟ್ರ, ಬಿಹಾರ ಮತ್ತು ಗುಜರಾತ್ ಕ್ರಮವಾಗಿ ಮೊದಲ ಮೂರು ಸ್ಥಾನಗಳಲ್ಲಿವೆ.

2021ರ ಅಕ್ಟೋಬರ್ 14ರವರೆಗಿನ ಅಂಕಿ ಅಂಶಗಳ ಪ್ರಕಾರ ದೇಶದಲ್ಲಿ 17.76 ಲಕ್ಷ ಮಕ್ಕಳು ತೀವ್ರ ಅಪೌಷ್ಟಿಕತೆ (ಎಸ್‌ಎಎಂ) ಹಾಗೂ 15.46 ಲಕ್ಷ ಮಕ್ಕಳು ಮಧ್ಯಮ ತೀವ್ರ ಅಪೌಷ್ಟಿಕತೆಯಿಂದ (ಎಂಎಎಂ) ಬಳಲುತ್ತಿದ್ದಾರೆ ಎಂದು ಸಚಿವಾಲಯ ಅಂಕಿ ಅಂಶದ ಮಾಹಿತಿ ನೀಡಿದೆ.

ಕಳೆದ ವರ್ಷ ಕೇಂದ್ರ ಸರ್ಕಾರ ಆರಂಭಿಸಿದ ಪೋಷಣ್ ಟ್ರ್ಯಾಕರ್ ಅಪ್ಲಿಕೇಷನ್‌ನಲ್ಲಿ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ದಾಖಲಿಸಿರುವ ದತ್ತಾಂಶಗಳನ್ನು ಆಧರಿಸಿ ಸಚಿವಾಲಯವು, ಪಿಟಿಐ ಸಲ್ಲಿಸಿದ್ದ ಆರ್‌ಟಿಐ ಅರ್ಜಿಗೆ ಉತ್ತರ ನೀಡಿದೆ.

ಕರ್ನಾಟಕದಲ್ಲಿ 2.49 ಲಕ್ಷ ಅಪೌಷ್ಟಿಕ ಮಕ್ಕಳಿದ್ದಾರೆ. ಇದರಲ್ಲಿ 1.82 ಲಕ್ಷ ಮಕ್ಕಳು ಎಂಎಎಂ ಮತ್ತು 67,285 ಮಕ್ಕಳು ಎಸ್‌ಎಎಂನಿಂದ ಬಳಲುತ್ತಿದ್ದಾರೆ ಎಂದು ಸಚಿವಾಲಯ ಮಾಹಿತಿ ನೀಡಿದೆ.



ಆಸ್ಪತ್ರೆಯಲ್ಲಿ ಅಗ್ನಿ ದುರಂತ: ಅಗ್ನಿಶಾಮಕ ಸುರಕ್ಷತಾ ಕ್ರಮಗಳ ಕೊರತೆ ಬಹಿರಂಗ

ಪುಣೆ (ಪಿಟಿಐ): ಅಹ್ಮದ್‌ನಗರದ ಜಿಲ್ಲಾ ಆಸ್ಪತ್ರೆಯಲ್ಲಿ ಅಗ್ನಿಶಾಮಕ ಸುರಕ್ಷತಾ ಕ್ರಮಗಳ ಕೊರತೆ ಎದ್ದು ಕಾಣುತ್ತಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಶನಿವಾರ ಇಲ್ಲಿ ಸಂಭವಿಸಿದ ಅಗ್ನಿ ದುರಂತದಲ್ಲಿ 11 ರೋಗಿಗಳು ಮೃತಪಟ್ಟಿದ್ದರು.

ಹೊಗೆಯು ವಾರ್ಡ್‌ಗೆ ವ್ಯಾಪಿಸಿದ್ದರಿಂದ ಕೆಲವರು ಉಸಿರುಗಟ್ಟಿ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ದುರಂತದ ತನಿಖೆಗೆ ಅಹ್ಮದ್‌ನಗರದ ಸ್ಥಳೀಯ ಆಡಳಿತವು ಏಳು ಸದಸ್ಯರ ಸಮಿತಿ ರಚಿಸಿದ್ದು, ಸಮಿತಿಯು ಸೋಮವಾರದೊಳಗೆ ಪ್ರಾಥಮಿಕ ವರದಿ ಸಲ್ಲಿಸುವ ಸಾಧ್ಯತೆ ಇದೆ.

ಆಸ್ಪತ್ರೆಯಲ್ಲಿ ಮೊದಲಿಗೆ ಬೆಂಕಿ ಎಲ್ಲಿ ಕಾಣಿಸಿಕೊಂಡಿತು. ಅದನ್ನು ಗಮನಿಸಿದ್ದು ಯಾರು ಮತ್ತು ತಕ್ಷಣಕ್ಕೆ ತೆಗೆದುಕೊಂಡ ಕ್ರಮಗಳು ಯಾವುವು ಎಂಬುದನ್ನು ಸಮಿತಿಯ ಸದಸ್ಯರು ಪರಿಶೀಲಿಸುತ್ತಿದ್ದಾರೆ ಎಂದು ಅಹ್ಮದ್‌ನಗರ ಮುನ್ಸಿಪಲ್ ಕಾರ್ಪೊರೇಷನ್‌ನ ಮುಖ್ಯ ಅಗ್ನಿಶಾಮಕ ಅಧಿಕಾರಿ ಶಂಕರ್ ಮಿಸಾಲ್ ತಿಳಿಸಿದ್ದಾರೆ.

'ಅಗ್ನಿಶಾಮಕಗಳನ್ನು ಹೊರತುಪಡಿಸಿ, ನಾವು ಸೂಚಿಸಿದ ಇತರ ಯಾವುದೇ ಅಗ್ನಿಶಾಮಕ ಸುರಕ್ಷತಾ ಕ್ರಮಗಳು ಆಸ್ಪತ್ರೆಯಲ್ಲಿ ಕಂಡು ಬಂದಿಲ್ಲ' ಎಂದು ಅವರು ಮಾಹಿತಿ ನೀಡಿದರು.

'ಆಸ್ಪತ್ರೆಯಲ್ಲಿ ನೀರು ಚಿಮ್ಮಿಸುವ ವ್ಯವಸ್ಥೆ (ಸ್ಪ್ರಿಂಕ್ಲರ್) ಸೇರಿದಂತೆ ನಮ್ಮ ಶಿಫಾರಸುಗಳು ಜಾರಿಯಾಗಿಲ್ಲ. ಸ್ಪ್ರಿಂಕ್ಲರ್ ಇದ್ದಿದ್ದರೆ ಆರಂಭಿಕ ಹಂತದಲ್ಲಿಯೇ ಬೆಂಕಿ ನಂದಿಸಲು ಸಾಧ್ಯವಿತ್ತು' ಎಂದು ಅವರು ಪ್ರತಿಕ್ರಿಯಿಸಿದರು.

ಇ.ಡಿ ವಶಕ್ಕೆ ಅನಿಲ್ ದೇಶಮುಖ್

ಮುಂಬೈ (ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣದ ಸಂಬಂಧ ಮಹಾರಾಷ್ಟ್ರದ ಮಾಜಿ ಗೃಹ ಸಚಿವ ಅನಿಲ್ ದೇಶಮುಖ್‌ಗೆ ಅವರಿಗೆ ತನಿಖೆಗಾಗಿ ಇದೇ 12ರವರೆಗೂ ಜಾರಿ ನಿರ್ದೇಶನಾಲಯದ (ಇ.ಡಿ) ವಶಕ್ಕೆ ಬಾಂಬೆ ಹೈಕೋರ್ಟ್ ಒಪ್ಪಿಸಿದೆ.

ಈ ಮೂಲಕ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದ ವಿಶೇಷ ನ್ಯಾಯಾಲಯದ ಆದೇಶವನ್ನು ರದ್ದುಪಡಿಸಿದೆ. ವಿಶೇಷ ನ್ಯಾಯಾಲಯವು ಶನಿವಾರ ದೇಶಮುಖ್‌ಗೆ ಅವರಿಗೆ 14 ದಿನ ನ್ಯಾಯಾಂಗ ಬಂಧನ ವಿಧಿಸಿ ಆದೇಶಿಸಿತ್ತು.

ಇದನ್ನು ಪ್ರಶ್ನಿಸಿ ಇ.ಡಿ ಸಲ್ಲಿಸಿದ ಅರ್ಜಿಯನ್ನು ನ್ಯಾಯಮೂರ್ತಿ ಮಾಧವ್ ಜಾಮ್ದಾರ್ ನೇತೃತ್ವದ ರಜಾ ಅವಧಿಯ ಪೀಠವು ವಿಚಾರಣೆ ನಡೆಸಿತು.

ದೇಶಮುಖ್ ಪರ ವಕೀಲರಾದ ವಿಕ್ರಮ್ ಚೌಧರಿ ಮತ್ತು ಅನಿಕೇತ್ ನಿಕಮ್ ಅವರು, ಇ.ಡಿ ಮನವಿಯನ್ನು ನಾವು ವಿರೋಧಿಸಿದರೂ, ದೇಶಮುಖ್ ಅವರು ಸ್ವಯಂ ಆಗಿ ಇ.ಡಿ ವಿಚಾರಣೆಗೆ ಒಳಪಡಲು ನಿರ್ಧರಿಸಿದ್ದಾರೆ ಎಂದು ತಿಳಿಸಿದರು.

ಬಹುಕೋಟಿ ಹಣ ಅಕ್ರಮ ವರ್ಗಾವಣೆ ಪ್ರಕರಣದ ಸಂಬಂಧ ಸುದೀರ್ಘ 12 ಗಂಟೆ ವಿಚಾರಣೆಯ ನಂತರ ನ. 1 ರಂದು ಇ.ಡಿ ದೇಶಮುಖ್ ಅವರನ್ನು ಬಂಧಿಸಿತ್ತು. ನ.2 ರಂದು ದೇಶ್‌ಮುಖ್ ಅವರಿಗೆ ನವೆಂಬರ್ 6 ರವರೆಗೆ ಇ.ಡಿ ವಶಕ್ಕೆ ಒಪ್ಪಿಸಲಾಗಿತ್ತು.

ಶನಿವಾರ ಮತ್ತೆ ಅವರನ್ನು ವಿಶೇಷ ನ್ಯಾಯಾಲಯದ ಮುಂದೆ ಹಾಜರುಪಡಿಸಿದಾಗ ಇ.ಡಿ ಮತ್ತಷ್ಟು ದಿನ ವಶಕ್ಕೆ ನೀಡುವಂತೆ ಕೇಳಿತ್ತು. ಆದರೆ ವಿಶೇಷ ನ್ಯಾಯಾಲಯವು ದೇಶಮುಖ್ ಅವರನ್ನು ನ್ಯಾಯಾಂಗ ಬಂಧನಕ್ಕೆ ನೀಡಿತ್ತು. ಇದನ್ನು ಇ.ಡಿ ಹೈಕೋರ್ಟ್‌ನಲ್ಲಿ ಪ್ರಶ್ನಿಸಿತ್ತು.

51 ಕಿ.ಮೀ. ಅಂತರದ ಡ್ರೋನ್ ಹಾರಾಟದ ದಾಖಲೆ

ನವದೆಹಲಿ (ಪಿಟಿಐ): ದಾಖಲೆಯ ಅಂದರೆ 51 ಕಿ.ಮೀ ಅಂತರದ ಡ್ರೋನ್ ಹಾರಾಟ ಪ್ರಕ್ರಿಯೆ ಹರಿಯಾಣದಲ್ಲಿ ನಡೆದಿದೆ. ಎಚ್‌ಪಿಸಿಎಲ್ ಸಂಸ್ಥೆಯ ಪೈಪ್‌ಲೈನ್ ಅಳವಡಿಕೆಯ ಸಮೀಕ್ಷೆಗೆ ಈ ಹಾರಾಟ ನಡೆಸಲಾಗಿದೆ ಎಂದು ರೊಬೊಟಿಕ್ಸ್ ಮತ್ತು ಡ್ರೋನ್ ಕಂಪನಿಯು ಹೇಳಿಕೊಂಡಿದೆ.

'ನ. 5ರಂದು ಹಾರಾಟ ನಡೆಯಿತು. ಒಮ್ನಿ–ಹನ್ಸಾ ವಿ5 ಡ್ರೋನ್ 51 ಕಿ.ಮೀ ಅಂತರದ ಹಾರಾಟ ನಡೆಸಿದೆ. ನನ್ನ ಮಾಹಿತಿ ಅನುಸಾರ ಹಿಂದಿನ ದಾಖಲೆ 42 ಕಿ.ಮೀ ಆಗಿದೆ' ಎಂದು ಒಮ್ನಿಪ್ರೆಸೆಂಟ್ ರೊಬೊಟ್ ಟೆಕ್ನಾಲಜಿಸ್ ಸಂಸ್ಥೆ ಸ್ಥಾಪಕ ಮತ್ತು ಸಿಇಒ ಆಕಾಶ್ ಸಿನ್ಹಾ ಹೇಳಿದರು.

'ಡ್ರೋನ್ ಹಾರಾಟದ ಆರಂಭದಿಂದ ಅಂತ್ಯದವರೆಗೆ ಸ್ವಯಂಚಾಲಿತವಾಗಿತ್ತು. ನಾವು ನಮ್ಮದೇ ಪರಿಕರವನ್ನು ಬಳಸಿ 4ಜಿ ನೆಟ್‌ವರ್ಕ್ ನೆರವಿನಿಂದ ಡ್ರೋನ್ ಚಲನೆಯನ್ನು ಗುರುತಿಸಿದೆವು' ಎಂದರು.

ಆರ್ಯನ್ ಅಪಹರಣ: ಮಲಿಕ್ ಆರೋಪ

ಹಡಗಿನಲ್ಲಿ ಡ್ರಗ್ಸ್ ಪಾರ್ಟಿ ಪ್ರಕರಣ: ವಾಂಖೆಡೆ ವಿರುದ್ಧ ಮತ್ತೆ ಹರಿಹಾಯ್ದ ಮಹಾರಾಷ್ಟ್ರ ಸಚಿವ

ಪ್ರಜಾವಾಣಿ ವಾರ್ತೆ

ಮುಂಬೈ: ಬಾಲಿವುಡ್ ಸೂಪರ್ ಸ್ಟಾರ್ ಶಾರುಕ್ ಖಾನ್ ಅವರ ಮಗ ಆರ್ಯನ್ ಖಾನ್‌ರನ್ನು ಡ್ರಗ್ಸ್ ಪ್ರಕರಣದಲ್ಲಿ ಸಿಲುಕಿಸಿ ಅಪಹರಣ ಮಾಡಲಾಗಿತ್ತು ಎಂದು ಎನ್‌ಸಿಪಿ ವಕ್ತಾರ, ಮಹಾರಾಷ್ಟ್ರ ಸಚಿವ ನವಾಬ್ ಮಲಿಕ್ ಹೊಸ ಆರೋಪ ಮಾಡಿದ್ದಾರೆ. ಹಣ ವಸೂಲಿ ಮಾಡುವ ಸಲುವಾಗಿ ಈ ಸಂಚು ಮಾಡಲಾಗಿತ್ತು ಎಂದಿದ್ದಾರೆ.

ಬಿಜೆಪಿ ಮುಖಂಡ ಮೋಹಿತ್ ಭಾರತೀಯ (ಮೋಹಿತ್ ಕಂಬೋಜ್) ಈ ಅಪಹರಣ ಸಂಚಿನ ಸೂತ್ರಧಾರ. ಮಾದಕದ್ರವ್ಯ ನಿಯಂತ್ರಣ ಸಂಸ್ಥೆಯ (ಎನ್‌ಸಿಬಿ) ಮುಂಬೈ ವಲಯ ನಿರ್ದೇಶಕ ಸಮೀರ್ ವಾಂಖೆಡೆ ಅವರು ಮೋಹಿತ್ ಭಾರತೀಯ ಅವರ ಸ್ನೇಹಿತರು. ಅಲ್ಲದೇ ಮೋಹಿತ್ ಅವರು ವಾಂಖೆಡೆ ಅವರ 'ಖಾಸಗಿ ಸೇನೆ'ಯ ಭಾಗವಾಗಿದ್ದರು. ಆರ್ಯನ್ ಖಾನ್‌ರನ್ನು ಅಪಹರಿಸಿ ಹಣ ವಸೂಲು ಮಾಡುವ ಅತಿದೊಡ್ಡ ಸಂಚಿನಲ್ಲಿ ವಾಂಖೆಡೆ ಭಾಗಿ ಆಗಿದ್ದರು. ಆದರೆ ಆ ಸಂಚು ಬಹಿರಂಗವಾಯಿತು ಎಂದು ಮಲಿಕ್ ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ.

ಸಚಿವನಿಗೂ ಆಹ್ವಾನ

ತಮ್ಮ ಸಂಪುಟ ಸಹೋದ್ಯೋಗಿ ಅಸ್ಲಂ ಶೇಖ್ ಮತ್ತು ಅವರ ಮಕ್ಕಳನ್ನೂ ಹಡಗಿನಲ್ಲಿ ನಡೆದ ಪಾರ್ಟಿಗೆ ಆಮಂತ್ರಿಸಲಾಗಿತ್ತು. ಪಾರ್ಟಿಗೆ ಬರುವಂತೆ ಒತ್ತಾಯ ಮಾಡಲಾಗಿತ್ತು ಎಂದು ನವಾಬ್ ಮಲಿಕ್ ಹೇಳಿದ್ದಾರೆ.

ಮಹಾ ವಿಕಾಸ ಅಘಾಡಿ ಸರ್ಕಾರವನ್ನು ಅಸ್ಥಿರಗೊಳಿಸಲು ದೊಡ್ಡ ಸಂಚು ಮಾಡಲಾಗಿತ್ತು ಎಂದು ಈ ಎಲ್ಲಾ ಬೆಳವಣಿಗೆಗಳನ್ನು ನೋಡಿದರೆ ತಿಳಿದು ಬರುತ್ತದೆ ಎಂದಿದ್ದಾರೆ.

ಶೇಖ್ ಮತ್ತು ಅವರ ಮಕ್ಕಳಿಗೆ ಫ್ಯಾಷನ್ ಟೀವಿ ಇಂಡಿಯ ಮುಖ್ಯಸ್ಥ ಕಾಶಿಫ್ ಖಾನ್ ಆಮಂತ್ರಣ ನೀಡಿದ್ದರು. ಈ ಕುರಿತು ಶೇಖ್ ಅವರೇ ಮಾಹಿತಿ ನೀಡಬಹುದು ಎಂದಿದ್ದಾರೆ.

ಒಂದು ವೇಳೆ ಅವರು ಹೋಗಿದ್ದರೆ ಆರ್ಯನ್ ಖಾನ್‌ರನ್ನು ಡ್ರಗ್ಸ್ ಪ್ರಕರಣದಲ್ಲಿ ಸಿಕ್ಕಿಸಿದ ರೀತಿಯಲ್ಲೇ ಇವರನ್ನೂ ಸಿಕ್ಕಿಸಲಾಗುತ್ತಿತ್ತು ಎಂದಿದ್ದಾರೆ. ಈ ಕುರಿತು ಶೇಖ್ ಅವರು ಇನ್ನೂ ಯಾವ ಪ್ರತಿಕ್ರಿಯೆಯನ್ನೂ ನೀಡಿಲ್ಲ.

ಆರೋಪ ಅಲ್ಲಗಳೆದ ಮೋಹಿತ್

ಮಲಿಕ್ ಅವರು ಮಾಡಿರುವ ಆರೋಪಗಳನ್ನು ಮೋಹಿತ್ ಅಲ್ಲಗಳೆದಿದ್ದಾರೆ. 'ಮಲಿಕ್ ಈಗ ಮೂಲೆಗುಂಪಾಗಿದ್ದಾರೆ. ನಾನು ಕೂಡಾ ಅವರ ಕುರಿತ ಮಾಹಿತಿಗಳನ್ನು ಬಹಿರಂಗಪಡಿಸುತ್ತೇನೆ. ಜನರ ಗಮನ ಬೇರೆಡೆಗೆ ಸೆಳೆಯುವ ತಂತ್ರವಾಗಿ ಅವರು ಈ ಆರೋಪಗಳನ್ನು ಮಾಡುತ್ತಿದ್ದಾರೆ' ಎಂದು ಹೇಳಿದ್ದಾರೆ.

'ಕಾಶಿಫ್ ಖಾನ್ ಬಳಿ ಶೇಖ್ ಅವರ ದೂರವಾಣಿ ಸಂಖ್ಯೆ ಹೇಗೆ ಇರಲು ಸಾಧ್ಯ? ಶೇಖ್ ಮತ್ತು ಅವರ ಮಗ, ಮಗಳ ಜೊತೆ ಕಾಶಿಫ್ ಸಂಪರ್ಕ ಸಾಧಿಸಿದ್ದು ಹೇಗೆ' ಎಂದು ಮೋಹಿತ್ ಪ್ರಶ್ನಿಸಿದ್ದಾರೆ.

'ಹಣ ಸುಲಿಗೆ ಸಂಚು'

ಮುಂಬೈ (ಪಿಟಿಐ): ಡ್ರಗ್ಸ್ ಪ್ರಕರಣದಲ್ಲಿ ಶಾರುಖ್ ಖಾನ್ ಮಗ ಆರ್ಯನ್ ಖಾನ್‌ರನ್ನು ಉದ್ದೇಶಪೂರ್ವಕವಾಗಿ ಸಿಲುಕಿಸಲಾಗಿದೆ. ಈ ಸಂಪೂರ್ಣ ಪ್ರಕರಣ ಪೂರ್ವಯೋಜಿತ ಎಂದು ಮುಂಬೈ ಮೂಲದ ಉದ್ಯಮಿ ವಿಜಯ್ ಪಗಾರೆ ಮರಾಠಿ ಸುದ್ದಿ ವಾಹಿನಿಯೊಂದಕ್ಕೆ ಹೇಳಿದ್ದಾರೆ.

ಹಣ ವಸೂಲಿ ಮಾಡುವುದಕ್ಕಾಗಿಯೇ ಈ ದಾಳಿ ನಡೆಸಲಾಗಿದೆ. ಈ ಪ್ರಕರಣದಲ್ಲಿ ಯಾರೆಲ್ಲ ಭಾಗಿಯಾಗಿದ್ದಾರೆ ಎಂಬ ವಿವರ ತಮಗೆ ತಿಳಿದಿದೆ ಎಂದೂ ಅವರು ಹೇಳಿದ್ದಾರೆ.

ನಾಲ್ವರನ್ನು ಗುರಿಯಾಗಿಸಿಕೊಂಡು ಮಲಿಕ್ ಆರೋಪ ಮಾಡಿದ್ದಾರೆ. ವಾಂಖೆಡೆ, ಅವರ ಕಿರಿಯ ಸಹೋದ್ಯೋಗಿಗಳಾದ ವಿ.ವಿ. ಸಿಂಗ್, ಆಶಿಶ್ ರಾಜನ್ ಮತ್ತು ಚಾಲಕ ಮಾನೆ ಈ ಸಂಚಿಗೆ ಕೈಜೋಡಿಸಿದ್ದಾರೆ ಎಂದಿದ್ದಾರೆ.

ಎನ್‌ಸಿಬಿಯೊಂದಿಗೆ ಯಾವ ಸಂಬಂಧವೂ ಇಲ್ಲದ ಸುನೀಲ್ ಪಾಟೀಲ್ ಎಂಬವರೂ ಈ ಗುಂಪಿನ ಒಂದು ಭಾಗ ಎಂದು ಮಲಿಕ್ ಹೇಳಿದ್ದಾರೆ.

ಮೋಹಿತ್ ಅವರ ಸಂಬಂಧಿ ರಿಷಬ್ ಸಚ್‌ದೇವ್ ಅವರೂ ಸಂಚಿನ ಭಾಗವಾಗಿದ್ದರು. ರಿಷಬ್ ಸ್ನೇಹಿತರಾದ ಪ್ರತೀಕ್ ಗಾಬ ಮತ್ತು ಅಮೀರ್ ಫರ್ನೀಚರ್‌ವಾಲ ಅವರು ಆರ್ಯನ್ ಅವರನ್ನು ಪಾರ್ಟಿಗೆ ಆಹ್ವಾನಿಸಿದ್ದರು. ಐಷಾರಾಮಿ ಹಡಗಿನಲ್ಲಿ ಆಯೋಜಿಸಿದ್ದ ಪಾರ್ಟಿಗೆ ಆರ್ಯನ್ ಅವರು ಟಿಕೆಟ್ ಪಡೆದಿರಲಿಲ್ಲ ಎಂದಿದ್ದಾರೆ.

ಮಹಾರಾಷ್ಟ್ರ ಸರ್ಕಾರವು ಈ ಪ್ರಕರಣದ ತನಿಖೆ ನಡೆಸಲು ವಿಶೇಷ ತನಿಖಾ ತಂಡವನ್ನು (ಎಸ್‌ಐಟಿ) ನೇಮಿಸಿದೆ. ಆದರೆ ಈ ಅಪಹರಣ ನಡೆಸಿದ್ದು ಹಣಕ್ಕಾಗಿಯೇ ಎಂಬುದು ಈಗಾಗಲೇ ಸಾಬೀತಾಗಿದೆ. ₹25 ಕೋಟಿಗಾಗಿ ಬೇಡಿಕೆ ಇರಿಸಲಾಗಿತ್ತು. ಬಳಿಕ ₹18 ಕೋಟಿಗೆ ಒಪ್ಪಂದ ಮಾಡಿಕೊಳ್ಳಲಾಯಿತು. ಈಗಾಗಲೇ ₹50 ಲಕ್ಷ ನೀಡಲಾಗಿದೆ ಎಂದು ಶಾರುಕ್ ಅವರ ಕಾರ್ಯದರ್ಶಿ ಪೂಜಾ ದದ್ಲಾನಿ ಅವರನ್ನು ಉಲ್ಲೇಖಿಸಿ ಮಲಿಕ್ ಹೇಳಿದರು.

ಸಂಕ್ಷಿಪ್ತ ಸುದ್ದಿ

ಝಿಕಾ: ಕಾನ್ಪುರದಲ್ಲಿ 10 ಪ್ರಕರಣ ಪತ್ತೆ

ಕಾನ್ಪುರ (ಯುಪಿ)(ಪಿಟಿಐ): ಭಾರತೀಯ ವಾಯುಪಡೆಯ ಮೂವರು ಸಿಬ್ಬಂದಿ ಸೇರಿದಂತೆ 10 ಮಂದಿಗೆ ಭಾನುವಾರ ಝಿಕಾ ಸೋಂಕು ದೃಢಪಟ್ಟಿದೆ.

ಈ ಮೂಲಕ ಒಟ್ಟು ಪ್ರಕರಣಗಳ ಸಂಖ್ಯೆ 89ಕ್ಕೆ ಏರಿದೆ. ಶನಿವಾರ 13 ಮಂದಿಯಲ್ಲಿ ಝಿಕಾ ಸೋಂಕು ದೃಢಪಟ್ಟಿತ್ತು. ಒಟ್ಟು ಸೋಂಕಿತರಲ್ಲಿ ಭಾರತೀಯ ವಾಯುಪಡೆಯ 12 ಸಿಬ್ಬಂದಿ ಸೇರಿದ್ದಾರೆ ಎಂದು ಜಿಲ್ಲಾಧಿಕಾರಿ ವಿಶಾಕ್ ಜಿ. ಅಯ್ಯರ್ ತಿಳಿಸಿದ್ದಾರೆ.

ಉಗ್ರರ ಗುಂಡಿಗೆ ಕಾನ್‌ಸ್ಟೆಬಲ್ ಸಾವು

ಶ್ರೀನಗರ (ಪಿಟಿಐ): ಇಲ್ಲಿನ ಬಟಮಾಲೂ ಪ್ರದೇಶದಲ್ಲಿ ಭಯೋತ್ಪಾದಕರು ಒಬ್ಬ ಪೊಲೀಸ್ ಕಾನ್‌ಸ್ಟೆಬಲ್‌ನನ್ನು ಭಾನುವಾರ ರಾತ್ರಿ ಗುಂಡಿಟ್ಟು ಕೊಂದಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ರಾತ್ರಿ 8 ಗಂಟೆಗೆ ಭಯೋತ್ಪಾದಕರು ಕಾನ್‌ಸ್ಟೆಬಲ್ ತೌಸಿಫ್ ಅಹ್ಮದ್ ಅವರನ್ನು ಅವರ ನಿವಾಸದ ಬಳಿಯೇ ಕೊಂದಿದ್ದಾರೆ' ಎಂದು ಅಧಿಕಾರಿ ಹೇಳಿದ್ದಾರೆ. ಭಯೋತ್ಪಾದಕರ ಕೃತ್ಯವನ್ನು ನ್ಯಾಷನಲ್ ಕಾನ್ಫರೆನ್ಸ್ (ಎನ್‌ಸಿ) ಖಂಡಿಸಿದೆ.

ನಾಲ್ವರು ಮಾವೋವಾದಿಗಳ ಶರಣಾಗತಿ

ಹೈದರಾಬಾದ್ (ಪಿಟಿಐ): ಇಬ್ಬರು ಮಹಿಳೆಯರು ಸೇರಿದಂತೆ ನಿಷೇಧಿತ ಸಿಪಿಐ (ಮಾವೋವಾದಿ) ಸಂಘಟನೆಗೆ ಸೇರಿದ ನಾಲ್ವರು ಸದಸ್ಯರು ಇಲ್ಲಿನ ಭದ್ರಾದ್ರಿ ಕೊತಗುಂಡೆಂ ಜಿಲ್ಲೆಯಲ್ಲಿ ಪೊಲೀಸರಿಗೆ ಶರಣಾಗಿದ್ದಾರೆ.

ಈ ನಾಲ್ವರು ಚೆರ್ಲಾ ಮಂಡಲ್‌ಗೆ ಸೇರಿದವರು. ವರ್ಷದಿಂದ ಇವರು ಸಿಪಿಐ (ಮಾವೋವಾದಿ) ಪರವಾಗಿ ಕಾರ್ಯ ನಿರ್ವಹಿಸುತ್ತಿದ್ದರು ಎಂದು ಪೊಲೀಸರು ತಿಳಿಸಿದರು.

ಪೊಲೀಸರ ಪ್ರಕಾರ, ಈ ನಾಲ್ವರು ಮಾವೋವಾದಿಗಳಿಗೆ ಗ್ರಾಮಗಳಿಂದ ಆಹಾರ ಪೂರೈಸುತ್ತಿದ್ದು, ಜೊತೆಗೆ ಪೊಲೀಸರ ಚಲನವಲನ ಕುರಿತು ಮಾಹಿತಿಯನ್ನು ನೀಡುತ್ತಿದ್ದರು.

ಪಂಜಾಬ್: ಪೆಟ್ರೋಲ್, ಡೀಸೆಲ್ ದರ ಇಳಿಕೆ



ಚಂಡೀಗಡ (ಪಿಟಿಐ): ಪಂಜಾಬ್‌ನಲ್ಲಿ ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರವು ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಭಾನುವಾರ ಕ್ರಮವಾಗಿ ಲೀಟರ್‌ಗೆ ₹10 ಮತ್ತು ₹5ರಂತೆ ಇಳಿಸಿದೆ.

ಸಂಪುಟ ಸಭೆ ನಂತರ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಈ ಮಾಹಿತಿ ನೀಡಿದರು.

ಸದ್ಯ ರಾಜ್ಯದಲ್ಲಿ ಪೆಟ್ರೋಲ್ ದರ ಲೀಟರ್‌ಗೆ ₹106.20 ಮತ್ತು ಡೀಸೆಲ್ ದರ ಲೀಟರ್‌ಗೆ ₹89.83ರಷ್ಟಿದೆ.

ಇಂಧನ ಮೇಲಿನ ತೆರಿಗೆಯನ್ನು ಕಡಿ- ತಗೊಳಿಸುವಂತೆ ಶಿರೋಮಣಿ ಅಕಾಲಿ ದಳ, ಬಿಜೆಪಿ ಮತ್ತು ಆಮ್ ಆದ್ಮಿ ಪಕ್ಷ ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದವು.

ಕಾಶ್ಮೀರದ 50 ಸರೋವರಗಳಿಗೆ ಚಾರಣ: ಬೆಂಗಳೂರು ಮಹಿಳೆ ಸಾಧನೆ

ಶ್ರೀನಗರ (ಪಿಟಿಐ): ಸಂಧಿವಾತದ ಭೀತಿಯ ನಡುವೆಯೂ ಬೆಂಗಳೂರಿನ ಮಹಿಳೆಯೊಬ್ಬರು ಇಲ್ಲಿ, ಸಮುದ್ರ ಮಟ್ಟದಿಂದ 10,000 ಅಡಿ ಎತ್ತರದಲ್ಲಿರುವ 50 ಸರೋವರಗಳಿಗೆ ಚಾರಣ ಕೈಗೊಳ್ಳುವ ಮೂಲಕ ದಾಖಲೆ ಮಾಡಿದ್ದಾರೆ.

ಬೆಂಗಳೂರಿನ ಬೆಳ್ಳಂದೂರಿನ ನಿವಾಸಿಯಾದ ನಮ್ರತಾ ನಂದೀಶ್ ಈ ಸಾಧನೆ ಮಡಿದವರು. ನಾಲ್ಕು ತಿಂಗಳಲ್ಲಿ ಚಾರಣ ಪೂರ್ಣಗೊಳಿಸಿದ್ದು, ಈ ಮೂಲಕ 'ಅಲ್‌ಪೈನ್ ಗರ್ಲ್' ಹಿರಿಮೆಗೆ ಪಾತ್ರರಾಗಿದ್ದಾರೆ. ಎತ್ತರದ ಪ್ರದೇಶದಲ್ಲಿರುವ ಸರೋವರಗಳಿಗೆ ಚಾರಣ ಕೈಗೊಂಡ ಪ್ರಥಮ ಮಹಿಳೆ ಇವರು ಎಂದು ಹೇಳಲಾಗಿದೆ.

ದಕ್ಷಿಣ ಕಾಶ್ಮೀರದಲ್ಲಿ ಪಿರ್ ಪಂಜಾಲ್ ಮತ್ತು ಝಂಸ್ಕರ್ ಗಿರಿಶ್ರೇಣಿಯ ನಡುವಿನ ಟುಲಿಯಾನ್ ಸರೋವರದಿಂದ ಚಾರಣ ಆರಂಭಿಸಿದ್ದು, ಶಿಲ್‌ಸರ್ ಸರೋವರದ ಬಳಿ ಅಂತ್ಯಗೊಳಿಸಿದ್ದೇನೆ ಎಂದು ಪ್ರತಿಕ್ರಿಯಿಸಿದ್ದಾರೆ. 33 ವರ್ಷದ ಅವರು ಮಾಹಿತಿ ತಂತ್ರಜ್ಞಾನ ಸಂಸ್ಥೆಯೊಂದರ ಉದ್ಯೋಗಿಯಾಗಿದ್ದಾರೆ.

'ನನ್ನ ಜನ್ಮದಿನ ನಿಮಿತ್ತ 33 ಸರೋವರಗಳಿಗೆ ಚಾರಣ ತೆರಳಲು ನಿರ್ಧರಿಸಿದೆ' ಎಂದು ಪತಿಯೊಂದಿಗೆ ಇಲ್ಲಿಗೆ ಆಗಮಿಸಿರುವ ಅವರು ಸುದ್ದಿಸಂಸ್ಥೆಗೆ ಪ್ರತಿಕ್ರಿಯಿಸಿದರು.

ಜೂನ್ ಮಧ್ಯಭಾಗದಲ್ಲಿ ಚಾರಣ ಕಾರ್ಯಕ್ರಮ ಆರಂಭವಾಗಿತ್ತು. ಸ್ಥಳೀಯ ಚಾರಣ ತಂಡದ ನಾಯಕ ಸೈಯದ್ ತಾಹಿರ್, ಬಹುತೇಕ ಸರೋವರಗಳಿಗೆ ಚಾರಣ ತೆರಳಲು ಮಾರ್ಗದರ್ಶನ ಮಾಡಿದ್ದರು. 'ಅನುಭವಿ ಚಾರಣಿಗರಂತೆ ಇವರು ಗುರಿ ಮುಟ್ಟಿದರು' ಎಂದು ತಾಹಿರ್ ಪ್ರತಿಕ್ರಿಯಿಸಿದರು.

ಸಾಮಾನ್ಯವಾಗಿ ಪ್ರವಾಸಿಗರು ಮೂರು ನಾಲ್ಕು ದಿನ ಚಾರಣ ಮಾಡಲು ಬಯಸುತ್ತಾರೆ. ಆದರೆ,ಇವರು ನಿರ್ದಿಷ್ಟ ಗುರಿಯೊಂದಿಗೆ ಬಂದಿದ್ದು, ಚಾರಣದ ಋತು ಆರಂಭವಾಗುವ ಮೊದಲೇ ಇಲ್ಲಿಗೆ ಬಂದಿದ್ದರು ಎಂದು ಹೇಳಿದರು.

ಪಾಕ್ ಗುಂಡಿನ ದಾಳಿಗೆ ಮೀನುಗಾರ ಸಾವು

ದೇವಭೂಮಿ– ದ್ವಾರಕಾ (ಗುಜರಾತ್) (ಪಿಟಿಐ): ಗುಜರಾತ್ ಕರಾವಳಿ ತೀರದಲ್ಲಿ ಪಾಕಿಸ್ತಾನ ಕಡಲ ಭದ್ರತಾ ಪಡೆ ನಡೆಸಿದ ಗುಂಡಿನ ದಾಳಿಯಲ್ಲಿ ಮಹಾರಾಷ್ಟ್ರದ ಮೀನುಗಾರರೊಬ್ಬರು ಮೃತಪಟ್ಟಿದ್ದು, ಮತ್ತೊಬ್ಬ ಮೀನುಗಾರ ಗಾಯಗೊಂಡಿದ್ದಾರೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

ಶನಿವಾರ ಸಂಜೆ 4 ಗಂಟೆಗೆ 'ಜಲಪರಿ' ದೋಣಿ ಮೇಲೆ ಗುಂಡಿನ ದಾಳಿ ನಡೆಸಲಾಗಿದೆ.

ದೋಣಿಯಲ್ಲಿ ಗುಜರಾತಿನ ಐವರು ಹಾಗೂ ಮಹಾರಾಷ್ಟ್ರದ ಇಬ್ಬರು ಮೀನುಗಾರರಿದ್ದರು. ಅದರಲ್ಲಿ ಒಬ್ಬ ಮೀನುಗಾರನಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಘಟನೆ ಸಂಬಂಧ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ ಸುನಿಲ್ ಜೋಷಿ ತಿಳಿಸಿದರು.

ಗುಜರಾತ್ ಮೂಲದ ಮಹಾತ್ಮರ ಜತೆ ಸಮೀಕರಣ ಯತ್ನ: ಹೊಸ ಪುಸ್ತಕದಲ್ಲಿ ಶಶಿ ತರೂರ್ ಪ್ರತಿಪಾದನೆ

ಪ್ರಧಾನಿ ಮೋದಿಗೆ ನೆರವಾದ ಪಟೇಲ್ ವರ್ಚಸ್ಸು

ನವದೆಹಲಿ (ಪಿಟಿಐ): ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ರಾಷ್ಟ್ರೀಯ ಮಟ್ಟದ ವರ್ಚಸ್ಸು ಮತ್ತು ಅವರ ಗುಜರಾತ್ ಮೂಲವು ಪ್ರಧಾನಿ ನರೇಂದ್ರ ಮೋದಿ ಅವರಿಗೆ ನೆರವಾಗಿದೆ.



ಮೋದಿ

'ಮೋದಿ ಅವರು ಈ ಕಾಲದ ಪಟೇಲ್' ಎಂಬ ಸಂದೇಶವನ್ನು ಒಪ್ಪುವ ಗುಜರಾತಿಗಳ ಸಂಖ್ಯೆ ಗಣನೀಯವಾಗಿ ಇದೆ ಎಂದು ಕಾಂಗ್ರೆಸ್ ಸಂಸದ ಮತ್ತು ಲೇಖಕ ಶಶಿ ತರೂರ್ ಪ್ರತಿಪಾದಿಸಿದ್ದಾರೆ.

ಮೋದಿ ಅವರದ್ದು ಅತ್ಯಂತ ಜಾಣ್ಮೆಯ ರಾಜಕೀಯ ಲೆಕ್ಕಾಚಾರ. ಗುಜರಾತ್ ಮೂಲದ ಮಹಾ ವ್ಯಕ್ತಿಗಳಾದ ಮಹಾತ್ಮ ಗಾಂಧಿ ಮತ್ತು ಪಟೇಲ್ ಅವರ ಸಾಲಿನಲ್ಲಿ ತಮ್ಮನ್ನೂ ನಿಲ್ಲಿಸಿಕೊಂಡು, ಅವರ ಗುಣಗಳು ತಮ್ಮಲ್ಲೂ ಇವೆ ಎಂದು ಮೋದಿ ಬಿಂಬಿಸಿದ್ದಾರೆ. ಈ ಪ್ರಕ್ರಿಯೆ ಬಹಳ ಹಿಂದೆಯೇ ಆರಂಭವಾಗಿತ್ತು. ಭಾರತದ ಅತ್ಯಂತ ಗೌರವಾನ್ವಿತ ನಾಯಕರಲ್ಲಿ ಒಬ್ಬರಾದ ಪಟೇಲ್ ಅವರ ಪರಂಪರೆ ತಮ್ಮದು ಎಂಬ ಹಕ್ಕು ಮಂಡನೆಯನ್ನು ಮೋದಿ ಅವರು ಅತ್ಯಂತ ದೃಢವಾಗಿ 2014ರ ಲೋಕಸಭಾ ಚುನಾವಣೆಗೂ ಮೊದಲೇ ಮಾಡಿದ್ದರು ಎಂದು ತರೂರ್ ವಿವರಿಸಿದ್ದಾರೆ.

'ಪ್ರೈಡ್, ಪ್ರಿಜುಡಿಸ್ ಎಂಡ್ ಪಂಡಿಟ್ರಿ– ದಿ ಎಸೆನ್‌ಷಿಯಲ್ ಶಶಿ ತರೂರ್' ಎಂಬ ಪುಸ್ತಕದಲ್ಲಿ ಅವರು ಈ ಪ್ರತಿಪಾದನೆ ಮಾಡಿದ್ದಾರೆ. ಅವರು ಈಗಾಗಲೇ ಪ್ರಕಟಿಸಿರುವ ಕೆಲವು ಲೇಖನ ಮತ್ತು ಕವಿತೆಗಳು ಈ ಪುಸ್ತಕದಲ್ಲಿ ಇವೆ. ಈ ಪುಸ್ತಕಕ್ಕಾಗಿಯೇ ಕೆಲವು ಲೇಖನಗಳನ್ನು ಅವರು ಬರೆದಿದ್ದಾರೆ.

ತಾವು ವಿಶಿಷ್ಟ ಪರಂಪರೆಯ ಭಾಗ ಎಂದು ಗುರುತಿಸಿಕೊಳ್ಳುವ ಹಂಬಲ ಮೋದಿ ಅವರಲ್ಲಿ ತೀವ್ರವಾಗಿತ್ತು. ಅದಕ್ಕಾಗಿಯೇ, ಪಟೇಲ್ ಪ್ರತಿಮೆ ಸ್ಥಾಪನೆಗೆ ನೇಗಿಲಿನ ಕಬ್ಬಿಣವನ್ನು ದೇಣಿಗೆಯಾಗಿ ನೀಡುವಂತೆ ದೇಶದ ರೈತರನ್ನು ಮೋದಿ ಕೋರಿದ್ದರು. ಗಾಂಧಿವಾದಿ ಮತ್ತು ಸರಳ ವ್ಯಕ್ತಿಯಾಗಿದ್ದ ಪಟೇಲರ ಸ್ಮಾರಕ ಎನ್ನುವುದಕ್ಕಿಂತಲೂ ಅದನ್ನು ನಿರ್ಮಿಸಿದ ವ್ಯಕ್ತಿಯ ಮಹತ್ವಾಕಾಂಕ್ಷೆಯನ್ನೇ ಈ ಪ್ರತಿಮೆ ಬಿಂಬಿಸುತ್ತಿದೆ. ತಮ್ಮ ಮಹತ್ವಾಕಾಂಕ್ಷೆಗೆ ಭಾರತದ ಸಾಮರ್ಥ್ಯವು ಸಾಲುವುದಿಲ್ಲ ಎಂದಾದಾಗ ಪ್ರತಿಮೆಯನ್ನು ಎರಕ ಹೊಯ್ಯಲು ಮೋದಿ ಅವರು ಚೀನಾದ ಕಂಪನಿಯನ್ನು ಬಳಸಿಕೊಂಡರು ಎಂದು ತರೂರ್ ಬರೆದಿದ್ದಾರೆ.

ಮೋದಿ ಅವರ ಉದ್ದೇಶಗಳು ಅತ್ಯಂತ ಸ್ಪಷ್ಟವಿದ್ದವು. ಗುಜರಾತ್ ಮುಖ್ಯಮಂತ್ರಿಯಾಗಿದ್ದಾಗ 2002ರಲ್ಲಿ ನಡೆದ ಕೋಮು ಹಿಂಸಾಚಾರವು ಅವರ ವರ್ಚಸ್ಸಿಗೆ ಮಸಿ ಬಳಿದಿತ್ತು. ಪಟೇಲ್ ಅವರ ಜತೆಗೆ ಗುರುತಿಸಿಕೊಳ್ಳುವ ಮೂಲಕ ತಮ್ಮ ವರ್ಚಸ್ಸು ವೃದ್ಧಿಗೆ ಮೋದಿ ಯತ್ನಿಸಿದರು. ಪಟೇಲ್ ಅವರಂತೆ ಕಠಿಣ ನಿರ್ಧಾರಗಳ, ಗಟ್ಟಿ ಮನುಷ್ಯ ಎಂದು ತಮ್ಮನ್ನು ಬಿಂಬಿಸಿಕೊಂಡರು ಎಂದು ತರೂರ್ ವಿಶ್ಲೇಷಿಸಿದ್ದಾರೆ.

ಆಧುನಿಕ ಭಾರತದ ಇತಿಹಾಸದ ಅತ್ಯಂತ ಮುಖ್ಯ ವ್ಯಕ್ತಿಗಳು, ಅಂತರರಾಷ್ಟ್ರೀಯ ಸಂಬಂಧ ಮತ್ತು ರಾಜತಾಂತ್ರಿಕತೆ, ಧರ್ಮಕ್ಕೆ ಸಂಬಂಧಿಸಿದ ವಿಚಾರಗಳು ಸೇರಿ ಹಲವು ವಿಷಯಗಳ ಬಗ್ಗೆ ಈ ಪುಸ್ತಕದಲ್ಲಿ ಲೇಖನಗಳು ಇವೆ.

ವಿರೋಧಾಭಾಸ



ತರೂರ್

ಪಟೇಲ್ ಅವರ ಜತೆಗೆ ಮೋದಿ ಅವರು ತಮ್ಮನ್ನು ಹೋಲಿಸಿಕೊಳ್ಳುವಲ್ಲಿ ಒಂದು ವಿರೋಧಾಭಾಸವೂ ಇದೆ. ಮೋದಿ ಅವರು ತಮ್ಮನ್ನು ಹಿಂದೂ ರಾಷ್ಟ್ರೀಯವಾದಿ ಎಂದು ಘೋಷಿಸಿಕೊಂಡಿದ್ದಾರೆ. ಆದರೆ, ಪಟೇಲ್ ಅವರು ತಮ್ಮ ರಾಷ್ಟ್ರೀಯವಾದಕ್ಕೆ ಧರ್ಮದ ಹಣೆಪಟ್ಟಿ ಹಚ್ಚಿದವರಲ್ಲ. ಧರ್ಮ ಅಥವಾ ಜಾತಿಯನ್ನು ಮೀರಿ ಎಲ್ಲರಿಗೂ ಸಮಾನ ಹಕ್ಕುಗಳಿರಬೇಕು ಎಂದು ಪಟೇಲ್ ನಂಬಿದ್ದರು ಎಂದು ತರೂರ್ ವಿವರಿಸಿದ್ದಾರೆ.

ವಾಜಪೇಯಿ ಉಲ್ಲೇಖ

ಜವಾಹರಲಾಲ್ ನೆಹರೂ ಅವರ ಕೊಡುಗೆಗಳ ಬಗೆಗಿನ ಲೇಖನದಲ್ಲಿ ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ಉಲ್ಲೇಖ ಇದೆ. ನೆಹರೂ ಮರಣದ ಬಳಿಕ ವಾಜಪೇಯಿ ಅವರ ನುಡಿನಮನವನ್ನು ತರೂರ್ ನೆನಪಿಸಿಕೊಂಡಿದ್ದಾರೆ.

'ವಾಜಪೇಯಿ ಅವರ ಮಾತುಗಳು ಔಪಚಾರಿಕತೆಯಷ್ಟೇ ಆಗಿರಲಿಲ್ಲ. ನೆಹರೂ ಅವರ ಆದರ್ಶಗಳಿಗೆ ದೇಶವು ತನ್ನನ್ನು ಮರು ಸಮರ್ಪಣೆ ಮಾಡಿಕೊಳ್ಳಬೇಕು ಎಂದು ಅವರು ಕರೆ ಕೊಟ್ಟಿದ್ದರು. ಒಗ್ಗಟ್ಟು, ಶಿಸ್ತು ಮತ್ತು ಆತ್ಮವಿಶ್ವಾಸದ ಮೂಲಕ ಈ ದೇಶವನ್ನು ನಾವು ಸಮೃದ್ಧಗೊಳಿಸಬೇಕು' ಎಂದು ವಾಜಪೇಯಿ ಹೇಳಿದ್ದರು ಎಂಬುದನ್ನು ಲೇಖನದಲ್ಲಿ ಉಲ್ಲೇಖಿಸಲಾಗಿದೆ. 'ನಾಯಕ ಹೋಗಿದ್ದಾನೆ, ಅನುಯಾಯಿಗಳು ಇದ್ದಾರೆ. ಸೂರ್ಯಾಸ್ತವಾಗಿದೆ, ಆದರೆ, ತಾರೆಗಳ ನೆರಳಿನಲ್ಲಿ ನಾವು ನಮ್ಮ ದಾರಿ ಕಂಡುಕೊಳ್ಳಬೇಕಿದೆ. ಇದು ಕಷ್ಟಕರ ಸಂದರ್ಭ. ಆ ಮಹಾ ವ್ಯಕ್ತಿಯ ಗುರಿಗಳ ಈಡೇರಿಕೆಗೆ ನಾವು ಬದ್ಧರಾಗಬೇಕಿದೆ' ಎಂದು ವಾಜಪೇಯಿ ಹೇಳಿದ್ದರು ಎಂಬುದನ್ನು ತರೂರ್ ನೆನಪಿಸಿಕೊಂಡಿದ್ದಾರೆ.

ಮೋದಿ ಅವರಿಂದ ಇಂತಹ ಮಾತು ನಿರೀಕ್ಷಿಸಲು ಸಾಧ್ಯವಿಲ್ಲ ಎಂದೂ ಅವರು ಅಭಿಪ್ರಾಯಪಟ್ಟಿದ್ದಾರೆ.

ಶಿಕ್ಷಣದ ಮುಖ್ಯ ಉದ್ದೇಶ ಜ್ಞಾನ ಅಲ್ಲ ಬದಲಿಗೆ ಕ್ರಿಯೆ



ಎಂಬಿಎ - ಪಿಜಿಸಿಇಟಿ ಪರೀಕ್ಷೆಗೆ ಸಂಬಂಧಪಟ್ಟ ಅಧಿಸೂಚನೆ ಪ್ರಕಟವಾಗಿದ್ದು, ಇದರ ಸಿದ್ಧತೆಯನ್ನು ಹಲವಾರು ಆಯಾಮಗಳಲ್ಲಿ ಮಾಡಬೇಕು. ಸರಿಯಾದ ತಯಾರಿ ನಡೆಸಿದರೆ ಉತ್ತಮ ರ‍್ಯಾಂಕಿಂಗ್ ಪಡೆಯುವುದರಲ್ಲಿ ಅನುಮಾನವಿಲ್ಲ.

ಎಂಬಿಎ ಪ್ರವೇಶ ಪರೀಕ್ಷೆ ಸಿದ್ಧತೆ ಹೇಗಿರಬೇಕು?

ಡಾ. ಗಿರೀಶ ಯರಲಕಟ್ಟಿಮಠ

ಪದವಿ ಮುಗಿಸಿದವರ ಅಥವಾ ಪದವಿ ಕೊನೆಯ ವರ್ಷದ ವಿದ್ಯಾರ್ಥಿಗಳ ತಲೆ ಗೊಂದಲದ ಗೂಡಾಗಿರುತ್ತದೆ. ಆದರೆ ಈ ಧಾವಂತದ ಯುಗದಲ್ಲಿ ನಮ್ಮ ಜೀವನ ಪಥವನ್ನು ರೂಪಿಸಿಕೊಳ್ಳುವುದು ಅಷ್ಟೇ ಮುಖ್ಯವಾಗಿರುತ್ತದೆ. ಇತ್ತೀಚೆಗಷ್ಟೇ ಎಂಬಿಎ - ಪಿಜಿಸಿಇಟಿ ಗೆ ಸಂಬಂಧಪಟ್ಟ ಅಧಿಸೂಚನೆ ದಿನಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಈ ಎಂಬಿಎ ಪ್ರವೇಶ ಪರೀಕ್ಷೆಗೆ ಹೇಗೆ ಸಿದ್ಧತೆ ಮಾಡಿಕೊಳ್ಳಬೇಕು ಎಂಬುದರ ಬಗ್ಗೆ ಕೆಲವು ಸಲಹೆಗಳನ್ನು ನೀಡಲಾಗಿದೆ.

1. **ತಡ ಮಾಡಬೇಡಿ ಈಗಲೇ ಆರಂಭಿಸಿ:** ಸಿಎಟಿ, ಎಂಎಟಿ ಅಥವಾ ಪಿಜಿಸಿಇಟಿ, ಯಾವುದೇ ಪ್ರವೇಶ ಪರೀಕ್ಷೆ ಆಗಿರಬಹುದು. ಪರೀಕ್ಷೆಗಳಿಗಾಗಿ ಸಿದ್ಧತೆಯನ್ನು ಇಂದೇ ಆರಂಭಿಸಿ, ಸಕಾರಣವಿಲ್ಲದೆ, ತಯಾರಿಯನ್ನು ಯಾವ ಕಾರಣಕ್ಕೂ ಮುಂದೂಡಬೇಡಿ. ಉತ್ತಮ ವಿದ್ಯಾಲಯಗಳಲ್ಲಿ ಅಥವಾ ಉತ್ತಮವಾದ ಬಿ-ಸ್ಕೂಲ್‌ಗಳಲ್ಲಿ ಯಾವುದೇ ಡೊನೇಷನ್ ಇಲ್ಲದೆ ಪ್ರವೇಶ ಗಿಟ್ಟಿಸ ಬೇಕಾದಲ್ಲಿ ಇಂದಿನಿಂದಲೇ ಉತ್ತಮ ತಯಾರಿ ನಡೆಸಿ.
2. **ಪಠ್ಯಕ್ರಮವನ್ನು ಡೌನ್‌ಲೋಡ್ ಮಾಡಿಕೊಳ್ಳಿ:** ಯಾವ ಪರೀಕ್ಷೆಗೆ ಹಾಜರಾಗಬೇಕು? ಹೇಗೆ ತಯಾರಾಗಬೇಕು ಎಂಬುದನ್ನು ಮನಸ್ಸಿನಲ್ಲೇ ನಿರ್ಧರಿಸಿಕೊಳ್ಳಿ, ಅದರ ಪ್ರಕಾರ ಯೋಜನೆ ಮಾಡಿಕೊಳ್ಳಿ. ಮುಖ್ಯವಾಗಿ ಪಠ್ಯಕ್ರಮಕ್ಕೆ ಸಂಬಂಧಪಟ್ಟ ವೆಬ್‌ಸೈಟ್‌ಗಳಿಂದ ಡೌನ್‌ಲೋಡ್ ಮಾಡಿಕೊಳ್ಳಿ. ವಿವಿಧ ಪರೀಕ್ಷೆಗಳ ಪಠ್ಯಕ್ರಮಗಳಲ್ಲಿ ವ್ಯತ್ಯಾಸ ಕಂಡು ಬಂದಲ್ಲಿ ಕೂಡಲೇ ನೋಟ್ ಮಾಡಿಕೊಳ್ಳಿ ಹಾಗೂ ಅದರಂತೆ ಅಭ್ಯಾಸ ನಡೆಸಿ.
3. **ಪರೀಕ್ಷೆಯ ಮಾದರಿ:** ಎಲ್ಲಾ ಪ್ರವೇಶ ಪರೀಕ್ಷೆಗಳ ಮಾದರಿಯನ್ನು ತಿಳಿಯಲು ಪ್ರತಿಯೊಂದು ಪರೀಕ್ಷೆಯ (XAT, MAT, SNAP, PGCET) ವೆಬ್‌ಸೈಟ್ ಅನ್ನು ನೋಡಿಕೊಂಡು ಸಿದ್ಧರಾಗಿರಿ. ಪಠ್ಯಕ್ರಮ, ಮಾದರಿ ಪ್ರಶ್ನೆ ಪತ್ರಿಕೆ, ಆಯ್ಕೆಯ ಕ್ರಮದ ಬಗ್ಗೆ ಸರಿಯಾದ ಮಾಹಿತಿ ನಿಮ್ಮಲ್ಲಿರಲಿ.
4. **ಅಧ್ಯಯನ ವಸ್ತು:** ಪರೀಕ್ಷೆಗೆ ಅಧ್ಯಯನ ಪ್ರಾರಂಭಿಸುವ ಮೊದಲೇ ಸಂಬಂಧಪಟ್ಟ ಎಲ್ಲಾ ಅಧ್ಯಯನ ವಸ್ತುವನ್ನು ಸಿದ್ಧವಾಗಿಟ್ಟುಕೊಳ್ಳಿ. ಸಾಮಾನ್ಯವಾಗಿ ಎಲ್ಲಾ ಎಂಬಿಎ ಪ್ರವೇಶ ಪರೀಕ್ಷೆಗಳಲ್ಲಿ ಈ ಕೆಳಕಂಡಂತೆ ಕೆಲವೊಂದು ವಿಭಾಗಗಳಾಗುತ್ತದೆ.
   - **ಇಂಗ್ಲಿಷ್ ವಿಷಯದ ಬಗೆಗಿನ ಜ್ಞಾನ:** ಎ. ಸಮಾನಾರ್ಥಕ ಪದ, ಬಿ. ವಿರುದ್ಧಾರ್ಥಕ ಪದ, ವಾಕ್ಯಗಳಿಗೆ ಸಿ. ಒಂದು ಶಬ್ದದಲ್ಲಿ ಉತ್ತರ ಕೊಡುವ ಸಾಮರ್ಥ್ಯ, ಡಿ. ಪಡೆನುಡಿಗಳು, ಇ. ಸಾಮಾನ್ಯ ವ್ಯಾಕರಣ, ಎಫ್. ಇಂಗ್ಲಿಷ್ ಭಾಷೆಯಲ್ಲಿನ ಉತ್ತಮ ಪುಸ್ತಕಗಳು, ಜಿ. ಸರಿಯಾದ ವಾಕ್ಯ ರಚನೆ, ಹೆಚ್. ಸಂಬಂಧ ವಾಚಕಗಳ ಬಗ್ಗೆ ಅಧ್ಯಯನ ಮಾಡಬೇಕಾಗತ್ತದೆ.
   - **ಸಾಮಾನ್ಯ ಜ್ಞಾನ:** 1. ಭಾರತದ ವ್ಯಾಪಾರ ವ್ಯವಸ್ಥೆ, 2. ಜಾಗತಿಕ ವ್ಯಾಪಾರ ವಹಿವಾಟುಗಳ ಪರಿಸರ 3. ಪ್ರಚಲಿತ ವಿದ್ಯಮಾನಗಳು, 4. ಸಾಂಸ್ಕೃತಿಕ, ಸಾಮಾಜಿಕ ವಿದ್ಯಮಾನಗಳು, ಅರ್ಥಶಾಸ್ತ್ರ ಮೂಲ ಮ್ಯಾನೇಜ್‌ಮೆಂಟ್ ಪರಿಕಲ್ಪನೆಗಳು, ರಾಜಕೀಯ ವಿದ್ಯಮಾನಗಳು, ಕ್ರೀಡೆ, ಪ್ರಶಸ್ತಿ ಹಾಗೂ ವ್ಯಕ್ತಿಗಳು ಮತ್ತು ಅವರ ಸಾಧನೆಗಳ ಬಗ್ಗೆ, ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಇತ್ತೀಚಿನ ಬೆಳವಣಿಗೆಗಳ ಬಗ್ಗೆ ವಿಸ್ತೃತವಾಗಿ ಅಧ್ಯಯನ ಮಾಡಿ.
   - ಪ್ರತಿನಿತ್ಯ ಯಾವುದಾದರೊಂದು ದಿನಪತ್ರಿಕೆಯನ್ನು ಓದಲು ಮರೆಯಬೇಡಿ.
   - **ಮಾನಸಿಕ ಸಾಮರ್ಥ್ಯ (ರೀಸನಿಂಗ್ ಮತ್ತು ಜನರಲ್ ಇಂಟೆಲಿಜೆನ್ಸ್):** ಸರಿಯಾ ವಿಚಾರ ಮಾಡಿ ಉತ್ತರ ನೀಡಬೇಕಾಗಿರುವುದರಿಂದ, ಒಗಟ್ಟಿನ ರೂಪದಲ್ಲಿರುವ ಪ್ರಶ್ನೆಗಳು (ಪಝಲ್ಸ್), ರೇಖಾ ಚಿತ್ರಗಳು, ಸಾದೃಶ್ಯಗಳು (ಅನಾಲೋಜಿಸ್) ತರ್ಕ, ಮೌಖಿಕ ಸಾಮರ್ಥ್ಯ, ವಿಶ್ಲೇಷಣಾ ಸಾಮರ್ಥ್ಯಗಳ ಬಗ್ಗೆ ಪ್ರಶ್ನೆಗಳು ಬರುವುದರಿಂದ ಸಾಕಷ್ಟು ಅಧ್ಯಯನ ನಡೆಸಿ. ಈ ವಿಭಾಗದಲ್ಲಿ ಒಬ್ಬರೇ ಕುಳಿತುಕೊಂಡು ಅಧ್ಯಯನ ಮಾಡುವುದಕ್ಕೆ ಕಷ್ಟವಾದಲ್ಲಿ ನಿಪುಣರ ಹಾಗೂ ಸ್ನೇಹಿತರ ಸಹಾಯ ಪಡೆದುಕೊಳ್ಳಲು ಹಿಂಜರಿಯಬೇಡಿ.
   - **ಪರಿಮಾಣಾತ್ಮಕ ವಿಶ್ಲೇಷಣೆ (ಕ್ವಾಂಟಿಟೇಟಿವ್ ಅನಾಲಿಸಿಸ್):** ಅಂಕಗಣಿತ, ದತ್ತಾಂಶ ವಿಶ್ಲೇಷಣೆ, ವಿವರಣೆ ಹಾಗೂ ವ್ಯಾಖ್ಯಾನ, ಸಂಖ್ಯಾ ಶಾಸ್ತ್ರದ ಮೇಲೆ ಕೆಲವೊಂದು ಸಲ ಪ್ರಶ್ನೆಗಳು ಬರುವ ಸಾಧ್ಯತೆ ಇದೆ.
5. **ಈ ಪುಸ್ತಕಗಳನ್ನು ಅಧ್ಯಯನ ಮಾಡಿ:** ಲಾಜಿಕಲ್ ರೀಸನಿಂಗ್- ಎ ಮಾಡರ್ನ್ ಅಪ್ರೋಚ್ ಟು ವರ್ಬಲ್ ಅಂಡ್ ನಾನ್ ವರ್ಬಲ್ ರೀಸನಿಂಗ್- ಆರ್.ಎಸ್. ಅಗರವಾಲ್. ಮ್ಯಾಥ್‌ಮ್ಯಾಟಿಕ್ಸ್ ಫಾರ್ ಎಂಬಿಎ- ಆರ್.ಎಸ್. ಅಗರವಾಲ್
6. **ಹಳೆಯ ಪ್ರಶ್ನೆ ಪತ್ರಿಕೆಯನ್ನು ಬಿಡಿಸಿ:** ಅಧ್ಯಯನ ಮಾಡುತ್ತಲೇ ಹಳೆಯ ಪ್ರಶ್ನೆ ಪ್ರತಿಕೆಗಳಿಗೆ ಉತ್ತರಿಸಲು ಪ್ರಯತ್ನಿಸಿ. ನೀವೇನಾದರೂ ಹತ್ತಕ್ಕಿಂತ ಹೆಚ್ಚು ಪ್ರಶ್ನೆ ಪತ್ರಿಕೆಗಳನ್ನು ಬಿಡಿಸಿದ್ದೇ ಆದಲ್ಲಿ ನಿಮ್ಮ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸಲು ಸಾಧ್ಯವಾಗುತ್ತದೆ. ಅದಕ್ಕಿಂತ ಮಿಗಿಲಾಗಿ ನಿಮಗೆ ಹೆಚ್ಚು ವಿಶ್ವಾಸ ಹೆಚ್ಚಾಗುತ್ತದೆ.
7. **ಅವಶ್ಯವಿದ್ದಲ್ಲಿ ಕೋಚಿಂಗ್ ಸೆಂಟರ್‌ಗೆ ಸೇರಿಕೊಳ್ಳಿ:** ನೀವು ಅಧ್ಯಯನ ಮಾಡುವಾಗ ಕೆಲವು ವಿಷಯಗಳು ಕ್ಲಿಷ್ಟ ಅನಿಸಿದ್ದಲ್ಲಿ ಉತ್ತಮವಾದ ಕೋಚಿಂಗ್ ಸೆಂಟರ್‌ಗೆ ಸೇರಿಕೊಳ್ಳಿ, ಹಾಗೆಯೇ ನಿಮ್ಮ ಪಠ್ಯಕ್ರಮದಲ್ಲಿನ ಎಲ್ಲಾ ವಿಷಯದ ಮೇಲೂ ಕೋಚಿಂಗ್ ಸೆಂಟರ್‌ನವರು ಹೆಚ್ಚಿನ ತರಬೇತಿಯನ್ನು ನೀಡುತ್ತಾರೆಯೇ ಎಂದು ತಿಳಿದುಕೊಳ್ಳಿ.
8. **ಅಣಕು ಪರೀಕ್ಷೆಗೆ ಹಾಜರಾಗಿ:** ಕೆಲವು ಸಂಸ್ಥೆಗಳು ಎಂಬಿಎ ಪ್ರವೇಶ ಪಡೆಯಲು ವಿದ್ಯಾರ್ಥಿಗಳಿಗೆ ಸಹಾಯವಾಗಲೆಂದೇ ಪರೀಕ್ಷೆ ಹತ್ತಿರ ಇರುವಾಗ ಅಣಕು ಪರೀಕ್ಷೆಗಳನ್ನು ನಡೆಸುತ್ತಾರೆ. ಅಂತಹ ಅಣಕು ಪರೀಕ್ಷೆಗಳಿಗೆ ಹೆಚ್ಚು ಯೋಚಿಸದೆ ಹೆಸರು ನೋಂದಾಯಿಸಿ.
9. **ನಿತ್ಯ ವೇಳಾ ಪಟ್ಟಿ ಹಾಗೂ ಸಮಯ ನಿರ್ವಹಣೆ:** ಎಲ್ಲಾ ವಿಷಯಗಳಿಗೂ ಪ್ರತಿ ನಿತ್ಯ ಒಂದು ಗಂಟೆ ಮೀಸಲಿಡಿ. ಕಷ್ಟವಾದ ವಿಷಯಗಳ ಮೇಲೆ ನಿಮ್ಮ ಅನುಕೂಲದ ಪ್ರಕಾರ ಹೆಚ್ಚು ಸಮಯ ಕಳೆಯಬಹುದು. ಯಾವುದೇ ಶಾರ್ಟ್-ಕಟ್ ವಿಧಾನಗಳಿಗೆ ಪ್ರಯತ್ನ ಪಡಬೇಡಿ. ಕೇವಲ ಅಧ್ಯಯನ ವಸ್ತುವನ್ನು ಹುಡುಕುವುದರಲ್ಲಿಯೇ ಸಮಯ ಕಳೆಯಬೇಡಿ. ಸಮಯವನ್ನು ಅತ್ಯುತ್ತಮವಾಗಿ ನಿರ್ವಹಿಸಿದಲ್ಲಿ ನೀವು ಪರೀಕ್ಷೆಯಲ್ಲಿ ಉತ್ತಮ ರ‍್ಯಾಂಕಿಂಗ್ ಪಡೆಯುವುದರಲ್ಲಿ ಸಂಶಯವಿಲ್ಲ.
10. ಈ ಅಧ್ಯಯನದ ವೇಳೆಯಲ್ಲಿ ಮೊಬೈಲ್, ವಾಟ್ಸ್‌ಆ್ಯಪ್, ಫೇಸ್‌ಬುಕ್ ಮುಂತಾದ ಸಾಮಾಜಿಕ ಜಾಲತಾಣಗಳ ಬಳಕೆಯನ್ನು ಪರೀಕ್ಷೆ ಮುಗಿಯುವವರೆಗೆ ಮಿತಗೊಳಿಸಿ.

(ಲೇಖಕರು: ಸಹಾಯಕ ಪ್ರಾಧ್ಯಾಪಕರು, ಎಂಬಿಎ ವಿಭಾಗ, ಸಿದ್ಧಗಂಗಾ ತಾಂತ್ರಿಕ ಮಹಾವಿದ್ಯಾಲಯ, ತುಮಕೂರು)

ಒಳ್ಳೆಯ ಕೆಲಸ ಎಂದರೆ ಯಾವುದು?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ವಿ. ಪ್ರದೀಪ್ ಕುಮಾರ್

- **ಸರ್, ನಾನು ಪಿಯುಸಿ (ವಿಜ್ಞಾನ) ಮುಗಿಸಿದ್ದೇನೆ. ಮುಂದೆ ಎಂಜಿನಿಯರಿಂಗ್ ತೆಗೆದುಕೊಳ್ಳುವುದು ಉತ್ತಮವೋ, ಬಿಎಸ್‌ಸಿ (ನರ್ಸಿಂಗ್) ಉತ್ತಮವೋ? ಒಳ್ಳೆಯ ಕೆಲಸ ಸಿಗಲು ಯಾವ ಕೋರ್ಸ್ ಮಾಡಬೇಕು?**

ದರ್ಶನ್, ದಾವಣಗೆರೆ.

ನಿಮ್ಮ ಜೀವನದಲ್ಲಿ ಸಂತೃಪ್ತಿಯನ್ನು ನೀಡುವ ಕೆಲಸವನ್ನು ಒಳ್ಳೆಯ ಕೆಲಸವೆಂದು ಹೇಳಬಹುದು. ವೈಯಕ್ತಿಕ ಜೀವನ ಸುಖಕರವಾಗಿರಬೇಕಾದರೆ, ನೀವು ವೃತ್ತಿಯಲ್ಲಿ ಯಶಸ್ಸನ್ನು ಸಾಧಿಸಬೇಕು; ಆಗಲೇ ಜೀವನದ ಎಲ್ಲಾ ಸಂಪತ್ತು, ಸಂತೃಪ್ತಿ ನಿಮ್ಮದಾಗಬಲ್ಲದು. ಕಲಿತ ವಿದ್ಯೆಗೂ, ನಿಮ್ಮಲ್ಲಿರುವ ಕೌಶಲಗಳಿಗೂ ಸರಿಹೊಂದುವಂತಹ, ನಿಮ್ಮ ಇಷ್ಟ, ಅಭಿರುಚಿಗೆ ಸ್ಪಂದಿಸುವಂತಹ ವೃತ್ತಿಯನ್ನು ಆಯ್ಕೆ ಮಾಡಿಕೊಳ್ಳಿ. ಏಕೆಂದರೆ, ಒಲವಿಲ್ಲದ ವೃತ್ತಿ ನೀರಸಮಯ; ಅಂತಹ ವೃತ್ತಿಯಲ್ಲಿ ಯಶಸ್ಸು ಅಸಾಧ್ಯ.

ಬೌದ್ಧಿಕ ಶಿಕ್ಷಣದಿಂದ ಹೆಚ್ಚಿನ ವೇತನದ ಕೆಲಸ ಸಿಗಬಹುದು; ಸಂತೃಪ್ತಿಯ ಜೀವನವಲ್ಲ. ಹೆಚ್ಚಿನ ವೇತನ, ಸವಲತ್ತುಗಳಿದ್ದರೂ ವೃತ್ತಿ ಮತ್ತು ವೈಯಕ್ತಿಕ ಜೀವನದಲ್ಲಿ ಸಮತೋಲನವಿಲ್ಲದೆ, ಪರಸ್ಪರ ಭಿನ್ನಾಭಿಪ್ರಾಯ, ಮನಸ್ತಾಪಗಳಿಂದ, ಖಿನ್ನತೆಯಿಂದ ಬಳಲುತ್ತಿರುವ ಸಂಸಾರಗಳನ್ನು ನಾವು ನೋಡಬಹುದು.

ಜೀವನದಲ್ಲಿ ಕನಸುಗಳಿರಬೇಕು; ಕನಸುಗಳು ಮಹತ್ವಾಕಾಂಕ್ಷೆಯಾಗಬೇಕು. ಅದರಂತೆ, ವೃತ್ತಿ ಮತ್ತು ವೈಯಕ್ತಿಕ ಜೀವನದಲ್ಲಿ ನಿರ್ದಿಷ್ಟವಾದ, ಸ್ಪಷ್ಟವಾದ, ಸಾಧಿಸಬಹುದಾದ ಮತ್ತು ಅಳೆಯಬಹುದಾದ ಗುರಿಯಿರಬೇಕು. ಬಾಳಿಗೊಂದು ಗುರಿ ಇದ್ದರೆ, ನಮ್ಮಲ್ಲಿರುವ ಸುಪ್ತ ಶಕ್ತಿಗಳನ್ನು ಆ ಗುರಿಯೆಡೆಗೆ ಕೇಂದ್ರೀಕರಿಸಿ, ವೃತ್ತಿಯಲ್ಲಿ ಯಶಸ್ಸು ಮತ್ತು ಜೀವನದಲ್ಲಿ ಸಂತೃಪ್ತಿಯನ್ನು ಪಡೆಯಬಹುದು.

- **ಸರ್, 2021ರಲ್ಲಿ ಪಿಯುಸಿ (ವಿಜ್ಞಾನ) ಮುಗಿಸಿದ್ದೇನೆ. ಬಿಎಸ್‌ಸಿ (ನರ್ಸಿಂಗ್)ಗೆ ಸೇರಬೇಕು ಅಂತ ಇದ್ದೇನೆ. ಪ್ರವೇಶ ಪ್ರಕ್ರಿಯೆ, ಸರ್ಕಾರದ ಸೀಟು ಗಿಟ್ಟಿಸಿಕೊಳ್ಳುವುದು ಹೇಗೆ?**

ಸಹನ್ ಪಿ., ಚಿತ್ರದುರ್ಗ.

ಬಿಎಸ್‌ಸಿ ನರ್ಸಿಂಗ್ ಕೋರ್ಸಿಗೆ ಪಿಯುಸಿ ಫಲಿತಾಂಶದ ಆಧಾರದ ಮೇಲೆ ಪ್ರವೇಶದ ಅವಕಾಶವಿದೆ. ಹೆಚ್ಚಿನ ಮಾಹಿತಿಗಾಗಿ, ಡೈರೆಕ್ಟೊರೇಟ್ ಆಫ್ ಮೆಡಿಕಲ್ ಎಜುಕೇಷನ್ ಜಾಲತಾಣವನ್ನು ಪರಾಮರ್ಶಿಸಿ.

- **ನಾನು ಸದ್ಯ ಪೊಲೀಸ್ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದೇನೆ. ಮುಂದೆ ನಾನು ಪಿಎಸ್‌ಐ ಆಗಬೇಕು ಅಂತ ಸತತವಾಗಿ ಅಭ್ಯಾಸ ಮಾಡುತ್ತಿದ್ದು 3 ಬಾರಿ ಪ್ರಯತ್ನಿಸಿದರೂ ಸಫಲತೆ ಸಿಕ್ಕಿಲ್ಲ. ಯಾವುದೇ ಕೋಚಿಂಗ್ ತೆಗೆದುಕೊಂಡಿಲ್ಲ. ಈ ಮೊದಲು ಪೊಲೀಸ್ ಕಾನ್‌ಸ್ಟೇಬಲ್ ಪರೀಕ್ಷೆಯ ಮೊದಲ ಪ್ರಯತ್ನದಲ್ಲಿಯೇ ಯಶಸ್ಸು ಸಿಕ್ಕಿದೆ. ಪಿಎಸ್‌ಐ ದ್ವಿತೀಯ ಪೇಪರ್ ಪರೀಕ್ಷೆಯಲ್ಲಿ 5-10 ಅಂಕದಲ್ಲಿ ವೈಫಲ್ಯವಾಗುತ್ತಿದೆ. ಹಿಂದಿನ ಪ್ರಶ್ನೆ ಪತ್ರಿಕೆಗಳನ್ನೂ ಬಿಡಿಸಿದ್ದೇನೆ, ನನ್ನ ವಿಫಲತೆಗೆ ಕಾರಣಗಳನ್ನು ತಿಳಿದು ವಿಷಯಗಳನ್ನು ಚೆನ್ನಾಗಿ ಓದಿದರೂ ಸಾಧ್ಯವಾಗುತ್ತಿಲ್ಲ.**

ಹೆಸರು, ಊರು ತಿಳಿಸಿಲ್ಲ.

- **ನಾನು ಪದವಿ ಮುಗಿಸಿ ಎರಡು ವರ್ಷ ಆಗಿದೆ. ಪೊಲೀಸ್ ಆಗಬೇಕು ಅನ್ನೋ ಕನಸು ತುಂಬಾ ಇದೆ. ಅದಕ್ಕೆ ಸಿದ್ಧತೆಯನ್ನೂ ನಡೆಸುತ್ತಿದ್ದೇನೆ. ಆದರೂ, ಯಾವ ಪರೀಕ್ಷೆ ಬರೆದರೂ 50 ಅಂಕದ ಮೇಲೆ ಹೋಗುತ್ತಿಲ್ಲ; ಆತ್ಮವಿಶ್ವಾಸ ಕುಗ್ಗುತ್ತಾ ಇದೆ. ನನ್ನನ್ನು ನಂಬಿ ನನ್ನ ಕುಟುಂಬ ಇದೆ. ಹೇಗೆ ತಯಾರಿ ನಡೆಸಬೇಕು?**

ಚಂದ್ರಿಕಾ, ಹಾವೇರಿ.

ಅಭ್ಯರ್ಥಿಗಳಿಗೆ ಸರಿಯಾದ ಉದ್ಯೋಗ ಸಿಗುವುದು ಎಷ್ಟು ಕಷ್ಟವೋ ಸಂಸ್ಥೆಗಳಿಗೆ ಕೌಶಲಯುಕ್ತ ಅಭ್ಯರ್ಥಿಗಳು ಸಿಗುವುದೂ ಸಹ ಅಷ್ಟೇ ಕಷ್ಟ! ಕೌಶಲವೆಂದರೆ ಅಪೇಕ್ಷಿತ ಅಥವಾ ಪೂರ್ವನಿರ್ಧಾರಿತ ಮಾನದಂಡದಂತೆ ವೃತ್ತಿಯ ಕೆಲಸಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸುವ ಸಾಮರ್ಥ್ಯ. ಆದ್ದರಿಂದಲೇ, ವೃತ್ತಿಯಲ್ಲಿ ಯಶಸ್ವಿಯಾಗಲು ಅಭ್ಯರ್ಥಿಗಳಿಗೆ ಅರ್ಹತೆ ಮತ್ತು ಯೋಗ್ಯತೆಯಿದೆಯೇ ಎಂದು ಗುರುತಿಸುವ ನಿಟ್ಟಿನಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ವಿನ್ಯಾಸಗೊಳಿಸಲಾಗುತ್ತದೆ. ಹಾಗಾಗಿ, ಪೊಲೀಸ್ ವೃತ್ತಿಗೆ ನಿಮ್ಮ ಸ್ವಾಭಾವಿಕ ಪ್ರತಿಭೆ ಮತ್ತು ಕೌಶಲಗಳಿವೆಯೇ ಎಂದು ನಿಮಗೂ ಖಾತರಿಯಾಗಬೇಕು. ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಹೇಗೆ ಓದಬೇಕು ಎನ್ನುವುದನ್ನು ಆಗಸ್ಟ್ ತಿಂಗಳ 23ರ ಪ್ರಶ್ನೋತ್ತರದಲ್ಲಿ ಉತ್ತರಿಸಲಾಗಿದೆ. ದಯವಿಟ್ಟು ಓದಿಕೊಳ್ಳಿ. ಹಾಗೂ, ಹಿಂದಿನ ಪರೀಕ್ಷೆಗಳಲ್ಲಿನ ವಿಫಲತೆಯ ಕಾರಣಗಳನ್ನು ಅವಲೋಕಿಸಿ ಮುಂದಿನ ಪರೀಕ್ಷೆಯಲ್ಲಿ ಸೂಕ್ತವಾಗಿ ಬರೆಯುವ ತಂತ್ರಗಾರಿಕೆಯನ್ನು ಯೋಜಿಸಿ. ನಿಮ್ಮ ಕನಸುಗಳನ್ನು ಸಾಕಾರಗೊಳಿಸಬೇಕಾದರೆ ಆತ್ಮವಿಶ್ವಾಸವನ್ನು ಬೆಳೆಸುವ ಸ್ವಯಂಪ್ರೇರಣೆಯೇ ಸಾಧನೆಗೆ ಸಂಜೀವಿನಿಯಾಗಬೇಕು.

- **ನಾನು ಪ್ರಸ್ತುತ ಕೇಂದ್ರ ಸರ್ಕಾರದ ಸ್ಪರ್ಧಾತ್ಮಕ ಪರೀಕ್ಷೆಗಳ ಬಗ್ಗೆ ಅಧ್ಯಯನ ಮಾಡುತಿದ್ದು, ಎನ್‌ಆರ್‌ಎ (ನ್ಯಾಷನಲ್ ರಿಕ್ರೂಟ್‌ಮೆಂಟ್ ಏಜೆನ್ಸಿ) ಬಗ್ಗೆ ಹಲವಾರು ಗೊಂದಲಗಳಿವೆ. ದಯವಿಟ್ಟು ಅದರ ಬಗ್ಗೆ ಸವಿಸ್ತಾರವಾಗಿ ತಿಳಿಸಿ ಕೊಡಿ.**

ರಾಜೇಶ್, ಸಿದ್ದಾಪುರ.

ಎನ್‌ಆರ್‌ಎ ಸ್ಥಾಪಿಸುವ ಮೊದಲು, ಭಾರತೀಯ ರೈಲ್ವೆ, ಇತರ ಇಲಾಖೆಗಳು, ಸಚಿವಾಲಯಗಳು, ಸಂಸ್ಥೆಗಳು ಮತ್ತು ಕೇಂದ್ರ ಸರ್ಕಾರದ ಸರ್ಕಾರಿ ಸೇವೆಗಳ ಅಡಿಯಲ್ಲಿ ಗ್ರೂಪ್ ಬಿ., ಗ್ರೂಪ್ ಸಿ ಮತ್ತು ಗ್ರೂಪ್ ಡಿ (ನಾನ್-ಗೆಜೆಟೆಡ್) ಹುದ್ದೆಗಳಿಗೆ ನೇಮಕಾತಿ ಪರೀಕ್ಷೆಗಳನ್ನು ಪ್ರತ್ಯೇಕವಾಗಿ ಮಾಡಲಾಗುತ್ತಿತ್ತು. ಹೆಚ್ಚಿನ ಹುದ್ದೆಗಳಿಗೆ ಒಂದೇ ರೀತಿಯ ಅರ್ಹತೆಯ ಅಗತ್ಯವನ್ನು ಮನಗಂಡು ಎನ್‌ಆರ್‌ಎ ಸಂಸ್ಥೆಯನ್ನು ಸ್ಥಾಪಿಸಲಾಗಿದೆ. ಇದರಿಂದ ಸರ್ಕಾರಿ ಸಂಸ್ಥೆಗಳ ಬಹುತೇಕ ಹುದ್ದೆಗಳನ್ನು ಅರಸುವ ಅಭ್ಯರ್ಥಿಗಳಿಗೆ ಒಂದೇ ಪರೀಕ್ಷೆಯ ಸೌಲಭ್ಯ ದೊರಕಲಿದೆ. ಎನ್‌ಆರ್‌ಎ ನಿರ್ವಹಿಸುವ ಮೊದಲ ಸಿಇಟಿ ಪರೀಕ್ಷೆ 2022ರಲ್ಲಿ ನಡೆಯುವ ನಿರೀಕ್ಷೆಯಿದೆ.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ವಿದ್ಯಾರ್ಥಿ ವೇತನ ಕೈಪಿಡಿ

ಕೋಟಕ್ ಶಿಕ್ಷಣ ನಿಧಿ

ವಿವರ: ಶಾಲೆ ಮತ್ತು ಕಾಲೇಜು ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಹತೆ: ಕೋವಿಡ್ ಕಾರಣದಿಂದ ಕುಟುಂಬದಲ್ಲಿ ದುಡಿಯುವ ಜೀವವನ್ನು ಕಳೆದುಕೊಂಡಿದ್ದರೆ. 6ರಿಂದ 22 ವಯಸ್ಸಿನ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು.

ಆರ್ಥಿಕ ಸಹಾಯ: ನಿಯಮ ಮತ್ತು ಷರತ್ತುಗಳು ಅನ್ವಯ

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 31 ಮಾರ್ಚ್, 2022

ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಅರ್ಜಿಗಳು ಮಾತ್ರ

ಹೆಚ್ಚಿನ ಮಾಹಿತಿಗೆ: www.b4s.in/praja/KSFA1

ಡಿಜಿಟಲ್ ಭಾರತಿ ಕೋವಿಡ್ ಸ್ಕಾಲರ್‌ಶಿಪ್ 2021-22

ವಿವರ: ಕೋವಿಡ್ ಕಾರಣದಿಂದ ಮುಂದಿನ ಓದಿಗೆ ತೊಂದರೆ ಅನುಭವಿಸುತ್ತಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು.

ಅರ್ಹತೆ: 1ರಿಂದ 12ನೇ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಜನವರಿ 2020ರಿಂದ ಕೋವಿಡ್ ಕಾರಣದಿಂದ ಪೋಷಕರನ್ನು ಕಳೆದುಕೊಂಡಿರುವವರು ಅರ್ಜಿ ಸಲ್ಲಿಸಬಹುದು.

ಆರ್ಥಿಕ ಸಹಾಯ: ಲ್ಯಾಪ್‌ಟಾಪ್‌ಗಳು, ವೋಚರ್ಸ್‌ಗಳು

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 30 ನವೆಂಬರ್, 2021

ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಅರ್ಜಿಗಳು ಮಾತ್ರ

ಹೆಚ್ಚಿನ ಮಾಹಿತಿಗೆ: www.b4s.in/praja/DBCS1

ಕೃಪೆ: buddy4study.com

ಓದಿದ ವಿಷಯ ನೆನಪಿನಲ್ಲಿಡುವ ವಿಧಾನಗಳು

ಸಿಬಿಎಸ್‌ಇ ಪರೀಕ್ಷೆ

ವೆಂಕಟ ಸುಬ್ಬರಾವ್. ವಿ.



ಭಾಗ-3

ಹಿಂದಿನ ಸಂಚಿಕೆಯಲ್ಲಿ ನಾವು ಬಹು ಆಯ್ಕೆ ಪ್ರಶ್ನೆಗಳ ಬಗ್ಗೆ ಕೆಲವು ವಿಚಾರಗಳನ್ನು, ಬಹು ಆಯ್ಕೆ ಪ್ರಶ್ನೆಗಳಿಗೆ ಸುಲಭವಾಗಿ ಹೇಗೆ ಉತ್ತರಿಸಬೇಕು, ಪರೀಕ್ಷೆಯ ಸಮಯವನ್ನು ಹೇಗೆ ವಿಂಗಡಿಸಿಕೊಂಡು ಸರಿಯಾದ ಸಮಯ ನಿರ್ವಹಣೆಯನ್ನು ಮಾಡಬೇಕು ಮುಂತಾದ ವಿಷಯಗಳ ಬಗ್ಗೆ ತಿಳಿದುಕೊಂಡೆವು.

ಈ ಲೇಖನದಲ್ಲಿ ನಾವು, ಈ ರೀತಿಯ ಪರೀಕ್ಷೆಗಳಿಗೆ ಓದಿದ ವಿಷಯಗಳನ್ನು ಸುಲಭವಾಗಿ ನೆನಪಿನಲ್ಲಿಟ್ಟುಕೊಳ್ಳಲು ಸಹಕಾರಿಯಾಗುವ ಕೆಲವು ಸರಳ ವಿಧಾನಗಳ ಬಗ್ಗೆ ತಿಳಿಯೋಣ.

ಸಮಾಜ ವಿಜ್ಞಾನ ಮತ್ತು ಭಾಷಾ ವಿಷಯಗಳನ್ನು ಸುಲಭವಾಗಿ ನೆನಪಿನಲ್ಲಿಡಲು ಸಹಕಾರಿಯಾಗುವ ಹಲವಾರು ವಿಧಾನಗಳಿವೆ. ಈ ಲೇಖನದದಲ್ಲಿ ಕೆಲವು ವಿಧಾನಗಳ ಬಗ್ಗೆ ಮಾತ್ರ ತಿಳಿಯೋಣ. ಈ ವಿಧಾನಗಳು ಅನೇಕ ಬಾರಿ ಕೇವಲ ವಿಷಯಗಳನ್ನು ನೆನಪಿನಲ್ಲಿಡಲು ಮಾತ್ರ ಉಪಯುಕ್ತವಾಗಿವೆ. ಈ ವಿಧಾನಗಳನ್ನು ಉಪಯೋಗಿಸುವ ಮೊದಲು, ಪಾಠಗಳನ್ನು ಓದಿ, ತಿಳಿದು ಸರಿಯಾಗಿ ಅರ್ಥೈಸಿಕೊಳ್ಳಿ.

1. ವಿಜ್ಞಾನ, ಸಮಾಜ ವಿಜ್ಞಾನ ಮತ್ತು ಭಾಷಾ ವಿಷಯಗಳನ್ನು ನೆನಪಿನಲ್ಲಿಡಲು ಈ ಕೆಳಗಿನ ವಿಧಾನಗಳು ಸಹಾಯಕವಾಗುತ್ತವೆ.

ಅ. ಪ್ರಾಸಬದ್ಧ ಪದಗಳ ವಿಧಾನ (Rhyming Technique)

ಈ ವಿಧಾನವು ಪಾಠದ ಮುಖ್ಯ ಅಂಶಗಳನ್ನು ಕ್ರಮವಾಗಿ ನೆನಪಿನಲ್ಲಿಟ್ಟುಕೊಳ್ಳಲು ಬಹಳ ಸಹಕಾರಿಯಾಗಿದೆ. ಈ ವಿಧಾನದಲ್ಲಿ 1 (ಒಂದು) ನ್ನು ಮೊದಲುಗೊಂಡು ಎಲ್ಲ ಸಂಖ್ಯೆಗಳ ಸರಳವಾದ ಪ್ರಾಸಬದ್ಧ ಪದಗಳನ್ನು ರಚಿಸಿಕೊಳ್ಳಿ. ಸರಳವಾದ ಹಾಗೂ ನಿಮಗೆ ಸುಲಭವಾಗಿ ನೆನಪಿನಲ್ಲಿಟ್ಟುಕೊಳ್ಳಲು ಸಾಧ್ಯವಾಗುವ ಪ್ರಾಸಬದ್ಧ ಪದಗಳನ್ನು ಇಟ್ಟುಕೊಳ್ಳಬಹುದು. ಇಲ್ಲಿ ಉದಾಹರಣೆಗಾಗಿ ಕೆಲವು ಪ್ರಾಸಗಳನ್ನು ಕೊಡಲಾಗಿದೆ.

1.One – Sun
2.Two – Shoe
3.Three – Tree
4.Four – Door
5.Five – Hive
6.Six – Vicks
7.Seven – Heaven
8.Eight – Kite
9.Nine – Dine
10.Ten - Hen

ಈಗ ನೀವು ನೆನಪಿನಲ್ಲಿಟ್ಟುಕೊಳ್ಳಲು ಬಯಸುವ ಪದಗಳನ್ನು ಬರೆದುಕೊಳ್ಳಿ. ಉದಾಹರಣೆಗಾಗಿ ನೀವು ಈ ಕೆಳಗಿನ ಪದಗಳನ್ನು ನೆನಪಿನಲ್ಲಿಟ್ಟುಕೊಳ್ಳಲು ಬಯಸುತ್ತೀರಿ ಎಂದುಕೊಳ್ಳೋಣ.

1. Umbrella- ಛತ್ರಿ
2. Vegetables - ತರಕಾರಿ
3. Mobile Phone – ಮೊಬೈಲ್ ಫೋನ್
4. Carbon Monoxide – ಕಾರ್ಬನ್ ಮೊನಾಕ್ಸೈಡ್
5. Cell– ಜೀವಕೋಶ
6. Motor – ಮೋಟಾರ್
7. Mahatma Gandhiji – ಮಹಾತ್ಮ ಗಾಂಧೀಜಿ
8. Moon- ಚಂದ್ರ
9. Night - ರಾತ್ರಿ
10. Pen - ಪೆನ್

ಈಗ ಈ ಪದಗಳನ್ನು ಮೊದಲು ನೀವು ನೆನಪಿನಲ್ಲಿಟ್ಟುಕೊಂಡ ಪ್ರಾಸಪದಗಳೊಂದಿಗೆ ಹೊಂದಿಸಿ. ಅಂದರೆ, ಈ ಪದಗಳು ಮತ್ತು ಪ್ರಾಸ ಪದಗಳ ಮಧ್ಯೆ ಯಾವುದಾದರೂ ರೀತಿಯ ಸಂಬಂಧವನ್ನು ಜೋಡಿಸಿ (ಸಾಧ್ಯವಾದಷ್ಟೂ ಹಾಸ್ಯಪೂರ್ಣವಾಗಿದ್ದರೆ ಒಳ್ಳೆಯದು)

ಉದಾ : (ಕೆಳಗಿನ ಟೇಬಲ್ ನೋಡಿ)

Sl.No.	Rhyming Word	Word to Remember	Association
One	Sun	Umbrella	ಸೂರ್ಯನು ಛತ್ರಿಯನ್ನು ಹಿಡಿದಿದ್ದಾನೆ!
Two	Shoe	Vegetables	ತರಕಾರಿಯನ್ನು shoe ಒಳಗೆ ತುಂಬಿಸಲು ಪ್ರಯತ್ನಿಸುತ್ತಿದ್ದಾರೆ
Three	Tree	Mobile Phone	ಮರದಲ್ಲಿ ಮೊಬೈಲ್ ಫೋನ್‌ಗಳು ಬೆಳೆಯುತ್ತಿವೆ
Four	Door	Carbon Monoxide	ಬಾಗಿಲು ತೆರೆದಾಕ್ಷಣ ಕಾರ್ಬನ್ ಮೊನಾಕ್ಸೈಡ್ ಒಳನುಗ್ಗುತ್ತಿದೆ
Five	Hive	Cells	ಜೇನುಗೂಡಿನಿಂದ ಜೀವಕೋಶಗಳು ಹೊರಬರುತ್ತಿವೆ
Six	Vicks	Motor	ಮೋಟಾರಿಗೆ ತಲೆನೋಯುತ್ತಿದೆ, ವಿಕ್ಸ್ ಹಚ್ಚೋಣ
Seven	Heaven	Mahatma Gandhiji	ಮಹಾತ್ಮ ಗಾಂಧೀಜಿಯವರು ಸ್ವರ್ಗದಲ್ಲಿದ್ದಾರೆ
Eight	Kite	Moon	ಚಂದ್ರನನ್ನು ಗಾಳಿಪಟದಂತೆ ಹಾರಿಸೋಣ
Nine	Dine	Night	ರಾತ್ರಿ ಊಟಮಾಡೋಣ
Ten	Hen	Pen	ಕೋಳಿಯು ಪೆನ್ನಿನಿಂದ ಬರೆಯುತ್ತಿದೆ

ಹೀಗೆ ಒಮ್ಮೆ ಮಾತ್ರ ಯೋಚಿಸಿ ಅಷ್ಟೇ ! ನಿಮಗೇ ತಿಳಿಯದಂತೆ ಈ ಎಲ್ಲ ಪದಗಳೂ ಈಗ ನಿಮ್ಮ ನೆನಪಿನಲ್ಲಿರುತ್ತವೆ!

ಈಗ ಈ ಎಲ್ಲ ಪದಗಳನ್ನೂ ನೆನಪಿಸಿಕೊಳ್ಳಲು ಹೀಗೆ ಮಾಡಿ,

ಮೊದಲು ಕ್ರಮ ಸಂಖ್ಯೆಗಳನ್ನು ಅವುಗಳ ಪ್ರಾಸಪದಗಳನ್ನು ನೆನಪಿಸಿಕೊಳ್ಳಿ, ನಂತರ ಪ್ರಾಸಪದದೊಂದಿಗೆ ಯೋಜಿಸಿದ ಪದಗಳನ್ನು ನೆನಪುಮಾಡಿಕೊಳ್ಳಲು ಪ್ರಯತ್ನಿಸಿ, ಈ ಕೆಳಗಿನ ಪಟ್ಟಿಯಲ್ಲಿ ಖಾಲಿ ಬಿಟ್ಟ ಸ್ಥಳದಲ್ಲಿ ತುಂಬಲು ಪ್ರಯತ್ನಿಸಿ.

ಉದಾ : (ಪಕ್ಕದಲ್ಲಿರುವ ಟೇಬಲ್ ನೋಡಿ)

ಈಗ ನೋಡಿ, ಎಷ್ಟು ಸುಲಭವಾಯಿತು! ಹೆಚ್ಚು ಪ್ರಯತ್ನದ ಅವಶ್ಯಕತೆಯೇ ಇಲ್ಲದೇ ನೆನಪಿನಲ್ಲಿಡಬೇಕಾದ ಪದಗಳು ತಾವಾಗಿಯೇ ನಿಮ್ಮ ಕಣ್ಣಮುಂದೆ ಬರುತ್ತಿವೆಯಲ್ಲವೇ!

ಮೊದಲೇ ತಿಳಿಸಿದಂತೆ ಈ ವಿಧಾನವು ಯಾವುದಾದರೂ ವಿಷಯದ ಮುಖ್ಯ ಅಂಶಗಳನ್ನು ಸರಣಿ ಕ್ರಮದಲ್ಲಿ ಕ್ರಮಬದ್ಧವಾಗಿ ನೆನಪಿನಲ್ಲಿ ಇಟ್ಟುಕೊಳ್ಳಲು ಉಪಯುಕ್ತ.

Sl.No. ಕ್ರ.ಸಂ.	Rhyming Word ಪ್ರಾಸ ಪದ	Word to Remember ನೆನಪಿಟ್ಟುಕೊಳ್ಳಬೇಕಾದ ಪದ
One	Sun	
Two	Shoe	
Three	Tree	
Four	Door	
Five	Hive	
Six	Vicks	
Seven	Heaven	
Eight	Kite	
Nine	Dine	
Ten	Hen	

(ಮುಂದಿನ ಸಂಚಿಕೆಯಲ್ಲಿ ಆ. ಪದಗಳ ಜೋಡಣೆ ವಿಧಾನ ಇ. ಮೈಂಡ್ ಮ್ಯಾಪ್ ವಿಧಾನ ಈ. ಮುಖ್ಯ ಪದಗಳನ್ನು ಗುರುತುಹಾಕಿಕೊಂಡು ನೆನಪಿನಲ್ಲಿಟ್ಟುಕೊಳ್ಳುವ ವಿಧಾನ ಉ. ಪಾಠದ ಮುಖ್ಯ ಹಂತಗಳನ್ನು ನೆನಪಿನಲ್ಲಿಟ್ಟುಕೊಳ್ಳುವುದರ ಮುಖಾಂತರ ಬೇಕಾದ ಎಲ್ಲ ಅಂಶಗಳನ್ನೂ ಸರಳವಾಗಿ ನೆನಪಿನಲ್ಲಿಟ್ಟುಕೊಳ್ಳುವ ವಿಧಾನಗಳ ಬಗ್ಗೆ ತಿಳಿಯೋಣ.)

(ಲೇಖಕರು: ನಿರ್ದೇಶಕರು, ಸ್ಮಾರ್ಟ್ ಸೆರೆಬ್ರಮ್, ಬೆಂಗಳೂರು)



ಸುಭಾಷಿತ
ಮೆಚ್ಚುಗೆಯನ್ನು ನಿರೀಕ್ಷಿಸದೆ ಕೆಲಸ ಮಾಡಲು ನೀವು ಸದಾ ಸಿದ್ಧರಾಗಿರಬೇಕು.
-ಅರ್ನೆಸ್ಟ್ ಹೆಮಿಂಗ್‌ವೇ

ತಾಪಮಾನ ಏರಿಕೆ ತಡೆ ಅನಿವಾರ್ಯ ದೇಶದ ನೀತಿಯಲ್ಲಿ ಪಲ್ಲಟ ಅಗತ್ಯ

ಹವಾಮಾನ ಬದಲಾವಣೆಯಿಂದ ಭೂಮಿಯ ಮೇಲೆ ಮತ್ತು ಜನಜೀವನದ ಮೇಲೆ ಆಗಬಹುದಾದ ಪ್ರತಿಕೂಲ ಪರಿಣಾಮಗಳು ಏನು ಎಂಬುದು ಇತ್ತೀಚಿನ ವರ್ಷಗಳಲ್ಲಿ ನಿಚ್ಚಳವಾಗುತ್ತಿವೆ. ಅತಿಯಾದ ಮಳೆ, ಮಳೆ ಕೊರತೆ, ಅಕಾಲದಲ್ಲಿ ಮಳೆ, ಪ್ರವಾಹ, ತಾಪಮಾನ ಏರಿಕೆ, ಒಣಗುತ್ತಿರುವ ನದಿಗಳು, ನೀರ್ಗಲ್ಲುಗಳ ಕರಗುವಿಕೆಗಳನ್ನೆಲ್ಲ ನಾವು ನೋಡುತ್ತಿದ್ದೇವೆ. ಹಾಗಾಗಿಯೇ ಹವಾಮಾನ ಬದಲಾವಣೆ ತಡೆಯುವುದು ತುರ್ತಾಗಿ ಆಗಬೇಕಿರುವ ಕಾರ್ಯ. ಸ್ಕಾಟ್ಲೆಂಡ್‌ನ ಗ್ಲಾಸ್ಗೋದಲ್ಲಿ ನಡೆಯುತ್ತಿರುವ ಸಮಾವೇಶದಲ್ಲಿ ಈ ಕುರಿತು ಗಂಭೀರ ಚರ್ಚೆ ನಡೆದಿದೆ. ಜಾಗತಿಕ ತಾಪಮಾನ ಏರಿಕೆ ತಡೆಗೆ ಭಾರತವು ಕೆಲವು ಮಹತ್ವದ ಕ್ರಮಗಳನ್ನು ಘೋಷಿಸಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಹವಾಮಾನ ಬದಲಾವಣೆ ತಡೆಗೆ ಐದು ಅಂಶಗಳ ಕ್ರಿಯಾ ಯೋಜನೆಯನ್ನು ಸಮಾವೇಶದಲ್ಲಿ ಪ್ರಕಟಿಸಿದ್ದಾರೆ. 2015ರಲ್ಲಿ ಪ್ಯಾರಿಸ್‌ನಲ್ಲಿ ನಡೆದ ಹವಾಮಾನ ಸಮ್ಮೇಳನದಲ್ಲಿ ಭಾರತ ಘೋಷಿಸಿದ್ದ ಬದ್ಧತೆಗಳನ್ನು ಈ ಕ್ರಿಯಾ ಯೋಜನೆಯು ಇನ್ನಷ್ಟು ವಿಸ್ತರಿಸುತ್ತದೆ. ಈಗಿನ ಘೋಷಣೆಗಳು ಮಹತ್ವಾಕಾಂಕ್ಷಿಯೂ ಸವಾಲಿನದ್ದೂ ಆಗಿವೆ. ಪಳೆಯುಳಿಕೆಯೇತರ ಇಂಧನ ಸಾಮರ್ಥ್ಯವನ್ನು 500 ಗಿಗಾವ್ಯಾಟ್‌ಗೆ ಹೆಚ್ಚಿಸುವುದು, ಇಂಧನ ಅಗತ್ಯದ ಶೇ 50ರಷ್ಟನ್ನು ನವೀಕರಿಸಬಹುದಾದ ಮೂಲಗಳಿಂದ ಪಡೆದುಕೊಳ್ಳುವುದು, ಇಂಗಾಲದ ಹೊರಸೂಸುವಿಕೆಯನ್ನು ನೂರು ಕೋಟಿ ಟನ್‌ನಷ್ಟು ಕಡಿತ ಮಾಡುವುದು, ಆರ್ಥಿಕ ಚಟುವಟಿಕೆಗಳ ಕಾರಣದಿಂದಾಗಿ ಪರಿಸರ ಸೇರುವ ಇಂಗಾಲದ ಪ್ರಮಾಣವನ್ನು ಶೇ 45ರಷ್ಟು ಕಡಿತ ಮಾಡುವುದು (ಈ ಹಿಂದಿನ ಗುರಿ ಶೇ 35ರಷ್ಟು ಇತ್ತು) 2030ರ ಒಳಗೆ ಸಾಧಿಸಬೇಕಾದ ಗುರಿಗಳು. 2070ರ ಹೊತ್ತಿಗೆ, ಹಸಿರು ಮನೆ ಅನಿಲ ಹೊರಸೂಸುವಿಕೆಯನ್ನು ಸಮತೋಲನ ಮಟ್ಟಕ್ಕೆ (ನೆಟ್ ಝೀರೊ- ಹಸಿರು ಮನೆ ಅನಿಲ ಹೊರಸೂಸುವಿಕೆ ಮತ್ತು ವಾತಾವರಣದಿಂದ ಅದನ್ನು ನಿರ್ಮೂಲನ ಮಾಡುವಿಕೆ ಎರಡೂ ಸಮಾನ ಮಟ್ಟದಲ್ಲಿ ಇರುವಂತೆ ನೋಡಿಕೊಳ್ಳುವುದು) ತರುವುದು ಮೋದಿ ಅವರು ಪ್ರಕಟಿಸಿರುವ ಇನ್ನೊಂದು ಬದ್ಧತೆಯಾಗಿದೆ. ಮೋದಿ ಅವರು ಕಳೆದ ವಾರ ಪ್ರಕಟಿಸಿದ ಈ ಬದ್ಧತೆಗಳು ಅಚ್ಚರಿಗೆ ಕಾರಣವಾಗಿವೆ. ಏಕೆಂದರೆ, ಹವಾಮಾನ ಬದಲಾವಣೆ ತಡೆಗೆ ಇಂತಹ ಯೋಜನೆಗಳನ್ನು ಭಾರತವು ಪ್ರಕಟಿಸಲಿದೆ ಎಂಬುದರ ಯಾವ ಲಕ್ಷಣವೂ ಘೋಷಣೆ ಮಾಡುವವರೆಗೆ ಇರಲಿಲ್ಲ. ಪ್ಯಾರಿಸ್ ಸಮಾವೇಶದಲ್ಲಿ ಘೋಷಿಸಿದ್ದ ಬದ್ಧತೆಯನ್ನು ಇನ್ನಷ್ಟು ಉತ್ತಮಪಡಿಸುವ ಕೆಲಸವನ್ನು ಯಾವ ದೇಶವೂ ಮಾಡಿಲ್ಲ. ಹಾಗಾಗಿ, ಭಾರತದ ನಡೆಯು ಶ್ಲಾಘನೀಯವಾಗಿದೆ.



ಈ ಗುರಿ ಸಾಧಿಸಬೇಕಿದ್ದರೆ ಅಭಿವೃದ್ಧಿ ಯೋಜನೆಗಳು ಮತ್ತು ಅಭಿವೃದ್ಧಿ ನೀತಿಗಳಲ್ಲಿ ಮಹತ್ತರ ಬದಲಾವಣೆ ಅಗತ್ಯ

ಭಾರತವು ಹಾಕಿಕೊಂಡಿರುವ ಗುರಿಗಳು ಅತೀವ ಕ್ಲಿಷ್ಟಕರವಾದವು. ಭಾರತವು ಅಭಿವೃದ್ಧಿ ಹೊಂದುತ್ತಿರುವ ದೇಶ. ಅಭಿವೃದ್ಧಿಯ ಈಗಿನ ಹಂತದಲ್ಲಿ ಈ ಗುರಿಗಳನ್ನು ಸಾಧಿಸುವುದು ಹೇಳಿದಷ್ಟು ಸುಲಭವಲ್ಲ. ಹವಾಮಾನ ಬದಲಾವಣೆ ತಡೆಯುವ ದಿಸೆಯಲ್ಲಿ ದೇಶ ಈಗಾಗಲೇ ಕೈಗೊಂಡಿರುವ ಕ್ರಮಗಳನ್ನು ಗಮನಿಸಿದರೆ ಅದು ವೇದ್ಯವಾಗುತ್ತದೆ. ದೇಶದ ಒಟ್ಟು ಇಂಧನ ಉತ್ಪಾದನೆಯಲ್ಲಿ ನವೀಕರಿಸಬಹುದಾದ ಇಂಧನದ ಪಾಲು ಈಗ ಇರುವುದು ಶೇಕಡ 10ರಷ್ಟು ಮಾತ್ರ. ನವೀಕರಿಸಬಹುದಾದ ಇಂಧನ ಉತ್ಪಾದನೆ ಹೆಚ್ಚಳದಲ್ಲಿ ಇತ್ತೀಚಿನ ವರ್ಷಗಳಲ್ಲಿ ಉತ್ತಮ ಪ್ರಗತಿ ಆಗಿದೆ. ಹಾಗಿದ್ದರೂ ಇದನ್ನು ಒಂಬತ್ತು ವರ್ಷಗಳಲ್ಲಿ ಶೇ 50ರಷ್ಟಕ್ಕೆ ಏರಿಸುವುದು ಸಾಧ್ಯವೇ? ನವೀಕರಿಸಬಹುದಾದ ಇಂಧನ ಉತ್ಪಾದನೆಯ ತಂತ್ರಜ್ಞಾನ ಇನ್ನಷ್ಟು ಸುಧಾರಣೆ ಆಗಬೇಕಿದೆ. ಇಂಧನ ಉತ್ಪಾದನೆ, ಸಂಗ್ರಹ, ವಿತರಣೆಯಲ್ಲಿ ಗಂಭೀರವಾದ ಹಲವು ಸಮಸ್ಯೆಗಳಿವೆ. ಇಂಗಾಲ ಹೊರಸೂಸುವಿಕೆಯನ್ನು ನೂರು ಕೋಟಿ ಟನ್‌ನಷ್ಟು ಕಡಿತ ಮಾಡಬೇಕಿದ್ದರೆ, ಹೊರಸೂಸುವಿಕೆಯು ಶೇ 22ರಷ್ಟು ಕಮ್ಮಿ ಆಗಬೇಕು. ಹಸಿರು ಮನೆ ಅನಿಲ ಹೊರಸೂಸುವಿಕೆಯ ಸಮತೋಲನ ಸಾಧಿಸಲು 2070ರವರೆಗೆ ಸಮಯ ಇದೆ. ಇದು ಹಲವು ಅಂಶಗಳ ಮೇಲೆ ಅವಲಂಬಿತವಾಗಿದೆ. ಹಸಿರು ಮನೆ ಅನಿಲ ಸಮತೋಲನಕ್ಕೆ ಅಮೆರಿಕ ಮತ್ತು ಐರೋಪ್ಯ ಒಕ್ಕೂಟವು 2050ರ ಗುರಿ ಹಾಕಿಕೊಂಡಿವೆ. 2060ರ ಹೊತ್ತಿಗೆ ಇದನ್ನು ಸಾಧಿಸುವುದಾಗಿ ಚೀನಾ ಹೇಳಿದೆ.

ಈ ಗುರಿಗಳನ್ನು ಸಾಧಿಸಬೇಕಿದ್ದರೆ ಅಭಿವೃದ್ಧಿ ಯೋಜನೆಗಳು ಮತ್ತು ಅಭಿವೃದ್ಧಿ ನೀತಿಗಳಲ್ಲಿ ಮಹತ್ತರವಾದ ಬದಲಾವಣೆ ಅಗತ್ಯವಾಗಿದೆ. ಪ್ರಧಾನಿಯವರು ಹೇಳಿದಂತೆ, ಜೀವನಶೈಲಿಯಲ್ಲಿಯೂ ಗಮನಾರ್ಹವಾದ ಪಲ್ಲಟ ಆಗಬೇಕಾಗುತ್ತದೆ. ಅರಣ್ಯ, ಕೃಷಿ, ಕೈಗಾರಿಕೆ, ಪರಿಸರ ಮತ್ತು ಇತರ ವಿಷಯಗಳಿಗೆ ಸಂಬಂಧಿಸಿದ ಈಗಿನ ನೀತಿಗಳು ಮತ್ತು ಪದ್ಧತಿಗಳು ಬದಲಾಗಬೇಕು. ಈ ಕ್ಷೇತ್ರಗಳಿಗೆ ಸಂಬಂಧಿಸಿದ ಹಲವು ನಿಯಮಗಳನ್ನು ಮರು ರೂಪಿಸಬೇಕಿದೆ. ಇಂತಹ ಬದಲಾವಣೆಗಳನ್ನು ತರುವುದು ಸರಳವೇನೂ ಅಲ್ಲ. ಇಂತಹ ಬದಲಾವಣೆಗಳು ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರಗಳ ಮೇಲೆ ದೊಡ್ಡ ಮಟ್ಟದ ಪರಿಣಾಮಗಳನ್ನು ಬೀರಬಹುದು. ವೇಗವಾಗಿ ಬೆಳೆಯುತ್ತಿರುವ ಅರ್ಥವ್ಯವಸ್ಥೆಯ ಅಗತ್ಯಗಳು ಮತ್ತು ಪರಿಸರ ಸಂರಕ್ಷಣೆಯ ಬೇಡಿಕೆಗಳು ಏನು ಎಂಬುದನ್ನು ಗುರುತಿಸಿ, ಅವುಗಳ ನಡುವೆ ಅತ್ಯಂತ ನಾಜೂಕಿನ ಸಮತೋಲನವನ್ನು ಕಾಯ್ದುಕೊಳ್ಳಬೇಕು. ಜಾಗತಿಕ ತಾಪಮಾನ ಏರಿಕೆ ವಿರುದ್ಧದ ಹೋರಾಟವು ಶ್ರೀಮಂತ ದೇಶಗಳ ನೀತಿಗಳು ಮತ್ತು ಕ್ರಿಯೆಗಳ ಮೇಲೆ ಅವಲಂಬಿತ. ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಯೋಜನೆಗಳಿಗೆ ಶ್ರೀಮಂತ ದೇಶಗಳು ಬೆಂಬಲ ಕೊಡಬೇಕು. ಶ್ರೀಮಂತ ದೇಶಗಳಿಗೆ ತಮ್ಮ ದೇಶದ ಹೊಣೆಗಾರಿಕೆಯ ಜತೆಗೆ ಜಾಗತಿಕ ಹೊಣೆಗಾರಿಕೆಯೂ ಇದೆ. ಈ ಎರಡನ್ನೂ ಸಮರ್ಪಕವಾಗಿ ನಿರ್ವಹಿಸಬೇಕು. ಮೋದಿ ಅವರು ಕೂಡ ಈ ವಿಚಾರವನ್ನು ಉಲ್ಲೇಖಿಸಿದ್ದಾರೆ. ಪರಿಸರದೆಡೆಗಿನ ಭಾರತದ ಪಯಣದಲ್ಲಿ ಜಾಗತಿಕ ಹೂಡಿಕೆಗಳು ಮತ್ತು ತಂತ್ರಜ್ಞಾನಗಳು ಮಹತ್ವದ ಪಾತ್ರ ವಹಿಸಲಿವೆ ಎಂದು ಅವರು ಹೇಳಿದ್ದಾರೆ. ಇಷ್ಟೇ ಸಾಲದು. ನಮಗೆ ಅಗತ್ಯವಿರುವ ತಂತ್ರಜ್ಞಾನಗಳನ್ನು ರೂಪಿಸಲು ಬೇಕಿರುವ ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ಭಾರತವು ತೊಡಗಿಸಿಕೊಳ್ಳಬೇಕು.

ದಿನದ ಟ್ವೀಟ್

ಈಗಿನಿಂದಲೇ ಸಿದ್ಧರಾಗಬೇಕಿದೆ



ಒಂಬತ್ತು ವರ್ಷಗಳ ನಂತರ ಹಾಗೂ ಸತತ ಆರು ಬಾರಿ ಸೆಮಿಫೈನಲ್ ಪ್ರವೇಶಿಸಿದ್ದ ಭಾರತ ತಂಡವು ಇದೇ ಮೊದಲ ಬಾರಿಗೆ ಐಸಿಸಿ ಪಂದ್ಯಾವಳಿಯ ಸೆಮಿಫೈನಲ್ ಹಂತ ತಲುಪಲು ವಿಫಲವಾಗಿದೆ. ನಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ನಾವು ಆಡದಿರುವುದು ತಂಡಕ್ಕೆ ತೀವ್ರ ನೋವುಂಟು ಮಾಡಲಿದೆ. ಆಸ್ಟ್ರೇಲಿಯಾದಲ್ಲಿ ಮುಂದಿನ ವರ್ಷ ನಡೆಯಲಿರುವ ವಿಶ್ವಕಪ್ ಪಂದ್ಯಾವಳಿಗೆ ಸೂಕ್ತವಾದ ತಯಾರಿಯನ್ನು ಈಗಿನಿಂದಲೇ ಮಾಡಿಕೊಳ್ಳಬೇಕು.

ವೆಂಕಟೇಶ್ ಪ್ರಸಾದ್, ಮಾಜಿ ಕ್ರಿಕೆಟಿಗ

ಕಿಡಿನುಡಿ



ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿ ಮತ್ತು ಟಿ20 ವಿಶ್ವಕಪ್ ಟೂರ್ನಿ ನಡುವೆ ಒಂದಿಷ್ಟು ಬಿಡುವು ಇರಬೇಕಿತ್ತು. ಕಳೆದ ಆರು ತಿಂಗಳುಗಳಿಂದ ಭಾರತ ತಂಡದ ಆಟಗಾರರು ಮನೆಯಿಂದ ದೂರವಿದ್ದಾರೆ. ನಿರಂತರವಾಗಿ ಬಯೋಬಬಲ್ ವಾಸ ಮತ್ತು ಬಿಡುವಿಲ್ಲದ ವೇಳಾಪಟ್ಟಿಯಿಂದಾಗಿ ಆಟಗಾರರು ದಣಿದಿದ್ದಾರೆ.

ಭರತ್ ಅರುಣ್, ಭಾರತ ಕ್ರಿಕೆಟ್ ತಂಡದ ಬೌಲಿಂಗ್ ಕೋಚ್

25 ವರ್ಷಗಳ ಹಿಂದೆ
ಶುಕ್ರವಾರ, 8-11-1996

• **ಆಂಧ್ರ ಚಂಡಮಾರುತ: 400 ಮಂದಿ ಸಾವು**

ಹೈದರಾಬಾದ್, ನ. 7(ಪಿಟಿಐ)- ಆಂಧ್ರ ಪ್ರದೇಶದ ಪೂರ್ವ ಮತ್ತು ಪಶ್ಚಿಮ ಗೋದಾವರಿ ಜಿಲ್ಲೆಗಳಲ್ಲಿ ಭೀಕರ ಚಂಡಮಾರುತಕ್ಕೆ ಕನಿಷ್ಠ 400 ಜನರು ಬಲಿಯಾಗಿದ್ದಾರೆ.

ಪೂರ್ವ ಗೋದಾವರಿ ಜಿಲ್ಲೆಯ ಕೋಟಿಪಲ್ಲಿ ಮತ್ತು ಎದುರ್ಲಂಕಗಳ ಮಧ್ಯೆ ಗೋದಾವರಿ ನದಿಯಲ್ಲಿ ಪ್ರಯಾಣಿಕರ ದೋಣಿಯೊಂದು ಮುಳುಗಿ ಅದರಲ್ಲಿದ್ದ 42 ಜನರೂ ಜಲಸಮಾಧಿಯಾಗಿದ್ದಾರೆ ಎಂದು ಮುಖ್ಯಕಾರ್ಯದರ್ಶಿ ರಾಜಾಜಿ ತಿಳಿಸಿದರು.

• **ಆಡಳಿತ ಚುರುಕಿಗೆ ಪಟೇಲ್ ಸಂಪುಟ ಸಂಕಲ್ಪ**

ಬೆಂಗಳೂರು, ನ. 7- ರಾಜ್ಯದಲ್ಲಿ ಜನತೆಯ ಆಶೋತ್ತರಗಳಿಗೆ ಸ್ಪಂದಿಸುವಂತೆ ಆಡಳಿತವನ್ನು ಚುರುಕುಗೊಳಿಸುವುದರ ಜೊತೆಗೆ ಇಲ್ಲಿವರೆಗಿನ ಸಾಧನೆ- ವೈಫಲ್ಯಗಳನ್ನು ವಿಮರ್ಶಿಸಿ ಆತ್ಮಾವಲೋಕನ ಮಾಡಿಕೊಂಡು ಏಕತೆ, ಸೌಹಾರ್ದದಿಂದ ಕಾರ್ಯನಿರ್ವಹಿಸಲು ಜೆ.ಎಚ್. ಪಟೇಲ್ ನೇತೃತ್ವದ ಮಂತ್ರಿಮಂಡಲ ಸಂಕಲ್ಪ ತೊಟ್ಟ ಅಪರೂಪದ ಸಭೆ ನಗರದ ಹೊರವಲಯದಲ್ಲಿ ಇಂದು ನಡೆಯಿತು.

50 ವರ್ಷಗಳ ಹಿಂದೆ
ಸೋಮವಾರ, 8-11-1971

• **ಯಾವುದೇ ತುರ್ತುಸ್ಥಿತಿಗೆ ಸನ್ನದ್ಧವಾಗಿರಲು ಕರೆ**

ಬೆಂಗಳೂರು, ನ. 7- 'ದೇಶದ ಪೂರ್ವ ಗಡಿಯಲ್ಲಿ ಪಾಕಿಸ್ತಾನದಿಂದ ಭಾರಿ ಷೆಲ್ ದಾಳಿ ನಡೆಯುತ್ತಿದೆ' ಎಂದು ಇಲ್ಲಿ ತಿಳಿಸಿದ ಕೇಂದ್ರ ಸಚಿವ ಕೆ.ಸಿ. ಪಂತ್ ಅವರು, 'ಯಾವುದೇ ತುರ್ತು ಸನ್ನಿವೇಶವನ್ನು ಎದುರಿಸಲು ದೇಶ ಸಿದ್ಧವಿರಬೇಕು' ಎಂದು ಹೇಳಿದರು.

ಯಾಹ್ಯಾಖಾನರ ಯುದ್ಧೋನ್ಮಾದದ ಕೂಗುಗಳನ್ನು ಮಧ್ಯಾಹ್ನ ಆಡಳಿತ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಪ್ರಸ್ತಾಪಿಸಿದ ಪಂತ್ ಅವರು, 'ನಮಗೆ ಸಮರ ಬೇಕಿಲ್ಲ. ಆದರೆ ದೇಶದ ಸಮಗ್ರತೆಗೆ ಅಪಾಯ ತಟ್ಟುವುದಾದರೆ, ವಾಪಸು ಕೊಡಲು ನಾವು ಸಿದ್ಧರಿದ್ದೇವೆ' ಎಂದರು.

ಜಗತ್ತಿನ ಎಲ್ಲ ದೇಶಗಳ ಶಕ್ತಿಯ ಅಗತ್ಯವನ್ನು ಪೂರೈಸಬಲ್ಲ ಇದನ್ನು ಕಾರ್ಯರೂಪಕ್ಕೆ ತರುವುದು ಸಾಧ್ಯವೇ?

ಜಾಗತಿಕ ವಿದ್ಯುತ್ ಗ್ರಿಡ್ ಯೋಜನೆ



ವಿಶ್ಲೇಷಣೆ
ಡಾ. ಎಚ್.ಆರ್.ಕೃಷ್ಣಮೂರ್ತಿ

ನಮ್ಮ ದೇಶದ ಯಾವುದೇ ಭಾಗದಲ್ಲಿ ಉತ್ಪಾದಿಸಿದ ವಿದ್ಯುತ್ತನ್ನು ದೇಶದ ಇನ್ನಾವುದೇ ಭಾಗದಲ್ಲಿ ಬಳಸಬಹುದು. ಇದು ಸಾಧ್ಯವಾಗುವುದು ನಮ್ಮ ದೇಶದಲ್ಲಿರುವ ಅಧಿಕ ವೋಲ್ಟೇಜ್ ವಿದ್ಯುತ್ ಪ್ರಸರಣದ ಐದು ಪ್ರಾದೇಶಿಕ ಮತ್ತು ಒಂದು ರಾಷ್ಟ್ರೀಯ ವಿದ್ಯುತ್ ಜಾಲದ (ನ್ಯಾಷನಲ್ ಗ್ರಿಡ್) ಮೂಲಕ. ಭೂತಾನ್, ಮ್ಯಾನ್ಮಾರ್, ಬಾಂಗ್ಲಾದೇಶ ಮತ್ತು ನೇಪಾಳವೂ ನಮ್ಮ ರಾಷ್ಟ್ರೀಯ ಜಾಲದೊಂದಿಗೆ ಸಂಪರ್ಕ ಹೊಂದಿವೆ.

ದೇಶದ ಹಂತದಲ್ಲಿನ ಈ ವ್ಯವಸ್ಥೆಯಂತೆಯೇ, ನವೀಕರಿಸಬಹುದಾದ ಸೌರವಿದ್ಯುತ್‌ಗೆ ಸಂಬಂಧಿಸಿದಂತೆ ಪ್ರಪಂಚದ ಎಲ್ಲ ದೇಶಗಳನ್ನೂ ಜೋಡಿಸುವ ಜಾಗತಿಕ ವಿದ್ಯುತ್ ಜಾಲವೊಂದನ್ನು ರೂಪಿಸುವುದು ಸಾಧ್ಯವಾದರೆ, ಅದು ಸೌರಶಕ್ತಿಯ ಬಳಕೆಯಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ತರಬಲ್ಲದು. ನಮ್ಮ ಭೂಮಿಯ ಅರ್ಧ ಭಾಗದಲ್ಲಿ ಸೂರ್ಯ ಇರುವ ಹಗಲಿನಲ್ಲಿ ಉತ್ಪಾದಿಸಿದ ಸೌರಶಕ್ತಿಯನ್ನು, ಸೂರ್ಯನಿಲ್ಲದ ರಾತ್ರಿಯ ಭೂಮಿಯ ಇನ್ನೊಂದು ಭಾಗಕ್ಕೆ ರವಾನಿಸಬಹುದು. ಹೀಗಾಗಿ ಹಗಲು- ರಾತ್ರಿಗಳೆನ್ನದೇ ದಿನದ 24 ಗಂಟೆಗಳೂ ಸೌರವಿದ್ಯುತ್ ಉತ್ಪಾದನೆ ಸಾಧ್ಯವಾಗಿ, ರಾತ್ರಿಯ ಬಳಕೆಗೆ ವಿದ್ಯುತ್ತನ್ನು ಬ್ಯಾಟರಿಗಳಲ್ಲಿ ಸಂಗ್ರಹಿಸಿಡುವುದನ್ನೂ ಕಡಿಮೆ ಮಾಡಬಹುದು.

ಇಂತಹದೊಂದು ದೂರದರ್ಶಿತ್ವದ, ಅತ್ಯಂತ ಮಹತ್ವಾಕಾಂಕ್ಷೆಯ 'ಒಂದು ಸೂರ್ಯ- ಒಂದು ಪ್ರಪಂಚ- ಒಂದು ಜಾಲ' ಎಂಬ ಹೆಸರಿನ, ಜಾಗತಿಕ ವಿದ್ಯುತ್ ಜಾಲದ ಯೋಜನೆಯನ್ನು ಇಂಗ್ಲೆಂಡ್‌ನೊಡನೆ ಸೇರಿ, ಗ್ಲಾಸ್ಗೋದ ಶೃಂಗಸಭೆಯಲ್ಲಿ ಭಾರತ ಅನಾವರಣಗೊಳಿಸಿದೆ. ಸೂರ್ಯನಿಂದ ಪ್ರತಿನಿತ್ಯ ಭೂಮಿಗೆ ದೊರೆಯುವ ಒಟ್ಟು ಶಕ್ತಿಯ ಶೇಕಡ 0.1ರಷ್ಟನ್ನು ನಾವು ಬಳಸಿಕೊಂಡರೂ ಪ್ರಪಂಚದ ಎಲ್ಲ ದೇಶಗಳ ಒಟ್ಟು ವಿದ್ಯುತ್ ಬೇಡಿಕೆಯನ್ನು ಪೂರೈಸಬಹುದು. ಜಾಗತಿಕ ಯೋಜನೆ ಈ ದಿಕ್ಕಿನಲ್ಲಿ ಮೊದಲ ಪ್ರಮುಖ ಹೆಜ್ಜೆ.

ಜಾಗತಿಕ ವಿದ್ಯುತ್ ಜಾಲದ ಪರಿಕಲ್ಪನೆ ಮೂಡಿಬಂದದ್ದು 2018ರಲ್ಲಿ ದೆಹಲಿಯಲ್ಲಿ ನಡೆದ 'ಅಂತರರಾಷ್ಟ್ರೀಯ ಸೌರ ಒಕ್ಕೂಟ'ದ (ಇಂಟರ್‌ನ್ಯಾಷನಲ್ ಸೋಲಾರ್ ಅಲಯನ್ಸ್) ಮೊದಲ ಮಹಾಸಭೆಯಲ್ಲಿ ಪ್ರಧಾನಿ ಮಾಡಿದ ಆಶಯ ಭಾಷಣದಲ್ಲಿ. ಶುದ್ಧ, ನವೀಕರಿಸಬಹುದಾದ ಸೌರವಿದ್ಯುತ್‌ಗೆ ಸಂಬಂಧಿಸಿದ ಆಧಾರ ರಚನೆಗಳ ನಿರ್ಮಾಣ, ವಿದ್ಯುದುತ್ಪಾದನೆ, ಬಳಕೆ, ಸಂಶೋಧನೆ ಮುಂತಾದ ಕ್ಷೇತ್ರಗಳಲ್ಲಿ ಜ್ಞಾನ ಸೃಷ್ಟಿ, ಮಾಹಿತಿ ವಿನಿಮಯ, ಪರಸ್ಪರ ಸಹಕಾರಗಳಿಗಾಗಿ, ಭಾರತದ ಪ್ರಾಥಮಿಕ ಪ್ರಯತ್ನಗಳಿಂದ 2015ರಲ್ಲಿ ಅಸ್ತಿತ್ವಕ್ಕೆ ಬಂದ ಈ ಒಕ್ಕೂಟದಲ್ಲಿ ಇಂದು 99 ದೇಶಗಳಿವೆ.

ಕಳೆದ ಮೂರು ವರ್ಷಗಳ ಅವಧಿಯಲ್ಲಿ, ಈ ಒಕ್ಕೂಟದ ಅಡಿಯಲ್ಲಿ ಜಾಗತಿಕ ವಿದ್ಯುತ್ ಜಾಲಕ್ಕೆ ಸಂಬಂಧಪಟ್ಟಂತೆ ಮೂರು ಮುಖ್ಯ ಕೆಲಸಗಳು ನಡೆದಿವೆ. ಮೊದಲನೆಯದಾಗಿ, ಏಷ್ಯಾ, ಆಫ್ರಿಕಾ, ಯುರೋಪ್, ಉತ್ತರ ಅಮೆರಿಕ ಮತ್ತು ಲ್ಯಾಟಿನ್ ಅಮೆರಿಕ ದೇಶಗಳ ಪ್ರತಿನಿಧಿಗಳ ಚಾಲನಾ ಸಮಿತಿ ಈ ಯೋಜನೆ ಕಾರ್ಯಗತವಾಗಲು ಅಗತ್ಯವಾದ ನಂಬಿಕೆ, ವಿಶ್ವಾಸಗಳನ್ನು ದೇಶ ದೇಶಗಳ ನಡುವೆ ಬೆಳೆಸುವ ಪ್ರಯತ್ನ ಮಾಡಿದೆ. ಎರಡನೆಯದಾಗಿ, ಪರಿಣತರ ತಂಡವೊಂದು ಜಾಗತಿಕ ವಿದ್ಯುತ್ ಜಾಲದ ನಿರ್ಮಾಣಕ್ಕೆ ಬೇಕಾದ ಸರ್ವ ಸಮಸ್ತ ಅಗತ್ಯಗಳನ್ನೂ ಪಟ್ಟಿ ಮಾಡಿ, ಅವುಗಳನ್ನು ಪೂರೈಸಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಕೆಲಸ ಮಾಡಿದೆ. ಮೂರನೆಯದಾಗಿ, ಅಂತರರಾಷ್ಟ್ರೀಯ ಸೌರ ಒಕ್ಕೂಟ ಮತ್ತು ವಿಶ್ವಬ್ಯಾಂಕ್‌ನ ಪರಿಣತರ ತಂಡ ಈ ಯೋಜನೆಯನ್ನು ಕಾರ್ಯಗತಗೊಳಿಸುವುದರಲ್ಲಿ ಎದುರಾಗುವ ಆರ್ಥಿಕ, ತಾಂತ್ರಿಕ, ಸಾಂಸ್ಥಿಕ ಸಮಸ್ಯೆಗಳನ್ನು ಗುರುತಿಸಿ, ಅವುಗಳನ್ನು ಪರಿಹರಿಸುವತ್ತ ಗಮನಹರಿಸಿದೆ.

ಕಳೆದ ತಿಂಗಳ 18-21ರ ನಡುವೆ ನಡೆದ ಅಂತರರಾಷ್ಟ್ರೀಯ ಸೌರ ಒಕ್ಕೂಟದ ನಾಲ್ಕನೆಯ ಮಹಾಸಭೆಯಲ್ಲಿ ಈ ಇಡೀ ಯೋಜನೆಯನ್ನು ಅತ್ಯಂತ ಕಟ್ಟುನಿಟ್ಟಾದ ಕಂಪ್ಯೂಟರ್ ಮಾದರೀಕರಣ (ಮಾಡೆಲಿಂಗ್) ಮತ್ತು ಮೌಲ್ಯಮಾಪನಕ್ಕೆ ಒಳಪಡಿಸಿದ ಪರಿಣತರ ತಂಡವು ಯೋಜನೆ ಆರ್ಥಿಕವಾಗಿ, ತಾಂತ್ರಿಕವಾಗಿ ಕಾರ್ಯಸಾಧ್ಯವೆಂಬುದನ್ನು ಖಚಿತಪಡಿಸಿದೆ. ಅಂತರರಾಷ್ಟ್ರೀಯ ಸೌರ ಒಕ್ಕೂಟ, ನ್ಯೂಯಾರ್ಕ್‌ನಲ್ಲಿರುವ ಬ್ಲೂಂಬರ್ಗ್ ಫಿಲಾಂತ್ರಪೀಸ್ ಮತ್ತು ಗ್ಲೋಬಲ್ ಎನರ್ಜಿ ಅಲಯನ್ಸ್ ಫಾರ್ ಪೀಪಲ್ ಆ್ಯಂಡ್ ಪ್ಲಾನೆಟ್ ಸಂಸ್ಥೆಗಳು, 2030ರ ವೇಳೆಗೆ ಈ ಯೋಜನೆಯಲ್ಲಿ ಒಂದು ಟ್ರಿಲಿಯನ್ ಡಾಲರ್‌ಗಳಷ್ಟು (ಸುಮಾರು ₹74 ಲಕ್ಷ ಕೋಟಿ) ಬಂಡವಾಳವನ್ನು ಹೂಡುವಂತೆ ಮಾಡುವ ಕ್ರಮಗಳನ್ನು ಕೈಗೊಳ್ಳುವ ಒಪ್ಪಂದಕ್ಕೆ ಸಹಿ ಹಾಕಿವೆ. ಈ ಮಹಾಸಭೆಯಲ್ಲಿ ಚರ್ಚೆಯಾದ ನಂತರ ಗ್ಲಾಸ್ಗೋ ಶೃಂಗಸಭೆಯಲ್ಲಿ ಜಾಗತಿಕ ವಿದ್ಯುತ್ ಜಾಲದ ಘೋಷಣೆ ಮಾಡಲಾಗಿದೆ.

ಜಾಗತಿಕ ವಿದ್ಯುತ್ ಜಾಲವನ್ನು ನನಸುಗೊಳಿಸಬೇಕಾದರೆ ದೇಶ ದೇಶಗಳ ನಡುವೆ, ಖಂಡಗಳ ನಡುವೆ, ವಿವಿಧ ಕಾಲವಲಯಗಳ (ಟೈಮ್ ಝೋನ್) ನಡುವೆ ಅಧಿಕ ವೋಲ್ಟೇಜಿನ ವಿದ್ಯುತ್ ಪ್ರಸರಣ ಸಾಧ್ಯವಾಗಬೇಕು. ಈ ದಿಕ್ಕಿನಲ್ಲಿ ಹಲವಾರು ಯೋಜನೆಗಳು ಪ್ರಾರಂಭವಾಗಿವೆ.

ಸಿಂಗಪುರ ಮತ್ತು ಆಸ್ಟ್ರೇಲಿಯಾ ನಡುವೆ ಇಂತಹ ಒಂದು ಯೋಜನೆಯ ಕೆಲಸ ನಡೆಯುತ್ತಿದೆ. ಉತ್ತರ ಆಸ್ಟ್ರೇಲಿಯಾದ ಡಾರ್ವಿನ್ ನಗರದಿಂದ 800 ಕಿ.ಮೀ.



ಗಳ ದೂರದಲ್ಲಿ 12,000 ಹೆಕ್ಟೇರ್ ಪ್ರದೇಶದಲ್ಲಿ ಸೌರವಿದ್ಯುತ್ ಸ್ಥಾವರವೊಂದು ನಿರ್ಮಾಣವಾಗುತ್ತಿದೆ. ಇಲ್ಲಿ 17ರಿಂದ 20 ಗಿಗಾವಾಟ್‌ಗಳಷ್ಟು ವಿದ್ಯುತ್ತನ್ನು ಉತ್ಪಾದಿಸಲಿದ್ದು, ಅದರಲ್ಲಿ 3.2 ಗಿಗಾವಾಟ್ ವಿದ್ಯುತ್ತನ್ನು ಸಾಗರ ತಳದಲ್ಲಿ ಹಾಕಲಾಗುವ 4,200 ಕಿ.ಮೀ.ಗಳಷ್ಟು ಉದ್ದದ, ಅಧಿಕ ವೋಲ್ಟೇಜ್‌ನ ಡಿ.ಸಿ ಕೇಬಲ್ ಮೂಲಕ ಸಿಂಗಪುರಕ್ಕೆ ತರಲಾಗುತ್ತದೆ. ಇದು ಸಿಂಗಪುರದ ವಾರ್ಷಿಕ ಬೇಡಿಕೆಯ ಶೇ 15 ಭಾಗದ ವಿದ್ಯುತ್ತನ್ನು ಪೂರೈಸಿ, 30 ಲಕ್ಷ ಮನೆಗಳಿಗೆ ಒಂದು ವರ್ಷಕ್ಕೆ ಅಗತ್ಯವಾದ ವಿದ್ಯುತ್ ಒದಗಿಸಲಿದೆ. ಇದೇ ರೀತಿ ಇಂಗ್ಲೆಂಡ್ ಮತ್ತು ಬೆಲ್ಜಿಯಂ ನಡುವೆ, 21 ಸ್ಕ್ಯಾಂಡಿನೇವಿಯನ್ ದೇಶಗಳ ನಡುವೆ ಸೌರವಿದ್ಯುತ್ ವಿತರಣೆಯ ಜಾಲವಿದೆ. 2035ರ ವೇಳೆಗೆ ಏಷ್ಯಾ, ಯುರೋಪ್ ಮತ್ತು ಆಫ್ರಿಕಾದ ಹಲವಾರು ದೇಶಗಳನ್ನು ಸೇರಿಸುವ ಸೌರವಿದ್ಯುತ್ ಜಾಲವೊಂದನ್ನು ರೂಪಿಸುವ ಪ್ರಯತ್ನವನ್ನು ಚೀನಾ ಮಾಡುತ್ತಿದೆ.

ಜಾಗತಿಕ ಸೌರವಿದ್ಯುತ್ ಜಾಲ, ತಾತ್ವಿಕವಾಗಿ ಇಡೀ ಜಗತ್ತಿನ ಎಲ್ಲ ದೇಶಗಳ ಶಕ್ತಿಯ ಅಗತ್ಯವನ್ನು ಪೂರೈಸಬಲ್ಲ ಸಾಮರ್ಥ್ಯವಿರುವ ಪರಿಕಲ್ಪನೆ, ನಿಜ. ಆದರೆ ವ್ಯಾವಹಾರಿಕವಾಗಿ ಇದನ್ನು ಕಾರ್ಯರೂಪಕ್ಕೆ ತರುವುದು ಸಾಧ್ಯವೇ? ಯೋಜನೆಯನ್ನು ಸಾಕಾರಗೊಳಿಸಲು ಎಲ್ಲ ದೇಶಗಳೂ ಸೌರ ವಿದ್ಯುತ್ ಉತ್ಪಾದನೆ, ಸಂಗ್ರಹಣೆ, ಸಾಗಣೆಯ ಕ್ಷೇತ್ರಗಳಲ್ಲಿ ಬಹಳಷ್ಟು ಬಂಡವಾಳ ತೊಡಗಿಸಬೇಕು. ದೇಶಗಳ ಗಡಿ ದಾಟಿ, ಖಂಡಾಂತರ ವಿದ್ಯುತ್ ಪ್ರಸರಣ ವ್ಯವಸ್ಥೆಯನ್ನು ರೂಪಿಸಬೇಕು.

ಸಾಗರ ತಳದ ಕೇಬಲ್‌ಗಳ ಮೂಲಕ ಸೌರ ವಿದ್ಯುತ್ತನ್ನು ಸಾಗಿಸುವುದು ಬಹು ದುಬಾರಿ. ಅದು ಸಾಧ್ಯವಾಗದಿದ್ದಾಗ ತಂತಿಗಳ ಮೂಲಕ ಸಾಗಿಸಬೇಕು. ಅಕ್ಕಪಕ್ಕದ ದೇಶಗಳ ನಡುವೆ ಗಡಿ ಸಮಸ್ಯೆ, ವೈಮನಸ್ಯ, ಅಪನಂಬಿಕೆ, ವೈರತ್ವಗಳಿದ್ದಾಗ ವಿದ್ಯುತ್ ಪ್ರಸರಣ ಅಸಾಧ್ಯವಾಗುತ್ತದೆ. ಜಾಗತಿಕ ಜಾಲದಿಂದ ಸೌರವಿದ್ಯುತ್ ವಿತರಣೆಗೆ ದೇಶ ದೇಶಗಳ ನಡುವೆ ವ್ಯಾಪಾರ, ವಹಿವಾಟಿನ ಒಪ್ಪಂದಗಳಾಗಬೇಕು. ಈ ಒಪ್ಪಂದಗಳು ಪಾರದರ್ಶಕವಾಗಿದ್ದು ಯಾವುದೇ ರೀತಿಯ ಶೋಷಣೆಗೆ ಅವಕಾಶವಿರಬಾರದು. ವ್ಯಾಜ್ಯ ಪರಿಹಾರ ವ್ಯವಸ್ಥೆಯಿರಬೇಕು. ಎಲ್ಲದಕ್ಕಿಂತ ಮುಖ್ಯವಾಗಿ ದೇಶಗಳಿಗೆ ನಾಗರಿಕ ಸಮಾಜದ ನೀತಿ ಸಂಹಿತೆ, ಕಾನೂನುಬದ್ಧ ನಡವಳಿಕೆ, ನ್ಯಾಯಾಲಯದ ತೀರ್ಪನ್ನು ಗೌರವಿಸುವ ಮನೋಭಾವವಿರಬೇಕು. ಪ್ರಪಂಚದ ಸದ್ಯದ ರಾಜಕೀಯ ಪರಿಸ್ಥಿತಿಯಲ್ಲಿ ಈ ಎಲ್ಲವೂ ಬಹಳ ಆದರ್ಶಪ್ರಾಯವಾದ ನಿರೀಕ್ಷೆಗಳೆಂಬ ಭಾವನೆಯಿದೆ.

ಜಾಗತಿಕ ವಿದ್ಯುತ್ ಜಾಲವನ್ನು ಕಾರ್ಯಗತಗೊಳಿಸುವ ಉದ್ದೇಶವಿರುವ ಅಂತರರಾಷ್ಟ್ರೀಯ ಸೌರ ಒಕ್ಕೂಟದ ದೇಶಗಳಿಗೆ ಈ ಎಲ್ಲ ಸಮಸ್ಯೆಗಳ ಪರಿಚಯವಿದೆ. ನಿಧಾನವಾಗಿಯಾದರೂ ಈ ಎಲ್ಲ ಸಂಕೀರ್ಣ ಸಮಸ್ಯೆಗಳನ್ನು ಬಗೆಹರಿಸಬಹುದೆಂಬ ವಿಶ್ವಾಸವಿದೆ. ಜಾಗತಿಕ ವಿದ್ಯುತ್ ಜಾಲದತ್ತ ಹಂತ ಹಂತವಾಗಿ ಮುನ್ನಡೆಯುವ ಜಾಣ್ಮೆಯಿದೆ. ಸೌರವಿದ್ಯುತ್ ವ್ಯಾಪಾರ, ವಹಿವಾಟಿಗೆ ಸಂಬಂಧಿಸಿದ ಕರಡು ಒಪ್ಪಂದ ರೂಪುಗೊಳ್ಳುತ್ತಿದೆ. ಅಂತರರಾಷ್ಟ್ರೀಯ ಸೌರ ಒಕ್ಕೂಟದ ಮಹಾನಿರ್ದೇಶಕ ಅಜಯ್ ಮಾಥುರ್ ಅವರ ಹೇಳಿಕೆಯಂತೆ, ವಿವಿಧ ಖಂಡಗಳಲ್ಲಿರುವ ದೇಶಗಳ ವಿದ್ಯುತ್ ಜಾಲವನ್ನು ಪ್ರಾಯೋಗಿಕವಾಗಿ ಜೋಡಿಸುವ ಪ್ರಯತ್ನ ಮುಂದಿನ ವರ್ಷದ ಮೊದಲರ್ಧದಲ್ಲಿ ಪ್ರಾರಂಭವಾಗಲಿದೆ.

ಚುರುಮುರಿ



ಮಾತಿನ ಪಟಾಕಿ

• ಸುಮಂಗಲಾ

ದೀಪಾವಳಿ ಮುಗಿದರೂ ಬೆಕ್ಕಣ್ಣನ ದುಸುಮುಸು ನಿಂತಿರಲಿಲ್ಲ.

'ಪಟಾಕಿ ಹಚ್ಚೂದು ನಮ್ಮ ಸಂಸ್ಕೃತಿವಳಗ ಐತಂತ ದೊಡ್ಡದೊಡ್ಡ ಮಂದಿ ಹೇಳತಿದ್ರು. ಮಕ್ಕಳು ಪಟಾಕಿ ಹಚ್ಚಲಿ, ಅವರ ಆನಂದ ಕಸೀಬ್ಯಾಡ್ರಿ ಅಂತ ಸದ್ಗುರು ಕೂಡ ಉಪದೇಶ ಕೊಟ್ಟಿದ್ರು. ಹಸಿರು ಪಟಾಕಿನಾರೆ ಕೊಡಸು ಅಂತ ಎಷ್ಟ್ ಬಡಕೊಂಡ್ರೂ ನೀ ಕೊಡಸಲಿಲ್ಲ. ಎಷ್ಟರ ಜಿಪುಣತನ ಮಾಡತೀ... ಇನ್ ಮುಂದಿನ ವರ್ಸಾನೆ ಹಬ್ಬ ಬರೂದು' ಒಂದೇ ಸಮನೆ ಕೊಸಕೊಸ ನಡೆಸಿತ್ತು.

'ಯಾವ ಪಟಾಕಿ ಹಚ್ಚಿದ್ರೂ ಹೊಗೆ ಬರತೈತಿ, ವಾಯುಮಾಲಿನ್ಯ ಹೆಚ್ಚತೈತಿ. ಸುದ್ದಿ ಕೇಳೀಯಿಲ್ಲೋ... ದೇಶದಾಗೆ 17 ನಗರದಾಗಿನ ಗಾಳಿ ಎಷ್ಟ್ ಹದಗೆಟ್ಟೈತಿ ಅಂದ್ರ ಉಸಿರಾಡಿದ್ರ ಉಬ್ಬಸ ಬರತೈತಿ ಅಂತ ಮಾಲಿನ್ಯ ಮಂಡಳಿನೇ ಹೇಳ್ಯೆತಿ' ನಾನು ಸಮಾಧಾನಿಸಲು ಪ್ರಯತ್ನಿಸಿದೆ.

'ಹಸಿರು ಪಟಾಕಿಗೇನೂ ಆಗತಿದ್ದಿಲ್ಲ... ವರದಿವಳಗ ಬೆಂಗಳೂರು ಗಾಳಿ ತೃಪ್ತಿಕರ ಅಂದಾರಲ್ಲ' ಮತ್ತೆ ವಾದಿಸಿತು.

'ಪಟಾಕಿ ಕಡಿಮಿ ಸುಟ್ಟಿದ್ದಕ್ಕೇ ತೃಪ್ತಿಕರ ಐತಿ. ಆ 17 ನಗರದಾಗೆ ಅರ್ಧಕರ್ಧ ನಿಮ್ಮ ಯೋಗಿಮಾಮಾನ ರಾಜ್ಯದಾಗೆ ಐತಿ, ಇನ್ನರ್ಧ ಹರ್ಯಾಣ ರಾಜ್ಯದಾಗೆ ಅದಾವು. ಎರಡೂ ಕಮಲಕ್ಕನ ಮಕ್ಕಳ ರಾಜ್ಯಗಳೇ' ಎಂದೆ.

'ಅದ್ ಬರೀ ಪಟಾಕಿ ಸುಟ್ಟಿದ್ದಕ್ಕೆ ಅಲ್ಲೇಳು... ಕಾರ್ಖಾನೆ ಹೊಗೆ, ಹೊಲದಾಗೆ ಉಳಿದ ಕೂಳೆ ಸುಡೂದು ಎಲ್ಲ ಸೇರ್ಯೆತಿ. ಮಲೆನಾಡಿನಾಗೆ ಅಜ್ಜೀ ಮನಿ ಕಡಿಗಿ ವರ್ಷಿಡೀ ಪಟಾಕಿ ಹಚ್ಚತಾರಂತ ನೀನೇ ಹೇಳೀಯಲ್ಲ' ಬೆಕ್ಕಣ್ಣನ ವಾದ ನಿಲ್ಲಲಿಲ್ಲ.

'ಥಂಡಕ್ಕೆ ಹಚ್ಚತಾರೇನು? ಮಲೆನಾಡಿನಾಗೆ ತ್ವಾಟಕ್ಕೆ ಲಗ್ಗೆ ಇಡೂ ಕಪಿಸೈನ್ಯ ಓಡಿಸಾಕೆ ಪಟಾಕಿ ಹಚ್ಚತಾರ. ನಮ್ಮ ಸುದ್ದಿಗೆ ಬಂದ್ರ ಕೈಕತ್ತರಿಸತೇವಿ, ಕಣ್ಣು ಕೀಳತೀವಂತ ಮಾತಿನ ಪಟಾಕಿ ಹಚ್ಚತಾರಲ್ಲ, ಹಂಗ ನೀನೂ ಮಾತಿನ ಪಟಾಕೀನೇ ಹಚ್ಚು' ಎಂದೆ.

ಬೆಕ್ಕಣ್ಣ ಥಟ್ಟನೆ 'ಬೆಟ್ಟವನಗೆದು ಇಲಿ ಹಿಡಿದಂತೆ, ಬೆಟ್ಟವ ಬೋಳಿಸಿ, ಹಣ್ಣಿನ ಮರಗಳ ಉರುಳಿಸಿ, ಮಂಗನ ಹಿಡಿಯಲು ಪಟಾಕಿ ಸುಡುವರು' ಎಂದು ಪ್ರಾಸಪದ್ಯದ ಪಟಾಕಿ ಥುಂ ಎನ್ನಿಸಿತು!

ಸಂಗತ

ಉದಾರ ಶಿಕ್ಷಣ ಮತ್ತು ಹೊಸ ನೀತಿ

ಎಷ್ಟೇ ವೃತ್ತಿಪರ ವಿಷಯವೇ ಇರಲಿ ಅದನ್ನು ಉದಾರ ಶಿಕ್ಷಣದ ಪರಿಪ್ರೇಕ್ಷ್ಯೆಯಲ್ಲಿ ಕಲಿಸುವುದು ಉನ್ನತವಾದ ಧ್ಯೇಯ

• ಡಾ. ರವಿ ಸಿ.ಎಂ.

ಹೊಸ ಶಿಕ್ಷಣ ನೀತಿಯನ್ನು ರಾಜ್ಯದಲ್ಲಿ ಜಾರಿ ಮಾಡಿರುವ ಈ ಸಂದರ್ಭದಲ್ಲಿ ಮುಖ್ಯವಾಗಿ ಕೇಳಿಬಂದಿರುವ ಆರೋಪವೆಂದರೆ, ಇದೊಂದು ಅವಸರದ ನಡೆ, ಇದೇ ಶೈಕ್ಷಣಿಕ ವರ್ಷದಲ್ಲಿ ಅನುಷ್ಠಾನಗೊಳಿಸಲು ನಾವು ಇನ್ನೂ ಅಣಿಯಾಗಿಲ್ಲ ಎಂಬುದು. ಕಲಿಕಾ ವಿಷಯಗಳ ವಿಂಗಡಣೆ, ಪಠ್ಯಕ್ರಮ, ಮೂಲ ಸೌಲಭ್ಯಗಳ ಲಭ್ಯತೆ, ಶಿಕ್ಷಕರ ಕಾರ್ಯಭಾರದಂತಹ ವಿಷಯಗಳು ಆತಂಕವನ್ನು ಮೂಡಿಸಿವೆ. ವ್ಯಾವಹಾರಿಕ ದೃಷ್ಟಿಕೋನದಿಂದ ಇವು ಚಿಂತಿಸಲೇಬೇಕಾದ ಸಂಗತಿಗಳು. ಆದರೆ ಈ ಎಲ್ಲ ತಾಂತ್ರಿಕ ಅಂಶಗಳ ಮಧ್ಯೆ ನಾವು ಕೆಲವು ಬೌದ್ಧಿಕ ಕಾಳಜಿಗಳನ್ನೂ ಮಾಡಬೇಕಾಗಿದೆ. ಅಂದರೆ ಹೊಸ ನೀತಿಯ ಅಂತಃಸತ್ವವನ್ನು ಅರಿತು, ಅದನ್ನು ಅನುಷ್ಠಾನಗೊಳಿಸುವ ಮಾರ್ಗಗಳಾವುವು ಎಂಬ ಪ್ರಶ್ನೆಯನ್ನು ಕೇಳಿಕೊಂಡು ಬೌದ್ಧಿಕ ತಯಾರಿಯೂ ಆಗಬೇಕಾಗಿದೆ.

ಮೇಲ್ನೋಟಕ್ಕೆ ಈ ನೀತಿಯು ಉದಾರ ಶಿಕ್ಷಣದ ಸ್ವರೂಪವನ್ನು ಅಳವಡಿಸಿಕೊಳ್ಳುವ ಪ್ರಯತ್ನ ಮಾಡಿರುವುದು ಕಂಡುಬರುತ್ತದೆ. ಆದರೆ ಕೇವಲ ಕೌಶಲಗಳನ್ನು ಕಲಿಸುವ ಸೀಮಿತ ಅರ್ಥದಲ್ಲಿ ಉದಾರ ಶಿಕ್ಷಣವನ್ನು ಅನುಸರಿಸಿದರೆ ಪ್ರಯೋಜನವಿಲ್ಲ. ಹಾಗಾಗಿ ಯೋಜನೆಯು ಉದಾರ ಶಿಕ್ಷಣದ ವಿಶಾಲವಾದ ಅರ್ಥ, ಉದ್ದೇಶ ಮತ್ತು ವ್ಯಾಪ್ತಿಯನ್ನು ಮನನ ಮಾಡಿಕೊಳ್ಳುವುದು ಅತ್ಯವಶ್ಯಕ.

ಅಮೆರಿಕದಲ್ಲಿ ಕಂಡುಬರುವ ಲಿಬರಲ್ ಆರ್ಟ್ಸ್ ಆ್ಯಂಡ್ ಸೈನ್ಸ್ ಎಜುಕೇಷನ್‌ನ ಛಾಯೆಯನ್ನು ಹೊಸ ನೀತಿಯಲ್ಲಿ ಕಾಣಬಹುದಾಗಿದೆ. ಯುರೋಪಿನ ಸಂಸ್ಕೃತಿಗಳಲ್ಲಿ ಸಾವಿರಾರು ವರ್ಷಗಳ ಇತಿಹಾಸ ಹೊಂದಿದ ಈ ಶಿಕ್ಷಣ ಮಾದರಿಯು ಪಶ್ಚಿಮ ದೇಶಗಳಲ್ಲಿ ಯಶಸ್ವಿ ಪ್ರಯೋಗವನ್ನು ಕಂಡಿದೆ. ಈ ಶೈಕ್ಷಣಿಕ ಚೌಕಟ್ಟಿನಲ್ಲಿ ಕಲಿಸುವ ವಿಷಯಗಳನ್ನು ಕಟ್ಟುನಿಟ್ಟಾಗಿ ವಿಜ್ಞಾನ, ಕಲೆ ಮತ್ತು ವಾಣಿಜ್ಯ ಎಂದು ಗೆರೆ ಕೊರೆದು ವಿಂಗಡಿಸದೆ, ವಿದ್ಯಾರ್ಥಿಗಳ ವ್ಯಕ್ತಿತ್ವವು ಸಮಗ್ರವಾಗಿ ಅರಳಲು ಅವುಗಳ ಸಮ್ಮಿಶ್ರಣವನ್ನು ಮಾಡಲಾಗಿರುತ್ತದೆ. ವಿಜ್ಞಾನ ಮತ್ತು ವಾಣಿಜ್ಯದ ವಿಷಯ ಕಲಿಯುವವರಿಗೆ ಕಲಾ ವಿಷಯಗಳ ಸೊಗಡು, ಮನೋಧರ್ಮವನ್ನು ಉಣಬಡಿಸುವುದು ಮತ್ತು ಕಲಾ ವಿದ್ಯಾರ್ಥಿಗಳಿಗೆ ವೈಜ್ಞಾನಿಕ ಹಾಗೂ ಲೆಕ್ಕಾಚಾರದ ಪರಿಣತಿಯನ್ನು ಒದಗಿಸುವುದು ಇಲ್ಲಿಯ ತರ್ಕ. ಪ್ರಸಕ್ತ ನೀತಿಯಲ್ಲಿ ಇದರ ಅನುರಣನವನ್ನು ಕಾಣಬಹುದು.

ನಾವೆಲ್ಲರೂ ಅರ್ಥ ಮಾಡಿಕೊಳ್ಳಬೇಕಾದ ಅಂಶವೆಂದರೆ, ಉದಾರ ಶಿಕ್ಷಣ ಕೇವಲ ಜ್ಞಾನಶಿಸ್ತುಗಳಿಗೆ ಸಂಬಂಧಪಟ್ಟ ವಿಷಯವಲ್ಲ. ಅದೊಂದು ಮನೋಧರ್ಮ, ಮೌಲ್ಯ. ಅಂದರೆ ಕಲಿಯಬೇಕಾದ ವಿಷಯಗಳನ್ನು ಪ್ರೀತಿ, ಕಾಳಜಿ, ಪ್ರಾಮಾಣಿಕತೆಯಿಂದ ಕಲಿಯುವುದು. ಶಿಕ್ಷಣವನ್ನು ಕೇವಲ ಉದ್ಯೋಗ ದೊರಕಿಸಿಕೊಳ್ಳುವ ವೃತ್ತಿಪರತೆಯ ಸಾಧನವಾಗಿ ನೋಡದೆ, ನಿರುದ್ದಿಶ್ಯ ಕಲಿಕೆಗೆ ಬದ್ಧರಾಗಿರುವುದು.

ಕೈಗಾರಿಕಾ ಹಾಗೂ ನವ-ವಾಣಿಜ್ಯೀಕರಣದ ಕಾಲಘಟ್ಟದಲ್ಲಿ ನಾವು ಕರಕುಶಲದ ಅರ್ಥವನ್ನು ಕರಕುಶಲಕರ್ಮಿಗಳಿಗೆ ಮಾತ್ರ ಸೀಮಿತಗೊಳಿಸಿ ಬಿಟ್ಟಿದ್ದೇವೆ. ಆದರೆ ಯಾವುದೇ ಕೆಲಸವನ್ನು ಕರಕುಶಲದಿಂದ ಮಾಡುವುದೆಂದರೆ ಅದನ್ನು ಚೆನ್ನಾಗಿ ಮಾಡುವುದೆಂದೇ ಅರ್ಥ. ನಮ್ಮ ಕೆಲಸವನ್ನು ಕಾಳಜಿ ವಹಿಸಿ, ನಯ ನಾಜೂಕು, ಬದ್ಧತೆಯಿಂದ ಮಾಡಿದರೆ ಅದು ಕರಕುಶಲತೆ. ಉದಾರ ಶಿಕ್ಷಣ ಈ ಕೌಶಲ, ಬದ್ಧತೆ ಹಾಗೂ ಸೂಕ್ಷ್ಮ ಅರ್ಥಭೇದ ಮಾಡುವ ನೈಪುಣ್ಯಗಳನ್ನು ಕಲಿಸುತ್ತದೆ.

ಹೀಗೆ ವಿಜ್ಞಾನಿ, ಸಮಾಜವಿಜ್ಞಾನಿ, ಎಂಜಿನಿಯರ್, ಡಾಕ್ಟರ್, ವಿಮರ್ಶಕ, ಲೆಕ್ಕಪರಿಶೋಧಕ, ಶಿಕ್ಷಕ ಮುಂತಾದವರಲ್ಲಿ ಕಲಾಕಾರರನ್ನು ಸೃಷ್ಟಿಸುವುದು ಉದಾರ ಶಿಕ್ಷಣದ ಉದ್ದೇಶ. ಇವರಲ್ಲಿ ಕಲಾಭಿರುಚಿಯನ್ನು ಹುಟ್ಟಿಸುವುದೆಂದರೆ ಅವರಲ್ಲಿ ಕಾಳಜಿ, ಪ್ರಾಮಾಣಿಕತೆ, ಮಾಡುವ ಕೆಲಸವನ್ನು ಅಚ್ಚುಕಟ್ಟಾಗಿ ಮಾಡುವ ಮೌಲ್ಯಗಳನ್ನು ಬೆಳೆಸುವುದೆಂದರ್ಥ. ಉದಾರ ಶಿಕ್ಷಣವು ಇವರಿಗೆ ಸಾಮಾಜಿಕ ಹಾಗೂ ಸಾಂಸ್ಕೃತಿಕ ಕೌಶಲಗಳನ್ನು ಕಲಿಸುತ್ತದೆ. ಇವರ ಕೆಲಸಗಳು ಮಾನವೀಯ ಅಂಶಗಳಿಂದ ಕೂಡಿದಷ್ಟೂ ಸಾಮಾಜಿಕ ಸ್ವಾಸ್ಥ್ಯವು ಹೆಚ್ಚಾಗುತ್ತದೆ.



ಹೀಗೆ ಅನುದ್ದಿಶ್ಯವಾಗಿ ಕಲಿತರೆ ಪರೀಕ್ಷೆಗಳಲ್ಲಿ ಅಂಕ ಗಳಿಸಿ, ಉದ್ಯೋಗ ಗಿಟ್ಟಿಸಿಕೊಳ್ಳುವುದು ಕಷ್ಟ ಎಂಬ ವಿಚಾರ ನಮ್ಮ ಭ್ರಮೆ ಅಷ್ಟೇ. ಹಾಗೆ ನೋಡಿದರೆ ಉದಾರ ಮನೋಭಾವದ ಕಲಿಕೆಯಿಂದಲೇ ಹೆಚ್ಚು ವ್ಯಾವಹಾರಿಕ ಲಾಭಗಳುಂಟಾಗುವುದು. ಉದಾರ ಶಿಕ್ಷಣದ ಇನ್ನೊಂದು ಉದ್ದೇಶವೆಂದರೆ, ವಿದ್ಯಾರ್ಥಿಗಳಲ್ಲಿ ಜಿಜ್ಞಾಸೆಯ ಮನೋಭಾವವನ್ನು ಸೃಷ್ಟಿಸುವುದು. ನಮ್ಮ ಸುತ್ತಮುತ್ತಲೂ ಹೆಚ್ಚು ಪೂರ್ವಗ್ರಹಗಳು ತುಂಬಿಕೊಂಡಿರುವಾಗ, ಜಿಜ್ಞಾಸೆಯಿಂದ ಸತ್ಯವನ್ನು ಅರಸುವ ಮನಸ್ಸುಗಳನ್ನು ತಯಾರಿಸುವುದು ಈ ಶಿಕ್ಷಣದ ಗುರಿ.

ಉದಾರ ಶಿಕ್ಷಣದ ಇತಿಹಾಸ ನೋಡಿದರೆ ಅದು ಪ್ರಜಾಪ್ರಭುತ್ವದ ಜೊತೆ ನಿಕಟ ಸಂಬಂಧ ಹೊಂದಿರುವುದು ಕಂಡುಬರುತ್ತದೆ. ಸ್ವತಂತ್ರವಾಗಿ ಆಲೋಚಿಸುವ ವಿಮರ್ಶಾತ್ಮಕ ಮನಸ್ಸುಗಳು ಪ್ರಜಾಪ್ರಭುತ್ವದ ಸ್ವಾಸ್ಥ್ಯವನ್ನು ಕಾಪಾಡಿದರೆ, ವೈಯಕ್ತಿಕವಾಗಿ ಸ್ವಂತಿಕೆ ಎನ್ನುವುದು ಮನುಷ್ಯ ಜೀವಿಗೆ ಇರಬೇಕಾದ ಅರ್ಥಪೂರ್ಣ ಮೌಲ್ಯ.

ಪ್ರಸ್ತುತ ಹೊಸ ಶಿಕ್ಷಣ ನೀತಿಯ ತಿರುಳು ಎಷ್ಟರ ಮಟ್ಟಿಗೆ ಉನ್ನತ ಶಿಕ್ಷಣದ ಈ ಉದಾತ್ತವನ್ನು ಸ್ಫುರಿಸುತ್ತದೆ ಎನ್ನುವುದು ಚರ್ಚಾಸ್ಪದ. ಪಠ್ಯಕ್ರಮ ರಚಿಸುವವರು ಮತ್ತು ಅದನ್ನು ಕಾರ್ಯಗತಗೊಳಿಸುವ ಶಿಕ್ಷಕರು ಉನ್ನತ ಶಿಕ್ಷಣ, ಉದಾರ ಶಿಕ್ಷಣದ ಅಂತಃಸತ್ವವನ್ನು ಅರಿತು ಕ್ರಿಯಾಶೀಲರಾದರೆ, ನಾವು ಬೌದ್ಧಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಮತ್ತಷ್ಟು ಸಬಲರಾಗಬಹುದು.

ಲೇಖಕ: ಸಹಾಯಕ ಪ್ರಾಧ್ಯಾಪಕ
ವಿಶ್ವವಿದ್ಯಾಲಯ ಕಲಾ ಕಾಲೇಜು, ತುಮಕೂರು

ವಾಚಕರ ವಾಣಿ

ಸಮಾಧಾನ ತಾರದ ಸಂದೇಶ

'ಬಲಿ ಪಾಡ್ಯಮಿ: ಅಹಂ ವಿಸರ್ಜನೆಯ ಸಂದೇಶ' ಲೇಖನದಲ್ಲಿ (ಪ್ರ.ವಾ., ನ. 5) ಎಸ್.ಸೂರ್ಯಪ್ರಕಾಶ ಪಂಡಿತ್ ಅವರು, ಒಬ್ಬ ಚಕ್ರವರ್ತಿ ಭೂಮಿಯನ್ನೂ, ದೇವನಾಡನ್ನೂ, ಇಂದ್ರನ ಸ್ಥಾನವನ್ನೂ ಗೆದ್ದಾತ; ಆತನಲ್ಲಿ ಅಹಂ ಇದ್ದುದೇ ಆತನ ನಾಶಕ್ಕೆ ಕಾರಣವಾಯಿತು ಎಂದಿದ್ದಾರೆ. ಇಷ್ಟೆಲ್ಲ ಗೆದ್ದಾತನಲ್ಲಿ ಒಂಚೂರು ಅಹಂ ಪ್ರವೇಶ ಮಾಡಿದರೆ ಅದು ಸಹಜವಲ್ಲವೇ? ಆ ಕಾರಣಕ್ಕಾಗಿಯೇ ಪ್ರಜಾನುರಾಗಿ ಆಗಿದ್ದ, ದಾನಶೂರನಾಗಿದ್ದ ಬಲೀಂದ್ರನನ್ನು ತುಳಿದು ಪಾತಾಳಕ್ಕೆ ಅಟ್ಟಿದ್ದು ಯಾಕೋ ಏನು ವಿವರಣೆ ಕೊಟ್ಟರೂ ಸಮಾಧಾನ ಕೊಡುವುದಿಲ್ಲ. ಮಕ್ಕಳಿಗೆ ಈ ಕತೆ ಹೇಳುವುದು ಕಷ್ಟವಾಗುತ್ತದೆ.

ಬೇರೆಯವರಿಗೆ ಬುದ್ಧಿ ಕಲಿಸಲು ಹೋಗುವ ಈ ದೇವರುಗಳು ಅದೆಷ್ಟು ಪವಿತ್ರರು ಎಂಬ ಪ್ರಶ್ನೆಗೆ ಉತ್ತರ ದೊರಕುವುದಿಲ್ಲ.

ಶಾರದಾ ಗೋಪಾಲ, ಧಾರವಾಡ

ಮುಚ್ಚುವ ಸ್ಥಿತಿಯಲ್ಲಿ ಎಪಿಎಂಸಿ

ರೈತರು ತಮ್ಮ ಉತ್ಪನ್ನಗಳನ್ನು ಎಲ್ಲಿ ಬೇಕಾದರೂ, ಯಾರಿಗೆ ಬೇಕಾದರೂ, ಯಾವಾಗ ಬೇಕಾದರೂ ಮಾರಾಟ ಮಾಡಬಹುದು ಎಂಬ ಉದ್ದೇಶದ ಎಪಿಎಂಸಿ- 2020 ತಿದ್ದುಪಡಿ ಕಾಯ್ದೆ ಜಾರಿಗೆ ಬಂದ ಮೇಲೆ ನಮ್ಮ ರಾಜ್ಯದಲ್ಲಿ ಎಪಿಎಂಸಿಗಳು ಬಾಗಿಲು ಮುಚ್ಚುವ ಸ್ಥಿತಿಗೆ ಬಂದಿವೆ. ಎಪಿಎಂಸಿಗಳಿಗೆ ಆವಕವಾಗುವ ಕೃಷಿ ಉತ್ಪನ್ನಗಳ ಪ್ರಮಾಣ 2020- 21ರಲ್ಲಿ ಸರಾಸರಿ ಶೇ 30ರಿಂದ 40ರಷ್ಟು ಕಡಿಮೆಯಾಗಿದೆ. ಎರಡನೆಯದಾಗಿ, ಎಪಿಎಂಸಿಗಳಲ್ಲಿ ವಹಿವಾಟು ಕಡಿಮೆಯಾಗುತ್ತಿರುವ ಕಾರಣದಿಂದ ತಮ್ಮ ಸಿಬ್ಬಂದಿಗೆ ಸಂಬಳ ನೀಡುವುದು ಅವಕ್ಕೆ ಕಷ್ಟವಾಗುತ್ತಿದೆ. ಮೂರನೆಯದಾಗಿ, ಎಪಿಎಂಸಿಗಳು ಮುಚ್ಚಿಹೋದರೆ ರೈತರು ಲಾಭಕೋರ ಕಾರ್ಪೊರೇಟ್ ಸಂಸ್ಥೆಗಳ ಅಡಿಯಾಳಾಗಬೇಕಾಗುತ್ತದೆ ಮತ್ತು ಎಂಎಸ್‌ಪಿ (ಕನಿಷ್ಠ ಬೆಂಬಲ ಬೆಲೆ) ಎಂಬುದು ಗಗನಕುಸುಮವಾಗಿ ಬಿಡುತ್ತದೆ.

ಕನಿಷ್ಠ ಬೆಂಬಲ ಬೆಲೆಯ ವಿಕೃತ ಅನುಷ್ಠಾನದಿಂದಾಗಿ ಕರ್ನಾಟಕದ ರೈತರು ಸಾವಿರಾರು ಕೋಟಿ ರೂಪಾಯಿ ಕಳೆದುಕೊಳ್ಳುತ್ತಿದ್ದಾರೆ. ಮೂರು ಕೃಷಿ ಕಾಯ್ದೆಗಳ ವಿರುದ್ಧ ಕಳೆದ ಒಂದು ವರ್ಷದಿಂದ ನಡೆಯುತ್ತಿರುವ ಹೋರಾಟವು ಇಂದು ದೇಶದ ಸರಿಸುಮಾರು 22ರಿಂದ 25 ರಾಜ್ಯಗಳಿಗೆ ಹಬ್ಬಿದೆ. ಈಗಲಾದರೂ ಸರ್ಕಾರ ಕಣ್ಣು ತೆರೆದು, ಸ್ಥಿತಿ ಕೈಮೀರುವ ಮೊದಲು ಕೃಷಿ ಕಾಯ್ದೆಗಳನ್ನು ರದ್ದುಪಡಿಸುವ ಕ್ರಮಗಳನ್ನು ತೆಗೆದುಕೊಳ್ಳುವುದು ಅಗತ್ಯ.

ಟಿ.ಆರ್.ಚಂದ್ರಶೇಖರ, ಬೆಂಗಳೂರು

ನಿಟ್ಟುಸಿರು!

'ಅಧ್ಯಯನ ಪೀಠಗಳ
ಏದುಸಿರು (ಪ್ರ.ವಾ., ಅ. 24).
ಅಧ್ಯಯನವೊ,
ಅಧ್ವಾನವೊ?
ಪೀಠವೊ ಕಾಟಾಚಾರವೊ?
ಬೇಕಾದ್ದು: ನೆಮ್ಮದಿಯ
ನಿಟ್ಟುಸಿರು!

ಸಿ.ಪಿ.ಕೆ., ಮೈಸೂರು

ಕನ್ನಡದಲ್ಲಿ ಎಂಜಿನಿಯರಿಂಗ್: ಅಪಸ್ವರ ಸಲ್ಲದು

ಕನ್ನಡದಲ್ಲಿ ಎಂಜಿನಿಯರಿಂಗ್ ಶಿಕ್ಷಣ ಕಾರ್ಯಸಾಧ್ಯವಾಗುತ್ತಿರುವುದೇ ಒಂದು ರೋಮಾಂಚಕಾರಿಯಾದ ವಿಷಯವಾಗಿದೆ. ಅದರ ಋಣಾತ್ಮಕ ಅಂಶಗಳ ಬಗ್ಗೆ ಚರ್ಚೆ ಮಾಡುವುದು ನಂತರದ ಕೆಲಸ. ಇದನ್ನು ಸಾಧ್ಯವಾಗಿಸುವುದು ನಮ್ಮ ಮುಂದಿರುವ ಆದ್ಯತೆಯ ಕೆಲಸ. ಈ ರೀತಿಯ ಕ್ರಾಂತಿಕಾರಿ ವಿಷಯಗಳನ್ನು ಕಾರ್ಯಗತಗೊಳಿಸುವಾಗ ಸರ್ಕಾರ ಸರಿಯಾದ ಪೂರ್ವಸಿದ್ಧತೆಗಳನ್ನು ಮಾಡಿಕೊಂಡೇ ಮುಂದಡಿಯಿಟ್ಟಿರುತ್ತದೆ. ಇದರ ಬಗ್ಗೆ ಅಪಸ್ವರ ಸಲ್ಲದು. ಹಲವು ಸಣ್ಣಪುಟ್ಟ ಸಮಸ್ಯೆಗಳು ಇದ್ದರೂ ಅವುಗಳನ್ನು ಆಮೇಲೆ ಸರಿಪಡಿಸಿಕೊಳ್ಳಲು ಕನ್ನಡ ನಾಡಿನಲ್ಲಿ ಪ್ರಕಾಂಡ ಪಂಡಿತರ ದೊಡ್ಡ ಪಡೆಯೇ ಇದೆ. ನಡೆಯುವವ ಎಡವುವುದು ಸಹಜ. ಹಾಗೆಂದು ನಡೆಯುವುದನ್ನು ನಿಲ್ಲಿಸಲಾದೀತೇ? ಕರ್ನಾಟಕದಲ್ಲಿ ಎಲ್ಲ ಶಿಕ್ಷಣವನ್ನೂ ಕನ್ನಡದಲ್ಲೇ ನೀಡಬೇಕೆಂಬುದು ಕುವೆಂಪು ಅವರಿಂದ ಮೊದಲುಗೊಂಡು ಅನೇಕ ಮಹನೀಯರ ಆಸೆ. ಇದು ಕಾರ್ಯಸಾಧ್ಯವಾಗುತ್ತಿರುವುದು ಇಂತಹ ಅನೇಕ ಕನ್ನಡದ ಕಟ್ಟಾಳುಗಳ ದಶಕಗಳ ಆಶಯಗಳಿಗೆ ನೀರೆರೆದು ಪೋಷಿಸಿದಂತೆ ಆಗುತ್ತದೆ.

ವೈಜ್ಞಾನಿಕವಾಗಿ ಹೇಳುವುದಾದರೆ ಯಾವುದೇ ಕಲಿಕೆಯನ್ನು ಮಾತೃಭಾಷೆಯಲ್ಲಿ ಮಾಡುವುದರಿಂದ ಗ್ರಹಿಕೆ ಸುಲಲಿತವಾಗಿ, ಸರಾಗವಾಗಿ ಆಗುತ್ತದೆ. ನಮ್ಮದಲ್ಲದ ಮತ್ತೊಂದು ಭಾಷೆಯಲ್ಲಿ ಶಿಕ್ಷಣ ಇದ್ದರೆ ವಿದ್ಯಾರ್ಥಿಗಳು ಮೊದಲು ಆ ಭಾಷೆಯನ್ನು ಕಲಿಯಲು ಸಮಯ ಮತ್ತು ಶಕ್ತಿಯನ್ನು ವ್ಯಯ ಮಾಡಬೇಕಾಗುತ್ತದೆ. ಮಾಡಿದರೂ ಪರಕೀಯ ಭಾಷೆ ಪರಕೀಯವಾಗೇ ಉಳಿಯುತ್ತದೆ. ಮಾತೃಭಾಷಾ ಶಿಕ್ಷಣದಿಂದ ವಿಷಯಗಳು ನೇರವಾಗಿ ಮನಸ್ಸಿಗೆ ನಾಟುತ್ತವೆ. ನಾವು ಕನ್ನಡ ಮಾಧ್ಯಮದಲ್ಲಿ ಪ್ರೌಢಶಾಲಾ ಶಿಕ್ಷಣವನ್ನು ಮುಗಿಸಿ ಪಿಯುಸಿಗೆ ಇಂಗ್ಲಿಷ್ ಮಾಧ್ಯಮ ತೆಗೆದುಕೊಂಡಾಗ ಪಡುತ್ತಿದ್ದ ಕಷ್ಟ ಅಷ್ಟಿಷ್ಟಲ್ಲ. ನಮ್ಮ ಕಷ್ಟವನ್ನು ನೋಡಿ ಕೆಲವು ಬೋಧಕರು ತರಗತಿಯ ಕೊನೆಯಲ್ಲಿ ಇಂಗ್ಲಿಷಿನಲ್ಲಿ ಮಾಡಿದ ಪಾಠವನ್ನು ಕನ್ನಡದಲ್ಲಿ ಕೆಲವೇ ವಾಕ್ಯಗಳಲ್ಲಿ ಹೇಳುತ್ತಿದ್ದರು. ಆಗ ನಮಗೆ ಆಗುತ್ತಿದ್ದ ಸಮಾಧಾನಕ್ಕೆ ಪಾರವಿರಲಿಲ್ಲ. ಆಮೇಲೆ ಅನಿವಾರ್ಯವಾಗಿ ಇಂಗ್ಲಿಷ್ ಮಾಧ್ಯಮಕ್ಕೆ ಹೊಂದಿಕೊಳ್ಳಬೇಕಾಯಿತು.

ಇಲ್ಲಿ ವೈದ್ಯಕೀಯ ಸೀಟು ಸಿಗದಿದ್ದವರು ಚೀನಾ ಮತ್ತು ರಷ್ಯಾದಂತಹ ದೇಶಗಳಿಗೆ ವೈದ್ಯಕೀಯ ಪದವಿಯನ್ನು ಅರಸಿ ಹೋಗುತ್ತಾರೆ. ಈಗಲೂ ಆ ದೇಶಗಳಲ್ಲಿ ಅಲ್ಲಿನ ಭಾಷೆಗಳಲ್ಲೇ ವೈದ್ಯಕೀಯ ಶಿಕ್ಷಣವನ್ನು ನೀಡಲಾಗುತ್ತಿದೆ. ಮೊದಲ ಆರು ತಿಂಗಳು ಅಲ್ಲಿನ ಭಾಷೆಯನ್ನು ಕಲಿಸಿ ನಂತರ ವೈದ್ಯಕೀಯ ಶಿಕ್ಷಣವನ್ನು ಕಲಿಸಲಾಗುತ್ತದೆ. ಅಲ್ಲಿನ ಭಾಷೆಯಲ್ಲಿ ವೈದ್ಯಕೀಯ ಪದವಿ ಪಡೆದು ಬಂದ ಅನೇಕ ಭಾರತೀಯರು ಈ ದೇಶದಲ್ಲಿ ತಮ್ಮ ವೃತ್ತಿಯನ್ನು ಯಶಸ್ವಿಯಾಗಿ ನಡೆಸುತ್ತಿದ್ದಾರೆ. ಅಂದರೆ ಇಂಗ್ಲಿಷಿನಲ್ಲಿ ವೈದ್ಯಕೀಯ ಶಿಕ್ಷಣ ಪಡೆಯದೇ ಇರುವುದು ಅವರ ಯಶಸ್ಸಿಗೆ ಅಡ್ಡಿಯಾಗಿಲ್ಲ. ಕನ್ನಡದಲ್ಲಿ ಉನ್ನತ ಶಿಕ್ಷಣವನ್ನು ಅಭ್ಯಸಿಸುವ ವಿದ್ಯಾರ್ಥಿಗಳ ಸ್ಥಿತಿಯೂ ಇದೇ ರೀತಿ ಇರುತ್ತದೆ. ತಮಗೆ ಜಾಗತಿಕವಾಗಿ ತೆರೆದುಕೊಳ್ಳಬೇಕೆಂಬ ಆಸೆ ಮತ್ತು ಅನಿವಾರ್ಯ ಇದ್ದರೆ ಎಲ್ಲಾ ತರಹದ ರೂಪಾಂತರಗಳಿಗೆ ಸಿದ್ಧವಾಗುವುದು ಸಹಜ ಪ್ರಕ್ರಿಯೆ ಆಗುತ್ತದೆ.

ಕನ್ನಡದಲ್ಲಿ ಎಂಜಿನಿಯರಿಂಗ್ ಶಿಕ್ಷಣ ಪ್ರಾರಂಭವಾಗುತ್ತಿರುವುದು ಕನ್ನಡದ ಅಸ್ಮಿತೆಯನ್ನು ಉಳಿಸುವ ಮತ್ತು ಬೆಳೆಸುವ ದೃಷ್ಟಿಯಿಂದ ಒಂದು ಮಹತ್ವದ ಹೆಜ್ಜೆ. ಇದನ್ನು ಹೃದಯಪೂರ್ವಕವಾಗಿ ಸ್ವಾಗತಿಸೋಣ.

ಡಾ. ಕೆ.ಎಸ್.ಗಂಗಾಧರ, ಶಿವಮೊಗ್ಗ


Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಪೆಟ್ರೋಲಿಯಂ ಉತ್ಪನ್ನಗಳ ದರ ಏರಿಕೆಯಿಂದಾಗಿ ಜನರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಕೇಂದ್ರ ಮತ್ತು ಕೆಲವು ರಾಜ್ಯ ಸರ್ಕಾರಗಳು ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ತೆರಿಗೆ ಇಳಿಕೆ ಮಾಡಿದ್ದು ಸ್ವಲ್ಪ ನಿರಾಳ ಮೂಡಿಸಿದೆ. ಆದರೆ, ಗೃಹ ಬಳಕೆ ಮತ್ತು ವಾಣಿಜ್ಯ ಬಳಕೆಯ ಅಡುಗೆ ಅನಿಲ ದರ ಮಾತ್ರ ಏರುತ್ತಲೇ ಇದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ದರ ಏರಿಕೆ ಇದಕ್ಕೆ ಕಾರಣ ಎಂದು ಸರ್ಕಾರ ಹೇಳಿದೆ. ಅಡುಗೆ ಅನಿಲ ದರವನ್ನು ಇಳಿಸಬೇಕು ಎಂಬ ಆಗ್ರಹ ಬಲವಾಗಿದೆ

ಎಲ್‌ಪಿಜಿ ದರ ಗಗನಮುಖಿ


ಸಬ್ಸಿಡಿ ರಹಿತ ಮನೆ ಬಳಕೆ ಎಲ್‌ಪಿಜಿ ಬೆಲೆ (₹ಗಳಲ್ಲಿ)

(ದೆಹಲಿಯಲ್ಲಿ 14.2 ಕೆ.ಜಿ. ತೂಕದ ಮನೆ ಬಳಕೆ ಎಲ್‌ಪಿಜಿ ಸಿಲಿಂಡರ್‌ನ ಚಿಲ್ಲರೆ ಮಾರಾಟ ಬೆಲೆ)




- 2020ರ ಮೇ ಇಂದ ಈವರೆಗೆ ಮನೆ ಬಳಕೆ ಎಲ್‌ಪಿಜಿ ಬೆಲೆಯನ್ನು ಸತತವಾಗಿ ಏರಿಕೆ ಮಾಡಲಾಗಿದೆ. ಈ ಅವಧಿಯಲ್ಲಿ 14.2 ಕೆ.ಜಿ ಎಲ್‌ಪಿಜಿ ತೂಕದ ಸಿಲಿಂಡರ್ ಬೆಲೆಯಲ್ಲಿ ₹344ರಷ್ಟು ಏರಿಕೆಯಾಗಿದೆ
- ಈ ಅವಧಿಯಲ್ಲಿ ಏರಿಕೆಯಾದ ಎಲ್‌ಪಿಜಿ ಸಿಲಿಂಡರ್‌ನ ಬೆಲೆಯ ಪ್ರಮಾಣ ಶೇ 59ರಷ್ಟು
- 2020ರ ಅಕ್ಟೋಬರ್‌ನಲ್ಲಿ ಬಿಹಾರ ವಿಧಾನಸಭಾ ಚುನಾವಣೆ ನಡೆದಿತ್ತು. ಅದಕ್ಕೂ ಮೂರು ತಿಂಗಳು ಮೊದಲಿನಿಂದ ಎಲ್‌ಪಿಜಿ ಬೆಲೆ ಏರಿಕೆಯನ್ನು ಸ್ಥಗಿತಗೊಳಿಸಲಾಗಿತ್ತು. ಲಾಕ್‌ಡೌನ್ ಅವಧಿಯಲ್ಲಿ ಎಲ್‌ಪಿಜಿ ಬೆಲೆ ಏರಿಕೆ ಮಾಡಲಾಗಿತ್ತು, ಆದರೆ ಚುನಾವಣೆ ಹೊಸ್ತಿಲಲ್ಲಿ ಏರಿಕೆ ಸ್ಥಗಿತಗೊಳಿಸಲಾಗಿತ್ತು
- 2021ರಲ್ಲಿ ಪಶ್ಚಿಮ ಬಂಗಾಳ, ತಮಿಳುನಾಡು ಸೇರಿದಂತೆ ಹಲವು ರಾಜ್ಯಗಳಲ್ಲಿ ವಿಧಾನಸಭೆ ಚುನಾವಣೆ ನಡೆದಿತ್ತು. ಚುನಾವಣೆ ಘೋಷಣೆಯಾದ ದಿನದಿಂದ ಎಲ್‌ಪಿಜಿ ಬೆಲೆ ಏರಿಕೆ ಸ್ಥಗಿತಗೊಳಿಸಲಾಗಿತ್ತು. ಫಲಿತಾಂಶ ಘೋಷಣೆಯಾದ ಮರುತಿಂಗಳು ಮತ್ತೆ ಬೆಲೆ ಏರಿಕೆ ಆರಂಭವಾಯಿತು

ಸಿಲಿಂಡರ್ ಬೆಲೆಯಲ್ಲಿ ತೆರಿಗೆ




ಸಹಾಯಧನ ಕಡಿತ


ಕೇಂದ್ರ ಸರ್ಕಾರವು ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ನೀಡುತ್ತಿದ್ದ ಸಹಾಯಧನವನ್ನು ಕಡಿತ ಮಾಡುತ್ತಾ ಬಂದಿದೆ. ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಸಹಾಯಧನಕ್ಕೆ ಪ್ರತಿ ವರ್ಷ ಇಂತಿಷ್ಟು ಎಂದು ಹಣವನ್ನು ಮೀಸಲಾಗಿ ಇರಿಸಲಾಗುತ್ತದೆ. ಆದರೆ ಸೀಮೆಎಣ್ಣೆ ಮತ್ತು ಎಲ್‌ಪಿಜಿಗೆ ಮಾತ್ರವೇ ಸಹಾಯಧನ ನೀಡಲಾಗುತ್ತಿದೆ. ಈಗ ಎಲ್‌ಪಿಜಿ ಬಳಕೆ ಮಾಡುತ್ತಿರುವ ಕುಟುಂಬಗಳಿಗೆ ಸೀಮೆಎಣ್ಣೆ ನೀಡುವುದಿಲ್ಲ. ಹೀಗಾಗಿ ಹೀಗೆ ಮೀಸಲಿಡುವ ಅನುದಾನದಲ್ಲಿ ಬಹುಪಾಲು ಎಲ್‌ಪಿಜಿ ಸಹಾಯಧನಕ್ಕೆ ವೆಚ್ಚ ವಾಗುತ್ತದೆ. ಆದರೆ 2021-22ರ ಬಜೆಟ್‌ನಲ್ಲಿ ಎಲ್‌ಪಿಜಿ ಸಹಾಯಧನವನ್ನು ಮೂರನೇ ಎರಡರಷ್ಟು ಕಡಿತ ಮಾಡಲಾಗಿದೆ



ವಾಣಿಜ್ಯ ಬಳಕೆ ಸಿಲಿಂಡರ್ ಬೆಲೆ ಭಾರಿ ಏರಿಕೆ

ಈ ವರ್ಷದಲ್ಲಿ ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್‌ನ ಬೆಲೆಯನ್ನು ಹಲವು ಬಾರಿ ಏರಿಕೆ ಮಾಡಲಾಗಿದೆ. 19 ಕೆ.ಜಿ. ತೂಕದ ಎಲ್‌ಪಿಜಿ ಇರುವ ಸಿಲಿಂಡರ್‌ನ ದರವನ್ನು ನವೆಂಬರ್ 1ರಿಂದ ಅನ್ವಯವಾಗುವಂತೆ ಭಾರಿ ಪ್ರಮಾಣದಲ್ಲಿ ಏರಿಕೆ ಮಾಡಲಾಗಿದೆ. ವಾಣಿಜ್ಯ ಸಿಲಿಂಡರ್‌ನ ಮೇಲೆ ಹೇರಲಾಗುವ ಸುಂಕ ಮತ್ತು ತೆರಿಗೆಯ ಪ್ರಮಾಣವೂ ಹೆಚ್ಚು ಇರುವ ಕಾರಣ, ಈ ಸಿಲಿಂಡರ್‌ಗಳ ಮಾರಾಟ ಬೆಲೆ ಭಾರಿ ಹೆಚ್ಚು. 2021ರ ಜುಲೈಗೆ ಹೋಲಿಸಿದರೆ 2021ರ ನವೆಂಬರ್‌ನಲ್ಲಿ ವಾಣಿಜ್ಯ ಸಿಲಿಂಡರ್‌ನ ಬೆಲೆಯಲ್ಲಿ ₹338ರಷ್ಟು ಏರಿಕೆಯಾಗಿದೆ






- ದೆಹಲಿಯಲ್ಲಿ 19 ಕೆ.ಜಿ. ತೂಕದ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ನ ಚಿಲ್ಲರೆ ಮಾರಾಟ ಬೆಲೆ

ಆಟೊ ಎಲ್‌ಪಿಜಿ ಬೆಲೆ


(₹ಪ್ರತೀ ಕೆ.ಜಿ.ಗೆ)

2021ರ ಜನವರಿಯಲ್ಲಿ ಪ್ರತಿ ಕೆ.ಜಿ ಆಟೊ ಎಲ್‌ಪಿಜಿ ₹46.58ಕ್ಕೆ ಲಭ್ಯವಿತ್ತು. ನವೆಂಬರ್ 1ರ ವೇಳೆಗೆ ₹66ಕ್ಕೆ ಮಾರಾಟವಾಗಿದೆ.



ನೈಸರ್ಗಿಕ ಅನಿಲ ದರ

(ಪ್ರತೀ ಮಿಲಿಯನ್ ಮೆಟ್ರಿಕ್ ಬ್ರಿಟಿಷ್ ಥರ್ಮಲ್ ಯುನಿಟ್‌ಗೆ–ಎಂಎಂಬಿಟಿಯು)



ಆಧಾರ: ಇಂಧನ ಸಚಿವಾಲಯದ ಪೆಟ್ರೋಲಿಯಂ ಬೆಲೆ ವಿಶ್ಲೇಷಣಾ ಘಟಕ, ಐಒಸಿ, ಇಂಡೆಕ್ಸ್‌ಮಂಡಿ ಪ್ರಜಾವಾಣಿ ಗ್ರಾಫಿಕ್ಸ್

ವೇದವ್ಯಾಸರ ಶಿವಪುರಾಣದ ಕುಮಾರಖಂಡಸಾರ 1



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ

ಶಿವವಿಹಾರಕ್ಕೆ ನಡುಗಿದ ಭೂಮಿ

ವ್ಯಾಸರು ಬರೆದ ಶಿವಮಹಾಪುರಾಣದಲ್ಲಿ 7 ಸಂಹಿತೆ(ಸಂಗ್ರಹ)ಗಳಿವೆ – ವಿದ್ಯೇಶ್ವರಸಂಹಿತೆ, ರುದ್ರಸಂಹಿತೆ, ಶತರುದ್ರಸಂಹಿತೆ, ಕೋಟಿರುದ್ರಸಂಹಿತೆ, ಉಮಾಸಂಹಿತೆ, ಕೈಲಾಸಸಂಹಿತೆ, ವಾಯವೀಯ ಸಂಹಿತೆ. ಎರಡನೆಯದಾದ ರುದ್ರಸಂಹಿತೆಯಲ್ಲಿ ಸೃಷ್ಟಿಖಂಡ, ಸತಿ ಖಂಡ, ಪಾರ್ವತಿಖಂಡ, ಕುಮಾರಖಂಡ ಮತ್ತು ಯುದ್ಧಖಂಡ ಎಂಬ 5 ಖಂಡಗಳಿವೆ. ನಾವೀಗ ಶಿವಮಹಾಪುರಾಣದ ರುದ್ರಸಂಹಿತೆಯ ನಾಲ್ಕನೇ ಖಂಡವಾದ ಕುಮಾರಖಂಡದ 20 ಅಧ್ಯಾಯಗಳ ಸಂಕ್ಷಿಪ್ತ ಸಾರವನ್ನು ತಿಳಿಯೋಣ.

‘ಕುಮಾರಖಂಡ’ ಹೆಸರೇ ಸೂಚಿಸುವಂತೆ ಶಿವನ ಮಕ್ಕಳ ಕಥನ. ಶಿವ-ಪಾರ್ವತಿಯರು ವಿವಾಹದ ನಂತರ ಕೈಲಾಸಪರ್ವತದಲ್ಲಿ ನೆಲೆಸುತ್ತಾರೆ. ಬಹಳ ವರ್ಷಗಳಾದರೂ ಸಂತಾನವಾಗುವುದಿಲ್ಲ. ಇದರಿಂದ ಇಂದ್ರಾದಿ ದೇವತೆಗಳೆಲ್ಲಾ ವ್ಯಾಕುಲಗೊಳ್ಳುತ್ತಾರೆ. ಲೋಕಕಂಟಕನಾದ ತಾರಕಾಸುರನ ಸಂಹರಿಸಲು ಶಿವಪುತ್ರನಿಂದ ಮಾತ್ರ ಸಾಧ್ಯ ಅಂತ, ಸತಿ ಸಾವಿನಿಂದ ವಿರಾಗಿಯಾಗಿದ್ದ ಶಿವನನ್ನು ಮನ್ಮಥನಿಂದ ಪ್ರೇಮಬಾಣ ಹೂಡಿಸಿ ಎಚ್ಚರಗೊಳಿಸಲಾಯಿತು. ಪರ್ವತರಾಜನ ಮಗಳಾದ ಪಾರ್ವತಿಯಲ್ಲಿ ಮಹಾಶಿವ ಮೋಹಿತನಾಗಿ ವಿವಾಹವಾಗಲು ಬ್ರಹ್ಮ-ವಿಷ್ಣು ಸೇರಿದಂತೆ ದೇವಾಧಿದೇವತೆಗಳೆಲ್ಲಾ ಬಹಳ ಶ್ರಮಪಟ್ಟಿದ್ದರು. ಹೀಗಿದ್ದರೂ, ಶಿವ-ಪಾರ್ವತಿಯರ ದಾಂಪತ್ಯದಲ್ಲಿ ಸಂತಾನಭಾಗ್ಯ ಕಾಣದೆ ಅವರೆಲ್ಲಾ ಕಂಗಾಲಾಗಿದ್ದರು.

ಇದರ ಬಗ್ಗೆ ಚರ್ಚಿಸಲು ಇಂದ್ರನ ನೇತೃತ್ವದಲ್ಲಿ ದೇವತೆಗಳೆಲ್ಲ ಮೇರುಪರ್ವತದಲ್ಲಿ ಸೇರಿ ಮಂತ್ರಾಲೋಚನೆ ಮಾಡುತ್ತಿದ್ದಾಗ ಬಂದ ನಾರದಮುನಿ, ಅವರನ್ನೆಲ್ಲಾ ಬ್ರಹ್ಮನ ಬಳಿ ಕರೆದೊಯ್ದ. ಬ್ರಹ್ಮನಿಗೂ ಮುಂದೇನು ಮಾಡುವುದೆಂದು ತೋಚದೆ, ಅವರನ್ನೆಲ್ಲಾ ವಿಷ್ಣು ಬಳಿ ಕರೆದೊಯ್ದ. ವಿಷ್ಣುವೂ ದೀರ್ಘವಾಗಿ ಯೋಚಿಸಿ, ‘ಜಗದ್ರಕ್ಷಕನಾದ ಶಿವ ಯಾವುದೋ ಮಹತ್ಕಾರಣಕ್ಕಾಗಿ ಸಂತಾನ ವಿಳಂಬ ಮಾಡಿರಬೇಕು. ಪಾರ್ವತಿಯೊಂದಿಗೆ ವಿಲಾಸದಿಂದಿರುವ ಶಿವನ ಬಳಿ ಹೋಗಿ ನಾವು ಅಡಚಣೆ ಮಾಡಬಾರದು. ಏಕೆಂದರೆ ದಂಪತಿಗಳಿಗೆ ರಸಭಂಗ ಉಂಟುಮಾಡುವುದು ಮಹಾಪಾಪ. ಇಂದ್ರನು ರಂಭೆಯೊಡನೆ ಇರುವುದನ್ನು ತಪ್ಪಿಸಿದ್ದಕ್ಕೆ ದೂರ್ವಾಸಮುನಿಗೆ ಪತ್ನಿ ವಿಯೋಗವಾಗಿತ್ತು. ಮನ್ಮಥನು ಘೃತಾಚೀ ಎಂಬ ಅಪ್ಸರೆಯೊಡನೆ ಇರುವುದನ್ನು ತಪ್ಪಿಸಿದ ಪಾಪಕ್ಕೆ ಆರು ತಿಂಗಳಲ್ಲೆ ಬೃಹಸ್ಪತಿ ಪತ್ನಿ ಚಂದ್ರನಿಂದ ಅಪಹರಣಕ್ಕೊಳಗಾದಳು. ಚಂದ್ರನು ಮೋಹಿನಿಯೊಡನೆ ಇರುವುದಕ್ಕೆ ಅಡ್ಡಿಪಡಿಸಿದ ಗೌತಮ ಮಹರ್ಷಿ ಸಹ ಪತ್ನಿವಿಯೋಗ ಹೊಂದಿದ. ಹಾಲಿಕನೆಂಬುವನ ಭೋಗವನ್ನು ತಪ್ಪಿಸಿದ್ದಕ್ಕೆ ಹರಿಶ್ಚಂದ್ರನು ವಿಶ್ವಾಮಿತ್ರನಿಂದ ಪಡಬಾರದ ಕಷ್ಟಪಟ್ಟ. ಈ ಭಯದಿಂದಲೇ ಭೋಗದಲ್ಲಿದ್ದ ಅಜಾಮಿಲನನ್ನು ಕೆಲವು ದೇವತೆಗಳೂ ತಡೆಯುವ ಪ್ರಯತ್ನ ಮಾಡಲಿಲ್ಲ. ಸೃಷ್ಟಿಯಲ್ಲಿ ಪ್ರಾಣಿ-ಪಕ್ಷಿ-ಜಲಚರಾದಿ ಜೀವಿಗಳಿಗೆಲ್ಲಾ ಶೃಂಗಾರವಿಹಾರ ಬಹಳ ಇಷ್ಟವಾದುದು. ಆದ್ದರಿಂದ ಶಿವನ ದಾಂಪತ್ಯ ಸುಖಕ್ಕೆ ಯಾರೂ ಅಡ್ಡಿ ಮಾಡಬಾರದು. ಸುಮಾರು ವರ್ಷಗಳು ಕಳೆದ ಮೇಲೆ ಶಂಕರನಿಂದ ಜೀವಾಣುಬಿಂದು ಭೂಮಿ ಯಲ್ಲಿ ಬಿದ್ದು ಸ್ಕಂದನೆಂಬ ಶಿವನ ಪುತ್ರನು ಹುಟ್ಟುತ್ತಾನೆ’ ಎಂದು ಮಹಾವಿಷ್ಣು ಸಮಾಧಾನಿಸಿ ಕಳುಹಿಸಿದ.

ಆದರೆ ಶಿವ-ಪಾರ್ವತಿಯರ ವಿಹಾರವನ್ನು ಭೂದೇವಿ ತಾಳಲಾರದಾದಳು. ಆದಿಶೇಷ ಮತ್ತು ಆದಿಕೂರ್ಮರ ಆಸರೆಯಲ್ಲಿ ಭೂದೇವಿ ನಿಂತಿದ್ದರೂ ಶಿವ-ಪಾರ್ವತಿಯರ ಭಾರ ತಾಳಲಾರದೆ ನಡುಗಿದಳು. ಜೊತೆಗೆ ಭೂಮಿ ಭಾರ ಹೊತ್ತ ಆದಿಶೇಷ ಮತ್ತು ಆದಿಕೂರ್ಮರು ಕುಸಿಯತೊಡಗಿದರು. ಇದರಿಂದ ವಾಯುಭಾರ ಇಳಿದು ವಾತಾವರಣ ಸ್ತಬ್ಧವಾಯಿತು. ಮೂರು ಲೋಕಗಳಲ್ಲೂ ಹಾಹಾಕಾರ ಎದ್ದಿತು. ಗಾಳಿ ಇಲ್ಲದೆ ವ್ಯಾಕುಲರಾದ ದೇವತೆಗಳು ಬ್ರಹ್ಮನೊಂದಿಗೆ ಮತ್ತೆ ವಿಷ್ಣುವಿನ ಬಳಿ ಬಂದರು. ವಿಷ್ಣುವು ಅವರನ್ನೆಲ್ಲಾ ಪರಮೇಶ್ವರ ವಾಸಿಸುತ್ತಿದ್ದ ಗಿರಿಜಾಲಯಕ್ಕೆ ಕರೆದೊಯ್ದ. ಗಿರಿಜೆಯ ಗುಹಾಲಯದ ಮುಂದೆ ನಿಂತು ಎಲ್ಲರೂ, ಆತಂಕ ಮತ್ತು ದುಃಖದಿಂದ ಪರಮೇಶ್ವರನನ್ನು ಸ್ತುತಿಸತೊಡಗಿದರು.

ಕೈದಿಗಳ ಆಕ್ರೋಶ; ಪೊಲೀಸರಿಗೆ ಗಾಯ

ಫರೂಖಾಬಾದ್ (ಉತ್ತರ ಪ್ರದೇಶ) (ಪಿಟಿಐ): ಇಲ್ಲಿನ ಜಿಲ್ಲಾ ಕಾರಾಗೃಹದಲ್ಲಿ ಕೈದಿಯೊಬ್ಬನ ಸಾವಿನಿಂದ ಆಕ್ರೋಶಗೊಂಡ ಸಹ ಕೈದಿಗಳು ಭಾನುವಾರ ಭದ್ರತಾ ಸಿಬ್ಬಂದಿ ಮೇಲೆ ಕಲ್ಲು ತೂರಾಟ ನಡೆಸಿ, ಜೈಲಿಗೆ ಬೆಂಕಿ ಹಚ್ಚಿದ್ದಾರೆ. ಈ ವೇಳೆ ಸುಮಾರು 30 ಪೊಲೀಸರು ಮತ್ತು ಆರು ಕೈದಿಗಳು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೈದಿಯೊಬ್ಬ ಡೆಂಗಿ ಕಾಯಿಲೆಯಿಂದ ಇಲ್ಲಿನ ಸೈಫಾಯಿ ವೈದ್ಯಕೀಯ ಕಾಲೇಜಿನಲ್ಲಿ ಮೃತಪಟ್ಟ. ಈ ಸುದ್ದಿ ಹೊರಬೀಳುತ್ತಿದ್ದಂತೆ ಕಾರಾಗೃಹದಲ್ಲಿ ಕೈದಿಗಳು ಪೊಲೀಸರ ಮೇಲೆ ಕಲ್ಲು ತೂರಾಟ ನಡೆಸಿದರು ಎಂದು ಜೈಲಿನ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಈ ವೇಳೆ ಕೈದಿಗಳು ಜೈಲಿಗೆ ಬೆಂಕಿಯನ್ನೂ ಹಚ್ಚಿದರು. ಕೂಡಲೇ ಅಗ್ನಿಶಾಮಕ ದಳವನ್ನು ಕರೆಸಿ, ಬೆಂಕಿ ನಂದಿಸಲಾಯಿತು. ‘ಘಟನೆಯಲ್ಲಿ ಡೆಪ್ಯುಟಿ ಜೈಲರ್ ಸೇರಿದಂತೆ 30 ಪೊಲೀಸರು ಗಾಯಗೊಂಡಿದ್ದಾರೆ. ಈಗ ಪರಿಸ್ಥಿತಿಯ ನಿಯಂತ್ರಣದಲ್ಲಿದೆ’ ಎಂದು ಪೊಲೀಸ್ ವರಿಷ್ಠಾಧಿಕಾರಿ ಅಶೋಕ್ ಕುಮಾರ್ ಮೀನಾ ತಿಳಿಸಿದ್ದಾರೆ.

ಪಂಜಾಬ್: ಎಜಿ ವಿರುದ್ಧ ಸಿಧು ಮತ್ತೆ ವಾಗ್ದಾಳಿ

ಚಂಡೀಗಡ (ಪಿಟಿಐ): ‘ನ್ಯಾಯ ಕುರುಡಾಗಿದೆಯೇ ಹೊರತು ಪಂಜಾಬಿನ ಜನರಲ್ಲ’ ಎಂದು ಟ್ವೀಟ್ ಮಾಡುವ ಮೂಲಕ ಪಂಜಾಬ್ ಕಾಂಗ್ರೆಸ್ ಘಟಕದ ಅಧ್ಯಕ್ಷ ನವಜೋತ್ ಸಿಂಗ್ ಸಿಧು ಅವರು ರಾಜ್ಯದ ಅಡ್ವೊಕೇಟ್ ಜನರಲ್ ಎ.ಪಿ.ಎಸ್. ಡಿಯೋಲ್ ಅವರಿಗೆ ತಿರುಗೇಟು ನೀಡಿದ್ದಾರೆ.

‘ಸಿಧು ಅವರು ರಾಜ್ಯ ಸರ್ಕಾರ ಮತ್ತು ತಮ್ಮ ಕಚೇರಿಯ ಕಾರ್ಯನಿರ್ವಹಣೆಗೆ ಅಡ್ಡಿಪಡಿಸುತ್ತಿದ್ದಾರೆ ಹಾಗೂ ರಾಜಕೀಯ ಲಾಭಕ್ಕಾಗಿ ತಪ್ಪು ಮಾಹಿತಿ ಹರಡುತ್ತಿದ್ದಾರೆ’ ಎಂದು ಅಡ್ವೊಕೇಟ್ ಜನರಲ್ ಆರೋಪಿಸಿದ ಮರು ದಿನವಾದ ಭಾನುವಾರ ಸಿಧು ಸರಣಿ ಟ್ವೀಟ್‌ಗಳ ಮೂಲಕ ವಾಗ್ದಾಳಿ ಮಾಡಿದ್ದಾರೆ.

‘ಮಿಸ್ಟರ್ ಎಜಿ ಅವರೇ, ನ್ಯಾಯ ಕುರುಡಾಗಿರಬಹುದು, ಆದರೆ ಪಂಜಾಬಿನ ಜನರಲ್ಲ. ಗುರು ಗ್ರಂಥ ಸಾಹಿಬ್‌ನ ಅಪಮಾನ ಪ್ರಕರಣದಲ್ಲಿ ಸಂತ್ರಸ್ತರಿಗೆ ನ್ಯಾಯ ಒದಗಿಸುವ ಉದ್ದೇಶದಿಂದ ನಮ್ಮ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಿದೆ. ಈ ಪ್ರಕರಣದಲ್ಲಿ ನೀವು ಮುಖ್ಯ ಸಂಚುಕೋರರು ಅಥವಾ ಆರೋಪಿಗಳ ಪರ ಹೈಕೋರ್ಟ್‌ನಲ್ಲಿ ನಮ್ಮ ಸರ್ಕಾರದ ವಿರುದ್ಧ ಗಂಭೀರ ಆರೋಪಗಳನ್ನು ಮಾಡಿದ್ದಿರಿ’ ಎಂದು ಸಿಧು ದೂರಿದ್ದಾರೆ.

‘ಇಂದು ನೀವು, ಅಧಿಕಾರದಲ್ಲಿರುವ ಅದೇ ಕಾಂಗ್ರೆಸ್ ಪಕ್ಷದ ಸರ್ಕಾರವನ್ನು ಪ್ರತಿನಿಧಿಸುತ್ತಿದ್ದೀರಿ. ನಾನು ತಪ್ಪು ಮಾಹಿತಿ ಹರಡುತ್ತಿದ್ದೇನೆ ಎಂದು ದೂರುತ್ತಿದ್ದೀರಿ. ನಾನು ಗುರು ಗ್ರಂಥ ಸಾಹಿಬ್ ಅಪಮಾನ ಪ್ರಕರಣದಲ್ಲಿ ಸಂತ್ರಸ್ತರಿಗೆ ನ್ಯಾಯ ಕೊಡಿಸಲು ಹೋರಾಡುತ್ತಿದ್ದೇನೆ. ಆದರೆ ನೀವು ಆರೋಪಿಗಳನ್ನು ರಕ್ಷಿಸುತ್ತಿದ್ದೀರಿ’ ಎಂದು ಮತ್ತೊಂದು ಟ್ವೀಟ್‌ನಲ್ಲಿ ಅವರು ಟೀಕಿಸಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

‘ಅಫ್ಗಾನಿಸ್ತಾನವನ್ನು ಇತ್ತೀಚೆಗೆ ವಶಕ್ಕೆ ಪಡೆದಿರುವ ತಾಲಿಬಾನ್ ನೇತೃತ್ವದ ಸರ್ಕಾರವು, ವಿಶ್ವಕಪ್‌ನಲ್ಲಿ ಅಫ್ಗನ್ ಕ್ರಿಕೆಟ್ ತಂಡ ಪ್ರತಿನಿಧಿಸಲು ತಗಲುವ ವೆಚ್ಚವನ್ನು ನೀಡಲು ಹಿಂದೇಟು ಹಾಕಿದೆ. ಹೀಗಾಗಿ ಅಫ್ಗನ್ ಕ್ರಿಕೆಟ್ ತಂಡದ ನಾಯಕ ಮೊಹಮ್ಮದ್ ನಬಿ ಅವರು ಇಡೀ ತಂಡದ ವೆಚ್ಚವನ್ನು ಏಕಾಂಗಿಯಾಗಿ ಭರಿಸಿದ್ದಾರೆ’ ಎಂಬ ಸುದ್ದಿ ಸಾಮಾಜಿಕ ಜಾಲತಾಣಗಳಲ್ಲಿ ಇದೆ. ಅಂತರ್ಜಾಲ ಬಳಕೆದಾರರು ನಬಿ ಬಗ್ಗೆ ಅನುಕಂಪದ ಮಾತನ್ನಾಡಿದ್ದಾರೆ.



ದೇಶೀಯ ಮತ್ತು ವಿದೇಶಿ ವ್ಯಾಪಾರದಲ್ಲಿ ಪ್ರಸಿದ್ಧವಾಗಿರುವ ಸೇಡಿಕಿ ಸಮೂಹವು ಅಫ್ಗನ್ ಕ್ರಿಕೆಟ್ ತಂಡದ ಪ್ರಾಯೋಜಕತ್ವ ವಹಿಸಿಕೊಂಡಿದೆ. ಅಫ್ಗನ್ ಕ್ರಿಕೆಟ್ ಸಂಸ್ಥೆಯು ಅಕ್ಟೋಬರ್ 14ರಂದು ಟ್ವಿಟರ್ ಖಾತೆಯಲ್ಲಿ ಈ ವಿಷಯ ಖಚಿತಪಡಿಸಿದೆ. ನಬಿ ಅವರು ತಮ್ಮ ಸ್ವಂತ ಹಣದಿಂದ ತಂಡವನ್ನು ವಿಶ್ವಕಪ್‌ಗೆ ಕರೆದೊಯ್ದಿದ್ದಾರೆ ಎಂಬ ವರದಿಗಳನ್ನು ಪುಷ್ಟೀಕರಿಸುವ ಯಾವುದೇ ಮಾಹಿತಿ ಲಭ್ಯವಾಗಿಲ್ಲ ಎಂದು ಲಾಜಿಕಲ್ ಇಂಡಿಯನ್ ವೆಬ್‌ಸೈಟ್ ತಿಳಿಸಿದೆ. ತಾಲಿಬಾನ್ ವಕ್ತಾರ ಸುಹೈಲ್ ಶಹೀನ್ ಅವರು ತಂಡದ ಗೆಲುವನ್ನು ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದು, ತಂಡವನ್ನು ಹುರಿದುಂಬಿಸಿದ್ದಾರೆ.

ಗುಂಡಣ್ಣ



ಬೆರಗಿನ ಬೆಳಕು



ಗುರುರಾಜ ಕರಜಗಿ

ಒಳ-ಹೊರಗಿನ ಐಕ್ಯತೆ

ಬಹಿರಂತರೈಕ್ಯವನು ನೆನಪಿಗಾಗಿಸಲೆಂದು |
ವಿಹಿತಮ್ ಆಚಮನಾಘ್ರ್ಯ ಪೂಜೆ ನೈವೇದ್ಯ ||
ಗುಹೆಯೊಳಗಣದ ಹೊರಗಣದ ಕೂಡಿಸುವುಪಾಯ|
ಸಹಭಾವವದಕೆ ಸರಿ – ಮಂಕುತಿಮ್ಮ || 492 ||

ಪದ = ಅರ್ಥ: ಬಹಿರಂತರೈಕ್ಯವನು = ಬಹಿರ್ (ಹೊರಗಿನ) + ಅಂತರ್ (ಒಳಗಿನ) + ಐಕ್ಯವನು (ಒಂದಾಗುವಿಕೆಯನ್ನು), ವಿಹಿತಮ್ = ವಿಹಿತವಾದದ್ದು, ವಿಧಿಸಲ್ಪಟ್ಟದ್ದು, ಆಚಮನಾಘ್ರ್ಯ = ಆಚಮನ + ಅರ್ಘ್ಯ, ಗುಹೆಯೊಳಗಣದ = ಗುಹೆಯ + ಒಳಗಣದ, ಕೂಡಿಸುವುಪಾಯ = ಕೂಡಿಸುವ + ಉಪಾಯ

ವಾಚ್ಯಾರ್ಥ: ನಮ್ಮ ಹೊರಗೆ ಮತ್ತು ಒಳಗಿರುವುದು ಒಂದೇ ಎಂಬುದನ್ನು ನೆನಪಿಸಲು, ಆಚಮನ, ಅರ್ಘ್ಯ, ಪೂಜೆ, ನೈವೇದ್ಯಗಳು ವಿಧಿಸಲ್ಪಟ್ಟಿವೆ. ಇದು ಹೃದಯ ಗುಹೆಯಲ್ಲಿರುವ ಮತ್ತು ಹೊರಗಿರುವ ಚೈತನ್ಯವನ್ನು ಒಂದುಗೂಡಿಸುವ ಉಪಾಯ. ಅದಕ್ಕೆ ಸಮಾನವಾದ ಭಾವ ಬೇಕು.

ವಿವರಣೆ: ಸರ್ಪಭೂಷಣ ಶಿವಯೋಗಿಗಳು ಭಾವಲಿಂಗದ ಪೂಜೆಯನ್ನು ವರ್ಣಿಸಿರುವುದೊಂದು ಅದ್ಭುತ.

ಭಾವಲಿಂಗದ ನಿಜವನ್ನು ಪೂರ್ಣಮಯವಾಗಿ
ಭಾವಿಸಿ ಪೂಜೆಗೈಯುವವನೆ ದಿವ್ಯಯೋಗಿ ||ಪ||
ಧರೆಯೆ ಪೀಠಿಕೆ ಅಷ್ಟದಿಶೆಯೆ ಗೋಮುಖಮೂರ್ಧ |
ಪರಿಪೂರ್ಣವಾಗಿಪ್ಪ ಬಯಲೆ ಗೋಳಕವು ||
ಸರುವ ಲೋಕಗಳನಿಂತೊಳಗೊಂಡ ಲಿಂಗವ|
ಅರಿವೆಂಬ ಕರುವಾಗಿರುಹದೊಳಗಿರಿಸಿ || 1 ||
ಶರಧಿ ಸಪ್ತಕದಿಂದಲಭಿಷೇಕವೆರೆದಿಂದ |
ತರಣಿ ತಾರಕೆಗಳ ಕುಸುಮವ ಧರಿಸಿ ||
ಸ್ಫುರಿಸುವೌಷಧಿಗಳೆಲ್ಲವ ನೈವೇದ್ಯವ ಮಾಡಿ |
ಮರೆವಾಜಾಂಡದ ವಸ್ತ್ರವಿದನು ಬಾಸಣಿಸಿ || 2 ||
ಅದರ ಗರ್ಭದೊಳೆ ತಾನಿರುತಿರ್ದು ತನ್ನಯ |
ಹೃದಯ ಮಧ್ಯದೊಳದನು ಹುದುಗಿಸಿ ಬಳಿಕ ||
ಅದು ತಾನರ್ಚನೆಯೆಂಬ ತ್ರಿಪುಟಯಳಿದು ಮಿಕ್ಕ |
ಸದಮಳ ಗುರುಸಿದ್ಧನಿರವೆ ತಾನಾಗಿ || 3 ||

ದೃಷ್ಟಿಯು ದೈವೀಮಯವಾದಾಗ ಭಾವಲಿಂಗ ಪೂಜೆ ಮಾಡುವ ಶಿವಯೋಗಿಯ ಜ್ಞಾನಚಕ್ಷುವಿಗೆ ಸೃಷ್ಟಿಯ ಪ್ರತಿಯೊಂದು ಕಾರ್ಯ ದೈವೀಪೂಜೆಯಾಗುತ್ತದೆ. ಆಗ ತನ್ನ ಹೃದಯದ ಗುಹೆಯಲ್ಲಿಯೇ, ಹೊರಗಿರುವ ಚೇತನ ತನ್ನೊಳಗೇ ಇದೆ ಎಂಬುದನ್ನು ಅನುಭವಿಸಿ, ತಾನು ಬೇರೆ, ಅರ್ಚನೆ ಬೇರೆ ಎಂಬ ತ್ರಿಪುಟಿಯ ಭಾವವನ್ನೇ ಕಳೆದುಕೊಳ್ಳುತ್ತಾನೆ. ಹೊರಗಿನ ಮತ್ತು ಅಂತರಂಗದ ಉಭಯ ತತ್ವಗಳು ಒಂದೇ ಎಂಬುದನ್ನು ಅನುಭಾವಿಸುತ್ತಾನೆ. ಇದನ್ನೇ ಮಹಾನಾರಾಯಣೋಪನಿಷತ್, ‘ಅಂತರ್ಬಹಿಶ್ಚ-ತತ್‌ಸರ್ವಂ ವ್ಯಾಪ್ಯನಾರಾಯಣ: ಸ್ಥಿತ:’ ಎನ್ನುತ್ತದೆ. ಹೊರಗೆ ಮತ್ತು ಒಳಗೆ ಇರುವುದೊಂದೇ ಸತ್ವ. ಕಗ್ಗದ ಮಾತು ಸುಂದರ. ಹೊರಗೆ ಪ್ರಪಂಚದಲ್ಲಿ ಕಾಣುವ ಚೈತನ್ಯ ಮತ್ತು ನಮ್ಮ ಹೃದಯದ ಗುಹೆಯೊಳಗಿರುವ ಸತ್ವ ಎರಡೂ ಒಂದೇ ಎಂದು ನೆನಪಿಸಲೆಂದೇ ಆಚಮನ, ಅರ್ಘ್ಯ, ಪೂಜೆ, ನೈವೇದ್ಯಗಳ ಕ್ರಿಯೆಯನ್ನು ವಿಧಿಸಲಾಗಿದೆ. ಇದು ಅಂತರಂಗ ಮತ್ತು ಬಹಿರಂಗಗಳ ಏಕತೆಯನ್ನು ಸಹಭಾವದಿಂದ ಕೂಡಿಸುವ ಉಪಾಯ. ❖

ದಿನ ಭವಿಷ್ಯ

ಸೋಮವಾರ ನವೆಂಬರ್ 8, 2021

ಶ್ರೀಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಶರದೃತು ಕಾರ್ತೀಕ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ವಿಶಾಖಾ ಚತುರ್ಥೀ ಗಂ. 29-8 (ಸಾ. 6-01) ಸೋಮವಾರ ನಿತ್ಯ ನಕ್ಷತ್ರ ಮೂಲ ಗಂ. 44-36 (ರಾ. 12-12) ಸುಕರ್ಮ ನಾಮ ಯೋಗ ಗಂ. 37-5 ವಣಿಜ ಕರಣ ಗಂ. 2-7 ಉಪರಿ ಭದ್ರೆ ಕರಣ ಗಂ. 27-2 ವಿಷ ಗಂ. 40-52 ಅಮೃತ ಗಂ 29-52 : ರಾಹುಕಾಲ: ಬೆ. ಗಂ. 7-30 ರಿಂದ 9-00 ಗುಳಿಕ ಮ. ಕಾಲ ಗಂ 1-30 ರಿಂದ 3-00 ಯಮಗಂಡ ಕಾಲ ಬೆ. ಗಂ 10-30 ರಿಂದ 12-00 : ಸೂರ್ಯೋದಯ: 6-19 ಸೂರ್ಯಾಸ್ತ: 5-47 ಅದೃಷ್ಟ ಸಂಖ್ಯೆ 3 6

ಮೇಷ: ಹೊಸದಾಗಿ ಪ್ರಾರಂಭಿಸಿದ ಉದ್ಯಮದಲ್ಲಿ ಯಶಸ್ಸನ್ನು ಸಾಧಿಸಲಿದ್ದೀರಿ. ಆತ್ಮೀಯರೊಬ್ಬರನ್ನು ಭೇಟಿಯಾಗುವ ಸಾಧ್ಯತೆ. ವೈಯಕ್ತಿಕ ಜೀವನದಲ್ಲಿ ಸಂತಸ ಮೂಡಿಬರಲಿದೆ.

ವೃಷಭ: ಅಧಿಕಾರಿಗಳಿಂದ ಸಹಕಾರ ದೊರಕುವ ಸಾಧ್ಯತೆ. ಪ್ರಾಪ್ತ ವಯಸ್ಕರಿಗೆ ವಿವಾಹಾದಿ ಮಂಗಳ ಕಾರ್ಯಗಳು ನಿಶ್ಚಯವಾಗುವ ಸಾಧ್ಯತೆ. ಮಹಿಳೆಯರು ವಸ್ತ್ರಾಭರಣ ಖರೀದಿ ಮಾಡಲಿದ್ದೀರಿ. ಹಿರಿಯರ ಆರೋಗ್ಯದಲ್ಲಿ ವ್ಯತ್ಯಯ.

ಮಿಥುನ: ಆಕಸ್ಮಿಕ ಧನ ಲಾಭವಾಗುವ ಯೋಗ ಕಂಡುಬರುತ್ತಿದೆ. ಪ್ರೇಮಿಗಳಿಗೆ ಮನೋಭಿಲಾಷೆ ಈಡೇರುವ ಸಾಧ್ಯತೆ. ಆತ್ಮೀಯರಿಂದ ಸಹಕಾರ ದೊರೆತು ಕೆಲಸ ಕಾರ್ಯಗಳು ನಿರ್ವಿಘ್ನವಾಗಿ ನೆರವೇರಲಿದೆ.

ಕರ್ಕಾಟಕ: ಅನವಶ್ಯಕ ವ್ಯವಹಾರಗಳಿಂದ ಮುಕ್ತರಾಗಿ ನೆಮ್ಮದಿ ಹೊಂದುವಿರಿ. ಕುಟುಂಬ ಸಮಸ್ಯೆಗಳು ಪರಿಹಾರ ಕಂಡುಕೊಳ್ಳಲಿವೆ. ಉದ್ಯಮದಲ್ಲಿ ಯಶಸ್ಸನ್ನು ಹೊಂದಲಿದ್ದೀರಿ

ಸಿಂಹ: ದೈನಂದಿನ ಕಾರ್ಯಗಳಲ್ಲಿ ಆಸಕ್ತಿ ಮೂಡಿ ಸಫಲತೆಯನ್ನು ಕಾಣಲಿದ್ದೀರಿ. ವಸ್ತ್ರಾಭರಣಗಳ ಖರೀದಿ ಸಾಧ್ಯತೆ. ಆರೋಗ್ಯದ ಬಗ್ಗೆ ಹೆಚ್ಚಿನ ನಿಗಾ ವಹಿಸುವುದು ಉತ್ತಮ. ವಿದೇಶದಿಂದ ಶುಭ ವಾರ್ತೆ.

ಕನ್ಯಾ: ವೃತ್ತಿಯಲ್ಲಿ ಸಹೋದ್ಯೋಗಿಗಳೊಂದಿಗೆ ಸಾಮರಸ್ಯವನ್ನು ಕಂಡುಕೊಳ್ಳುವುದರಿಂದಾಗಿ ಆನಂದವನ್ನು ಅನುಭವಿಸುವಿರಿ. ವೈಯಕ್ತಿಕ ಭಿನ್ನಾಭಿಪ್ರಾಯಗಳು ದೂರವಾಗಲಿವೆ. ನೂತನ ಯೋಜನೆಯೊಂದರಲ್ಲಿ ಯಶಸ್ಸು.

ತುಲಾ: ವಿದ್ಯಾಭ್ಯಾಸದಲ್ಲಿ ಪ್ರಗತಿ. ಪಿತ್ರಾರ್ಜಿತ ಆಸ್ತಿ ಲಭ್ಯವಾಗಲಿದೆ. ನಿವೇಶನ ಖರೀದಿ ಅಥವಾ ಗೃಹ ನಿರ್ಮಾಣ ಕಾರ್ಯದಲ್ಲಿ ಯಶಸ್ಸು. ಅತಿಯಾದ ಕೋಪದಿಂದಾಗಿ ಸಂಕಷ್ಟಕ್ಕೆ ಸಿಲುಕುವ ಸಾಧ್ಯತೆ ಕಂಡುಬರುತ್ತಿದೆ.

ವೃಶ್ಚಿಕ: ಮಹಿಳೆಯರಿಗೆ ಸಾಮಾಜಿಕ ಗೌರವ ದೊರಕಲಿದೆ. ಅನಾರೋಗ್ಯದ ಸಮಸ್ಯೆಗಳಿಗೆ ಪರಿಹಾರ ದೊರಕಲಿದೆ. ಮಕ್ಕಳ ವಿದ್ಯಾಭ್ಯಾಸದಲ್ಲಿ ಪ್ರಗತಿ. ಹೊಸ ವಸ್ತುಗಳ ಖರೀದಿಸುವಿರಿ.

ಧನು: ಮಕ್ಕಳ ವಿದ್ಯಾಭ್ಯಾಸದಲ್ಲಿ ಹೆಚ್ಚು ಪ್ರೋತ್ಸಾಹ ದೊರೆಯಲಿದೆ. ಕೃಷಿ ಕ್ಷೇತ್ರದಲ್ಲಿ ದುಡಿಯುವವರಿಗೆ ಧನ ಧಾನ್ಯಾದಿಗಳು ಪ್ರಾಪ್ತವಾಗಲಿವೆ. ದೈನಂದಿನ ಕೆಲಸ ಕಾರ್ಯಗಳಲ್ಲಿ ಉತ್ಸಾಹದಿಂದ ತೊಡಗಿಕೊಳ್ಳುವಿರಿ.

ಮಕರ: ರಾಜಕೀಯದಲ್ಲಿ ಯಶಸ್ಸನ್ನು ಗೌರವವನ್ನೂ ಕಂಡುಕೊಳ್ಳಲಿದ್ದೀರಿ. ಆಂತರಿಕ ಸಮಸ್ಯೆಗಳು ಪರಿಹಾರಗೊಂಡು ನೆಮ್ಮದಿ ಮೂಡಿಬರಲಿದೆ. ಹಿರಿಯ ವಯಸ್ಕರಿಗೆ ಆರೋಗ್ಯದ ಬಗ್ಗೆ ಹೆಚ್ಚಿನ ನಿಗಾ ಅಗತ್ಯವಾಗಿದೆ.

ಕುಂಭ: ಯಂತ್ರೋಪಕರಣಗಳ ಖರೀದಿಗಾಗಿ ಧನ ವಿನಿಯೋಗ ಮಾಡಲಿದ್ದೀರಿ. ಆತ್ಮೀಯರಿಗೆಂದು ಸಾಲ ವಗೈರೆಗಾಗಿ ಜಾಮೀನು ನೀಡುವುದರಿಂದ ಸಂಕಷ್ಟ ಎದುರಾದೀತು.

ಮೀನ: ಸಹೋದರರಿಂದ ಸಹಕಾರ ದೊರಕುವುದು. ಮನೆ ಖರೀದಿ ಮಾಡುವ ಸಾಧ್ಯತೆ ಕಂಡುಬರುವುದು. ಮಹಿಳೆಯರಿಗೆ ಸಾಮಾಜಿಕ ಸ್ಥಾನಮಾನ ದೊರಕಲಿದೆ. ವಿಶೇಷ ಅಧ್ಯಯನದಲ್ಲಿ ಆಸಕ್ತಿ ಉಂಟಾಗುವುದು.

ನಿಮ್ಮ ಜನ್ಮದಿನ 8-ನವೆಂಬರ್ ಈದಿನ ಅತ್ಯಂತ ಶುಭ ದಿನವಾಗಿದೆ. ಹೆರವರಿಂದ ಶೋಷಣೆಯನ್ನು ಅನುಭವಿಸಬೇಕಾದೀತು. ಸಂಗಾತಿಯ ಸಹಕಾರ ಪಡೆದು ಧೈರ್ಯದಿಂದ ಮುನ್ನುಗ್ಗಿ ಕಾರ್ಯಸಾಧನೆ ಮಾಡಿಕೊಳ್ಳಬಹುದು. ವಿದ್ಯಾರ್ಥಿಗಳಿಗೆ ಉತ್ತಮ ಭವಿಷ್ಯವನ್ನು ತಂದುಕೊಡಲಿದೆ.


ಪದಬಂಧ 4771 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಕರಾರು ಹಾಕಿದ್ದಕ್ಕೇ ಈ ಆಕ್ಷೇಪಣೆ! (4)
3. ಮೋಕ್ಷಕ್ಕೆ ಸಾಧಕವಾದ ಪರಮಾತ್ಮನ ಅರಿವು (4)
4. ತೂಗುವ ಸಾಧನವಿಲ್ಲಿ ತಿರುವು ಮುರುವಾಗಿದೆಯಲ್ಲಾ (3)
5. ನವೀನ ಹಾಡಿನ ಧಾಟಿ (4)
7. ಮತದಲ್ಲೇ ಮೂಡಿದ ಅಭಿಪ್ರಾಯ (4)
9. ಕಾಡಿನಲ್ಲಿ ವಾಸವಾಗಿರುವಿಕೆ (4)
11. ಕೊನೆಗೆ ಬರ ಬಂದರೂ ಈ ಮೆರೆತವೇ? (4)
12. ಈಕೆ ಹಣವಿಲ್ಲದವಳು (3)
14. ಒಪ್ಪಿಗೆಯನ್ನು ಹೀಗೆನ್ನಿ (4)
15. ಪುಸ್ತಕದ ಮೇಲು ಹೊದಿಕೆ (4)

ಮೇಲಿಂದ ಕೆಳಕ್ಕೆ

1. ವಿಷಯವನ್ನು ಬಲ್ಲವನು (2)
2. ತಿರುಗಿ ನಿಂತು ಎಲ್ಲೆಯಿಂದ ಹೊರಹಾಕುವಿಕೆ (4)
3. ಮೇಲು ಕೀಳು ಇಲ್ಲಿ ಕಾಣುತ್ತಿದೆ (4)
6. ವಿಶೇಷವಾದ ಮನ್ನಣೆ (3)
8. ತಿರುಗಿದಾಗ ಕಾಣಿಸಿದ ನಂತರ ಸಮೂಹ (3)
10. ಉತ್ತರದವರ ಸೋಪು (4)
11. ಮುಷ್ಕರವಲ್ಲಾ! ಹೊಸದಾಗಿ ಕಂಡುಹಿಡಿಯುವುದು (4)
13. ಅತಂತ್ರದಲ್ಲೇ ಯುಕ್ತಿಯಿದೆ (2)



4770ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪಲಾಯನ 3.ಜನಹಿತ 5.ಕರಡಿ 6.ಅಧ್ವಾನ 7.ಗಣಪ 9.ಗುಮಾನಿ 11.ರಾವುತ 12.ಗುಲಾಮ 13.ಪರಿಣತ 15.ತಿನ್ನಾಸಕ

ಮೇಲಿಂದ ಕೆಳಕ್ಕೆ: 1.ಪಗಡಿ 2.ನಜ 4.ನಸುನಗು 5.ಕರಗ 8.ಪರಾಯಣ 10.ನಿಯಮ 12.ಗುಣಕ 14.ತತ

ಸುಡೊಕು 5157

	4			2		7		3
6		9	5		7			
	3			8		6		
	7			9			3	
	9	3	6					4
4				5		8		
7			8		9			
	5						8	
	8			4		9		1


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5156 ಸುಡೊಕು

2	1	8	3	7	5	4	6	9
4	9	7	6	1	2	8	5	3
3	6	5	9	4	8	1	7	2
9	2	3	1	8	7	5	4	6
5	7	1	4	6	3	9	2	8
8	4	6	5	2	9	3	1	7
7	3	9	2	5	1	6	8	4
6	5	2	8	9	4	7	3	1
1	8	4	7	3	6	2	9	5

ಈಕ್ವಿಟಿ ಎಂಎಫ್: ಹೂಡಿಕೆ ಹೆಚ್ಚಳ



ಮುಖ್ಯಾಂಶಗಳು

- ಈಕ್ವಿಟಿ ಎಂಎಫ್ ನಿರ್ವಹಣಾ ಸಂಪತ್ತು ₹ 12.8 ಲಕ್ಷ ಕೋಟಿಗೆ ಏರಿಕೆ
- ಒಟ್ಟಾರೆ ಹೂಡಿಕೆಯಲ್ಲಿ ಎನ್‌ಎಫ್‌ಒ ಕೊಡುಗೆ ಶೇ 50

ನವದೆಹಲಿ (ಪಿಟಿಐ): ಈಕ್ವಿಟಿ ಮ್ಯೂಚುವಲ್ ಫಂಡ್‌ಗಳು ಪ್ರಸಕ್ತ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹ 40 ಸಾವಿರ ಕೋಟಿ ಬಂಡವಾಳ ಸೆಳೆದಿವೆ. ಇವು ಜೂನ್ ತ್ರೈಮಾಸಿಕದಲ್ಲಿ ₹ 19,508 ಕೋಟಿ ಬಂಡವಾಳ ಆಕರ್ಷಿಸಿದ್ದವು. ಇದಕ್ಕೆ ಹೋಲಿಸಿದರೆ ಈ ಬಾರಿ ಸುಮಾರು ಎರಡು ಪಟ್ಟು ಹೆಚ್ಚಳ ಆಗಿದೆ.

ನ್ಯೂ ಫಂಡ್ ಆಫರ್‌ಗಳಲ್ಲಿ (ಎನ್‌ಎಫ್‌ಒ) ಹೆಚ್ಚಿನ ಒಳಹರಿವು ಮತ್ತು ಎಸ್‌ಐಪಿಯಲ್ಲಿ (ವ್ಯವಸ್ಥಿತ ಹೂಡಿಕೆ ಯೋಜನೆ) ಸ್ಥಿರವಾದ ಹೂಡಿಕೆಯಿಂದಾಗಿ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಈ ಪ್ರಮಾಣದ ಹೂಡಿಕೆ ಆಗಿದೆ. ಇದರಿಂದಾಗಿ ಸೆಪ್ಟೆಂಬರ್ ತ್ರೈಮಾಸಿಕದ ಕೊನೆಯಲ್ಲಿ ಈಕ್ವಿಟಿ ಮ್ಯೂಚುವಲ್ ಫಂಡ್‌ಗಳ ನಿರ್ವಹಣಾ ಸಂಪತ್ತು ಮೌಲ್ಯವು ₹ 12.8 ಲಕ್ಷ ಕೋಟಿಗೆ ತಲುಪಿದೆ. ಜೂನ್ ತ್ರೈಮಾಸಿಕದ ಅಂತ್ಯದಲ್ಲಿ ಇದು ₹ 11.1 ಲಕ್ಷ ಕೋಟಿಯಷ್ಟಿತ್ತು ಎಂದು ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟವು (ಎಎಂಎಫ್‌ಐ) ತಿಳಿಸಿದೆ.

ಮಾರ್ಚ್‌ನಿಂದಲೂ ಈಕ್ವಿಟಿ ಮ್ಯೂಚುವಲ್ ಫಂಡ್‌ಗಳಲ್ಲಿ ಬಂಡವಾಳ ಒಳಹರಿವು ಕಂಡುಬರುತ್ತಿದೆ. 2020ರ ಜುಲೈನಿಂದ 2021ರ ಫೆಬ್ರುವರಿಯ ಅವಧಿಯಲ್ಲಿ ನಿರಂತರವಾಗಿ ಬಂಡವಾಳ ಹೊರಹರಿವು ಕಂಡುಬಂದಿತ್ತು.

ಸ್ಥಿರವಾದ ಈಕ್ವಿಟಿ ಒಳಹರಿವು ಭಾರತೀಯ ಷೇರು ಮಾರುಕಟ್ಟೆ ಬಗ್ಗೆ ಹೂಡಿಕೆದಾರರಲ್ಲಿನ ಸಕಾರಾತ್ಮಕ ಭಾವನೆಯನ್ನು ಸೂಚಿಸುತ್ತಿದೆ. ವಾಣಿಜ್ಯ ವ್ಯವಹಾರಗಳು ಸಾಂಕ್ರಾಮಿಕ ಸೃಷ್ಟಿಸಿದ ಅಡಚಣೆಗಳಿಂದ ಹೊರಬಂದು ಚೇತ-ರಿಸಿಕೊಳ್ಳುತ್ತಿವೆ. ವ್ಯವಸ್ಥೆಯಲ್ಲಿ ಹೆಚ್ಚಿನ ನಗದು ಲಭ್ಯವಾಗುತ್ತಿದೆ. ಆರ್ಥಿಕತೆಯು ವೇಗವಾಗಿ ಚೇತರಿಕೆ ಕಾಣುವಂತೆ ಮಾಡಲು ಸರ್ಕಾರ ಕೈಗೊಂಡಿರುವ ಉತ್ತೇಜನ ಕ್ರಮಗಳು ನೆರವಾಗುತ್ತಿವೆ ಎಂದು ಹೆಮ್ ಸೆಕ್ಯುರಿಟೀಸ್‌ನ ಮುಖ್ಯಸ್ಥ ಮೋಹಿತ್ ನಿಗಮ್ ಹೇಳಿದ್ದಾರೆ.

ಈಕ್ವಿಟಿಗಳಲ್ಲಿ ಆಗಿರುವ ಒಟ್ಟಾರೆ ಹೂಡಿಕೆಯಲ್ಲಿ ಎನ್‌ಎಫ್‌ಒಗಳ ಕೊಡುಗೆಯೇ ಶೇಕಡ 50ರಷ್ಟು ಇದೆ ಎಂದು ಮ್ಯೂಚುವಲ್ ಫಂಡ್ ತಜ್ಞರು ಹೇಳಿದ್ದಾರೆ. ಎಸ್‌ಐಪಿ ಮೂಲಕ ಆಗಿರುವ ಹೂಡಿಕೆಯು ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹ 29,883 ಕೋಟಿಗೆ ಏರಿಕೆ ಆಗಿದೆ. ಅಲ್ಲದೆ, ಎಸ್‌ಐಪಿಗೆ ತಿಂಗಳ ಕೊಡುಗೆಯು ಏಪ್ರಿಲ್‌ನಲ್ಲಿ ₹ 8,596 ಕೋಟಿ ಇದ್ದಿದ್ದು ಸೆಪ್ಟೆಂಬರ್‌ನಲ್ಲಿ ₹ 19,351 ಕೋಟಿಗೆ ಏರಿದೆ.

ಎಲ್ಲ ಬಗೆಯ ಮ್ಯೂಚುವಲ್ ಫಂಡ್‌ಗಳನ್ನು ಪರಿಗಣಿಸಿದರೆ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಆಗಿರುವ ಒಟ್ಟಾರೆ ಹೂಡಿಕೆಯ ಮೊತ್ತವು ₹ 99,974 ಕೋಟಿ ಇದೆ. ಜೂನ್ ತ್ರೈ-ಮಾಸಿಕದಲ್ಲಿ ₹ 69,625 ಕೋಟಿಗಳಷ್ಟು ಇತ್ತು.

₹ 742 ಕೋಟಿ ಹೂಡಿಕೆ: ಬೌನ್ಸ್

ನವದೆಹಲಿ (ಪಿಟಿಐ): ವಿದ್ಯುತ್ ಚಾಲಿತ ಸ್ಕೂಟರ್‌ಗಳನ್ನು ಬಾಡಿಗೆ ಆಧಾರದ ಮೇಲೆ ನೀಡುವ ಬೌನ್ಸ್ ಕಂಪನಿಯು ಇ-ಸ್ಕೂಟರ್ ತಯಾರಿಕೆ ಮತ್ತು ಬ್ಯಾಟರಿ ಸ್ವ್ಯಾಪಿಂಗ್ ಮೂಲಸೌಕರ್ಯ ಕಲ್ಪಿಸುವ ಸಲುವಾಗಿ ಮುಂದಿನ ಒಂದು ವರ್ಷದಲ್ಲಿ ₹ 742 ಕೋಟಿ ಹೂಡಿಕೆ ಮಾಡಲಿದೆ ಎಂದು ಕಂಪನಿಯ ಸಹ ಸ್ಥಾಪಕ ವಿವೇಕಾನಂದ ಹಳ್ಳಕೆರೆ ತಿಳಿಸಿದ್ದಾರೆ.

ಇದೇ ತಿಂಗಳ ಅಂತ್ಯದ ವೇಳೆಗೆ ಕಂಪನಿಯು ತನ್ನ ಮೊದಲ ಇ-ಸ್ಕೂಟರ್ ಅನಾವರಣ ಮಾಡಲಿದ್ದು, ಮುಂದಿನ ವರ್ಷದ ಫೆಬ್ರುವರಿಯಿಂದ ವಿತರಣೆ ಆರಂಭವಾಗಲಿದೆ ಎಂದು ಅವರು ಮಾಹಿತಿ ನೀಡಿದ್ದಾರೆ. 1 ಲಕ್ಷಕ್ಕೂ ಅಧಿಕ ಮುಂಗಡ ಬುಕಿಂಗ್ ಆಗಲಿದೆ ಎನ್ನುವ ನಿರೀಕ್ಷೆಯನ್ನು ಕಂಪನಿ ಇಟ್ಟುಕೊಂಡಿದೆ.

ಎರಡು ರೀತಿಯ ಬೆಲೆಯಲ್ಲಿ ಸ್ಕೂಟರ್ ಲಭ್ಯ ಇರಲಿದೆ. ಮೊದಲನೆಯದು ಬ್ಯಾಟರಿ ಸಹಿತ. ಅದರ ಬೆಲೆ ₹ 70 ಸಾವಿರದ ಒಳಗೆ ಹಾಗೂ ಬ್ಯಾಟರಿ ಇಲ್ಲದೇ ಇರುವ ಸ್ಕೂಟರ್ ಬೆಲೆಯು ₹ 50 ಸಾವಿರದ ಒಳಗೆ ಆಗಬೇಕು ಎನ್ನುವ ಆಲೋಚನೆ ಮಾಡಲಾಗಿದೆ ಎಂದೂ ಅವರು ಹೇಳಿದ್ದಾರೆ.

ಸದ್ಯ ರಾಜಸ್ಥಾನದ ಬಿವಾಡಿಯಲ್ಲಿ ಒಂದು ತಯಾರಿಕಾ ಘಟಕ ಹೊಂದಿದ್ದು, ವಾರ್ಷಿಕ 1.8 ಲಕ್ಷ ಸ್ಕೂಟರ್ ತಯಾರಿಕೆಯ ಸಾಮರ್ಥ್ಯವನ್ನು ಇದು ಹೊಂದಿದೆ. ಮುಂದಿನ ಮೂರ್ನಾಲ್ಕು ತ್ರೈಮಾಸಿಕಗಳಲ್ಲಿ ಒಂದು ಸಾವಿರಕ್ಕೂ ಅಧಿಕ ಮಂದಿಗೆ ಉದ್ಯೋಗ ಅವಕಾಶವನ್ನು ಅದು ಸೃಷ್ಟಿಸಲಿದೆ. ಸದ್ಯ 100 ಮಂದಿ ಕೆಲಸ ಮಾಡುತ್ತಿದ್ದಾರೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹485
12 ಮೊಟ್ಟೆಗೆ	₹65
ಮೈಸೂರು	
100 ಮೊಟ್ಟೆಗೆ	₹490

ರಾಮನಗರ ರೇಷ್ಮೆ ಗೂಡು ಧಾರಣೆ

ಮಿಶ್ರತಳಿ	₹294-491
ದ್ವಿತಳಿ	₹321-535

ಯೌವನದಲ್ಲಿ ಮಾಡುವ ಹಣಕಾಸಿನ ಆರು ತಪ್ಪುಗಳು



ಬಂಡವಾಳ ಮಾರುಕಟ್ಟೆ

ಅವಿನಾಶ್ ಕೆ.ಟಿ.

ಕೆಲಸಕ್ಕೆ ಸೇರಿದ ನಂತರದಲ್ಲಿ, ಮೊದಲ ಸಂಬಳ ಸಿಕ್ಕಾಗ ಬಹುತೇಕರಿಗೆ ಅದನ್ನು ಹೇಗೆ ನಿರ್ವಹಣೆ ಮಾಡಬೇಕು ಎನ್ನುವ ಅಂದಾಜು ಇರುವುದಿಲ್ಲ. ನಮ್ಮ ಶಾಲೆ, ಕಾಲೇಜು ಶಿಕ್ಷಣವು ಹಣಕಾಸು ನಿರ್ವಹಣೆಯ ಬಗ್ಗೆ ತಿಳಿಸಿಕೊಡದ ಕಾರಣ ಅನೇಕ ಯುವಕರು ಹಣಕಾಸು ನಿರ್ವ-ಹಣೆಯಲ್ಲಿ ಎಡವುತ್ತಾರೆ, ಅರಿತೋ, ಅರಿಯದೆಯೋ ಅನೇಕ ತಪ್ಪುಗಳನ್ನು ಮಾಡಿ ಆರ್ಥಿಕ ಸಂಕಷ್ಟಕ್ಕೆ ಸಿಲುಕುತ್ತಾರೆ. ತಾರುಣ್ಯದಲ್ಲಿ ಹಣಕಾಸು ನಿರ್ವಹಣೆಯ ವಿಚಾರದಲ್ಲಿ ಮಾಡಬಾರದಾದ ಆರು ತಪ್ಪುಗಳ ಮೇಲೊಂದು ನೋಟ ಹರಿಸೋಣ.

1. ತೋರಿಕೆಯ ಶ್ರೀಮಂತಿಕೆಯಿಂದ ದೂರವಿರಿ: 'ನೀವು ಶ್ರೀಮಂತರು ಎಂದು ತೋರಿಸಿಕೊಳ್ಳುವ ಸಲುವಾಗಿ ಮಾಡುವ ಖರ್ಚು, ನಿಮ್ಮನ್ನು ಅತ್ಯಂತ ವೇಗವಾಗಿ ಬಡವರನ್ನಾಗಿಸುತ್ತದೆ' ಎಂದು 'ದಿ ಸೈಕಾಲಜಿ ಆಫ್ ಮನಿ' ಪುಸ್ತಕದ ಲೇಖಕ ಮೋರ್ಗನ್ ಹೌಸೆಲ್ ಹೇಳುತ್ತಾರೆ. ಪಕ್ಕದ ಮನೆಯವರು ದುಬಾರಿ ಕಾರು ಖರೀದಿಸಿದರು, ಸ್ನೇಹಿತರು ಹೊಸ ಮೊಬೈಲ್ ಕೊಂಡರು ಎನ್ನುವ ಕಾರಣಕ್ಕೆ ಯಾವುದೋ ಹೊಸ ವಸ್ತುವಿನ ಖರೀದಿ ಮಾಡುತ್ತೀರಿ ಎಂದಾದಲ್ಲಿ ನೀವು ತೋರಿಕೆಯ ಶ್ರೀಮಂತಿಕೆಯ ಹಂಗಿನಲ್ಲಿದ್ದೀರಿ ಎನ್ನುವುದು ಖಚಿತ.

ಏನನ್ನಾದರೂ ಕೊಳ್ಳುವ ಮೊದಲು ನಮ್ಮ ಅಗತ್ಯ, ಆದ್ಯತೆ ಮತ್ತು ಆರ್ಥಿಕ ಪರಿಸ್ಥಿತಿಯ ಬಗೆಗೆ ಸ್ಪಷ್ಟ ಕಲ್ಪನೆ ಇಟ್ಟುಕೊಂಡಿರಬೇಕು. ಸಾಧ್ಯವಾದಷ್ಟು ಉಳಿತಾಯದಿಂದ ಮಾತ್ರ ನಮ್ಮ ಅಗತ್ಯಗಳನ್ನು ಪೂರೈಸಿಕೊಳ್ಳಬೇಕು. ಕೊಳ್ಳುಬಾಕತನಕ್ಕೆ ಬಿದ್ದು, ಎಲ್ಲವನ್ನೂ ಮಾಸಿಕ ಕಂತುಗಳಲ್ಲಿ (ಇಎಂಐ) ಖರೀದಿಸಿ ನೆಮ್ಮದಿ ಕಳೆದುಕೊಳ್ಳಬಾರದು.

2. ಒಂದೇ ಆದಾಯ ನೆಚ್ಚಿಕೊಳ್ಳಬೇಡಿ: ಬಹುತೇಕರು ಜೀವನ ನಿರ್ವಹಣೆಗಾಗಿ ಸಾಮಾನ್ಯವಾಗಿ ಒಂದೇ ಆದಾಯ ಮೂಲ ನೆಚ್ಚಿಕೊಂಡಿರುತ್ತಾರೆ. ಆದರೆ ಕೊರೊನಾ ಕಾಲವು, ಕೇವಲ ಒಂದೆರಡು ಆದಾಯ ಮೂಲಗಳನ್ನು ನಂಬಿಕೊಂಡು ಜೀವನ ನಡೆಸಲು ಸಾಧ್ಯವಿಲ್ಲ ಎನ್ನುವುದನ್ನು ಒತ್ತಿ ಹೇಳಿದೆ. ಯಾವುದೇ ಸಂಕಷ್ಟದ ಕಾಲದಲ್ಲೂ ನಮ್ಮ ಆರ್ಥಿಕ ಸ್ಥಿತಿ ಹಳಿತಪ್ಪದಂತೆ ಎಚ್ಚರ ವಹಿಸಲು ಆದಾಯದ ಮೂಲಗಳನ್ನು ಹೆಚ್ಚಿಸಿಕೊಳ್ಳುವ ಅವಶ್ಯಕತೆಯಿದೆ. ಸಂಭಾವನೆ (Remuneration), ಸ್ವಂತ ವ್ಯವಹಾರದ ಆದಾಯ (Rate), ಬಾಡಿಗೆ ಆದಾಯ (Rent), ಹೂಡಿಕೆ ಮೇಲಿನ ಗಳಿಕೆ (Returns), ಹಕ್ಕುಸ್ವಾಮ್ಯ (Rights) ಮತ್ತು ಪುನರಾವರ್ತನೆ (Replication)... ಹೀಗೆ ಯಾವುದೇ ನಿರ್ದಿಷ್ಟ ಕ್ಷೇತ್ರದಲ್ಲಿ ಆದಾಯದ ಮೂಲಗಳನ್ನು ಹೆಚ್ಚಿಸಿಕೊಳ್ಳಲು ಏಳು ಮಾರ್ಗಗಳಿವೆ.

ಅವುಗಳನ್ನು ಕಂಡುಕೊಂಡರೆ ನೀವು ಭವಿಷ್ಯದ ಆದಾಯದ ಬಗ್ಗೆ ಚಿಂತಿಸಬೇಕಿಲ್ಲ. ಡಿಜಿಟಲ್ ಯುಗದಲ್ಲಿ ಪರ್ಯಾಯ ಆದಾಯದ ಮೂಲಗಳನ್ನು ಕಂಡುಕೊಳ್ಳುವುದಕ್ಕೆ ಹಲವು ಆಯ್ಕೆಗಳಿವೆ. ಉದಾಹರಣೆಗೆ ಬ್ಲಾಗ್ ಬರವಣಿಗೆ, ಕಂಟೆಂಟ್ ರೈಟಿಂಗ್, ವಿಡಿಯೋ ಸಂಕಲನ, ಡಿಜಿಟಲ್ ಮಾರ್ಕೆಟಿಂಗ್, ಯೂಟ್ಯೂಬ್ ಚಾನೆಲ್ ಆರಂಭಿಸುವುದು... ಹೀಗೆ ಅನೇಕ ಅವಕಾಶಗಳಿವೆ.

3. ಉಳಿತಾಯ, ಹೂಡಿಕೆಗಿಂತ ವಿಮೆ ಮುಖ್ಯ: ಬಹಳಷ್ಟು ಮಂದಿ 23ನೇ ವಯಸ್ಸಿಗೆ ಬರುವಷ್ಟರಲ್ಲಿ ಕೆಲಸಕ್ಕೆ ಸೇರಿರುತ್ತಾರೆ. ಆದರೆ ವರ್ಷಗಳೇ ಕಳೆದರೂ ಆರೋಗ್ಯ ವಿಮೆ ಮತ್ತು ಅವಧಿ ವಿಮೆ ಪಡೆಯುವ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ವೈಯಕ್ತಿಕ ಹಣಕಾಸು ಯೋಜನೆಯಲ್ಲಿ ಉಳಿತಾಯ ಮತ್ತು ಹೂಡಿಕೆಗಿಂತ ಮುಖ್ಯವಾದದ್ದು ಸುರಕ್ಷತೆ. ಹಾಗಾಗಿ ವಿಮೆ ಬಹಳ ಮುಖ್ಯ. ಕೆಲಸಕ್ಕೆ ಸೇರಿದ ಕೂಡಲೇ ಒಂದು ಆರೋಗ್ಯ ವಿಮೆ ಮತ್ತು ಅವಧಿ ವಿಮೆ ಪಡೆದುಕೊಳ್ಳುವುದು ಉತ್ತಮ. ಅನಾರೋಗ್ಯ ಉಂಟಾದಾಗ, ಕಷ್ಟಪಟ್ಟು ದುಡಿದ ದುಡ್ಡನ್ನೆಲ್ಲ ಆಸ್ಪತ್ರೆಗೆ ಸುರಿಯುವ ಬದಲು, ಗಳಿಸಿದ ಹಣದಲ್ಲಿ ಸಣ್ಣ ಪ್ರಮಾಣದ ಹಣವನ್ನು ಆರೋಗ್ಯ ವಿಮೆಗೆ ವ್ಯಯಿಸುವುದು ಜಾಣತನ.

ಕುಟುಂಬಕ್ಕೆ ಆಧಾರವಾಗಿ ನೀವು ದುಡಿಯು-ತ್ತಿರುತ್ತೀರಿ ಎಂದಿಟ್ಟುಕೊಳ್ಳಿ. ಆಕಸ್ಮಿಕವಾಗಿ ನಿಮ್ಮ ಜೀವಕ್ಕೆ ತೊಂದರೆಯಾದರೆ ಪರಿಹಾರವೇನು? ನೀವು ಮಾಡಿರುವ ಸಾಲಗಳನ್ನು ತೀರಿಸುವುದು ಹೇಗೆ? ಇಂತಹ ಪ್ರಶ್ನೆಗೆ ಉತ್ತರ ಅವಧಿ ವಿಮೆ. ಪಾಲಿಸಿದಾರರು ಆಕಸ್ಮಿಕ ಸಾವಿನ ವಿರುದ್ಧ ಪಡೆಯುವ ವಿಮೆ ರಕ್ಷಣೆ ಸೌಲಭ್ಯವನ್ನು 'ಅವಧಿ ವಿಮೆ' ಒಳಗೊಂ-ಡಿರುತ್ತದೆ. ನಿಮ್ಮ ವಾರ್ಷಿಕ ಆದಾಯದ 15ರಿಂದ 20 ಪಟ್ಟು ಮೊತ್ತದಷ್ಟು ಕವರೇಜ್ ನೀಡುವ ಅವಧಿ ವಿಮೆ ಖರೀದಿ ಮಾಡಿದರೆ ಒಳಿತು. ನೆನಪಿಡಿ ಆರೋಗ್ಯ ವಿಮೆ ಮತ್ತು ಅವಧಿ ವಿಮೆ ಪಡೆಯುವ ಮುನ್ನ ಸಾಕಷ್ಟು ವಿಚಾರ ಮಾಡಿ ಮುಂದುವರಿಯಿರಿ.

4. ತುರ್ತು ನಿಧಿ ನಿಮ್ಮ ಆಪ್ತಮಿತ್ರ: ವೈದ್ಯಕೀಯ ತುರ್ತು, ಉದ್ಯೋಗ ನಷ್ಟ, ಉದ್ಯಮ ನಷ್ಟ ಹೀಗೆ ಅನೇಕ ಕಾರಣಗಳಿಂದ ಪ್ರತಿಯೊಬ್ಬರೂ ಒಂದಲ್ಲ ಒಂದು ಹಂತದಲ್ಲಿ ಆರ್ಥಿಕ ಮುಗ್ಗಟ್ಟು ಎದುರಿಸುವುದು ಸರ್ವೇ ಸಾಮಾನ್ಯ. ಇಂತಹ ಅನಿರೀಕ್ಷಿತ ಸಂದರ್ಭಗಳಿಗಾಗಿ ತುರ್ತು ನಿಧಿ ಅಂದರೆ ಎಮರ್ಜೆನ್ಸಿ ಫಂಡ್ ಅಗತ್ಯ. ಆದರೆ ಕೆಲಸಕ್ಕೆ ಸೇರಿದ ಹೊಸದರಲ್ಲಿ ಅನೇಕರಿಗೆ ತುರ್ತು ನಿಧಿಯ ಕಲ್ಪನೆಯೇ ಇರುವುದಿಲ್ಲ. ಬಂದ ಆದಾಯಕ್ಕೆಲ್ಲ ಖರ್ಚಿನ ದಾರಿ ತೋರಿಸಲು ಉತ್ಸುಕರಾಗಿರುತ್ತಾರೆ. ತುರ್ತು ನಿಧಿಯು ಕಷ್ಟಕಾಲದಲ್ಲಿ ನಮ್ಮನ್ನು ಕಾಪಾಡುವ ಜತೆಗೆ, ಹೂಡಿಕೆಗಳಿಗೆ ಅಗತ್ಯ ಆರ್ಥಿಕ ಸಂಪನ್ಮೂಲವನ್ನು ಒದಗಿಸಿಕೊಡುತ್ತದೆ. ಕನಿಷ್ಠ ಆರು ತಿಂಗಳ ವೇತನವನ್ನು ತುರ್ತು ನಿಧಿಯಲ್ಲಿ ಇಟ್ಟುಕೊಳ್ಳುವುದು ಒಳಿತು. ಸ್ವಂತ ಉದ್ಯೋಗ ಹೊಂದಿರುವವರು ಕನಿಷ್ಠ 12 ತಿಂಗಳ ಆದಾಯವನ್ನು ತುರ್ತು ನಿಧಿಗೆ ಮೀಸಲಿಡಬಹುದು.

5. ಉಳಿತಾಯ ಮಾಡಿದ ನಂತರ ಖರ್ಚು ಮಾಡಿ: ಉಳಿತಾಯ ಒಂದು ಮನಃಸ್ಥಿತಿ. ಹೆಚ್ಚು ಆದಾಯ ಇರುವವರು ಮಾತ್ರ ಉಳಿತಾಯ ಮಾಡಬಹುದು ಎನ್ನುವುದು ಒಪ್ಪುವ ಮಾತಲ್ಲ. ಖರ್ಚು ಮಾಡುವುದಕ್ಕೆ ಶಾಪಿಂಗ್, ಸಿನಿಮಾ ಅಂತ ನಾವೆಲ್ಲರೂ ಆಲೋಚನೆ ಮಾಡುತ್ತೇವೆ. ಆದರೆ ಉಳಿತಾಯಕ್ಕೆ ನಾವೆಂದೂ ಪ್ಲಾನ್ ಮಾಡುವುದೇ ಇಲ್ಲ. ಆದಾಯ – ಉಳಿತಾಯ = ಖರ್ಚು ಎನ್ನುವ ಲೆಕ್ಕಾಚಾರ ನಿಮ್ಮದಾಗಲಿ.

6. ಹಣಕಾಸು ಶಿಕ್ಷಣ ಕಡೆಗಣಿಸಬೇಡಿ: ದುಡಿಮೆಯ ನಂತರದಲ್ಲಿ ನಮ್ಮ ಗಳಿಕೆಯನ್ನು ಸುರಕ್ಷಿತವಾಗಿಟ್ಟುಕೊಂಡು ನೆಮ್ಮದಿಯ ಜೀವನ ನಡೆಸಲು ಹಣಕಾಸು ಶಿಕ್ಷಣ ಬಹಳ ಮುಖ್ಯ. ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಹಣಕಾಸು ನಿರ್ವಹಣೆಯ ಬಗ್ಗೆ ಸರಿಯಾದ ಕಲಿಕೆ ಇಲ್ಲದಿರುವುದು ಕೂಡ ಹಲವರನ್ನು ಆರ್ಥಿಕ ಸಂಕಷ್ಟಕ್ಕೆ ದೂಡುತ್ತಿದೆ. ದುಡಿದ ದುಡ್ಡನ್ನು ಉಳಿಸಿ, ಬೆಳೆಸಬೇಕಾದರೆ 18-20ನೇ ವಯಸ್ಸಿಗೆ ಹಣಕಾಸು ನಿರ್ವಹಣೆ ಬಗ್ಗೆ ಕಲಿತುಕೊಳ್ಳಲು ಶುರು ಮಾಡಬೇಕು. ವಿವಿಧ ಮಾದರಿ ಹೂಡಿಕೆಗಳ ಬಗ್ಗೆ ತಿಳಿದುಕೊಳ್ಳುವ ಜತೆಗೆ, ಸಾಲ ನಿರ್ವಹಣೆ, ಮ್ಯೂಚುವಲ್ ಫಂಡ್ ಮತ್ತು ಷೇರು ಮಾರುಕಟ್ಟೆ ಹೂಡಿಕೆಗಳ ಬಗ್ಗೆಯೂ ಜ್ಞಾನ ಹೆಚ್ಚಿಸಿಕೊಳ್ಳಬೇಕು. ಆಗ ಮಾತ್ರ ನಿಮ್ಮ ಸಂಪತ್ತು ಹೆಚ್ಚಿಸಿಕೊಳ್ಳಲು ಸಾಧ್ಯ. ಕಲಿಕೆಯಿಲ್ಲದೆ ಗಳಿಕೆಯಿಲ್ಲ ಎನ್ನುವುದನ್ನು ಸದಾ ನೆನಪಿನಲ್ಲಿಟ್ಟುಕೊಳ್ಳಬೇಕು.

(ಲೇಖಕ: ಇಂಡಿಯನ್ ಮನಿ ಡಾಟ್ ಕಾಂನ ಹಣಕಾಸು ಸಲಹಾ ವಿಭಾಗದ ಮುಖ್ಯಸ್ಥ)

ಗೂಳಿ ಓಟದಲ್ಲಿ ನೀವು ಮುಗ್ಗರಿಸಬಹುದು ಜೋಕೆ!

ಷೇರು ಮಾರುಕಟ್ಟೆಯಲ್ಲಿ ಏರಿಳಿತದ ಹಾದಿ ಮುಂದುವರಿದಿದ್ದರೂ ಹೂಡಿಕೆದಾರರ ಉತ್ಸಾಹ ಮಾತ್ರ ಕಡಿಮೆಯಾಗಿಲ್ಲ. ಈಗಾಗಲೇ ಹೂಡಿಕೆ ಮಾಡಿ ಭರ್ಜರಿ ಲಾಭ ಗಳಿಸಿರುವವರು, ಷೇರುಪೇಟೆಯಲ್ಲಿ ಮತ್ತದೇ ಮಾದರಿಯ ಉತ್ತಮ ಗಳಿಕೆ ಪುನರಾವರ್ತನೆಯಾಗಲಿದೆ ಎಂಬ ಅಂದಾಜಿನಲ್ಲಿದ್ದಾರೆ. ಸ್ನೇಹಿತರು, ಸಂಬಂಧಿಕರಿಂದ ಗೂಳಿ ಓಟದ ಆಶಾವಾದದ ಕಥೆ ಕೇಳಿರುವ ಹೊಸ ಹೂಡಿಕೆದಾರರು ಷೇರುಪೇಟೆಗೆ ಜಿಗಿದು ಲಾಭಗಳಿಸಲು ಉತ್ಸುಕರಾಗಿದ್ದಾರೆ. ಆದರೆ, ನಾಗಾಲೋಟದಲ್ಲಿ ಸಾಗಿರುವ ಗೂಳಿ ಮುಗ್ಗರಿಸಲೂಬಹುದು ಎನ್ನುವ ಎಚ್ಚರಿಕೆ ಹೂಡಿಕೆದಾರರಿಗೆ ಬಹಳ ಮುಖ್ಯ.

ಹೆಚ್ಚೆಚ್ಚು ಐಪಿಒಗಳು, ಹೊಸ ಮ್ಯೂಚುವಲ್ ಫಂಡ್ ಆಫರ್‌ಗಳು ಮಾರುಕಟ್ಟೆ ಪ್ರವೇಶಿಸುತ್ತಿ-ದ್ದರೆ ಅದು ಮಾರುಕಟ್ಟೆ ನಿರೀಕ್ಷಿತ ಮಟ್ಟಕ್ಕಿಂತ ಹೆಚ್ಚು ಬೆಳವಣಿಗೆ ಸಾಧಿಸಿದೆ ಎನ್ನುವುದರ ಸೂಚನೆ. ಅತಿಯಾದ ಮೌಲ್ಯ ಹೆಚ್ಚಳ ಕಂಡಿರುವ ಮಾರುಕಟ್ಟೆಯಲ್ಲಿ ಹೂಡಿಕೆ ಮಾಡುವಾಗ ಎಚ್ಚರಿಕೆ ಇರಬೇಕು. ಮೂಲಭೂತ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಬಹುತೇಕ ಷೇರುಗಳನ್ನು ಗಮನಿಸಿದಾಗ ಅವುಗಳ 'ಆಂತರಿಕ ಮೌಲ್ಯಕ್ಕಿಂತ ಮಾರುಕಟ್ಟೆ ಬೆಲೆಯೇ ಹೆಚ್ಚಳವಾಗಿದೆ, ಹೀಗಿರುವಾಗ ಹೂಡಿಕೆದಾರರು ಹೆಚ್ಚು ಬೆಲೆಗೆ ಷೇರು ಖರೀದಿಸಿ ಮುಂದೆ ಲಾಭ ಗಳಿಸುವುದು ಸಾಧ್ಯವೇ' ಎಂಬ ಪ್ರಶ್ನೆ ಮೂಡಬಹುದು.

ಮಾರುಕಟ್ಟೆ ಯಾವಾಗ ಗಣನೀಯ ಪ್ರಮಾಣದಲ್ಲಿ ಬೀಳುತ್ತದೆ ಎಂದು ಹೇಳಲು ಯಾರಿಂದಲೂ ಸಾಧ್ಯವಿಲ್ಲ. ಆದರೆ ಮಾರುಕಟ್ಟೆಯಲ್ಲಿ ಈಗಾಗಲೇ ಅಲ್ಪ ಪ್ರಮಾಣದ ಕುಸಿತ ಕಾಣಿಸಿಕೊಳ್ಳುತ್ತಿರುವುದಂತೂ ಸತ್ಯ. ಮಾರುಕಟ್ಟೆ ಕುಸಿಯುತ್ತಿದೆ ಎಂದಾಕ್ಷಣ ಇರುವ ಷೇರುಗಳನ್ನೆಲ್ಲಾ ಮಾರಾಟ ಮಾಡಿ ಹೊರಬರಬೇಕಾಗಿಲ್ಲ. ಉತ್ತಮ ಭವಿಷ್ಯವಿರುವ ಕಂಪನಿಯ ಷೇರುಗಳನ್ನು ಸರಿಯಾದ ಬೆಲೆಯಲ್ಲಿ ದೀರ್ಘಾವಧಿಗೆ ಖರೀದಿಸಿದ್ದರೆ ಆತಂಕಪಡುವ ಅಗತ್ಯವಿಲ್ಲ.

ಷೇರುಪೇಟೆಯಲ್ಲಿ ಏರಿಳಿತ ಎನ್ನುವುದು ಸಹಜ ಪ್ರಕ್ರಿಯೆ. ಹೊಸದಾಗಿ ಷೇರು ಮಾರುಕಟ್ಟೆ ಪ್ರವೇ-ಶಿಸುವವರು ಹೆಚ್ಚು ಆಂತರಿಕ ಮೌಲ್ಯವಿರುವ ಕಡಿಮೆ ಬೆಲೆಗೆ ಸಿಗುತ್ತಿರುವ ಉತ್ತಮ ಷೇರುಗಳ ಖರೀದಿ ಬಗ್ಗೆ ಆಲೋಚಿಸಬಹುದು. ಆದರೆ, ಮಾರುಕಟ್ಟೆಯನ್ನು ಗಮನಿಸಿಕೊಂಡು ಹೂಡಿಕೆ ಮೊತ್ತವನ್ನು ನಾಲ್ಕೈದು ಭಾಗಗಳನ್ನಾಗಿ ವಿಂಗಡಿಸಿಕೊಂಡು ಹಂತ ಹಂತವಾಗಿ ಹೂಡಿಕೆ ಮಾಡುವುದು ಒಳಿತು.



ಡ್ರೋನ್ ಬಳಸಿ ಇರಾಕ್ ಪ್ರಧಾನಿ ಹತ್ಯೆಗೆ ಯತ್ನ, ವಿಫಲ



ಮುಸ್ತಾಫಾ ಅಲ್ ಕಧಿಮಿ

ಬಾಗ್ದಾದ್ (ಎಪಿ): ಇರಾಕ್ ಪ್ರಧಾನಿ ಮುಸ್ತಾಫಾ ಅಲ್ ಕಧಿಮಿ ಅವರ ಹತ್ಯೆಗೆ ಶಸ್ತ್ರಾಸ್ತ್ರವನ್ನು ಜೋಡಿಸಿದ್ದ ಡ್ರೋನ್ ಬಳಸಿ ಭಾನುವಾರ ದಾಳಿ ನಡೆದಿದೆ. ಪ್ರಧಾನಿಯ ನಿವಾಸವನ್ನು ಗುರಿಯಾಗಿಸಿ ಈ ದಾಳಿ ನಡೆದಿದೆ. 'ಈ ಯತ್ನ ವಿಫಲವಾಗಿದ್ದು, ಪ್ರಧಾನಿ ಸುರ-ಕ್ಷಿತವಾಗಿದ್ದಾರೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಳೆದ ತಿಂಗಳು ಸಂಸತ್ತಿಗೆ ನಡೆದಿದ್ದ ಸಾರ್ವತ್ರಿಕ ಚುನಾವಣೆಯ ಫಲಿತಾಂಶವನ್ನು ಒಪ್ಪಿಕೊಳ್ಳಲು ಇರಾನ್ ಬೆಂಬಲಿತ ಉಗ್ರರ ಸಂಘಟನೆಯು ನಿರಾಕರಿಸಿದೆ. ಈ ಹಿನ್ನೆಲೆಯಲ್ಲಿ ದೇಶದಲ್ಲಿ ಉದ್ಭವಿಸಿದ್ದ ಅನಿಶ್ಚಿತ ಮತ್ತು ಆತಂಕದ ಸ್ಥಿತಿಯು ಈ ದಾಳಿಯಿಂದ ಇನ್ನಷ್ಟು ಹೆಚ್ಚಿದೆ.

ಇರಾಕ್‌ನ ಇಬ್ಬರು ಅಧಿಕಾರಿಗಳು ಸುದ್ದಿ ಸಂಸ್ಥೆಗೆ ನೀಡಿರುವ ಮಾಹಿತಿಯಂತೆ, ಡ್ರೋನ್ ದಾಳಿಯಿಂದಾಗಿ ಪ್ರಧಾನಿ ಅಲ್ ಕಧಿಮಿ ಅವರ ಏಳು ಮಂದಿ ಭದ್ರತಾ ಸಿಬ್ಬಂದಿ ಗಾಯಗೊಂಡಿದ್ದಾರೆ. ಅತ್ಯಂತ ಸುರಕ್ಷಿತ ಹಸಿರು ವಲಯದಲ್ಲಿ ಎರಡು ಶಸ್ತ್ರಸಜ್ಜಿತ ಡ್ರೋನ್‌ಗಳನ್ನು ಬಳಸಿ ದಾಳಿ ನಡೆಸಲಾಗಿತ್ತು.

'ನಾನು ನನ್ನ ಜನರ ನಡುವೆ ಕ್ಷೇಮದಿದ್ದೇನೆ. ದೇವರಿಗೆ ಕೃತಜ್ಞತೆಗಳು' ಎಂದು ಪ್ರಧಾನಿಯು ತಮ್ಮ ವಿರುದ್ಧದ ಹತ್ಯೆ ದಾಳಿ ಯತ್ನ ವಿಫಲವಾದ ಹಿಂದೆಯೇ ಟ್ವೀಟ್ ಮಾಡಿದ್ದಾರೆ. ಇರಾಕ್‌ನ ಹಿತದೃಷ್ಟಿಯಿಂದ ತಾಳ್ಮೆ ಮತ್ತು ಸ್ಥಿತಪ್ರಜ್ಞತೆಯಿಂದ ಇರಬೇಕು ಎಂದೂ ಜನತೆಗೆ ಮನವಿ ಮಾಡಿದ್ದಾರೆ.

ಬಳಿಕ ಇರಾಕ್‌ನ ಟಿ.ವಿ.ಯಲ್ಲಿ ಮಾತನಾಡಿದ ಅವರು, 'ಹೇಡಿತನದ ರಾಕೆಟ್ ಮತ್ತು ಡ್ರೋನ್ ಅನ್ನು ಬಳಸಿ ದಾಳಿ ನಡೆಸುವುದರಿಂದ ನಾಡು ಮತ್ತು ಭವಿಷ್ಯವನ್ನು ಕಟ್ಟಲಾಗದು' ಎಂದೂ ಪ್ರತಿಪಾದಿಸಿದರು.

ಬಾಗ್ದಾದ್‌ದ ಹಲವು ನಿವಾಸಿಗಳು ದೊಡ್ಡಪ್ರಮಾಣದಲ್ಲಿ ಸ್ಫೋಟ ಮತ್ತು ಅದರ ಹಿಂದೆಯೇ ಗುಂಡಿನ ದಾಳಿ ನಡೆದ ಸದ್ದು ಕೇಳಿಸಿಕೊಂಡಿದ್ದಾರೆ. ವಿದೇಶಿ ರಾಯಭಾರಿಗಳು, ಸರ್ಕಾರಿ ಕಚೇರಿಗಳು ಇರುವ ಹಸಿರುವಲಯದ ದಿಕ್ಕಿನಿಂದ ಈ ಶಬ್ದ ಕೇಳಿಬಂದಿದೆ.

ಡಿಜಿಟಲ್ ಪಾವತಿಯೂ ಜನಪ್ರಿಯ
ನಗದು ಚಲಾವಣೆ ಹೆಚ್ಚಳ



ಮುಖ್ಯಾಂಶಗಳು

- ನಗದು ಬಳಕೆ ಆಗಿಲ್ಲ ಇಳಿಕೆ
- ಸಣ್ಣ ವಹಿವಾಟುಗಳಿಗೆ ನಗದು ಜನಪ್ರಿಯ
- ಯುಪಿಐ ವ್ಯವಸ್ಥೆಯಿಂದ ಡಿಜಿಟಲ್ ವಹಿವಾಟು ಹೆಚ್ಚಳ

ನವದೆಹಲಿ (ಪಿಟಿಐ): ನೋಟು ರದ್ದತಿ ತೀರ್ಮಾನ ಕೈಗೊಂಡ ಐದು ವರ್ಷಗಳ ನಂತರದಲ್ಲಿ ದೇಶದಲ್ಲಿ ಚಲಾವಣೆಯಲ್ಲಿ ಇರುವ ನೋಟುಗಳ ಪ್ರಮಾಣವು ಹೆಚ್ಚುತ್ತ ಸಾಗಿದೆ. ಇದೇ ಸಂದರ್ಭದಲ್ಲಿ, ಡಿಜಿಟಲ್ ಪಾವತಿ ವ್ಯವಸ್ಥೆಗಳ ಮೂಲಕ ನಡೆಯುವ ವಹಿವಾಟುಗಳೂ ಬೆಳವಣಿಗೆ ದಾಖಲಿಸಿವೆ.

ಹಿಂದಿನ ಹಣಕಾಸು ವರ್ಷದಲ್ಲಿ ಚಲಾವಣೆಯಲ್ಲಿದ್ದ ಬ್ಯಾಂಕ್ ನೋಟುಗಳ ಪ್ರಮಾಣವು ಹೆಚ್ಚಳವಾಗಿದೆ. ಕೋವಿಡ್ ಸಾಂಕ್ರಾಮಿಕವು ಆರ್ಥಿಕ ಚಟುವಟಿಕೆಗಳ ಮೇಲೆ ಕೆಟ್ಟ ಪರಿಣಾಮ ಬೀರಿದ್ದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಜನರು ಮುನ್ನೆ-ಚ್ಚರಿಕೆಯ ಕ್ರಮವಾಗಿ ನಗದನ್ನು ಇರಿಸಿಕೊಳ್ಳಲು ಮುಂದಾಗಿದ್ದು ಇದಕ್ಕೆ ಕಾರಣ.

ಇದೇ ಅವಧಿಯಲ್ಲಿ ಡಿಜಿಟಲ್ ಪಾವತಿ ಪ್ರಮಾಣ ಕೂಡ ಹೆಚ್ಚಾಗುತ್ತಿ-ರುವುದನ್ನು ಅಧಿಕೃತ ಅಂಕಿ–ಅಂಶಗಳು ಹೇಳುತ್ತಿವೆ. ಪ್ರಧಾನಿ ನರೇಂದ್ರ ಮೋದಿ ಅವರು 2016ರ ನವೆಂಬರ್ 8ರಂದು, ಹಳೆಯ ₹ 1000 ಹಾಗೂ ₹ 500 ಮುಖಬೆಲೆಯ ನೋಟುಗಳನ್ನು ಅಮಾ-ನ್ಯಗೊಳಿಸುವ ಘೋಷಣೆ ಮಾಡಿದರು. ಡಿಜಿಟಲ್ ಪಾವತಿ ಉತ್ತೇಜನ ಹಾಗೂ ಕಪ್ಪುಹಣದ ಚಲಾವಣೆ ತಗ್ಗಿಸುವುದು ಇದರ ಮುಖ್ಯ ಉದ್ದೇಶಗಳಲ್ಲಿ ಒಂದಾಗಿತ್ತು. ಡಿಜಿಟಲ್ ಪಾವತಿ ವ್ಯವಸ್ಥೆ ದಿನೇ ದಿನೇ ಜನಪ್ರಿಯ ಆಗುತ್ತಿರುವ ಕಾರಣ, ನಗದಿನ ಬಳಕೆಯ ಹೆಚ್ಚಳವು ತುಸು ಮಟ್ಟಿಗೆ ವೇಗ ಕಳೆದುಕೊಂಡಿದೆ.

2016ರ ನವೆಂಬರ್ 4ರಂದು ಚಲಾವಣೆಯಲ್ಲಿ ಇದ್ದ ನಗದಿನ ಮೌಲ್ಯವು ₹ 17.74 ಲಕ್ಷ ಕೋಟಿ ಇತ್ತು. ಇದು ಈ ವರ್ಷದ ಅಕ್ಟೋಬರ್ 29ರ ವೇಳೆಗೆ ₹ 29.17 ಲಕ್ಷ ಕೋಟಿಗೆ ಏರಿಕೆ ಆಗಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ ಅಂಕಿ–ಅಂಶಗಳು ಹೇಳುತ್ತವೆ. 2020–21ರಲ್ಲಿ ಚಲಾವಣೆಯಲ್ಲಿ ಇರುವ ನೋಟುಗಳ ಮೌಲ್ಯವು ಶೇಕಡ 16.8ರಷ್ಟು ಹೆಚ್ಚಳ ಆಗಿದೆ. 2019–20ರಲ್ಲಿ ಹೆಚ್ಚಳದ ಪ್ರಮಾಣವು ಶೇ 14.7ರಷ್ಟು ಆಗಿತ್ತು.

2016ರಲ್ಲಿ ಯುಪಿಐ (ಏಕೀಕೃತ ಪಾವತಿ ವ್ಯವಸ್ಥೆ) ಸೌಲಭ್ಯಕ್ಕೆ ಚಾಲನೆ ನೀಡಲಾಯಿತು. ಈ ಡಿಜಿಟಲ್ ಪಾವತಿ ಸೌಲಭ್ಯ ಬಳಕೆಯು ತಿಂಗಳಿನಿಂದ ತಿಂಗಳಿಗೆ ಹೆಚ್ಚುತ್ತ ಸಾಗಿದೆ. ಈ ವರ್ಷದ ಅಕ್ಟೋಬರ್‌ನಲ್ಲಿ ಯುಪಿಐ ಮೂಲಕ ನಡೆದಿರುವ ವಹಿವಾಟಿನ ಮೊತ್ತವು ₹ 7.71 ಲಕ್ಷ ಕೋಟಿಗಿಂತ ಹೆಚ್ಚು ಆಗಿದೆ.

ಸಣ್ಣ ಮೊತ್ತದ ವಹಿವಾಟುಗಳಲ್ಲಿ ಜನ ಪಾವತಿಗೆ ಹೆಚ್ಚಾಗಿ ಯಾವುದನ್ನು ಅವಲಂಬಿಸಿದ್ದಾರೆ ಎಂಬುದನ್ನು ತಿಳಿಯಲು ಆರ್‌ಬಿಐ 2018ರ ಡಿಸೆಂಬರ್‌ನಿಂದ 2019ರ ಜನವರಿ ನಡುವೆ ಸಮೀಕ್ಷೆಯೊಂದನ್ನು ಆರು ನಗರಗಳಲ್ಲಿ ಕೈಗೊಂಡಿತ್ತು. ನಿತ್ಯದ ಖರ್ಚುಗಳನ್ನು ನಿಭಾಯಿಸುವಲ್ಲಿ ನಗದು ಬಳಕೆ ಹೆಚ್ಚಿದೆ ಎಂಬುದನ್ನು ಇದು ಕಂಡುಕೊಂಡಿದೆ. ₹ 500ರ ವರೆಗಿನ ವಹಿವಾಟುಗಳಿಗೆ ನಗದನ್ನು ಬಳಸುವುದಕ್ಕೆ ಜನ ಆದ್ಯತೆ ನೀಡುತ್ತಿದ್ದಾರೆ ಎಂದು ಅದು ಹೇಳಿದೆ.

ಸಂಕ್ಷಿಪ್ತ ಸುದ್ದಿ

ಸಿಂಗಪುರ: ಮಕ್ಕಳಲ್ಲಿ ಹೆಚ್ಚಿದ ಎಂಐಎಸ್–ಸಿ ಸೋಂಕು

ಸಿಂಗಪುರ (ಪಿಟಿಐ): ಸಿಂಗಪುರದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತಿವೆ. ಈ ನಡುವೆ ಮಕ್ಕಳಲ್ಲಿ ಸೋಂಕು ಸಂಬಂಧಿಸಿದ ಅಪರೂಪದ ಬಹುಅಂಗಗಳ ಉರಿಯೂತದ ಲಕ್ಷಣ (ಎಂಎಸ್‌ಐ–ಸಿ) ಪ್ರಕರಣಗಳು ಕಾಣಿಸಿಕೊಳ್ಳುತ್ತಿವೆ.

'ಈವರೆಗೆ 8,000 ಮಕ್ಕಳಲ್ಲಿ ಕೋವಿಡ್ ದೃಢಪಟ್ಟಿದ್ದು, ಈ ಪೈಕಿ ನಾಲ್ವರಲ್ಲಿ ಎಂಎಸ್‌ಐ–ಸಿ ಸೋಂಕಿನ ಸ್ವರೂಪ ಕಾಣಿಸಿಕೊಂಡಿದೆ. ಇದು ಸಾಂಕ್ರಾಮಿಕದ ಆರಂಭದಿಂದಲೇ ಕಾಣಿಸಿಕೊಳ್ಳುತ್ತಿದೆ. ಈ ನಾಲ್ವರು ಮಕ್ಕಳು ಎರಡು ತಿಂಗಳಿಂದ 8 ತಿಂಗಳಿನ ಒಳಗಿನವರು' ಎಂದು ಆರೋಗ್ಯ ಸಚಿವಾಲಯವು ಹೇಳಿಕೆ ಬಿಡುಗಡೆ ಮಾಡಿದೆ.

ಮೆಕ್ಸಿಕೊ: ಸರಣಿ ಅಪಘಾತ, 19 ಸಾವು

ಮೆಕ್ಸಿಕೊ (ಎಪಿ): ಮಧ್ಯ ಮೆಕ್ಸಿಕೊದ ಹೆದ್ದಾರಿಯಲ್ಲಿ ಶನಿವಾರ ಟ್ರಕ್‌ವೊಂದು ಒಂದು ಟೋಲ್ ಬೂತ್ ಮತ್ತು ಇತರ ಆರು ವಾಹನಗಳಿಗೆ ಡಿಕ್ಕಿ ಹೊಡೆದಿದ್ದು, ಕನಿಷ್ಠ 19 ಮಂದಿ ಮೃತಪಟ್ಟಿದ್ದಾರೆ. ಮೂವರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಮೆಕ್ಸಿಕೊ ನಗರವನ್ನು ಪ್ಯೂಬ್ಲಾ ರಾಜ್ಯದ ಜೊತೆಗೆ ಸಂಪರ್ಕಿಸುವ ಹೆದ್ದಾರಿಯಲ್ಲಿ ಘಟನೆ ನಡೆದಿದೆ.

ಸೌರ ವಿದ್ಯುತ್ ಗ್ರಿಡ್: ಭಾರತ, ಬ್ರಿಟನ್‌ಗೆ ಅಮೆರಿಕ ಬೆಂಬಲ

ಲಂಡನ್ (ಪಿಟಿಐ): ಗ್ಲಾಸ್ಗೋದಲ್ಲಿ ನಡೆದ ಹವಾಮಾನ ಶೃಂಗಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಚಾಲನೆ ನೀಡಿದ ಬ್ರಿಟನ್–ಭಾರತ ಸಹಯೋಗದ ಸೌರ ವಿದ್ಯುತ್ ಗ್ರಿಡ್ ಯೋಜನೆಗೆ ಅಮೆರಿಕ ಕೂಡ ಪಾಲುದಾರ ದೇಶವಾಗಲಿದೆ.

ಈ ಯೋಜನೆಯಲ್ಲಿ ಪಾಲುದಾರರಾಗಲು ನಾವು ಉತ್ಸುಕರಾಗಿದ್ದೇವೆ ಎಂದು ಅಮೆರಿಕದ ಇಂಧನ ಕಾರ್ಯದರ್ಶಿ ಜೆನ್ನಿಫರ್ ಗ್ರ್ಯಾನ್‌ಹೋಮ್ ಅವರು ಈಚೆಗೆ ನಡೆದ ಸಭೆಯಲ್ಲಿ ಹೇಳಿದ್ದರು.

ಡೇವೋನ್ ಕಾನ್ವೆ, ನಾಯಕ ಕೇನ್ ವಿಲಿಯಮ್ಸನ್ ಉತ್ತಮ ಜೊತೆಯಾಟ: ಅಫ್ಗಾನಿಸ್ತಾನಕ್ಕೆ ಸೋಲು

ಸೆಮಿಗೆ ಕಿವೀಸ್; ಭಾರತದ ಕನಸು ಭಗ್ನ

ಅಬುಧಾಬಿ (ಎಎಫ್‌ಪಿ): ಟ್ವೆಂಟಿ-20 ವಿಶ್ವಕಪ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸುವ ಭಾರತದ ಕನಸು ಭಗ್ನಗೊಂಡಿದೆ. ಅಫ್ಗಾನಿಸ್ತಾನದ ವಿರುದ್ಧ ಭಾನುವಾರ ನಡೆದ ಪಂದ್ಯದಲ್ಲಿ ಜಯ ಗಳಿಸಿದ ನ್ಯೂಜಿಲೆಂಡ್ ನಾಲ್ಕರ ಘಟ್ಟ ಪ್ರವೇಶಿಸಿತು. ಇದರಿಂದಾಗಿ ಭಾರತ ತಂಡ ಟೂರ್ನಿಯಿಂದ ಹೊರಬಿದ್ದಿತು.

ಅಫ್ಗಾನಿಸ್ತಾನ ಮುಂದಿಟ್ಟ 125 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ನ್ಯೂಜಿಲೆಂಡ್ 11 ಎಸೆತ ಉಳಿದಿರುವಾಗಲೇ ಕೇವಲ ಎರಡು ವಿಕೆಟ್ ಕಳೆದುಕೊಂಡು ದಡ ಸೇರಿತು. 57 ರನ್ ಗಳಿಸುವಷ್ಟರಲ್ಲಿ ತಂಡ ಎರಡು ವಿಕೆಟ್ ಕಳೆದುಕೊಂಡಿತ್ತು. ಆದರೆ ನಾಯಕ ಕೇನ್ ವಿಲಿಯಮ್ಸನ್ ಮತ್ತು ಡೇವೋನ್ ಕಾನ್ವೆ ಮುರಿಯದ ಮೂರನೇ ವಿಕೆಟ್‌ಗೆ 68 ರನ್ ಸೇರಿಸಿ ಸುಲಭ ಜಯಕ್ಕೆ ಕಾರಣರಾದರು.

ನಜೀಬುಲ್ಲ ಜದ್ರಾನ್ ಏಕಾಂಗಿ ಹೋರಾಟ: ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ಅಫ್ಗಾನಿಸ್ತಾನದ ಯೋಜನೆಗಳು ಬುಡಮೇಲಾದವು. ಟ್ರೆಂಟ್ ಬೌಲ್ಟ್ ನೇತೃತ್ವದ ಬೌಲಿಂಗ್ ವಿಭಾಗದ ಮೊನಚಾದ ದಾಳಿಗೆ ನಲುಗಿದ ತಂಡಕ್ಕೆ 124 ರನ್ ಗಳಿಸಲಷ್ಟೇ ಸಾಧ್ಯವಾಯಿತು.

ಏಕಾಂಗಿ ಹೋರಾಟ ನಡೆಸಿದ ನಜೀಬುಲ್ಲ ಜದ್ರಾನ್ 48 ಎಸೆತಗಳಲ್ಲಿ 73 ರನ್ ಗಳಿಸಿದರು. ಆದರೂ ತಂಡಕ್ಕೆ ಸವಾಲಿನ ಮೊತ್ತ ಪೇರಿಸಲು ಸಾಧ್ಯವಾಗಲಿಲ್ಲ.

ಅಗ್ರ ಕ್ರಮಾಂಕದ ಬ್ಯಾಟರ್‌ಗಳಿಗೆ ನ್ಯೂಜಿಲೆಂಡ್ ವೇಗಿಗಳು ಆಘಾತ ನೀಡಿದರು. ಆ್ಯಡಂ ಮಿಲ್ನೆ ತಮ್ಮ ಮೊದಲ ಓವರ್‌ನಲ್ಲೇ ಮೊಹಮ್ಮದ್ ಶಹಜಾದ್ ಅವರನ್ನು ವಾಪಸ್ ಕಳುಹಿಸಿದರು. ಅವರ ಜೊತೆ ಇನಿಂಗ್ಸ್ ಆರಂಭಿಸಿದ ಹಜರತ್ ಉಲ್ಲಾ ಜಜಾಯ್ ಅವರು ಬೌಲ್ಟ್ ಎಸೆತದಲ್ಲಿ ವಿಕೆಟ್ ಕಳೆದುಕೊಂಡರೆ ರಹಮಾನುಲ್ಲ ಗುರ್ಬಜ್ ಅವರನ್ನು ಟಿಮ್ ಸೌಥಿ ವಾಪಸ್ ಕಳುಹಿಸಿದರು.

ಜದ್ರಾನ್ ಮತ್ತು ಗುಲ್ಬದಿನ್ ನಯೀಬ್ ತಿರುಗೇಟು ನೀಡಲು ಪ್ರಯತ್ನಿಸಿದರು. ಜಿಮ್ಮಿ ನೀಶಮ್ ಅವರನ್ನು ಎರಡು ಬಾರಿ ಬೌಂಡರಿ ಗೆರೆ ದಾಟಿಸಿದ ಜದ್ರಾನ್ ಭರವಸೆ ಮೂಡಿಸಿದರು. ಆದರೆ ನಯೀಬ್ ಔಟಾದಾಗ ತಂಡಕ್ಕೆ ಮತ್ತೆ ಪೆಟ್ಟು ಬಿತ್ತು. ನಂತರ ಜದ್ರಾನ್ ಮತ್ತು ನಾಯಕ ಮೊಹಮ್ಮದ್ ನಬಿ ಆಟ ಕಳೆಕಟ್ಟಿತು. ಅವರಿಬ್ಬರು ಸ್ಪಿನ್ನರ್ ಮತ್ತು ವೇಗಿಗಳನ್ನು ದಿಟ್ಟವಾಗಿ ಎದುರಿಸಿದರು.

ಮಿಚೆಲ್ ಸ್ಯಾಂಟನರ್ ಓವರ್‌ನಲ್ಲಿ ಎರಡು ಸಿಕ್ಸರ್ ಸಿಡಿಸಿದ ಜದ್ರಾನ್ 33 ಎಸೆತಗಳಲ್ಲಿ ಅರ್ಧಶತಕ ಪೂರೈಸಿದರು. ಇದು, ಈ ವಿಶ್ವಕಪ್‌ನಲ್ಲಿ ಅವರ ಎರಡನೇ ಮತ್ತು ಒಟ್ಟಾರೆ ಆರನೇ ಅರ್ಧಶತಕ. ನಬಿ ವಿಕೆಟ್ ಕಬಳಿಸಿದ ಸೌಥಿ 59 ರನ್‌ಗಳ ಜೊತೆಯಾಟ ಮುರಿದರು.

ಬೌಂಡರಿ ಗೆರೆ ಬಳಿ ನೀಶಮ್ ಡೈವ್ ಮಾಡಿ ಪಡೆದ ಮೋಹಕ ಕ್ಯಾಚ್‌ಗೆ ಜದ್ರಾನ್ ಬಲಿಯಾದರು. ನಂತರ ಅಫ್ಗಾನ್ ಬ್ಯಾಟರ್‌ಗಳ ಹೋರಾಟ ನಡೆಯಲಿಲ್ಲ.



ಕೇನ್ ವಿಲಿಯಮ್ಸನ್ ಬ್ಯಾಟಿಂಗ್ ವೈಭವ –ಎಎಫ್‌ಪಿ ಚಿತ್ರ

ಸ್ಕೋರ್ ಕಾರ್ಡ್

ಅಫ್ಗಾನಿಸ್ತಾನ 8ಕ್ಕೆ 124 (20 ಓವರ್)
ಜಜಾಯ್ ಸಿ ಸ್ಯಾಂಟನರ್ ಬಿ ಬೌಲ್ಟ್ 2 (4 ಎ), ಶೆಹಜಾದ್ ಸಿ ಕಾನ್ವೆ ಬಿ ಮಿಲ್ನೆ 4 (11 ಎ, 4x1), ಗುರ್ಬಜ್ ಎಲ್‌ಬಿಡಬ್ಲ್ಯು ಬಿ ಸೌಥಿ 6 (9 ಎ, 4x1), ನಯೀಬ್ ಬಿ ಸೋಧಿ 15 (18 ಎ, 4x1), ಜದ್ರಾನ್ ಸಿ ನೀಶಮ್ ಬಿ ಬೋಲ್ಟ್ 73 (48 ಎ, 4x6, 6x3), ನಬಿ ಸಿ ಮತ್ತು ಬಿ ಸೌಥಿ 14 (20 ಎ) ಜನ್ನತ್ ಸಿ ಸೋಧಿ ಬಿ ಬೌಲ್ಟ್ 2 (2 ಎ), ರಶೀದ್ ಸಿ ವಿಲಿಯಮ್ಸನ್ ಬಿ ನೀಶಮ್ 3 (7 ಎ), ಮುಜೀಬ್ ಔಟಾಗದೆ 0 (1 ಎ)
ಇತರೆ (ಬೈ 1, ಲೆಗ್‌ಬೈ 1, ವೈಡ್ 3) 5
ವಿಕೆಟ್ ಪತನ: 1-8 (ಮೊಹಮ್ಮದ್ ಶೆಹಜಾದ್, 2.2), 2-12 (ಹಜರತ್ ಉಲ್ಲಾ ಜಜಾಯ್, 3.1), 3-19 (ರಹಮಾನುಲ್ಲ ಗುರ್ಬಜ್, 5.1), 4-56 (ಗುಲ್ಬದಿನ್ ನಯೀಬ್, 9.6), 5-115 (ಮೊಹಮ್ಮದ್ ನಬಿ, 17.6), 6-119 (ನಜೀಬುಲ್ಲ ಜದ್ರಾನ್, 18.2), 7-121 (ಕರೀಂ ಜನ್ನತ್, 18.4), 8-124 (ರಶೀದ್ ಖಾನ್, 19.6)
ಬೌಲಿಂಗ್: ಟಿಮ್ ಸೌಥಿ 4–0–24–2, ಟ್ರೆಂಟ್ ಬೌಲ್ಟ್ 4–0–17–3, ಆ್ಯಡಂ ಮಿಲ್ನೆ 4–0–17–1, ಜೇಮ್ಸ್ ನೀಶಮ್ 4–0–24–1, ಮಿಚೆಲ್ ಸ್ಯಾಂಟನರ್ 2–0–27–0, ಇಶ್ ಸೋಧಿ 2–0–13–1

ನ್ಯೂಜಿಲೆಂಡ್ 2 ವಿಕೆಟ್‌ಗಳಿಗೆ 125 (18.1 ಓವರ್)
ವಾಗಪ್ಟಿಲ್ ಬಿ ರಶೀದ್ 28 (23 ಎ, 4x4), ಮಿಚೆಲ್ ಸಿ ಶೆಹಜಾದ್ ಬಿ ಮುಜೀಬ್ 17 (12 ಎ, 4x3), ವಿಲಿಯಮ್ಸನ್ ಔಟಾಗದೆ 40 (42 ಎ, 4x3), ಕಾನ್ವೆ ಔಟಾಗದೆ 36 (32 ಎ, 4x4)
ಇತರೆ (ಲೆಗ್ ಬೈ 2, ವೈಡ್ 2) 4
ವಿಕೆಟ್ ಪತನ: 1-26 (ಡ್ಯಾರಿಲ್ ಮೆಚೆಲ್, 3.1), 2-57 (ಮಾರ್ಟಿನ್ ಗಪ್ಟಿಲ್, 8.5
ಬೌಲಿಂಗ್: ಮೊಹಮ್ಮದ್ ನಬಿ 4–0–26–0, ಮುಜೀಬ್ ಉರ್ ರಹಮಾನ್ 4–0–31–1, ನವೀನ್ ಉಲ್ ಹಕ್ 2–0–16–0, ಹಮೀದ್ ಹಸನ್ 3–0–14–0, ರಶೀದ್ ಖಾನ್ 4–0–27–1

ಫಲಿತಾಂಶ: ನ್ಯೂಜಿಲೆಂಡ್‌ಗೆ 8 ವಿಕೆಟ್‌ಗಳ ಜಯ



ಟ್ರೆಂಟ್ ಬೌಲ್ಟ್ –ಎಎಫ್‌ಪಿ ಚಿತ್ರ



ಶೋಯಿಬ್ ಮಲಿಕ್ ಅವರ ಬ್ಯಾಟಿಂಗ್ ಶೈಲಿ –ಎಎಫ್‌ಪಿ ಚಿತ್ರ

ಪಾಕಿಸ್ತಾನ ತಂಡಕ್ಕೆ ಭರ್ಜರಿ ಗೆಲುವು

ಶಾರ್ಜಾ (ಎಎಫ್‌ಪಿ): ಸೆಮಿಫೈನಲ್‌ನಲ್ಲಿ ಸ್ಥಾನ ಭದ್ರಪಡಿಸಿಕೊಂಡಿರುವ ಪಾಕಿಸ್ತಾನ ಸೂಪರ್ 12ರ ಹಂತದ ತನ್ನ ಕೊನೆಯ ಪಂದ್ಯದಲ್ಲಿ ಭರ್ಜರಿ ಜಯ ಗಳಿಸಿತು. ಭಾನುವಾರ ರಾತ್ರಿ ನಡೆದ ಪಂದ್ಯದಲ್ಲಿ ತಂಡ 72 ರನ್‌ಗಳಿಂದ ಸ್ಕಾಟ್ಲೆಂಡ್‌ಗೆ ಸೋಲುಣಿಸಿತು.

ಮೊದಲು ಬ್ಯಾಟಿಂಗ್ ಮಾಡಿದ ಪಾಕಿಸ್ತಾನ ನಾಲ್ಕು ವಿಕೆಟ್‌ಗಳಿಗೆ 189 ರನ್ ಗಳಿಸಿತು. ಗುರಿ ಬೆನ್ನತ್ತಿದ ಸ್ಕಾಟ್ಲೆಂಡ್ ಆರು ವಿಕೆಟ್‌ಗಳಿಗೆ 117 ರನ್ ಗಳಿಸಿ ಸೋಲೊಪ್ಪಿಕೊಂಡಿತು. ರಿಚಿ ಬೆರಿಂಗ್ಟನ್ (54; 37 ಎಸೆತ, 4 ಬೌಂಡರಿ, 1 ಸಿಕ್ಸರ್) ಒಬ್ಬರೇ ದಿಟ್ಟ ಆಟವಾಡಿದರು. ಈ ಗೆಲುವಿನೊಂದಿಗೆ ಪಾಕಿಸ್ತಾನ ಈ ಬಾರಿ ಟೂರ್ನಿಯ ಸೂಪರ್ 12 ಹಂತದ ಎಲ್ಲ ಪಂದ್ಯಗಳನ್ನು ಗೆದ್ದ ಮೊದಲ ತಂಡ ಎನಿಸಿಕೊಂಡಿತು.

ಟಾಸ್ ಗೆದ್ದು ಬ್ಯಾಟಿಂಗ್ ಆಯ್ದುಕೊಂಡ ತಂಡದ ಆರಂಭಿಕ ಬ್ಯಾಟರ್ ಮೊಹಮ್ಮದ್ ರಿಜ್ವಾನ್ ಬೇಗನೇ ಮರಳಿದರು. ತಂಡದ ಮೊತ್ತ 35 ರನ್ ಆಗಿದ್ದಾಗ ಹಂಜ ತಾಹಿರ್ ಎಸೆತದಲ್ಲಿ ರಿಜ್ವಾನ್ ಔಟಾದರು. ಫಕ್ರ್ ಜಮಾನ್ ಅವರಿಗೂ ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ಉಳಿಯಲು ಆಗಲಿಲ್ಲ.

ಈ ಸಂದರ್ಭದಲ್ಲಿ ಇನಿಂಗ್ಸ್ ಮುನ್ನಡೆಸುವ ಹೊಣೆ ಹೊತ್ತ ನಾಯಕ ಬಾಬರ್ ಆಜಂ (66; 47 ಎಸೆತ, 5 ಬೌಂಡರಿ, 3 ಸಿಕ್ಸರ್) ಅವರು ಮೊಹಮ್ಮದ್ ಹಫೀಜ್ ಜೊತೆಗೂಡಿ ಭರ್ಜರಿ ಬ್ಯಾಟಿಂಗ್ ಪ್ರದರ್ಶಿಸಿದರು. ಮೂರನೇ ವಿಕೆಟ್‌ಗೆ ಅವರಿಬ್ಬರು 53 ರನ್‌ಗಳನ್ನು ಸೇರಿಸಿದರು.

ಹಫೀಜ್ ಔಟಾದ ನಂತರ ನಾಯಕನ ಜೊತೆಗೂಡಿದ ಶೋಯಿಬ್ ಮಲಿಕ್ ಸ್ಫೋಟಕ ಬ್ಯಾಟಿಂಗ್ ಪ್ರದರ್ಶಿಸಿದರು. ಕೇವಲ 18 ಎಸೆತಗಳಲ್ಲಿ 54 ರನ್ ಗಳಿಸಿದ ಅವರ ಇನಿಂಗ್ಸ್‌ನಲ್ಲಿ ಆರು ಸಿಕ್ಸರ್‌ಗಳಿದ್ದವು. ಬೌಲರ್‌ಗಳನ್ನು ಸತತವಾಗಿ ಕಾಡಿದರು. ಸ್ಟ್ಯಾಂಡ್‌ನಲ್ಲಿದ್ದ ಪತ್ನಿ ಸಾನಿಯಾ ಮಿರ್ಜಾ ಸಂಭ್ರಮಿಸಿದರು.

ಸಂಕ್ಷಿಪ್ತ ಸ್ಕೋರು: ಪಾಕಿಸ್ತಾನ: 20 ಓವರ್‌ಗಳಲ್ಲಿ 4ಕ್ಕೆ 189 (ಮೊಹಮ್ಮದ್ ರಿಜ್ವಾನ್ 15, ಬಾಬರ್ ಆಜಂ 66, ಫಕ್ರ್ ಜಮಾನ್ 8, ಮೊಹಮ್ಮದ್ ಹಫೀಜ್ 31, ಶೋಯೆಬ್ ಮಲಿಕ್ ಔಟಾಗದೆ 54, ಆಸಿಫ್ ಅಲಿ ಔಟಾಗದೆ 5; ಹಂಜ ತಾಹಿರ್ 24ಕ್ಕೆ1, ಶಫಿಯಾನ್ ಷರೀಫ್ 41ಕ್ಕೆ1, ಕ್ರಿಸ್ ಗ್ರೀವ್ಸ್ 43ಕ್ಕೆ2); ಸ್ಕಾಟ್ಲೆಂಡ್: 20 ಓವರ್‌ಗಳಲ್ಲಿ 6ಕ್ಕೆ 117 (ಜಾರ್ಜ್ ಮುನ್ಸಿ 17, ರಿಚಿ ಬೆರಿಂಗ್ಟನ್ 54, ಮೈಕೆಲ್ ಲೀಸ್ಕ್ 14; ಶಹೀನ್ ಶಾ ಅಫ್ರಿದಿ 24ಕ್ಕೆ1, ಹ್ಯಾರಿಸ್ ರವೂಫ್ 27ಕ್ಕೆ1, ಹಸನ್ ಅಲಿ 33ಕ್ಕೆ1, ಶಾದಬ್ ಖಾನ್ 34ಕ್ಕೆ2). ಫಲಿತಾಂಶ: ಪಾಕಿಸ್ತಾನಕ್ಕೆ 72 ರನ್‌ಗಳ ಜಯ.

ಸೆಮಿಫೈನಲ್ ಹಣಾಹಣಿ

ದಿನಾಂಕ	ತಂಡಗಳು	ಸಮಯ	ಸ್ಥಳ
ನವೆಂಬರ್ 10	ಇಂಗ್ಲೆಂಡ್–ನ್ಯೂಜಿಲೆಂಡ್	ರಾ.7.30	ಅಬುಧಾಬಿ
ನವೆಂಬರ್ 11	ಪಾಕಿಸ್ತಾನ–ಆಸ್ಟ್ರೇಲಿಯಾ	ರಾ.7.30	ದುಬೈ

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ನೆಟ್ ರನ್‌ರೇಟ್	ಪಾಯಿಂಟ್ಸ್
ಗುಂಪು 1					
ಇಂಗ್ಲೆಂಡ್	5	4	1	+2.464	8
ಆಸ್ಟ್ರೇಲಿಯಾ	5	4	1	+1.216	8
ದಕ್ಷಿಣ ಆಫ್ರಿಕಾ	5	4	1	+0.739	8
ಶ್ರೀಲಂಕಾ	5	2	3	-0.269	4
ವೆಸ್ಟ್ ಇಂಡೀಸ್	5	1	4	-1.641	2
ಬಾಂಗ್ಲಾದೇಶ	5	0	5	-2.383	0
ಗುಂಪು 2					
ಪಾಕಿಸ್ತಾನ	5	5	0	+1.583	10
ನ್ಯೂಜಿಲೆಂಡ್	5	4	1	+1.162	8
ಭಾರತ	4	2	2	+1.619	4
ಅಫ್ಗಾನಿಸ್ತಾನ	5	2	3	+1.053	4
ನಮೀಬಿಯಾ	4	1	3	-1.851	2
ಸ್ಕಾಟ್ಲೆಂಡ್	5	0	5	-3.543	0

* ಭಾನುವಾರದ ಪಂದ್ಯಗಳ ಅಂತ್ಯಕ್ಕೆ

ಟಿಟಿ: ಪ್ರಶಸ್ತಿ ಗೆದ್ದ ಅರ್ಚನಾ–ಮಣಿಕಾ

ಲಾಸ್ಕೊ, ಸ್ಲೊವೇನಿಯಾ (ಪಿಟಿಐ): ಅಮೋಘ ಸಾಮರ್ಥ್ಯ ತೋರಿದ ಭಾರತದ ಅರ್ಚನಾ ಕಾಮತ್ ಹಾಗೂ ಮಣಿಕಾ ಬಾತ್ರಾ ಅವರು ಇಲ್ಲಿ ನಡೆದ ಡಬ್ಲ್ಯುಟಿಟಿ ಕಂಟೆಂಡರ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿದರು.

ಕರ್ನಾಟಕದ ಅರ್ಚನಾ ಹಾಗೂ ಮಣಿಕಾ ಮಹಿಳಾ ಡಬಲ್ಸ್ ವಿಭಾಗದಲ್ಲಿ ಜೋಡಿಯಾಗಿ ಮೊದಲ ಬಾರಿ ಪ್ರಶಸ್ತಿಗೆ ಮುತ್ತಿಕ್ಕಿದ್ದಾರೆ. ಫೈನಲ್ ಪಂದ್ಯದಲ್ಲಿ ಅವರು 11-3, 11-8, 12-10ರಿಂದ ಪ್ಯುರ್ಟೊ ರಿಕೊದ ಮೆಲಾನಿ ಡಿಯಾಜ್ ಮತ್ತು ಆ್ಯಡ್ರಿಯಾನಾ ಡಿಯಾಜ್ ಅವರನ್ನು ಸೋಲಿಸಿದರು.

ಸೆಮಿಫೈನಲ್‌ನಲ್ಲಿ ಅರ್ಚನಾ ಹಾಗೂ ಮಣಿಕಾ 11-6, 8-11, 11-6, 5-11, 11-8ರಿಂದ ಚೀನಾದ ಯಿದಿ ವಾಂಗ್ ಮತ್ತು ವೀಶಾನ್ ಲಿಯು ಅವರನ್ನು ಸೋಲಿಸಿದ್ದರು.

ಹೈದರಾಬಾದ್ ರೇಸ್

ವಾಚ್ ಮೈ ಸ್ಟ್ರೈಡ್ ಗೆಲ್ಲುವ ನಿರೀಕ್ಷೆ

ಅಮರನಾಥ್ ಗುಪ್ತ ಮೆಮೋರಿಯಲ್ ಕಪ್ ಸೋಮವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ವಾಚ್ ಮೈ ಸ್ಟ್ರೈಡ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 12.50ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಅಮಾಲ್ಫಿಟಾ 5, ಫ್ಯೂರಿಯಸ್ ಫನ್ 1, ಹರ್ರಿಕೇನ್ 7
2ನೇ ರೇಸ್: ಕಾಸ್ಮಿಕೊ 2, ಶೋ ಮಿ ಯುವರ್ ವಾಕ್ 3, ನೋಲನ್ 8
3ನೇ ರೇಸ್: ಅನ್‌ಸಂಗ್ ಹೀರೊ 4, ನರಕಾಮಿಸೀ 6, ಬೈ ದಿ ಬೇ 2
4ನೇ ರೇಸ್: ಬ್ಲೂ ಆರಿಜನ್ 2, ಫ್ಲೈಯಿಂಗ್ ಸ್ಕಾಟ್ಸ್‌ಮ್ಯಾನ್ 3, ಬರ್ನಿನಿ 8
5ನೇ ರೇಸ್: ವಾಚ್ ಮೈ ಸ್ಟ್ರೈಡ್ 10, ಬ್ಯುರಾನೊ 11, ಮಾರ್ಕೆಟ್ ಕಿಂಗ್ 3
6ನೇ ರೇಸ್: ಬ್ರಿಲಿಯಂಟ್ ವ್ಯೂ 1, ಮಂಡಾಲ ಬೇ 3, ಬೋಲ್ಡ್ ಬಿಡ್ಡಿಂಗ್ 4
7ನೇ ರೇಸ್: ಐಸಿಕಲ್ 10, ಸೋಲೊಯಿಸ್ಟ್ 5, ಅಕಿಡೊ 2
8ನೇ ರೇಸ್: ಸ್ಟಾರ್ ಕ್ರ್ಯೂಯ್ 3, ಸಿಲ್ಕ್ 4, ವಿನ್ನಿಂಗ್ ಪ್ಲೇಯರ್ 5

ಉತ್ತಮ ಬೆಟ್: ಐಸಿಕಲ್

ಜಾಕ್‌ಪಾಟ್	1ನೇ ಮಿನಿ ಜಾಕ್‌ಪಾಟ್	2ನೇ ಮಿನಿ ಜಾಕ್‌ಪಾಟ್
4,5,6,7,8	2,3,4,5	5,6,7,8
1ನೇ ಟ್ರಿಬಲ್	**2ನೇ ಟ್ರಿಬಲ್**	**3ನೇ ಟ್ರಿಬಲ್**
1,2,3	3,4,5	6,7,8

ಭಾರತಕ್ಕೆ ನಮೀಬಿಯಾ ಎದುರಾಳಿ

ದುಬೈ (ಪಿಟಿಐ): ಸೆಮಿಫೈನಲ್ ಪ್ರವೇಶಿಸಲು ವಿಫಲವಾಗಿರುವ ಭಾರತ ತಂಡ ಸೂಪರ್ 12 ಹಂತದ ಕೊನೆಯ ಪಂದ್ಯದಲ್ಲಿ ಸೋಮವಾರ ನಮೀಬಿಯಾವನ್ನು ಎದುರಿಸಲಿದೆ.

ಇದು ರವಿಶಾಸ್ತ್ರಿ ಅವರಿಗೆ ಕೋಚಿಂಗ್ ಹುದ್ದೆಯ ಕೊನೆಯ ಪಂದ್ಯವಾಗಲಿದ್ದು ಟ್ವೆಂಟಿ-20 ನಾಯಕನಾಗಿ ವಿರಾಟ್ ಕೊಹ್ಲಿ ಅವರಿಗೂ ಕೊನೆಯ ಪಂದ್ಯವಾಗಿದೆ. ಹೀಗಾಗಿ ಜಯದೊಂದಿಗೆ ಅಭಿಯಾನಕ್ಕೆ ತೆರೆ ಎಳೆಯಲು ತಂಡ ಪ್ರಯತ್ನಿಸಲಿದೆ. ಭಾನುವಾರ ಸಂಜೆ ನ್ಯೂಜಿಲೆಂಡ್ ಜಯ ಸಾಧಿಸುತ್ತಿದ್ದಂತೆ ಭಾರತ ಪಾಳಯದಲ್ಲಿ ನಿರಾಸೆಯ ಕಾರ್ಮೋಡ ಆವರಿಸಿತು. ಸೋಮವಾರದ ಪಂದ್ಯಕ್ಕೆ ನಡೆಸಲು ಉದ್ದೇಶಿಸಿದ್ದ ತಂಡದ ಅಭ್ಯಾಸವನ್ನು ರದ್ದು ಮಾಡಿರುವುದಾಗಿ ಬಿಸಿಸಿಐ ತಿಳಿಸಿತು.

2012ರ ನಂತರ ಭಾರತ ಇದೇ ಮೊದಲ ಬಾರಿ ವಿಶ್ವಕಪ್ ಸೆಮಿಫೈನಲ್ ಹಂತಕ್ಕೇರದೆ ವಾಪಸಾಗುತ್ತಿದೆ. ಪಂದ್ಯದಲ್ಲಿ ರಾಹುಲ್ ಚಾಹರ್ ಅವರಿಗೆ ಅವಕಾಶ ನೀಡುವ ಸಾಧ್ಯತೆ ಇದ್ದು ಇಶಾನ್ ಕಿಶನ್ ಇನಿಂಗ್ಸ್ ಆರಂಭಿಸುವ ಸಾಧ್ಯತೆ ಇದೆ.
ಪಂದ್ಯ ಆರಂಭ: ರಾತ್ರಿ 7.30 (ಭಾರತೀಯ ಕಾಲಮಾನ)
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್



ವಿರಾಟ್ ಕೊಹ್ಲಿ –ಎಎಫ್‌ಪಿ ಚಿತ್ರ

ಭಾರತ ತಂಡದ ಮೇಲೆ ಟ್ರೋಲ್ ದಾಳಿ

ಟೂರ್ನಿಯಿಂದ ಹೊರಬಿದ್ದ ಭಾರತ ತಂಡದ ಮೇಲೆ ಕ್ರಿಕೆಟ್ ಪ್ರಿಯರು ಟ್ರೋಲ್‌ಗಳ ಮೂಲಕ ದಾಳಿ ಮಾಡಿದ್ದಾರೆ. ಹಳೆಯ ಹಿಂದಿ ಸಿನಿಮಾಗಳ ದೃಶ್ಯಗಳನ್ನು ಬಳಸಿಕೊಂಡು ಅದನ್ನು ಭಾರತ, ಅಫ್ಗಾನಿಸ್ತಾನ ಮತ್ತು ನ್ಯೂಜಿಲೆಂಡ್ ತಂಡಗಳಿಗೆ ಹೋಲಿಸಿ ಟ್ವಿಟರ್‌ನಲ್ಲಿ ಕೊಹ್ಲಿ ಬಳಗವನ್ನು ಗೇಲಿ ಮಾಡಲಾಗಿದೆ. 'ನಿಮ್ಮ ಪಂದ್ಯವನ್ನು ನೀವೇ ಗೆದ್ದುಕೊಳ್ಳಿ' ಎಂದು ಬರೆದಿರುವ ಫಲಕವನ್ನು ರಶೀದ್ ಖಾನ್ ಹಿಡಿದಿರುವಂತೆ ಇರುವ ಚಿತ್ರವನ್ನು ಒಬ್ಬರು ಪೋಸ್ಟ್ ಮಾಡಿದ್ದಾರೆ.

ಭಾರತ ತಂಡ ಮುಂಬೈ ವಿಮಾನನಿಲ್ದಾಣಕ್ಕೆ ತೆರಳುವ ಟಿಕೆಟ್ ಗಳಿಸುವಲ್ಲಿ ಯಶಸ್ವಿಯಾಗಿದೆ ಎಂಬ ಬರಹವಿರುವ ಚಿತ್ರ ಬಳಸಿ ತಂಡದ ಪ್ರಮುಖ ಆಟಗಾರರು ವಿಮಾನದ ಮೇಲೇರಿರುವ ಚಿತ್ರವೂ ಇದೆ.

ಟ್ವಿಟರ್‌ನ ಪ್ರೊಫೈಲ್ ಚಿತ್ರವಾಗಿ ಅಫ್ಗಾನಿಸ್ತಾನ ತಂಡವನ್ನು ಬಳಸಿಕೊಂಡಿದ್ದ ಭಾರತದ ಕ್ರಿಕೆಟ್ ಪ್ರೇಮಿಗಳಿಗಾಗಿ ಎರಡು ನಿಮಿಷಗಳ ಮೌನಾಚರಣೆ ಎಂಬ ಬರಹ ಒಳಗೊಂಡ ಚಿತ್ರವೂ ತುಂಬ ಟ್ರೋಲ್ ಆಗಿದೆ.

ಬೌಲಿಂಗ್ ಕೋಚ್ ಭರತ್‌ಗೆ ವಿದಾಯದ ಪಂದ್ಯ

ದುಬೈ: ಭಾರತ ಮತ್ತು ನಮೀಬಿಯಾ ನಡುವಿನ ಸೋಮವಾರದ ಹಣಾಹಣಿ ವಿರಾಟ್ ಕೊಹ್ಲಿ ಬಳಗದ ಬೌಲಿಂಗ್ ಕೋಚ್ ಭರತ್ ಅರುಣ್ ಅವರಿಗೆ ವಿದಾಯ ಪಂದ್ಯ ಆಗಲಿದೆ.

ಈ ಹಿನ್ನೆಲೆಯಲ್ಲಿ ಭಾನುವಾರ ಮಾತನಾಡಿದ ಅವರು ಟಾಸ್ ಸೋತಿರುವುದು ಮತ್ತು ತಿಂಗಳುಗಟ್ಟಲೆ ಬಯೊಬಬಲ್‌ನಲ್ಲಿ ಕಳೆದುದು ವಿಶ್ವಕಪ್‌ನಲ್ಲಿ ಭಾರತದ ಸೋಲಿಗೆ ಕಾರಣವಾಯಿತು ಎಂದು ಹೇಳಿದ್ದಾರೆ.



ಭರತ್ ಅರುಣ್–ಪಿಟಿಐ ಚಿತ್ರ

ಯುಎಇಯ ಕ್ರೀಡಾಂಗಣಗಳಲ್ಲಿ ಟಾಸ್ ಕೂಡ ಮಹತ್ವ ಪಡೆಯುತ್ತದೆ. ಭಾರತ ತಂಡ ಮೊದಲು ಬ್ಯಾಟಿಂಗ್ ಮಾಡುವುದಕ್ಕೂ ನಂತರ ಮಾಡುವುದಕ್ಕೂ ವ್ಯತ್ಯಾಸವಿದೆ ಎಂದು ಅವರು ಅಭಿಪ್ರಾಯಪಟ್ಟರು.

ಯಜುವೇಂದ್ರ ಚಾಹಲ್ ಅವರ ಅನುಪಸ್ಥಿತಿ ತಂಡದ ಸಾಮರ್ಥ್ಯದ ಮೇಲೆ ಪರಿಣಾಮ ಬೀರಿದೆಯೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಭರತ್ ಅರುಣ್ 'ಆ ಬಗ್ಗೆ ಏನನ್ನೂ ಹೇಳುವುದಿಲ್ಲ. ಅದು ಆಯ್ಕೆ ಸಮಿತಿಗೆ ಬಿಟ್ಟ ವಿಷಯ. ಆಡಳಿತದವರು ಕೊಟ್ಟ ತಂಡವನ್ನು ಬಳಸಿಕೊಂಡು ಆಡುವುದಷ್ಟೇ ನಮ್ಮ ಕೆಲಸ' ಎಂದರು.

ಮುಂದಿನ ವಿಶ್ವಕಪ್‌ನಲ್ಲಿ ವೆಸ್ಟ್ ಇಂಡೀಸ್‌ಗೆ ಕಠಿಣ ಹಾದಿ

ದುಬೈ (ಪಿಟಿಐ): ಹಾಲಿ ಚಾಂಪಿಯನ್ ವೆಸ್ಟ್ ಇಂಡೀಸ್ ತಂಡ ಮುಂದಿನ ವರ್ಷ ಆಸ್ಟ್ರೇಲಿಯಾದಲ್ಲಿ ನಡೆಯಲಿರುವ ಟ್ವೆಂಟಿ–20 ವಿಶ್ವಕಪ್ ಟೂರ್ನಿಯ ಸೂಪರ್ 12ರ ಹಂತ ತಲುಪಬೇಕಾದರೆ ಅರ್ಹತಾ ಸುತ್ತಿನಲ್ಲಿ ಆಡಬೇಕಾಗಿದೆ. ಶ್ರೀಲಂಕಾ ಕೂಡ ಅರ್ಹತಾ ಸುತ್ತಿನಲ್ಲಿ ಸೆಣಸಬೇಕಾಗಿದ್ದು ಬಾಂಗ್ಲಾದೇಶ ಮತ್ತು ಅಫ್ಗಾನಿಸ್ತಾನ ತಂಡಗಳು ನೇರ ಪ್ರವೇಶ ಲಭಿಸುವ ನಿರೀಕ್ಷೆಯಲ್ಲಿವೆ.

ಈಗ ನಡೆಯುತ್ತಿರುವ ಟೂರ್ನಿಯ ವಿಜೇತ ಮತ್ತು ರನ್ನರ್ ಅಪ್ ತಂಡಗಳು ಯಾವುವು ಎಂದು ನಿರ್ಧಾರವಾದ ನಂತರ ಮುಂದಿನ ವಿಶ್ವಕಪ್‌ನ ಸೂಪರ್ 12ರ ಹಂತಕ್ಕೆ ನೇರ ಪ್ರವೇಶ ಗಿಟ್ಟಿಸುವ ತಂಡಗಳ ಚಿತ್ರಣ ಸಿಗಲಿದೆ.

ಶನಿವಾರದ ವರೆಗಿನ ಪಂದ್ಯಗಳ ಆಧಾರದಲ್ಲಿ ಇಂಗ್ಲೆಂಡ್, ಪಾಕಿಸ್ತಾನ, ಭಾರತ, ನ್ಯೂಜಿಲೆಂಡ್, ದಕ್ಷಿಣ ಆಫ್ರಿಕಾ ಮತ್ತು ಆಸ್ಟ್ರೇಲಿಯಾ ತಂಡಗಳು ನೇರ ಅರ್ಹತೆ ಪಡೆಯುವತ್ತ ಹೆಜ್ಜೆ ಹಾಕಿವೆ.

ಸೈಯದ್ ಮುಷ್ತಾಕ್ ಅಲಿ ಟ್ರೋಫಿ: ಪಾಂಡೆ ಬಳಗಕ್ಕೆ ಪಾಂಡ್ಯ ಪಡೆ ಸವಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೋಘ ಆಟದೊಂದಿಗೆ ಗೆಲುವಿನ 'ಹ್ಯಾಟ್ರಿಕ್' ಸಾಧಿಸಿರುವ ಕರ್ನಾಟಕ ತಂಡ ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಟ್ವೆಂಟಿ-20 ಕ್ರಿಕೆಟ್ ಟೂರ್ನಿಯಲ್ಲಿ ಸೋಮವಾರ ಬರೋಡವನ್ನು ಎದುರಿಸಲಿದೆ.

ಗುವಾಹಟಿಯಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಮನೀಷ್ ಪಾಂಡೆ ನೇತೃತ್ವದ ಕರ್ನಾಟಕ ತಂಡ ಮುಂಬೈ, ಛತ್ತೀಸ್‌ಗಢ ಮತ್ತು ಸರ್ವಿಸಸ್ ವಿರುದ್ಧ ಭರ್ಜರಿ ಜಯ ಗಳಿಸಿದೆ. ಕೃಣಾಲ್ ಪಾಂಡ್ಯ ನಾಯಕತ್ವದ ಬರೋಡ ಮೂರು ಪಂದ್ಯಗಳ ಪೈಕಿ ಒಂದನ್ನು ಮಾತ್ರ ಗೆದ್ದುಕೊಂಡಿದೆ.

ಬಂಗಾಳ ಮತ್ತು ಸರ್ವಿಸಸ್ ಎದುರು ಕ್ರಮವಾಗಿ ಎರಡು ರನ್ ಮತ್ತು ಎರಡು ವಿಕೆಟ್‌ಗಳಿಂದ ಸೋತಿದ್ದ ತಂಡ ಛತ್ತೀಸ್‌ಗಡವನ್ನು ಆರು ವಿಕೆಟ್‌ಗಳಿಂದ ಮಣಿಸಿ ಜಯದ ಲಯಕ್ಕೆ ಮರಳಿತ್ತು. ಹೀಗಾಗಿ ಈಗ ಭರವಸೆಯಲ್ಲಿದೆ.

ಪಂದ್ಯ ಆರಂಭ: ಮಧ್ಯಾಹ್ನ 12.30



ಕೃಣಾಲ್ ಪಾಂಡ್ಯ –ಪ್ರಜಾವಾಣಿ ಚಿತ್ರ



ಮನೀಷ್ ಪಾಂಡೆ –ಪ್ರಜಾವಾಣಿ ಚಿತ್ರ

ನೇಣು ಬಿಗಿದ ಸ್ಥಿತಿಯಲ್ಲಿ ಪಿಚ್ ಕ್ಯೂರೇಟರ್ ಮೃತದೇಹ ಪತ್ತೆ

ಅಬುಧಾಬಿ (ಪಿಟಿಐ): ಅಬುಧಾಬಿ ಕ್ರಿಕೆಟ್ ಕ್ರೀಡಾಂಗಣದ ಮುಖ್ಯ ಕ್ಯೂರೇಟರ್ ಆಗಿದ್ದ ಭಾರತ ಮೂಲದ ಮೋಹನ್ ಸಿಂಗ್ ಅವರು ಭಾನುವಾರ ಅಫ್ಗಾನಿಸ್ತಾನ ಮತ್ತು ನ್ಯೂಜಿಲೆಂಡ್ ನಡುವಣ ವಿಶ್ವಕಪ್ ಪಂದ್ಯಕ್ಕೆ ಮೊದಲು ಮೃತಪಟ್ಟಿದ್ದಾರೆ.

ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ಕ್ರಿಕೆಟ್ ಮಂಡಳಿಯ ಮೂಲಗಳು ವಿಷಯ ಖಚಿತಪಡಿಸಿವೆ. ಮೋಹನ್ ಸಿಂಗ್ ಅವರಿಗೆ ಪತ್ನಿ ಮತ್ತು ಪುತ್ರಿ ಇದ್ದಾರೆ. ಅವರು ಶೀಘ್ರದಲ್ಲೇ ದುಬೈಗೆ ತಲುಪಲಿದ್ದಾರೆ ಎಂದು ಮೂಲಗಳು ಹೇಳಿವೆ.

'ಉತ್ತರಾಖಂಡ ಮೂಲದ 45 ವರ್ಷದ ಮೋಹನ್ ಸಿಂಗ್ ಖಿನ್ನತೆಯಿಂದ ಬಳಲುತ್ತಿದ್ದರು. ಪಂದ್ಯಕ್ಕೆ ಪಿಚ್ ಪರಿಶೀಲನೆ ನಡೆಸಿದ ತಾಸುಗಳ ಬಳಿಕ ಅವರ ಕೋಣೆಯಲ್ಲಿ ನೇಣುಬಿಗಿದ ಸ್ಥಿತಿಯಲ್ಲಿ ಅವರ ಮೃತದೇಹ ಪತ್ತೆಯಾಗಿದೆ' ಎಂದು ಮೂಲಗಳು ಹೇಳಿವೆ.

'ಕ್ರೀಡಾಂಗಣದ ವ್ಯವಸ್ಥೆಗಳ ಕುರಿತು ನಮಗೆ ತಿಳಿಸಿದ ಅವರು ವಾಪಸಾದರು. ಬಹಳ ಹೊತ್ತಿನವರೆಗೆ ಹೊರಗೆ ಬಾರದಿದ್ದಾಗ ಅವರ ಕೋಣೆಗೆ ನೋಡಿದಾಗ ಮೋಹನ್ ಸಿಂಗ್ ದೇಹ ನೇಣುಬಿಗಿದ ಸ್ಥಿತಿಯಲ್ಲಿತ್ತು' ಎಂದು ಟೂರ್ನಿಯ ಆಯೋಜನೆಗೆ ಸಂಬಂಧಿಸಿದ ಅಧಿಕಾರಿಯೊಬ್ಬರು ಹೇಳಿದ್ದಾರೆ.

'ಸ್ಥಳೀಯ ಪೊಲೀಸ್ ಅಧಿಕಾರಿಗಳು ತನಿಖೆಯನ್ನು ಪೂರ್ಣಗೊಳಿಸಿದ ನಂತರವೇ ಇದು ಆತ್ಮಹತ್ಯೆಯೇ ಎಂಬುದರ ಬಗ್ಗೆ ಸ್ಪಷ್ಟವಾಗಲಿದೆ' ಎಂದು ಮೂಲಗಳು ತಿಳಿಸಿವೆ. ಮೋಹನ್ ಅವರು 2000ರ ದಶಕದ ಆರಂಭದಲ್ಲಿ ಯುಎಇಗೆ ತೆರಳುವ ಮೊದಲು ಮೊಹಾಲಿಯಲ್ಲಿ ಬಿಸಿಸಿಐನ ಮಾಜಿ ಮುಖ್ಯ ಕ್ಯೂರೇಟರ್ ದಲ್ಜಿತ್ ಸಿಂಗ್ ಅವರೊಂದಿಗೆ ಕೆಲಸ ಮಾಡಿದ್ದರು.

ಫುಟ್‌ಬಾಲ್: ಬೆಂಗಳೂರು ಸಿಟಿ ಎಫ್‌ಸಿ ತಂಡಗಳಿಗೆ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೋಘ ಆಟವಾಡಿದ ಬೆಂಗಳೂರು ಸಿಟಿ ಎಫ್‌ಸಿ ತಂಡಗಳು ರಾಜ್ಯ ಫುಟ್‌ಬಾಲ್ ಸಂಸ್ಥೆ ಆಶ್ರಯದ ಯೂತ್ ಪ್ರೀಮಿಯರ್ ಫುಟ್‌ಬಾಲ್ ಲೀಗ್‌ನ 12 ಮತ್ತು 14 ವರ್ಷದೊಳಗಿನವರ ವಿಭಾಗದಲ್ಲಿ ಭಾನುವಾರ ಭರ್ಜರಿ ಜಯ ಗಳಿಸಿದವು.

ಎಫ್‌ಎಸ್‌ವಿ ಅರೆನಾದಲ್ಲಿ ನಡೆದ 12 ವರ್ಷದೊಳಗಿನವರ ಪಂದ್ಯದಲ್ಲಿ ಬೆಂಗಳೂರು ಸಿಟಿ ತಂಡ 10–0 ಅಂತರದಲ್ಲಿ ಬೋಕಾ ವಿರುದ್ಧ ಜಯ ಗಳಿಸಿತು.

14 ವರ್ಷದೊಳಗಿನವರ ವಿಭಾಗದ ಪಂದ್ಯ ದಲ್ಲಿ ಜೇಸನ್ ಮೋಸೆಸ್ ಅವರ ಹ್ಯಾಟ್ರಿಕ್ ಬಲದಿಂದ ಬೆಂಗಳೂರು ಸಿಟಿ ಎಫ್‌ಸಿ ಜಿಆರ್‌ಕೆ ಎಫ್‌ಎಯನ್ನು 12–0ಯಿಂದ ಸೋಲಿಸಿತು.

ಬೋಕಾ ಜೂನಿಯರ್ ಮತ್ತು ಬೋಕಾ ಜೂನಿಯರ್ ಯೆಲ್ಲೋ ತಂಡಗಳು ಗೆಲುವು ಸಾಧಿಸಿದವು. 12 ವರ್ಷದೊಳಗಿನವರ ವಿಭಾಗದಲ್ಲಿ ಬೋಕಾ ಜೂನಿಯರ್ 3–0ಯಿಂದ ಬೈಚುಂಗ್ ಭುಟಿಯಾ ತಂಡವನ್ನು ಮಣಿಸಿತು.

ಬೋಕಾ ಜೂನಿಯರ್ ಯೆಲ್ಲೊ ತಂಡ ಮೈಸೂರು ವಿಜಯನಗರ ಎಫ್‌ಎ ವಿರುದ್ಧ 7–1ರಲ್ಲಿ ಗೆದ್ದಿತು. ಸ್ಪೋರ್ಟ್ಸ್ ಎಕ್ಸಲೆನ್ಸಿ ಕ್ರೀಡಾಂಗಣದಲ್ಲಿ ನಡೆದ 14 ವರ್ಷದೊಳಗಿನವರ ಪಂದ್ಯದಲ್ಲಿ ಸ್ಟೇಡಿಯಂ ಎಫ್‌ಸಿ 3–2ರಲ್ಲಿ ಫುಟ್‌ಬಾಲ್ ಅಕಾಡೆಮಿ ಆಫ್ ಬೆಂಗಳೂರು ವಿರುದ್ಧ ಜಯ ಗಳಿಸಿತು.

ಬಿಎಫ್‌ಸಿ ಅಕಾಡೆಮಿ ಮತ್ತು ಬೋಕಾ ಜೂನಿಯರ್ ಬ್ಲೂಸ್ ಪಂದ್ಯ 2–2ರಲ್ಲಿ ಡ್ರಾ ಆಯಿತು. ರಮನ್ ಎಸ್‌ಎ 1–0ಯಿಂದ ಬಿಎಫ್‌ಸಿ ಸಾಕರ್ ಸ್ಕೂಲ್ ವಿರುದ್ಧ ಜಯಿಸಿತು. ಬಿಬಿಎಫ್‌ಎಸ್ ಮತ್ತು ರಾಮನ್ ಸ್ಪೋರ್ಟ್ಸ್ ಅಕಾಡೆಮಿ ನಡುವಿನ ಪಂದ್ಯ ಗೋಲುರಹಿತ ಡ್ರಾದಲ್ಲಿ ಕೊನೆಗೊಂಡಿತು. ಎಫ್‌ಸಿ ಬೆಂಗಳೂರು ಯುನೈಟೆಡ್ 2–0ಯಿಂದ ಮೈಸೂರು ವಿಜಯನಗರವನ್ನು ಮಣಿಸಿತು.

ಐಎಸ್‌ಎಸ್‌ಎಫ್ ಪ್ರೆಸಿಡೆಂಟ್ಸ್ ಕಪ್ ಶೂಟಿಂಗ್ ಟೂರ್ನಿ

ಸೌರಭ್ ಚೌಧರಿಗೆ ಬೆಳ್ಳಿ


ಸೌರಭ್ ಚೌಧರಿ– ಪಿಟಿಐ ಚಿತ್ರ

ರೋಕ್ಲಾ, ಪೋಲೆಂಡ್ (ಪಿಟಿಐ): ಭಾರತದ ಸೌರಭ್ ಚೌಧರಿ ಅವರು ಇಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ಪ್ರೆಸಿಡೆಂಟ್ಸ್ ಕಪ್ ಶೂಟಿಂಗ್ ಟೂರ್ನಿಯಲ್ಲಿ ಬೆಳ್ಳಿ ಪದಕಕ್ಕೆ ಮುತ್ತಿಟ್ಟರು.

ಶನಿವಾರ ರಾತ್ರಿ ನಡೆದ ಪುರುಷರ 10 ಮೀಟರ್ಸ್ ಏರ್ ಪಿಸ್ತೂಲು ಸ್ಪರ್ಧೆಯಲ್ಲಿ ಅವರು 24 ಸ್ಕೋರ್‌ನೊಂದಿಗೆ ಎರಡನೇ ಸ್ಥಾನ ಗಳಿಸಿದರು. ಭಾರತದವರೇ ಆದ ಅಭಿಷೇಕ್ ವರ್ಮಾ (21 ಸ್ಕೋರ್) ಕಂಚಿನ ಪದಕ ಕೊರಳಿಗೇರಿಸಿಕೊಂಡರು.

ಈ ವಿಭಾಗದ ಚಿನ್ನದ ಪದಕವು ಜರ್ಮನಿಯ ರಿಯಟ್ಜ್ ಅವರ ಪಾಲಾಯಿತು. ಫೈನಲ್‌ನಲ್ಲಿ ಅವರು 34 ಸ್ಕೋರ್ ದಾಖಲಿಸಿದರು.

ಟೋಕಿಯೊ ಒಲಿಂಪಿಕ್ಸ್ ಚಿನ್ನದ ಪದಕ ವಿಜೇತ ಇರಾನ್‌ನ ಶೂಟರ್ ಜವಾದ್ ಫರೋಗಿ ಇಲ್ಲಿ ನಾಲ್ಕನೇ ಸ್ಥಾನಕ್ಕೆ ಕುಸಿದರು.

ಅರ್ಹತಾ ಸುತ್ತಿನಲ್ಲಿ ಸೌರಭ್ ಹಾಗೂ ಅಭಿಷೇಕ್ ಕ್ರಮವಾಗಿ 581 ಹಾಗೂ 580 ಪಾಯಿಂಟ್ಸ್ ದಾಖಲಿಸಿ ಮೂರು ಮತ್ತು ನಾಲ್ಕನೇ ಸ್ಥಾನ ಗಳಿಸಿ ಫೈನಲ್ ತಲುಪಿದ್ದರು.

ಭಾರತದ ಮನು ಭಾಕರ್ ಮತ್ತು ಜವಾದ್ ಫರೋಗಿ ಜೋಡಿ ಶುಕ್ರವಾರ ಏರ್ ಪಿಸ್ತೂಲು ಮಿಶ್ರ ವಿಭಾಗದಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದರು. ಈ ಜೋಡಿಯು ಫೈನಲ್‌ನಲ್ಲಿ ಫ್ರಾನ್ಸ್ ಮತ್ತು ರಷ್ಯಾದ ಮಥಿಲ್ಡೆ ರಮೊಲಿ ಮತ್ತು ಆರ್ಟೆಮ್ ಚೆರ್ನೊಸೊವ್ ಅವರನ್ನು 16–8ರಲ್ಲಿ ಮಣಿಸಿದ್ದರು.

ಬ್ಯಾಸ್ಕೆಟ್‌ಬಾಲ್: ಅಶ್ವಿಜ್ ಮಿಂಚು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಶ್ವಿಜ್ (28 ಪಾಯಿಂಟ್ಸ್) ಹಾಗೂ ಸಂಯಮ್ (26) ಅವರ ಅಮೋಘ ಆಟದ ಬಲದಿಂದ ಮಂಗಳೂರು ಬಿ.ಸಿ. ತಂಡವು ರಾಜ್ಯ 18 ವರ್ಷದೊಳಗಿನವರ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಜಯ ಗಳಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಬಾಲಕರ ವಿಭಾಗದ ಸೆಮಿಫೈನಲ್ ಲೀಗ್‌ನಲ್ಲಿ ಮಂಗಳೂರು ಬಿ.ಸಿ. 89–80ರಿಂದ ಬಿ.ಸಿ ಬಿ.ಸಿ ತಂಡವನ್ನು ಸೋಲಿಸಿತು. ಬಿ.ಸಿ ಬಿ.ಸಿ ಪರ ಯಶಸ್ (27) ಹಾಗೂ ವೇದಾಂತ್ (26) ಮಿಂಚಿದರು.

ಬಾಲಕಿಯರ ವಿಭಾಗದಲ್ಲಿ ಮೌಂಟ್ಸ್ ಕ್ಲಬ್ 68–38ರಿಂದ ಜೆಎಸ್‌ಸಿ ತಂಡವನ್ನು ಪರಾಭವಗೊಳಿಸಿತು. ವಿಜೇತ ತಂಡದ ಪಾವನಿ 21 ಪಾಯಿಂಟ್ಸ್ ಕಲೆಹಾಕಿದರು. ಮತ್ತೊಂದು ಹಣಾಹಣಿಯಲ್ಲಿ ಕೆ.ಎಸ್. ಹೆಗ್ಡೆ ನಿಟ್ಟೆ ತಂಡವು 53–49ರಿಂದ ಬೀಗಲ್ಸ್ ಬಿ.ಸಿ ಎದುರು ಜಯ ಸಾಧಿಸಿತು. ಕೆ.ಎಸ್.ಹೆಗ್ಡೆ ತಂಡದ ಬಿಂದುಶ್ರೀ (26) ಮಿಂಚಿದರು.

ಸೋಮವಾರ ನಡೆಯುವ ಬಾಲಕಿಯರ ವಿಭಾಗದ ಫೈನಲ್ ಲೀಗ್ ಪಂದ್ಯಗಳಲ್ಲಿ ಕೆ.ಎಸ್.ಹೆಗ್ಡೆ ನಿಟ್ಟೆ–ಜೆಎಸ್‌ಸಿ ಮತ್ತು ಮೌಂಟ್ಸ್ ಕ್ಲಬ್–ಬೀಗಲ್ಸ್ ನಡುವೆ ಹಣಾಹಣಿಗಳು ನಡೆಯಲಿವೆ.

ಬಾಲಕರ ವಿಭಾಗದಲ್ಲಿ ಬೀಗಲ್ಸ್–ಡಿವೈಇಎಸ್ ಬೆಂಗಳೂರು ಸೆಣಸಲಿವೆ.

ಗ್ರ್ಯಾಂಡ್ ಸ್ವಿಸ್ ಚೆಸ್ : ಮೂರನೇ ಸ್ಥಾನಕ್ಕೆ ಹಾರಿಕಾ

ರಿಗಾ, ಲಾತ್ವಿಯಾ (ಪಿಟಿಐ): ಭಾರತದ ದ್ರೋಣವಲ್ಲಿ ಹಾರಿಕಾ ಅವರು ಗ್ರ್ಯಾಂಡ್ ಸ್ವಿಸ್ ಚೆಸ್ ಟೂರ್ನಿಯಲ್ಲಿ ಜರ್ಮನಿಯ ಎಲಿಜಬೆತ್ ಪೆಹೆಟ್ಜ್ ಎದುರು ಡ್ರಾ ಸಾಧಿಸಿದರು. ಇದರೊಂದಿಗೆ ಜಂಟಿ ಮೂರನೇ ಸ್ಥಾನಕ್ಕೆ ಜಾರಿದರು.

ಹಾರಿಕಾ ಹಾಗೂ ಜರ್ಮನಿ ಆಟಗಾರ್ತಿ 31ನೇ ನಡೆಯ ಬಳಿಕ ಪಂದ್ಯವನ್ನು ಡ್ರಾ ಮಾಡಿಕೊಳ್ಳಲು ಪರಸ್ಪರ ಸಮ್ಮತಿಸಿದರು. ಸದ್ಯ ಟೂರ್ನಿಯಲ್ಲಿ ಉಭಯ ಆಟಗಾರ್ತಿಯರ ಬಳಿ ತಲಾ 6.5 ಪಾಯಿಂಟ್ಸ್ ಇವೆ. ಮೂರನೇ ಸ್ಥಾನದಲ್ಲಿ ಐವರು ಆಟಗಾರ್ತಿಯಾಗಿದ್ದಾರೆ.

ಚೀನಾದ ಲೀ ಟಿಂಗ್‌ಜೀ ಅವರು ಮೊದಲ ಸ್ಥಾನದಲ್ಲಿದ್ದು, ಅವರದೇ ದೇಶದ ಝು ಜಿನೆರ್ ಎರಡನೇ ಸ್ಥಾನದಲ್ಲಿದ್ದಾರೆ.

ಭಾರತದ ವಂತಿಕಾ ಅಗರವಾಲ್ ಹಾಗೂ ದಿವ್ಯಾ ದೇಶಮುಖ್ ಅವರು ಕ್ರಮವಾಗಿ ನತಾಲಿಯಾ ಬುಕ್ಸಾ ಹಾಗೂ ಜೆಸ್ಸೆ ನಿಕ್ಕಿ ಫೆಬ್ರುವರಿ ಎದುರು ಜಯ ಸಾಧಿಸಿದರು.

ಆರ್.ವೈಶಾಲಿ ಹಾಗೂ ಪದ್ಮಿಣಿ ರಾವತ್ ತಮ್ಮ ಪಂದ್ಯಗಳಲ್ಲಿ ಡ್ರಾ ಸಾಧಿಸಿದರು.

ಭಾರತ ಬ್ಯಾಸ್ಕೆಟ್‌ಬಾಲ್ ತಂಡಕ್ಕೆ ವಿಶೇಷ್ ನಾಯಕ

ಪ್ರಜಾವಾಣಿ ವಾರ್ತೆ


ವಿಶೇಷ್ ಭೃಗುವಂಶಿ

ಬೆಂಗಳೂರು: ಸಾಬಾ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳಲಿರುವ ಭಾರತ ಬ್ಯಾಸ್ಕೆಟ್‌ಬಾಲ್ ತಂಡವನ್ನು ಪ್ರಕಟಿಸಲಾಗಿದ್ದು, ಕರ್ನಾಟಕದ ಶಶಾಂಕ್ ಜಯಶಂಕರ್ ರೈ ಸ್ಥಾನ ಪಡೆದಿದ್ದಾರೆ.

ವಿಶೇಷ್ ಭೃಗುವಂಶಿ ಭಾರತ ತಂಡದ ನಾಯಕತ್ವ ವಹಿಸಿದ್ದಾರೆ.

ನವೆಂಬರ್ 15ರಿಂದ 20ರವರೆಗೆ ಬಾಂಗ್ಲಾದೇಶದ ಢಾಕಾದಲ್ಲಿ ಸಾಬಾ ಚಾಂಪಿಯನ್‌ಷಿಪ್ ನಿಗದಿಯಾಗಿದೆ. ಭಾರತ ಅಲ್ಲದೆ ಶ್ರೀಲಂಕಾ, ಮಾಲ್ಡಿವ್ಸ್, ಬಾಂಗ್ಲಾದೇಶ, ನೇಪಾಳ ತಂಡಗಳು ಭಾಗವಹಿಸಲಿವೆ.

ಭಾರತ ತಂಡ ಇಂತಿದೆ: ವಿಶೇಷ್ ಭೃಗುವಂಶಿ (ನಾಯಕ) ಶಶಾಂಕ್ ಜಯಶಂಕರ್ ರೈ, ಮುಯಿನ್ ಬೆಕ್ ಹಫೀಜ್, ಅರವಿಂದ್ ಕುಮಾರ್ ಮುತ್ತುಕೃಷ್ಣನ್, ಪಾಲ್‌ಪ್ರೀತ್ ಸಿಂಗ್ ಬ್ರಾರ್, ದೀಪಕ್ ಚೌಧರಿ, ಅಮ್‌ಜೋತ್ ಸಿಂಗ್ ಗಿಲ್, ಅಮೃತ್‌ಪಾಲ್ ಸಿಂಗ್, ಪಿಯೂಷ್ ಮೀನಾ, ಸೆಜಿನ್ ಮ್ಯಾಥ್ಯು, ಪ್ರಶಾಂತ್ ಸಿಂಗ್ ರಾವತ್, ಲಾಲ್‌ರಿನಾ ರೆಂಥ್ಲೆಯ್. ಮುಖ್ಯ ಕೋಚ್: ವೆಸೆಲಿನ್ ಮ್ಯಾಟಿಚ್. ಸಹಾಯಕ ಕೋಚ್ ಮತ್ತು ವ್ಯವಸ್ಥಾಪಕ: ಥಾಂಕ್‌ಚನ್ ಮುಲಕಲ್ ಚಾಕೊ. ಫಿಸಿಯೊ: ಶಿವ ಷಣ್ಮುಗ ಸಿಂಗ್ ವೀರಪಾಂಡಿ. ಫೀಬಾ ರೆಫರಿ: ಇಮ್ರಾನ್ ಅಲಿ ಬೇಗ್.


ಸರ್ಬಿಯಾದ ನೊವಾಕ್ ಜೊಕೊವಿಚ್ ಪ್ರಶಸ್ತಿಯೊಂದಿಗೆ ಸಂಭ್ರಮಿಸಿದರು– ರಾಯಿಟರ್ಸ್ ಚಿತ್ರ

ಜೊಕೊವಿಚ್‌ಗೆ ಪ್ಯಾರಿಸ್ ಕಿರೀಟ

ಪ್ಯಾರಿಸ್ (ಎಪಿ): ಜಿದ್ದಾಜಿದ್ದಿನ ಪೈಪೋಟಿಯಲ್ಲಿ ಡೇನಿಯಲ್ ಮೆಡ್ವೆಡೆವ್ ಅವರನ್ನು ಸೋಲಿಸಿದ ವಿಶ್ವ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನದಲ್ಲಿರುವ ನೊವಾಕ್ ಜೊಕೊವಿಚ್ ಅವರು ಪ್ಯಾರಿಸ್ ಮಾಸ್ಟರ್ಸ್ ಟೂರ್ನಿಯಲ್ಲಿ ಪ್ರಶಸ್ತಿಗೆ ಮುತ್ತಿಕ್ಕಿದರು.

ಭಾನುವಾರ ನಡೆದ ಪುರುಷರ ಸಿಂಗಲ್ಸ್ ಹಣಾಹಣಿಯಲ್ಲಿ ಅವರು ಸರ್ಬಿಯಾದ ಜೊಕೊವಿಚ್ 4-6, 6-3, 6-3ರಿಂದ ರಷ್ಯಾ ಆಟಗಾರನಿಗೆ ಸೋಲುಣಿಸಿದರು.

ಇದು ನೊವಾಕ್‌ಗೆ ಒಲಿದ ದಾಖಲೆಯ 37ನೇ ಮಾಸ್ಟರ್ಸ್ ಕಿರೀಟವಾಗಿದೆ. ಇದರೊಂದಿಗೆ ಅವರು ಸ್ಪೇನ್‌ನ ರಫೆಲ್ ನಡಾಲ್ (36 ಮಾಸ್ಟರ್ಸ್ ಪ್ರಶಸ್ತಿ) ಅವರನ್ನು ಹಿಂದಿಕ್ಕಿದರು.

ಪ್ಯಾರಿಸ್‌ನಲ್ಲಿ ಜೊಕೊವಿಚ್ ಗೆದ್ದ ಆರನೇ ಪ್ರಶಸ್ತಿ ಇದು. ಎರಡನೇ ರ‍್ಯಾಂಕಿನ ಮೆಡ್ವೆಡೆವ್ ಎದುರು ಗೆಲ್ಲುವ ಮೂಲಕ ಅವರು ಅಮೆರಿಕ ಓಪನ್ ಫೈನಲ್‌ನಲ್ಲಿ ಅನುಭವಿಸಿದ ಸೋಲಿಗೆ ಮುಯ್ಯಿ ತೀರಿಸಿಕೊಂಡರು.

ದಿವ್ಯಾ ಶತಕ: ಕರ್ನಾಟಕ ಜಯಭೇರಿ

ಬೆಂಗಳೂರು: ದಿವ್ಯಾ ಜ್ಞಾನಾನಂದ (ಔಟಾಗದೆ 128, 111ಎ, 23 ಬೌಂಡರಿ, 1 ಸಿಕ್ಸರ್) ಅವರ ಅಮೋಘ ಶತಕ, ಶ್ರೇಯಾಂಕಾ ಪಾಟೀಲ್ (40ಕ್ಕೆ 3) ಹಾಗೂ ಚಂದು ವಿ. (47ಕ್ಕೆ 3) ಅವರ ಪರಿಣಾಮಕಾರಿ ಬೌಲಿಂಗ್ ಬಲದಿಂದ ಕರ್ನಾಟಕ ತಂಡವು ಜಯ ಸಾಧಿಸಿತು.

ಮಹಾರಾಷ್ಟ್ರದ ನಾಗಪುರದ ವಿಸಿಎ ಕ್ರೀಡಾಂಗಣದಲ್ಲಿ ನಡೆದ ಬಿಸಿಸಿಐ ಮಹಿಳಾ ಏಕದಿನ ಟ್ರೋಫಿ ಟೂರ್ನಿಯ ಕ್ರಿಕೆಟ್ ಪಂದ್ಯದಲ್ಲಿ ಕರ್ನಾಟಕ ಒಂಬತ್ತು ವಿಕೆಟ್‌ಗಳಿಂದ ಬರೋಡಾ ತಂಡವನ್ನು ಸೋಲಿಸಿತು. ಇದರೊಂದಿಗೆ ರಾಜ್ಯ ತಂಡ ಎಲೀಟ್ ‘ಇ’ ಗುಂಪಿನಲ್ಲಿ ಎಲ್ಲ ಐದೂ ಲೀಗ್ ಪಂದ್ಯಗಳನ್ನು ಗೆದ್ದು ನಾಕೌಟ್ ಹಂತಕ್ಕೆ ಪ್ರವೇಶಿಸಿದೆ. ನಾಕೌಟ್ ಸುತ್ತಿನ ಪಂದ್ಯಗಳು ಇದೇ 13ರಿಂದ ಬೆಂಗಳೂರಿನಲ್ಲಿ ನಡೆಯಲಿವೆ.

ಸಂಕ್ಷಿಪ್ತ ಸ್ಕೋರು: ಬರೋಡಾ: 49.1 ಓವರ್‌ಗಳಲ್ಲಿ 214 (ವೈ.ಎಚ್. ಭಾಟಿಯಾ 61, ತರನ್ನುಮ್ ಪಠಾಣ್ 65; ಚಂದು ವಿ. 47ಕ್ಕೆ 3, ಸಹನಾ ಪವಾರ್ 38ಕ್ಕೆ 2, ಶ್ರೇಯಾಂಕಾ ಪಾಟೀಲ್ 40ಕ್ಕೆ 3). ಕರ್ನಾಟಕ: 35.3 ಓವರ್‌ಗಳಲ್ಲಿ 1ಕ್ಕೆ 218 (ವೃಂದಾ ದಿನೇಶ್ ಔಟಾಗದೆ 69, ದಿವ್ಯಾ ಜ್ಞಾನಾನಂದ ಔಟಾಗದೆ 128). ಫಲಿತಾಂಶ: ಕರ್ನಾಟಕಕ್ಕೆ 9 ವಿಕೆಟ್ ಜಯ

ಬಾಕ್ಸಿಂಗ್: ಭಾರತ ಮಹಿಳಾ ತಂಡಕ್ಕೆ ಕೋಚ್ ಆಗಿ ಭಾಸ್ಕರ್ ಆಯ್ಕೆ ಸಾಧ್ಯತೆ


ಭಾಸ್ಕರ್ ಭಟ್– ಟ್ವಿಟರ್ ಚಿತ್ರ

ನವದೆಹಲಿ (ಪಿಟಿಐ): ರಾಷ್ಟ್ರೀಯ ಯುವ ತಂಡದ ಕೋಚ್ ಆಗಿ ದೀರ್ಘ ಕಾಲ ಕಾರ್ಯನಿರ್ವಹಿಸಿರುವ ಭಾಸ್ಕರ್ ಭಟ್ ಅವರು ಭಾರತ ಸೀನಿಯರ್ ಮಹಿಳಾ ಬಾಕ್ಸಿಂಗ್ ತಂಡಕ್ಕೆ ಮುಖ್ಯ ತರಬೇತುದಾರರಾಗುವುದು ಬಹುತೇಕ ಖಚಿತವಾಗಿದೆ.

ವಿಶ್ವ ಚಾಂಪಿಯನ್‌ಷಿಪ್‌ಗೂ ಮೊದಲು ಈ ಆಯ್ಕೆ ನಡೆಯಲಿದೆ. ಮುಖ್ಯ ಕೋಚ್ ಆಗಿದ್ದ ಮೊಹಮ್ಮದ್ ಅಲಿ ಖಮರ್ ಹಾಗೂ ಹೈ ಫರ್ಫಾರ್ಮೆನ್ಸ್ ನಿರ್ದೇಶಕ ರಫೇಲ್ ಬರ್ಗ್‌ಮಾಸ್ಕೊ ಅವರ ಗುತ್ತಿಗೆಯನ್ನು ನವೀಕರಿಸಲು ಭಾರತ ಬಾಕ್ಸಿಂಗ್ ಫೆಡರೇಷನ್ (ಬಿಎಫ್ಐ) ನಿರಾಕರಿಸಿದ ಬಳಿಕ ಈ ವಿದ್ಯಮಾನ ನಡೆದಿದೆ.

ಉತ್ತರಾಖಂಡದ 56 ವರ್ಷದ ಭಟ್ ಅವರು 2017ರಿಂದ ಭಾರತ ಯೂತ್ ತಂಡದ ಕೋಚ್ ಆಗಿದ್ದಾರೆ. 2005–2012ರ ಅವಧಿಯಲ್ಲಿ ಮಹಿಳಾ ತಂಡದ ಸಹಾಯಕ ತರಬೇತುದಾರರಾಗಿದ್ದರು.

ಭಾಸ್ಕರ್ ಅವರ ಸಹೋದರ ಡಿ.ಪಿ. ಭಟ್ ಕೂಡ ಬಾಕ್ಸರ್ ಹಾಗೂ ರೆಫರಿಯಾಗಿಯೂ ಕಾರ್ಯನಿರ್ವಹಿಸಿದ್ದಾರೆ. ವಿಶ್ವ ಚಾಂಪಿಯನ್‌ಷಿಪ್ ಡಿಸೆಂಬರ್‌ನಲ್ಲಿ ಇಸ್ತಾನ್‌ಬುಲ್‌ನಲ್ಲಿ ನಿಗದಿಯಾಗಿದ್ದು, ವೇಳಾಪಟ್ಟಿಯನ್ನು ಇನ್ನೂ ಪ್ರಕಟಿಸಿಲ್ಲ.

ವಿಶ್ವಚಾಂಪಿಯನ್‌ಷಿಪ್‌ಗೆ ಲವ್ಲಿನಾ ಬೊರ್ಗೊಹೈನ್ ನೇರ ಆಯ್ಕೆ


ಲವ್ಲಿನಾ ಬೊರ್ಗೊಹೈನ್– ಪಿಟಿಐ ಚಿತ್ರ

ಟೋಕಿಯೊ ಒಲಿಂಪಿಕ್ಸ್ ಕಂಚಿನ ಪದಕ ವಿಜೇತೆ ಬಾಕ್ಸರ್ ಲವ್ಲಿನಾ ಬೊರ್ಗೊಹೈನ್ ಅವರು ವಿಶ್ವಚಾಂಪಿಯನ್‌ಷಿಪ್‌ಗೆ ನೇರ ಅರ್ಹತೆ ಗಳಿಸಿದ್ದಾರೆ.

70 ಕೆಜಿ ವಿಭಾಗದಲ್ಲಿ ಆಯ್ಕೆಯಾಗಿ ಟ್ರಯಲ್ಸ್ ನಡೆಸಬೇಕೆಂದು ರಾಷ್ಟ್ರೀಯ ಚಾಂಪಿಯನ್‌ಷಿಪ್ ಚಿನ್ನದ ಪದಕ ವಿಜೇತೆ ಅರುಂಧತಿ ಚೌಧರಿ ಮಾಡಿದ ಮನವಿಯನ್ನು ಬಿಎಫ್‌ಐ ಪರಿಗಣಿಸಿಲ್ಲ.

‘ಮಹಿಳಾ ವಿಶ್ವಚಾಂಪಿಯನ್‌ಷಿಪ್ ಆಯ್ಕೆಗೆ ಯಾವುದೇ ಟ್ರಯಲ್ಸ್‌ಗಳನ್ನು ನಡೆಸುವುದಿಲ್ಲ. ಸೆಪ್ಟೆಂಬರ್‌ನಲ್ಲಿ ನಡೆದ ಕಾರ್ಯಕಾರಿ ಸಮಿತಿ ಸಭೆಯ ನಿರ್ಧಾರದಂತೆ ಲವ್ಲಿನಾ ಸ್ಪರ್ಧಿಸುವ 70 ಕೆಜಿ ವಿಭಾಗವನ್ನು ಹೊರತುಪಡಿಸಿ ಆಯಾ ವಿಭಾಗಗಳಲ್ಲಿ ರಾಷ್ಟ್ರೀಯ ಚಾಂಪಿಯನ್ ಆದವರು ತಂಡದಲ್ಲಿರಲಿದ್ದಾರೆ’ ಎಂದು ಬಿಎಫ್‌ಐ ಪ್ರಧಾನ ಕಾರ್ಯದರ್ಶಿ ಹೇಮಂತ್ ಕಲಿಟ ಹೇಳಿದ್ದಾರೆ.

‘ಒಲಿಂಪಿಕ್ಸ್‌ನಲ್ಲಿ ತೋರಿದ ಸಾಧನೆಯ ಆಧಾರದ ಮೇಲೆ ಲವ್ಲಿನಾ ಅವರ ಆಯ್ಕೆ ನಡೆದಿದೆ’ ಎಂದು ಅವರು ಹೇಳಿದ್ದಾರೆ.